# ಮನಸ್ಸಿನ ಅನುಭವಗಳು

ಶ್ರೀ ಹರಿ ಎಲ್. ಖೋಡೆ



www.harikhoday.com

ಪ್ರಕಾಶನ :

**ಖೋಡೆ ಫೌಂಢೇಶನ್**

7ನೇ ಮೈಲು, ಕನಕಪುರ ರಸ್ತೆ, ಬೆಂಗಳೂರು

**Manasina Anubhavagalu**
**By**
**Sri Hari L. Khoday**

*Published by :*
**Khoday Foundation**
7th Mile, Kanakapura Road, Bangalore

©All rights reserved

Rs. 100/-

Design & Layout :

**SVM Lazer Graph**
Konanakunte Cross, Bangalore-560 062

Printed at :
**Sneha Printers**
No. 114, 4th Cross, B.C.C. Layout,
Vijayanagar 2nd Stage,
Bangalore-560 040

www.sriharikhoday.com

# ಕವಿಯ ನುಡಿ

ತೆರೆದ ಕಣ್ಣಿನಿಂದ ನೋಡುವವನೇ ಕವಿ
ತೆರೆದ ಕಿವಿಯಿಂದ ಕೇಳುವವನೇ ಕವಿ
ನುಡಿಯಬೇಕಾದುದನ್ನೇ ನುಡಿಯುವವನೇ ಕವಿ
ಭಾವನ ಸ್ಪರ್ಶಗಳಿಗೆ ಪ್ರೀತಿಸಿ ಪ್ರತಿಕ್ರಿಯೆಯನ್ನು ತೋರುವವನೇ ಕವಿ
ಮಾತನಾಡದೆ ಮೌನದಿ ಬರೆದು ಹೇಳುವವನೇ ಕವಿ
ವಿಶ್ವದ ಜೊತೆಗೆ ತನ್ನನ್ನು ಅಳೆದುಕೊಳ್ಳುವವನೇ ಕವಿ
ವಿಶ್ವದ ಗಾತ್ರ ಬೆಳೆದು ಅಣುವಾಗಿ ಅಣುವಿನ ಅನುಭವವನ್ನು
ಬರೆಯುವವನೇ ಕವಿ
ಸ್ವಾರ್ಥವನ್ನು ಮರೆತು ಬೇರೆಯವರ ಭಾವನೆಯಲ್ಲಿ ಬೆರೆಯುವವನೇ ಕವಿ
ಹೆದರದೆ ದಬ್ಬಾಳಿಕೆಗಳ ಜೊತೆ ಜಗಳ ಮಾಡುವ ಬರವಣಿಗೆ
ಬರೆಯುವವನೇ ಕವಿ
ಪ್ರಕೃತಿಯಲ್ಲಿಯೇ ಬೆರೆತು ಅದರ ಜೊತೆ ಬೆಳೆದು ಜೀವಿಸುವವನೇ ಕವಿ
ಹಗಲು - ಇರುಳು ಒಂದಾಗಿಸಿ ಜೀವಿಸುವವನೇ ಕವಿ
ದಿನವೂ ಹೊಸ ಸೂರ್ಯವನ್ನು ನೋಡುವವನೇ ಕವಿ
ತನ್ನ ಒಂದು ಮನದ ಬಣ್ಣದ ಕುಡಿಕೆಯಿಂದ ನಾನಾ ವರ್ಣಗಳನ್ನು
ಬಿಡಿಸುವವನೇ ಕವಿ
ತಾನು ದಿನವೂ ಹೇಳಿದ ಅರ್ಥಗಳಿಗೆ ದಿನವೂ
ಹೊಸ ಹೊಸ ಅರ್ಥವನ್ನು ಹೇಳುವವನೇ ಕವಿ
ಕೊನೆಗಳೇ ಕಾಣದ ಕವಿನುಡಿಗಳ ಜೊತೆ
ಕಾಲ ಕುಂಟುತ ನಡೆಯುತ್ತಿದೆ !

**- ಶ್ರೀ ಹರಿ ಎಲ್. ಖೋಡೆ**

www.sriharikhoday.com



# ಸಮರ್ಪಣೆ

ತಾರೆಗಳು ತಮ್ಮದೇ ಆದ ವೃತ್ತದಲ್ಲಿ ನಡೆಯುವಂತೆ ಯಾರನ್ನೂ ಲೆಕ್ಕಿಸದೆ ತಮ್ಮದೇ ಆದ ದಾರಿಯಲ್ಲಿ ನಡೆಯುವ ತಮ್ಮ ಭಾವನಾರೂಪವನ್ನು ತಮ್ಮ ಅನುಭವದ ಕನ್ನಡಿಯಲ್ಲಿ ನೋಡಿಕೊಂಡು ಈ ಜನುಮ ನಮ್ಮದಲ್ಲ .... ಈ ಜನ್ಮ ಭೂತಾಯಿಯದು ಎಂದು ಪ್ರಜೆಗಳ ಜೊತೆಗೆ ಬಾಳುತ ಕ್ಷಣಕ್ಷಣದಲ್ಲಿಯೂ ಸಮಾಜದ ಬೆಳವಣಿಗೆಯನ್ನು ಬಯಸುತ್ತ ತಾನು ನಿಜ ಕ್ಷತ್ರಿಯನಾಗಿ ಕ್ಷಣ ಕ್ಷಣದಲ್ಲಿಯೂ ತ್ರಿಲೋಕದ ಯಶಸ್ಸನ್ನು ಬಯಸುತ್ತ

ಬೇರೆಯವರ ಕಷ್ಟಗಳು ತನ್ನದೆಂದು ಭಾವಿಸುತ್ತ ಮನೋಬಲ, ತೋಳ್ಬಲ, ಮನೋ ಅರ್ಥದಬಲದಿಂದ ಜೀವಿಸಿ ದೇಶ ಆಳುವ ಘನತೆ.... ಸ್ಥೈರ್ಯ ಜನಬಲವುಳ್ಳ ಕರ್ತವ್ಯ ನಿಷ್ಠರಾಗಿದ್ದ ನನ್ನ ಗುರುಗಳು ಶ್ರೀ ದೇವರಾಜ ಅರಸುರವರ ನನ್ನ ಆದರ್ಶ ಪುರುಷರು.

ನನ್ನ ಮನೋ ಆರಾಧಕರಾದ ನಮ್ಮ ನಾಡಿನ ಖ್ಯಾತಿಗಳಿಸಿದ ನಾಯಕರು ಎಂದೆಂದಿಗೂ ಸಮಾಜ ಕಾಪಾಡುತ್ತಿರುವ ಅವರ ನೆರಳಿಗೆ ನೀ ಎಂದೂ ಚಾಡಿ ಹೇಳಬೇಡ ನಿನ್ನ ಮನಸ್ಸಿನ ಶಕ್ತಿಗೆ ಕವನದ ರೂಪ ಕೊಡು ಎಂದು ಹೇಳಿದ ಕವಿಯ ಕಿವಿಮಾತುಗಳಿಗೆ ನಮ್ಮೆಲ್ಲರ ಕಣ್ಮಣಿ ಆಗಿದ್ದ ಬಡವರ ಬಂಧುವೂ ಆಗಿದ್ದ ದಿನವೂ ನಮ್ಮ ಜೊತೆಗಿದ್ದು ನಮ್ಮ ಮನದಲ್ಲಿ ಜೀವಿಸುತ್ತಿರುವ ಮತ್ತು ನಮ್ಮನಗಲಿರುವ ನನ್ನ ಗುರುಗಳಾದ ಸನ್ಮಾನ್ಯಶ್ರೀ ದೇವರಾಜ ಅರಸುರವರಿಗೆ ಅವರು ನೀಡಿದ ಕಿವಿಮಾತಿನ ಪದಗಳ ಜೋಡಣೆಯೇ ಈ ನನ್ನ ಮನಸಸ್ಸಿನ ಅನುಭವಗಳು. ಇದನ್ನು ನನ್ನ ನೆಚ್ಚಿನ ಗುರುಗಳಾದ ಶ್ರೀ ದೇವರಾಜ ಅರಸುರವರಿಗೆ ಭಕ್ತಿಯಿಂದ ಅರ್ಪಿಸುತ್ತಿದ್ದೇನೆ

**- ಶ್ರೀ ಹರಿ ಎಲ್. ಖೋಡೆ**

# ಮುನ್ನುಡಿ

ಬಾಳು ನಂದನವೂ ಅಲ್ಲ, ಬಂಧನವೂ ಅಲ್ಲ, ಶ್ಮಶಾನ ಮೊದಲೇ ಅಲ್ಲ. ಅದು ಸುಖ–ದುಃಖಗಳ ಸಮ್ಮಿಶ್ರಣಾಗಾರ. ಅದರಲ್ಲಿ ಏರಿಳಿತಗಳು ಸಹಜ. ಜೀವನವನ್ನು ಆಧರಿಸಿಯೇ ಅದರ ಸಮಕಾಲೀನ ಸಾಹಿತ್ಯ ಸೃಷ್ಟಿಯಾಗುತ್ತದೆ. ಸಾಹಿತ್ಯಕ್ಕೆ ಬದುಕೇ ಬಂಡವಾಳ. ಅದರ ಆಗು–ಹೋಗುಗಳಿಗೆ ಸಮಕಾಲೀನ ಸಾಹಿತ್ಯ ಸ್ಪಂದಿಸುತ್ತಲೇ ಇರುತ್ತದೆ. ಮಾತ್ರವಲ್ಲ, ಕಂಡದ್ದನ್ನು ಕಲಾತ್ಮಕವಾಗಿ ದಾಖಲಿಸುತ್ತಲೇ ಹೋಗುತ್ತದೆ.

ಕಾವ್ಯ ಪ್ರತಿಭಾಶಾಲಿ ಕವಿಯ ಜೀವನಾನುಭವದ ಅಮೃತಸ್ಯಂದಿ ರಸಸ್ರೋತಸ್ವಿನಿ. ವಿಶ್ವ ಜಗತ್ತು ಪರಬ್ರಹ್ಮನ ಸೃಷ್ಟಿಯಾದರೆ, ಕಾವ್ಯ ಕವಿಬ್ರಹ್ಮನ ಪ್ರಾತಿಭ ತೇಜದ ಕಲಾತ್ಮಕ ಸೃಷ್ಟಿ. ಇದರ ಆವಿರ್ಭಾವಕ್ಕೆ ಕವಿಯ ಅನುಭವವೇ ಮೂಲಧಾತು. ಪ್ರತಿಭೆ ಅದನ್ನು ಪ್ರಕಾಶಗೊಳಿಸುವ ದ್ರವ್ಯ. ಕಾವ್ಯ ನಿರ್ಮಿತಿಯ ಬುನಾದಿ ಸ್ವರೂಪವಾಗಿರುವ 'ಅನುಭವ' ಎರಡು ರೂಪದ್ದು: ಒಂದು ಕವಿಯ ಸ್ವಾನುಭವ, ಮತ್ತೊಂದು ಅವನು ದುಡಿದು ಪಡೆದ ಪರಾನುಭವ. ಪರಾನುಭವ ಕವಿಯ ದುಡಿಮೆಯ ಫಲ. ಏಕೆಂದರೆ ಕವಿ ಸ್ವಸಾಧನೆಯಿಂದಲೇ ಸಕಲಾನುಭವಗಳನ್ನೂ ಸಿದ್ಧಿಸಿಕೊಳ್ಳಲಾರ. ಅನ್ಯರ ಸಿಹಿ–ಕಹಿ ಅನುಭವಗಳನ್ನು ತನ್ನವನ್ನಾಗಿಸಿಕೊಳ್ಳುವ ಶಕ್ತಿ ಸಾಮರ್ಥ್ಯ ಪಡೆದಿರುತ್ತಾನೆ. ಅದು ದೇವಾದಿದೇವನಾದ ಜಗನ್ನಾಟಕ ಸೂತ್ರಧಾರಿಯಿತ್ತ ಅಸಾಮಾನ್ಯ ಕ್ರಿಯಾಶೀಲ ವ್ಯಕ್ತಿತ್ವ (Dynamic personality). ಅದರ ನೆರವಿನಿಂದ ವ್ಯಾಸ, ವಾಲ್ಮೀಕಿ, ಹೋಮರ್, ಕಾಳಿದಾಸ, ಪಂಪ, ಕುಮಾರವ್ಯಾಸ ಮೊದಲಾದ ವಿಶ್ವಕವಿಗಳು ಇಂದಿಗೂ ಎಂದಿಗೂ ಜೀವಂತ ಚೇತಸರಾಗಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಒಂದೊಂದು ಕಾವ್ಯವೆ, ಕಥೆ–ಕಾದಂಬರಿಯೇ! ಪ್ರತಿಭಾಶಾಲಿಯಾದ ಕವಿ ಅರ್ಥಾತ್ ಸಾಹಿತಿ ತಾನು ಕಂಡುಂಡ ಅನುಭವಕ್ಕೆ ಮಾತಿನ ಮೂಲಕ ಒಂದು ಕಲಾತ್ಮಕ ಅಭಿವ್ಯಕ್ತಿ ದಯಪಾಲಿಸುತ್ತಾನೆ. ಅವನ ಅನುಭವ ಎಲ್ಲರ ಅನುಭವವೇ ಆಗಿ ಪ್ರಿಯವಾಗುತ್ತೆ. ಏಕೆಂದರೆ ಸಾಹಿತ್ಯ ಜೀವಂತ ಚಿರನೂತನ ಚೈತನ್ಯ. ಮೂಲತಃ ಅದು ಕವಿಯ

ಲೋಕಾನುಭವ, ಕಾವ್ಯಾನುಭವ ಹಾಗೂ ಅಧ್ಯಾತ್ಮಾನುಭವಗಳ ತ್ರಿವೇಣಿ ಸಂಗಮ. ಅನುಭವವಿಲ್ಲದ ಸಾಹಿತ್ಯ ಬಂಜೆಗೋವಿನ ಕೆಚ್ಚಲು! ಅದನ್ನರಿತೇ ಮಿಲನ್ ಕುಂದೇರಾ ಎಂಬ ಕವಿ, ದಾರ್ಶನಿಕ ಒಂದೆಡೆ "ಒಳ ಬದುಕು ಇಲ್ಲದಿರುವ ವ್ಯಕ್ತಿಗೆ ಪ್ರೀತಿಯೂ ಸಾಧ್ಯವಿಲ್ಲ, ಸೃಜನಶೀಲತೆ (Creativity)ಯೂ ಸಾಧ್ಯವಿಲ್ಲ" ಎಂದಿದ್ದಾನೆ. ಅಹುದು; 'ಒಳ ಬದುಕು' ಎಂದರೆ ವ್ಯಕ್ತಿಯ ಸ್ವಾನುಭವ. ಅದರಿಂದ ಪ್ರಚೋದಿತವಾದ ಅಂತಃಪ್ರೇರಣೆ ಬದುಕಿನ ಸಿಹಿ–ಕಹಿಗಳನ್ನು ಸಮಪಾಲಾಗಿ ಸ್ವೀಕರಿಸಿದವನಿಂದ ಇದು ಸಾಧ್ಯ. ಹತ್ತು ಉಳಿಪೆಟ್ಟು ತಿಂದ ಕಲ್ಲು ಕಲೆಯಾದಂತೆ ಬಾಳ ಕುಲುಮೆಯಲ್ಲಿ ಬೆಂದು, ಬಡಿಸಿಕೊಂಡ ಲೋಹ ಆಕೃತಿಯಾಗಿ ಮೂಡಿದಂತೆ ಜೀವನದ ಆಘಾತ ಪ್ರತಿಘಾತಗಳಿಗೆ ಎದೆಯೊಡ್ಡಿ ನಿಂತ ಸಾಹಸಿಯ ಅನುಭವದ ಸಾರ ಸಂಭೂತವೇ ಕಾವ್ಯ ಅಥವಾ ಕಲೆ. ಇಂತಹ ಲೋಕಾನುಭವಕ್ಕೆ ಅಧ್ಯಾತ್ಮಾನುಭೂತಿಯೂ ಸಮೀಕೃತವಾದರೆ ಅದು ಲೋಕ–ಲೋಕೋತ್ತರ ಕಾವ್ಯವಾಗಿ ಪರಿಣಾಮಿಸುತ್ತದೆ.

ಪ್ರಕೃತದ ಅನುಭಾವಿ ಕವಿ ಎಲ್. ಶ್ರೀಹರಿ ಖೋಡೆಯವರ 'ಮನಸ್ಸಿನ ಅನುಭವಗಳು' ಎಂಬ ಬೃಹತ್ ಕಾವ್ಯಕೃತಿಯ ರಚನೆ ಪದ್ಯಕ್ಕೆ ಪದ್ಯವೂ ಅಲ್ಲ, ಗದ್ಯಕ್ಕೆ ಗದ್ಯವೂ ಅಲ್ಲ, ಆದರೆ ಹನ್ನೆರಡನೆಯ ಶತಮಾನದ ವಚನಕಾರರ ವಿಶ್ವವಿನೂತನ ವಚನ ವೈಖರಿಗೆ ಇದು ಸಮೀಪಗತವಾಗಿದೆ. ನಿಗದಿತ ನಿರ್ದಿಷ್ಟ ಛಂದದ ಬಂಧನವಿಲ್ಲದ ವಚನಕಾರರಂತೆ ಸರ್ವತಂತ್ರ ಸ್ವತಂತ್ರ ಮನೋಧರ್ಮದ ಸ್ವಚ್ಛಂದ ವಿಹಾರಿ ಪ್ರಸ್ತುತ ಕವಿ ಕಾವ್ಯೋದ್ಯಾನ ವಿಹಾರಿ 'ಶ್ರೀಹರಿ'. 'ಶ್ರೀಹರಿ' ಎನ್ನುವುದು ಅವರ 'ಅಂಕಿತ'ವೂ ಅಹುದು, ಅವರ ಕಾವ್ಯನಾಮವೂ ಅಹುದು. ಶ್ರೀಯುತರು ತಮ್ಮ ಕುಲದೇವತೆಯಾದ ಜಗನ್ಮಾತೆ 'ಭವಾನಿ'ಯನ್ನು ಮನಸಾ ಸ್ಮರಿಸುತ್ತಾ, ತಮ್ಮ ಪರಮಾರಾಧ್ಯಮೂರ್ತಿ 'ಶ್ರೀಹರಿ'ಯನ್ನು ತಮ್ಮ ರಚನೆಯ 'ಅಂಕಿತ'ವನ್ನಾಗಿಸಿಕೊಂಡಿದ್ದಾರೆ. ಅಂದಿನ ವಚನಕಾರರಲ್ಲಿದ್ದಂತೆ ಇಂದಿನ ಈ ವಚನಕಾರರಲ್ಲಿ ಸಮಾಜದ ಸಂಘಟನೆ, ಉಚ್ಚ–ನೀಚ ಭಾವನೆಯ ಕೊಚ್ಚೆಯನ್ನು ತೊಡೆದುಹಾಕಿ, ಶೋಷಿತರ ಬಾಳಿಗೆ ಬೆಳಕು ಕೊಡುವ ಹಂಬಲ. 'ಉಳ್ಳವರು' ಮತ್ತು 'ಇಲ್ಲದವರು' (Haves and Have nots) ಎಂಬ ಭೇದಭಾವವಿಲ್ಲದೆ ಸಕಲರನ್ನೂ ಪ್ರೀತಿ–ವಾತ್ಸಲ್ಯದಿಂದ ಕಂಡು, ಅವರವರ 'ವೃತ್ತಿ ಮರ್ಯಾದೆಯನ್ನು' (Dignity of Labour) ಎತ್ತಿ ಹಿಡಿದು, ಅವರಿಗೆ ಸಂವಿಧಾನ ಸಮ್ಮತವಾದ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕೆಂಬ ಕಾತರತೆ ಉಳ್ಳವರಾಗಿದ್ದಾರೆ. ಹಸಿದವರಿಗೆ ಅನ್ನವಾಗಿದ್ದಾರೆ, ದೀನ–ದಲಿತ–ಅನಾಥರಿಗೆ ಆಶ್ರಯದ ನೆರಳಾಗಿದ್ದಾರೆ. ಒಟ್ಟಾರೆ ವಚನಕಾರರ ಕ್ರಿಯಾಶೀಲತೆ, ಸಾಮಾಜಿಕ ಕಳಕಳಿ, ಸರ್ವಸಮಾನತೆ ಹಾಗೂ ಸರ್ವತೋಮುಖ ಪ್ರಗತಿಯ ಹಿರಿಯ ಹಂಬಲವುಳ್ಳವರಾಗಿದ್ದಾರೆ.

ಇಂಥವೆನಿತೋ ಸಂಕಲ್ಪ ಚಿಂತನೆಗಳ ರತ್ನಗಳನ್ನು ಕೋದು ವಚನ ರಚನೆಯ ರತ್ನಹಾರವಾಗಿಸಿದ್ದಾರೆ 'ಮನಸ್ಸಿನ ಅನುಭವಗಳು' ಎಂಬ ಈ ಬೃಹತ್ ಕೃತಿಯಲ್ಲಿ. ಅಂತೆಯೇ ಕೋಟ ಶಿವರಾಮ ಕಾರಂತರು ತಮ್ಮ ಆತ್ಮಕಥನದಲ್ಲಿ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಅಂದರು, ಕವಿ ಶ್ರೀಹರಿಯವರು ತಮ್ಮ ಜೀವನಾನುಭವದ ಅನಂತ ಮುಖಗಳನ್ನು ಅನಾವರಣಗೊಳಿಸಿದ್ದಾರೆ.

ಶ್ರೀಯುತರ ಕಾವ್ಯಕಮನೀತೆಯನ್ನು ಸವಿಯಲು ಅವರ ವಚನೋದ್ಯಾನವನ್ನು ಪ್ರವೇಶಿಸೋಣ ಬನ್ನಿ.

* * *

**ಯುಗಾದಿ :**

ಇಂದು ಪ್ರಕೃತಿದೇವತೆಗೆ ಹೊಸ ಹರೆಯ ತರುವ ಶ್ರೀವಿಜಯನಾಮ ಸಂವತ್ಸರದ ವಸಂತ ಯುಗಾದಿ. ಎಲ್ಲೆಲ್ಲೂ ಚೆಲುವು ಚಿಮ್ಮುವ ವರ್ಣರಂಜಿತ ಕಾರಂಜಿಗಳ ಚೆಲ್ಲಾಟ. ಹಸುರೆಲೆಯಲಿ ಹೆಸರು ಬರೆವ ಯುಗಪುರುಷನ ಚಿತ್ತ ಚಿತ್ತಾರದ ಈ ಚೈತ್ರದಲ್ಲಿ ಎತ್ತ ನೋಡಿದಡತ್ತ ಹಚ್ಚ ಹಸುರಿನ ಪಚ್ಚೆ ಬಯಲು; ವೃಕ್ಷರಾಣಿಯ ತೋಳ್ಸೆರೆಯಲ್ಲಿ ಪಕ್ಷಿ ಸಂಕುಲದ ಮಧುರ ಮಂಜುಳ ವಸಂತ ಗಾನ, ಮಘಮಘಿಸುವ ಮಧು ತುಂಬಿದ ವರ್ಣಮಯ ಪುಷ್ಪರಾಜಿ, ದುಂಬಿ ಬಂಬಲಿನ ಓಂಕಾರದ ಝೇಂಕೃತಿ. ಚಿಗುರೆಲೆಯ ಚೆಲುವು, ಮರಿಕೋಗಿಲೆಯ ಕುಹೂ ಕುಹೂ ಕೂಜನ. ಇವೆಲ್ಲವನ್ನೂ ಗರ್ಭೀಕರಿಸಿಕೊಂಡು ನಮ್ಮನ್ನು ಸ್ವಾಗತಿಸುತ್ತಿದೆ ಕವಿ 'ಶ್ರೀಹರಿ ಖೋಡೆ'ಯವರ 'ಮನಸ್ಸಿನ ಅನುಭವಗಳು' ಎಂಬ ಕವನ ಕನ್ನಿಕೆಯ ಸುಕೋಮಲ ಹಸ್ತ! ಅದನ್ನನುಸರಿಸಿ ಕವಿವಾಣಿ ಪುಟಿಯುತ್ತದೆ :

ದ್ವೇಷ ಅಸೂಯೆಗಳ ಮರೆತು, ಪ್ರೀತಿ
ಮಮಕಾರಗಳಿಂದ, ಹೊಸ ಹೊಸ ಭಾವನೆಗಳಿಂದ
ಹಳೆಯ ಸ್ನೇಹದಲ್ಲಿ ಹೊಸ ಚಿಗುರಿಗೆ ಕಚಗುಳಿ
ಇಡುತ್ತ, ಹಿಂದಿನ ಕಷ್ಟವನ್ನೆಲ್ಲ ಮರೆತು
ಮನ ಮನಗಳಿಗೆಲ್ಲಕೂ ಸುಖ ಸಂತೋಷವ
ಬಯಸುತ್ತ, ಕಾಲದ ಜೊತೆ ಸಿಹಿ ಹಂಚೋಣ.

(೨೧೩)

ಎಂದು.

ಈ ಬಗೆಯ ಶುಭಾಶಂಸನ ಬಯಸಿದ ಕವಿ ಬಾಳ ಬೃಂದಾವನದ ರಂಗು ರಂಗಿನ ರಸಘಳಿಗೆಗಳನ್ನು ಬೇಡ ಎನ್ನದೆ, ಸದಾ ಭಕ್ತಿಭಾವುಕನಾಗಿ, ಪ್ರಕೃತಿಯಲ್ಲಿ ಮೈದುಂಬಿ ಮೆರೆವ ಬಿಂಬ–ಪ್ರತಿಬಿಂಬಗಳ ಓಕುಳಿಯಲ್ಲಿ ಕಾಲದ ಜೊತೆಗೆ ಬೆರೆತು ಮುಳುಗಿ ತೇಲಿ, ಬೆಳಕು ಕತ್ತಲುಗಳನ್ನು ಸ್ವಾಗತಿಸಿ, ದೇವರ ಅಸ್ತಿತ್ವದ ಅಮೃತಘಳಿಗೆಯ ಮಿಲನದಲ್ಲಿ, ಲಜ್ಜೆಯಿಂದಿರುವ ಭಕ್ತಿಯನ್ನು ದೇವನಲ್ಲೇ ಬೆರೆಸುತ್ತ, ತಾನೇ ತನ್ನನ್ನು ಮರೆತಿರುವ ಅವನನ್ನು ಪ್ರತಿಬಿಂಬ ರೂಪದಲ್ಲಿ ದರ್ಶಿಸಿ ಮೌನ ಮಾತಾಡಿದಂತೆ ಸಾವಿಲ್ಲದ ಬರವಣಿಗೆಯಲ್ಲಿ ಬೆಸೆದಿದ್ದಾರೆ ಕವಿ. (೨೧೫–೨೧೭).

*     *     *

**ನಿರಾಳ :**

ಕವಿ ಮನಸ್ಸು ಪ್ರಾಂಜಲಗೊಂಡು ಪ್ರಫುಲ್ಲಿತ ಪುಷ್ಪದಂತಾದಾಗ ಪ್ರಭಾತ ಸಮಯದ ಪ್ರಶಾಂತತೆ ಪಸರಿಸಿದಾಗ, ತಂಗಾಳಿಯು ತೀಡಿ ಬಂದ ವೇಳೆ, ಕವಿಯ ಮಾನಸಸರೋವರದಲ್ಲಿ ಸತ್‌ಚಿಂತನೆಯ ಆಲೋಚನೆಯ ವೀಚಿಗಳು ಏಳುತ್ತವೆ. ಆಗ ಕವಿಚೈತ್ರನ ಮಾನಸ 'ನಿರಾಳ' ಜುಳು ಜುಳು ನಿನಾದಗೈಯುತ್ತಾ ಮೈ ತೆರೆದು, ಮನ ತೆರೆದು ಹರಿಯುವ ನದಿಯ ಪುಣ್ಯಸಲಿಲದಂತೆ, ಜಾಜ್ವಲ್ಯಮಾನವಾಗಿ ಬೆಳಗುವ ಜ್ಯೋತಿಯಂತೆ, ಸ್ವಪ್ನ ಸುಷುಪ್ತಿಯಲ್ಲಿ, ಕಡೆಗೆ ನಿದ್ರೆಯಲ್ಲೂ ಕನಸಿನ ರೂಪದಲ್ಲಿ ಅವತರಿಸಿ ಕೆಣಕುತ್ತದೆ. ಅನೇಕ ವೇಳೆ ಕವಿಚೇತನಕ್ಕೆ ತನ್ನ

> ಬೇಡಿಕೆಗಳಿಗೆ ಫಲ ಸಿಗದೆ
> ಕತ್ತಲಲ್ಲಿ ಗುಡಿಸಲಿನಲ್ಲಿ ಕುಳಿತು
> ಎಣ್ಣೆಯಿಲ್ಲದ ಹಣತೆಯಲ್ಲಿ ಕಣ್ಣೀರನ್ನು ತುಂಬುತ
> ಬೆಳಕಿನ ತೆನೆಯನ್ನು ಹುಡುಕುತ್ತಿರುತ್ತದೆ

ಎಂದಿದ್ದಾರೆ ಕವಿ.

*     *     *

**ಪ್ರಾಯ :**

ಮನುಷ್ಯನಿಗೆ 'ಪ್ರಾಯ' ಎನ್ನುವುದು ಲಂಗು ಲಂಗಾಮು ಇಲ್ಲದ ಕುದುರೆಯಂತೆ. ಅದಕ್ಕೆ ಕಲ್ಪನೆಯ ಕುಸುಮಗಳು ಅಸಂಖ್ಯಾತ. ಏಕೆಂದರೆ ಪ್ರಾಯ ಅಭಿಪ್ರಾಯವನ್ನು ಪಲ್ಲಟಿಸುತ್ತೆ. ಹೇಗೆ?

‘ಗೂಳಿ, ಮಣ್ಣಿನ ಜೊತೆ ತನ್ನ ಕೊಂಬನ್ನು ತೂರಿಸಿ
ಆಟವಾಡುವಂತೆ ದೊರಕಿದ ಮರು ಪ್ರೀತಿಯ
ಆ ಕಣ್ಣಂಚಿನ ಸಂಚಿನ ಕರೆ ಪ್ರೀತಿ ಪ್ರೇಮಗಳ
ದಾರಿ ತೋರಿಸುತ್ತಾ’

ಹಗಲು–ರಾತ್ರಿ ಒಂದು ಮಾಡುವ ಯೌವ್ವನ
ಭಾವನೆಗಳ ಸ್ಪರ್ಶದಿಂದ ರೋಮಾಂಚಿತ ಕನಸುಗಳು
ನಿಜಕ್ಕೂ ನಿಜವಾಗುತ್ತವೆಂಬ ನಂಬಿಕೆ ಹುಟ್ಟಿಸುತ್ತವೆ.

ಆದರೆ ಅದು ವಿಫಲಗೊಂಡಾಗ, ಅದರ ನೆನಪು ಕೆನೆಯುವುದು ತಪ್ಪಲ್ಲ; ಸಹಜ. ಏಕೆಂದರೆ ಮಾನವನ ಬಾಳಂಚಿನಲ್ಲಿ, ಅಂದರೆ ಮುಪ್ಪು ಚಪ್ಪರಿಸಿದಾಗ, ವ್ಯಕ್ತಿಯ ರಸಿಕತೆ

ಪ್ರೇಯಸಿಯ ನೋಟ, ಅವಳ ನಗೆ, ಅವಳ ಪಿಸು ಪಿಸು ಮಾತುಗಳಿಗೆ
ಕಾತರದಿ ಕಾಯುತ್ತದೆ ಮನೋದಾತ್ತ ಯೌವ್ವನದ ಜೊತೆಯಲ್ಲಿ!

(೨೨೩)

ಕವಿಯ ಈ ಸಂಸ್ಮರಣೆಯಲ್ಲಿ ಸ್ವರ್ಣವರ್ಣೋದಯದ ಅರುಣಛಾಯೆ ಇದೆ. ಅದನ್ನು ನೆನಪಿನ ನಾಲಿಗೆ ನೆಕ್ಕಿದಾಗ ಅಮೃತೋಪಮ ಆನಂದವೂ ಮರುಕಳಿಸುತ್ತದೆ.

www.shriharikhoday.com

* * *

**ಅಸಾಧ್ಯ ಎಂಬ ಚಿಂತನೆ :**

‘ಅಸಾಧ್ಯ’ ಎಂಬ ಶಬ್ದವೇ ಮನುಷ್ಯನ ಸಾಹಸದ ನಿಘಂಟಿನಲ್ಲಿಲ್ಲ. ಮನಸ್ಸು ಮಾಡಿದರೆ ಸುಖವೂ ಸಾಧ್ಯವೆ. ಮನಸ್ಸಿಗೆ ಮಿಗಿಲಾದದ್ದು ಯಾವುದೂ ಇಲ್ಲ. ಹಿಂದಿನವರಂತೆ ಅಸಾಧ್ಯವೆಂದು ತಿಳಿದಿದ್ದರೆ ಇಂದಿನ ವಿಜ್ಞಾನಿ ಚಂದ್ರಲೋಕಕ್ಕೆ ಜೈತ್ರಯಾತ್ರೆಗೆಯ್ಯಲಾಗುತ್ತಿರಲಿಲ್ಲ, ಚಿಕ್ಕೆಗಳ ಕೂಡೆ ಚಕ್ಕಂದ ಆಡಲಾಗುತ್ತಿರಲಿಲ್ಲ, ಸಮಸ್ತ ಸೌರವ್ಯೂಹವನ್ನೂ ಒಂದೇ ದಿನದಲ್ಲಿ ಸುತ್ತಿ, ಅದರ ನೆತ್ತಿಯ ಮೇಲೆ ತನ್ನ ಜಯದ ವೈಜಯಂತಿಯನ್ನು ಅನಾವರಣಗೊಳಿಸಿ ಬರಲಾಗುತ್ತಿರಲಿಲ್ಲ. ಆದರೆ ‘ಅಸಾಧ್ಯ’ ಎಂಬ ಹಳೆಯ ನೆನಪಿನ ಮೇಲೆ ನಮ್ಮ ಪ್ರಭುತ್ವವನ್ನು ಸ್ಥಾಪಿಸದೆ

ಪ್ರಕೃತಿ ಕೊಟ್ಟಿರುವ ಧೈರ್ಯವನ್ನು ತುಂಬಿಕೊಂಡು
ಕೋಡಿ ಹರಿಸುವ ಶಕ್ತಿ ಕೊಟ್ಟಿದ್ದರೂ,
ಆ ಮಹಾನ್ ಶಕ್ತಿಯನ್ನು ಮರೆತು ಬರಿ ಸುಖದ

ಸ್ವಪ್ನಗಳನ್ನು ಮನದಲ್ಲಿ ತೇಲಾಡಿಸಿಕೊಂಡು
ಸಾಧ್ಯತೆಯ ವರವನ್ನು ನಾವಾಗಿಯೇ ಸ್ವೀಕರಿಸದೆ ಬಿಟ್ಟುಕೊಟ್ಟಿದ್ದೇವೆ.
(೨೨೬)

ಇದಕ್ಕೆ ಕವಿಯ ವಿರೋಧವಿದೆ.

ಇಂದು ಮಾನವ ಸಂಬಂಧಗಳು ಕೊಂಡಿ ಕಳಚಿದ ಕೀಲುಗಳಾಗಿವೆ. ಏಕೆಂದರೆ ಬದುಕು ಅಸ್ತವ್ಯಸ್ತ; ಮನಸ್ಸು ಕೋಳಿ ಕೆದಕಿದ ತಿಪ್ಪೆ. ಇದರಿಂದ ನಮ್ಮ ಪಂಚೇಂದ್ರಿಯಗಳು ಕ್ಷಣಿಕ ತೃಪ್ತಿಪಡಬಹುದು. ಆದರೆ,

ಪ್ರೀತಿ ಪ್ರೇಮಗಳೆಂಬ ಎರಡು ಕಣ್ಣುಗಳಲ್ಲಿ
ಸಮಾಜ ನೋಡದೇ ಇದ್ದರೆ ಕಾಣದೇ ಇರುವ
ದಶನೇಂದ್ರಿಯಗಳ ಜೊತೆ ಜೀವಿಸಲಾರಂಭಿಸುವುದು ಸಹಜ.

ಆಕಾರಣ,

ಮಾನವನು ತನ್ನ ತಾನರಿಯಲು
'ಇದು ಸಕಾಲವಾಗಿದೆ' (೨೨೮)

ಎಂಬ ಕವಿಯ ಭವಿಷ್ಯವಾಣಿ ಭರವಸೆ ಮೂಡಿಸಿದೆ.

* * *

**ಪ್ರೀತಿ–ಪ್ರೇಮ**

ಪ್ರೀತಿ ಜ್ಯೋತಿ, ಪ್ರೇಮ ಅದರ ಪ್ರಕಾಶ! ಇವೆರಡೂ ಮಾನವ ಬದುಕನ್ನು ಬೆಳಗಿಸುವ ಪ್ರಣತಿಗಳು. ಇವಿಲ್ಲದ ಬದುಕು ನರಕ ಸದೃಶ. ಆದ್ದರಿಂದ ಮನುಷ್ಯ ಬಾಲ್ಯ, ಯೌವನ, ಮುಪ್ಪು, ಮರಣಗಳೆಂಬ ಬಾಳಿನ ಹಂತಗಳಲ್ಲಿ ಅತ್ಯಮೂಲ್ಯವಾದ ಪರಂಜ್ಯೋತಿ ಕಾಂತಿಯ ಪ್ರೀತಿ–ಪ್ರೇಮಗಳನ್ನು ತನ್ನ ವಶಕ್ಕೆ ತೆಗೆದುಕೊಂಡು, ಪ್ರೀತಿಯನ್ನು ಕೊಟ್ಟು ಪ್ರೀತಿಯನ್ನು ಪಡೆಯಬೇಕು. ಪ್ರೀತಿ ಜಗತ್ತನ್ನು ಗೆದ್ದರೆ, ದ್ವೇಷ ದೇಶ ವಿನಾಶಕ್ಕೆ ಹೇತುವಾಗುತ್ತದೆ. ಆ ಕಾರಣ

ಮನದ ಅಂಗಳದಲ್ಲಿ ಮುಳ್ಳು ಕಳೆ ಬೆಳೆಸದೆ
ಪ್ರೀತಿ ಪ್ರೇಮದ ಬೆಳೆಯ ಬೆಳೆಸಿ

ಎಂದು ಕೇಳಿಕೊಂಡಿದ್ದಾರೆ ಕವಿ.

ಜಗಳ ಅಸೂಯೆ ದ್ವೇಷಗಳ ಅಡುಗೆ ಮಾಡದೆ
ಎಲ್ಲರಲ್ಲೂ ಬೆರೆತು ಬಾಳುವ,
ಕಾಡುವ ಕಷ್ಟಗಳಲ್ಲಿ ಭಾಗಿಯಾಗುತ್ತಾ



www.sharikhoday.com

ನೀ ಮಾಡಿದ ಸಹಾಯ ಬೇರೆಯವರಿಗೆ ಸುಖ ಕೊಟ್ಟರೆ
ನಿನ್ನ ಬುದ್ಧಿಯ ಪಾಕಶಾಲೆಯ ಅಡುಗೆ ನಳಪಾಕವೇ ಸರಿ!
(೨೩೦)

ಎಂದು ಕವಿ ಪಾಕಶಾಲೆ ಪ್ರತಿಮೆಯ ಮೂಲಕ ತಮ್ಮ ಮನದ ಸದಾಶಯವನ್ನು ತೆರೆದಿಟ್ಟಿದ್ದಾರೆ.

* * *

**ಅಂತರಂಗದ ಬೆಳಕು**

ಕತ್ತಲಲ್ಲಿ ಕನ್ನಡಿಯ ಮುಂದೆ ನಿಂತು ಮುಖ ನೋಡಿದೆ
ಏನೂ ಕಾಣದೆ ಎಲ್ಲೆಡೆ ಮೌನ ಆವರಿಸಿತ್ತು.
"ನನ್ನ ಮುಖ ಏಕೆ ಕಾಣುತ್ತಿಲ್ಲ?" ಎಂದು ಮನಕ್ಕೆ ಕೇಳಿದರೆ
(ಅದು) ಮನದ ಕೋಣೆಯಲ್ಲಿ ಬೆಳಕಿಲ್ಲ ಎಂದು ಉತ್ತರಿಸಿತು!

ನಾಟಕೀಯವಾಗಿ ಆರಂಭವಾಗುವ ಈ ವಚನ ಭಾಗ ಒಮ್ಮೆ ಸಹೃದಯ ಶ್ರೋತೃವಿನ ಚಿತ್ತ ಚೇತೋಹಾರಿಯಾಗಿಸುತ್ತದೆ. ಅಂತೆಯೇ ಮತ್ತೆ ಚಿಂತನೆಗೆ ಒಳಗುಮಾಡುವುದೂ ಉಂಟು. ಜೀವನವನ್ನು ಕುರಿತ ವೈಚಾರಿಕತೆಗೆ ಇಲ್ಲಿ ಸಾಕಷ್ಟು ಆಹಾರವಿದೆ. ಬಹುಮುಖೀ ಜೀವನದ ಸಕಲ ಸಾಫಲ್ಯ ವೈಫಲ್ಯಗಳನ್ನು ಇಲ್ಲಿ ಪ್ರಯೋಗ ಪರಿಶೀಲನೆಗೆ ಒಳಗು ಮಾಡಿದ್ದಾರೆ. ಅಂದರೆ ಆತ್ಮಪ್ರಜ್ಞೆ ಮತ್ತು ಆತ್ಮಜ್ಯೋತಿಯ ಅನಿವಾರ್ಯತೆಗೆ ಬೇಡಿಕೆ ಇದೆ ಇಲ್ಲಿ. ಏಕೆಂದರೆ ಕತ್ತಲೆಯಲ್ಲಿ ಕನ್ನಡಿ ಮುಂದೆ ನಿಂತರೂ ನಮ್ಮ ಬಿಂಬ ಗೋಚರಿಸುವುದಿಲ್ಲ. ಅದರಂತೆ ನಮ್ಮ ಮನಸ್ಸೆಂಬ ಕತ್ತಲೆಯ ಕೋಣೆಯಲ್ಲಿ ಅಂದರೆ "ಆತ್ಮಪ್ರಜ್ಞೆ" (Self awareness) ಮತ್ತು "ಆತ್ಮಪ್ರತ್ಯಯ" (Self Confidence) ಎಂಬ ಆತ್ಮಜ್ಯೋತಿ ಇರದಿದ್ದರೆ ಸತ್ಯಸಾಕ್ಷಾತ್ಕಾರ ಮೊಲದ ಕೊಂಬು! ಆ ಕಾರಣ ಆತ್ಮಸಾಕ್ಷಿಯ ವೀಕ್ಷಣೆಗೆ ಸಿಗುವ ಸಕಲ–ನಿಃಕಲ ಪರಿಕಲ್ಪನೆಗಳಿಗೂ, ಅವುಗಳದೇ ಆದ "ದರ್ಶನ" ಪ್ರಾಪ್ತಿಲಾಭ ಕಟ್ಟಿಟ್ಟ ಬುತ್ತಿ. ಅಂತಹ ಅಲೌಕಾನುಭೂತಿ ಬೇಡ, ಲೌಕಿಕವಾದ ಸರ್ವೆ ಸಾಮಾನ್ಯ ಅರಿವು ಮೂಡುವುದಕ್ಕೂ ಅಂತರಾತ್ಮ ಜ್ಯೋತಿಯ ತೇಜ ಬೇಕೇ ಬೇಕು. ಆದ್ದರಿಂದ ಸಾಧನೆಯ ಆ ಸಿದ್ಧಿ ಸಂಪಾದನೆಗೆ ಸತ್‌ಚಿಂತನೆ ಅನಿವಾರ್ಯ. ಅದರ ಫಲವಾಗಿ 'ಅಂತರಾತ್ಮ'ವೆಂಬ ಹಣತೆ ತಂತಾನೆ ಉರಿಯಲಾರಂಭಿಸಿದಾಗ ಹೊಸ ಹೊಳಹು ಕನ್ನಡಿಯಲ್ಲಿ ಪ್ರತಿಬಿಂಬಿಸುತ್ತದೆ ! (೨೨೯) ಎಂಬ ಕವಿವಾಣಿಯ ಸಾಧನೆಯ ಸಲಹೆ ಸಾಫಲ್ಯದ ತೋರ್‌ಬೆರಳು ಮಾಡಿಕೊಂಡು ನಿಂತಿದೆ.

* * *

**ಕಾಲ :**

ಕಾಲ ಒಂದು ಅವ್ಯಕ್ತ ಶಕ್ತಿ; ಅವಿಶ್ರಾಂತ ಚಲನಶೀಲ ಚೇತನವೂ ಅಹುದು. ಸದಾ ಚಲಿಸುವುದೇ ಅದರ ಜಾಯಮಾನ. ಆ ಕಾರಣ ಅದನ್ನು 'ಕಾಲಚಕ್ರ'ವೆಂತಲೂ ಕರೆಯುತ್ತಾರೆ. ಆ ಕುರಿತು ಸಂಶೋಧಕರು 'ಕಾಲ ಎನ್ನುವುದು ಎರಡು ಘಟನೆಗಳ ನಡುವಣ ಅವಧಿ'ಎಂದು ವ್ಯಾಖ್ಯಾನಿಸಿದ್ದಾರೆ. ಏನೇ ಇರಲಿ, ಆ ಅಗೋಚರ ಶಕ್ತಿಯನ್ನು ಗುರುತಿಸಿ ಗೌರವಿಸುವ ಅರ್ಹತೆ ಇರುವುದು ಕಲ್ಪನಾವಿಹಾರಿಯಾದ ಕವಿಗೆ ಮಾತ್ರ. ಪ್ರಸಕ್ತ ಕೃತಿಯ ಕವಿ

ಹೇ ಕಾಲವೆ ನನ್ನ ಜೊತೆಗಿರಲು ಅಂಜಿಕೆಯೆ?
ನಿನ್ನ ರೂಪ ನೋಡಲು ನನಗೆ ಆತುರ!
ನೀ ನೆರಳಿನಲ್ಲಿ ಬೆರೆತಿರುವೆಯೋ ಅ...ಥ...ವಾ
ಬೆಳಕಿನಲ್ಲಿ ಬೆರೆತಿರುವೆಯೊ??

ಎಂದು ಆತ್ಮೀಯವಾಗಿ ಪ್ರಶ್ನಿಸಿದ್ದಾರೆ. ಮಾರುತ್ತರ ಬರದಾಗ

ಸಾಧ್ಯತೆಗಳು ನಿನ್ನಲ್ಲಿ ದೊರಕದೆ ಕಣ್ಣಿಗೆ ಕಾಣದ
ದಿಗಂತದ ಆಕಾಶವೊ ಆಕಾಶದ ದಿಗಂತವೊ?

ಎಂಬ ಕವಿಸಹಜ ಪ್ರಶ್ನೆಗಳಿಗೆ ಉತ್ತರಿಸಲು ಬಹುಶಃ ಕಾಲನಿಗೂ ಕಷ್ಟವಾಗಿರಬಹುದು. ಆದ್ದರಿಂದಲೇ ಮೌನ ತಳೆದಿದ್ದಾನೆಂದು ತೋರುತ್ತದೆ. ಏಕೆಂದರೆ ಬೀಜದಿಂದ ವೃಕ್ಷವೊ ಅಥವಾ ವೃಕ್ಷದಿಂದ ಬೀಜವೊ? 'ಬೀಜವೃಕ್ಷ ನ್ಯಾಯ'ದಂತೆ, ಸೂಕ್ತ ಉತ್ತರ ಕೊಡುವುದು ಕಷ್ಟಸಾಧ್ಯ. ಏಕೆಂದರೆ ಕವಿಯ ಪ್ರಶ್ನೆಯು 'ಆಕಾಶ ದಿಗಂತ ನ್ಯಾಯ'ವಾಗಿ ಪರಿಣಾಮಿಸಿ, ದೂರಕ್ಕೆ ಭೂಮಿ ಮತ್ತು ಆಕಾಶ ಕೂಡಿದಂತೆ ಕಂಡರೂ, ಆ ದಿಸೆಯಲ್ಲಿ ಎಷ್ಟೇ ದೂರ ಗಮಿಸಿದರೂ, ಅವೆರಡೂ ದೂರ ಸರಿದು ಪೂರ್ವಾವಸ್ಥೆ ರೂಪದಲ್ಲಿ ಏಕೀಭವಿಸಿದಂತೆ ಕಾಣುತ್ತವೆ. ವೈಜ್ಞಾನಿಕ ದೃಷ್ಟಿಗೆ ಸ್ಥಾವರ (Matter) ಮತ್ತು ಜಂಗಮ (Spirit)ಗಳು ಭಿನ್ನ ವಸ್ತು ಚೈತನ್ಯಗಳಂತೆ ಕಂಡುಬಂದರೂ ಅವೆರಡರ ಮೂಲ ರೂಪ ಒಂದೇ. ಸ್ಥಾವರವನ್ನು ಅಣುವಿನಲ್ಲಿ ಅಣು, ಪರಮಾಣು, ಎಲೆಕ್ಟ್ರಾನ್, ನ್ಯೂಟ್ರಾನ್, ಪ್ರೋಟಾನ್‌ಗಳಾಗಿ ವಿಭಜಿಸಿ ಅವುಗಳಿಂದ ವಿಶ್ವನಾಶಕ ವಸ್ತುವನ್ನು ಸೃಷ್ಟಿಸಬಹುದು ಎಂಬ ನಿಗೂಢ ಶಕ್ತಿಯನ್ನು ವಿಜ್ಞಾನಿಗಳು ಸಂಶೋಧನೆಯಿಂದ ಕಂಡುಹಿಡಿದಿದ್ದಾರೆ. ಅದರಂತೆ ಕವಿ 'ಸ್ಥೂಲ, ಕಾಲ ಸೂಕ್ಷ್ಮ' ಇವೆರಡೂ ಅನ್ಯೋನ್ಯ ಸಂಘಜೀವಿಗಳು. ಆದರೆ ಕವಿ ಉದ್ಘೋಷಿಸಿದಂತೆ,

'ಜೊತೆಗಿದ್ದರೂ ಸಂಬಂಧಗಳನ್ನು ಬೇಡದ
ನಾವಿಬ್ಬರೂ ದೂರದಿಂದಲೇ ಸುಖಪಡುತ್ತ

ನನ್ನ ಮನೋ ಏಕಾಂತದಲ್ಲಿ ಅಂಜದೆ ಬೆರೆಯೋಣ
ಹೇ ಕಾಲವೇ ನನ್ನ ಜೊತೆಗಿರಲು ಅಂಜಿಕೆಯೆ?'
(೨೩೧)

ಎಂದು ಆತ್ಮಾನುರಾಗಕ್ಕೆ ಆಹ್ವಾನ ಕೊಟ್ಟಿದ್ದಾರೆ. (೨೩೧)

* * *

**ಮಾಲಿನ್ಯ**

'ಮಾಲಿನ್ಯ' ಎಂಬ ಶಬ್ದ ನಮ್ಮ ಕಿವಿದೆರೆಗೆ ಬಂದು ಬೀಳುತ್ತಲೆ ನಮ್ಮ ಮನೋಭಿತ್ತಿಯಲ್ಲಿ ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ, ಪರಿಸರಮಾಲಿನ್ಯ ಮೊದಲಾದ ಮಾಲಿನ್ಯಗಳು ತುಂಬಿದ ಹಳೆಯ ಕಾಲದ ಮುರುಕು ಮನೆ ನಮ್ಮ ಕಣ್ಣೆದುರು ಧುತ್ತನೆ ಬಂದು ನಿಲ್ಲುತ್ತದೆ. ಆದರೆ ಕವಿ ಕಂಡದ್ದು ಆ ಬಗೆಯ ಮಾಲಿನ್ಯಗಳಲ್ಲ, ಅದು

ಸುಖವನ್ನು ಅನುಭವಿಸಲು ಅರಿಯದ ಜೀವಿಗಳು
ಸುಖವನ್ನು ಎಂದೂ ರೂಪಿಸಿಕೊಳ್ಳಲಾಗದ ಜೀವಿಗಳು
ಇದು ಇಲ್ಲಾ–ಅದು ಇಲ್ಲಾ ಎಂಬ ಮನೋವಾದಕ್ಕೆ ಹೆದರಿ
ಸುಖದ ವಾಸನೆ ಕೂಡ ಅನುಭವಿಸದ
ಸಾವಿನ ಜೊತೆಗೆ ಬೆರೆತುಹೋಗುವ

ಹತಭಾಗ್ಯರ ದಾರಿದ್ರ್ಯದ ದೈತ್ಯ ನರ್ತನ ಶಿಷ್ಟರ ವಂಚನೆಯ ಸಂಚಿಗೆ ಬಲಿಯಾದ ಪರಿಶಿಷ್ಟ ಅಸ್ಪೃಶ್ಯರ ಮೇಲೆ ಶಿಷ್ಟ ಸಮಾಜದಿಂದಾದ ಶೋಷಿತ ವರ್ಗದ ವರ್ತನೆಯನ್ನು ಕಂಡ ಕವಿಯ ಕಾರುಣ್ಯದ ಕರುಳು ಮಮ್ಮಲ ಮರುಗಿದೆ. ಆ ಶೋಷಿತ ಜನಾಂಗದ ಅಸ್ಪೃಶ್ಯ ನಿವಾರಣೆ ಆದಂತೆ ಆರ್ಥಿಕ ಸಮತೋಲನ, ಸಾಮಾಜಿಕ ಸಮಾನತೆ, ಅವರೂ ನಮ್ಮ ಬಂಧುಗಳೇ ಎಂಬ ಆತ್ಮೀಯ ಭಾವನೆ ಹಾಗೂ ಸರ್ವತೋಮುಖ ಪ್ರಗತಿ ಇವು ಕವಿ ಶ್ರೀಹರಿಯವರ ಹಸಿವು ಹಂಬಲಗಳಾಗಿವೆ.

* * *

**ಜೀವನ ಮೌಲ್ಯ :**

ಹಿಂದಿಲ್ಲ ಮುಂದಿಲ್ಲ
ಕಷ್ಟಗಳ ತಿಳಿಯದೇ ಇರುವವನಿಗೆ ಸುಖ ತಿಳಿಯುವುದಿಲ್ಲ.
ಕಣಜ ಖಾಲಿ ಇದ್ದಲ್ಲಿ ತುಂಬುವ ಪ್ರಯತ್ನ
ಕತ್ತಲಾದ ಮೇಲೆ ಬೆಳಕು ಜಾರಿ ಬರುವುದು!

ಉರಿಯುವ ಅಗ್ಗಿಷ್ಟಿಕೆಯ ಮೂಸೆಯಲ್ಲಿ ಚಿನ್ನ ಕರಗಿದಾಗಲೆ ತನ್ನಲ್ಲಿನ ಅವಲೋಹಾಂಶಗಳನ್ನು ನೀಗಿಕೊಂಡು, ಪರಿಶುದ್ಧ ಅಪರಂಜಿಯಾಗುವುದು. ಅದರಂತೆ ಸುಖದ ಮೌಲ್ಯ ಪಡೆಯಲು ಪಟ್ಟ ಕಷ್ಟಗಳ ಅರಿವಿದ್ದಾಗ ಮಾತ್ರ. ಕಣಜದಲ್ಲಿ ಕಾಳು ತುಂಬಾ ಇದ್ದಾಗ ಕಷ್ಟದ ಅರಿವು ಕಾಣಬರುವುದಿಲ್ಲ. ಖಾಲಿ ಆದಾಗ ಧಾವಂತದ ದೈತ್ಯ ನರ್ತನ! ಆ ಕಾರಣ ಗಾದೆ ಹೇಳುವಂತೆ 'ಬಿದ್ದಲ್ಲಿ ಹುಡುಕಬೇಕು, ಇದ್ದಲ್ಲಿ ದುಡಿಯಬೇಕು. 'ಬೆವರಿಗೆ ಬೆಲೆ ಬರಬೇಕಾದರೆ, ಅದರ ಹಿನ್ನೆಲೆಯ ಶ್ರಮದ ಅರಿವಿರಬೇಕು. ಆ ಅರಿವು ಜಾಗ್ರತವಾದರೆ ಮಾತ್ರ ಕತ್ತಲಾದ ಮೇಲೆ ಬೆಳಕು ಏರಿ ಬರುವುದು'. ಅಂದರೆ ಕಷ್ಟದ ಹಿಂದೆ ಸುಖ ಸಂತೋಷಗಳ ಆಗಮನ ಎಂದು. ಅಂತಾಗಲು

ನಿಶ್ಶಬ್ದದಲ್ಲಿ ಸ್ನಾನ ಮಾಡಿಸಿ ಬೇಕು ಬೇಡಗಳ ಮರೆಸಿ
ದ್ವೇಷರಹಿತ ಪವಿತ್ರ ಭಾವನೆಯ ಮಡಿಯ ಉಡುಗೊರೆ ತೊಡಿಸಿ
ಭೂತ ಭವಿಷ್ಯತ್ ವರ್ತಮಾನಗಳನ್ನು ಹತೋಟಿಯಲ್ಲಿಟ್ಟುಕೊಂಡು
ಹಿಂದಿಲ್ಲದ ಮುಂದಿಲ್ಲದ ನಿರಾಳ ಭಾವನೆಯ ಬೆಳಕಿನಲ್ಲಿ
ಅಗಾಧ ಕೆಲಸಗಳ ಪ್ರವೃತ್ತಿಯಲ್ಲಿ ನಾವೇ ಕರಗಿ
ಕಷ್ಟಗಳೇ ಇಲ್ಲದ ಸಮುದ್ರದಲ್ಲಿ ಈಜಾಡೋಣ!

ಎಂಬ ಆಶಾವಾದಿತನದ ಆಶಾಜ್ಯೋತಿಯನ್ನು ಬೆಳಗಿಸಿದ್ದಾರೆ ಕವಿ (೨೩೪).

* * *

**ಜೀವಿಗಳೆಂಬ ನಾಣ್ಯಗಳು**

ವ್ಯಾಪಾರಕ್ಕೆ ನಾಣ್ಯಗಳು ಹೇಗೆ ಅವಶ್ಯವೊ ಹಾಗೆ ಜೀವ ವಾಣಿಜ್ಯಕ್ಕೆ ಜಗದ ಜೀವಿಗಳು ನಾಣ್ಯಗಳು! ನಾಣ್ಯವೆಂದರೆ ಅಭಿವ್ಯಕ್ತಿ ಮಾಧ್ಯಮದ ಲೋಹದ ಕಾಸಲ್ಲ, ಪ್ರತಿಯೊಬ್ಬ ಸಾಮಾಜಿಕನೂ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸಮಾಜ ಜೀವನದಲ್ಲಿ ಸತ್ಯವಂತನೆಂಬ ಯಶ ಗಳಿಸಿಕೊಂಡರೆ, ಅವನ ವ್ಯಕ್ತಿತ್ವದ ದೀಪ್ತಿ ಸಮಾಜದ ಸರ್ವತೋಮುಖ ಸಾಧನೆಯ ಮುಖವಾಣಿಯಾಗುತ್ತದೆ ಎಂದು ಆಶಾವಾದಿಗಳಾಗಿದ್ದಾರೆ ಕವಿ 'ಶ್ರೀಹರಿ'ಯವರು. ಜೀವನದ ಮಾರುಕಟ್ಟೆಯಲ್ಲಿ ನಾವು ತುಂಬು ಚಲಾವಣೆಯಲ್ಲಿರುವ ನಾಣ್ಯಗಳೆನಿಸಬೇಕಾದರೆ ಮೊದಲು ನಮ್ಮ ಜೀವನ ಮೌಲ್ಯವನ್ನು ಸರಿಪಡಿಸಿಕೊಳ್ಳಬೇಕು. ನಾಣ್ಯದ ಮೌಲ್ಯ ಅಪಮೌಲ್ಯಗೊಳ್ಳದಂತೆಸಗಲು ನಾವು ಸರಿಸರಕನ್ನು ವ್ಯಾಪಾರ ಮಾಡುವಂತೆ ಸರಿ ಯೋಜನೆಗಳನ್ನೂ ಜೀವನದಲ್ಲಿ ರೂಪಿಸಿಕೊಂಡು ಬದುಕಿಗೆ ಬದುಕು ಕೊಡುವ ಧಾರಾಳತನದಲ್ಲಿ ಪ್ರೀತಿ ಪ್ರೇಮಗಳ ಕೊಳ್ ಕೊಡೆಯ ಮೂಲಕ ಪ್ರತಿಲಾಭ ಪಡೆದು, ಪಡೆದ ಲಾಭವನ್ನು ಹೊಸ ವ್ಯಾಪಾರದಲ್ಲಿ ಬಂಡವಾಳವಾಗಿ



www.srihariksoday.com

ಹೂಡಿ ನಮ್ಮ ಮೌಲ್ಯವನ್ನು ನಾವೇ ಹೆಚ್ಚಿಸಿಕೊಳ್ಳಬೇಕಾಗಿದೆ ಎಂಬ ವ್ಯಾಪಾರ– ವಾಣಿಜ್ಯದ ಇಮೇಜ್ ಮೂಲಕ ಕಾವ್ಯ ಸಾರ್ಥಕ್ಯವನ್ನು ಮೆರೆದಿದ್ದಾರೆ ಕವಿ ಶ್ರೀಹರಿ ಖೋಡೆಯವರು. (೨೩೫)

* * *

**ವಿಸ್ಮಯದ ವಿಸ್ಮೃತಿಯಲ್ಲಿ :**

ಬಣ್ಣಗಳಿಗೆ ತಮ್ಮ ಬಣ್ಣವ ನೋಡಲು ಕಣ್ಣಿಲ್ಲದಂತೆ
ಸೂರ್ಯನಿಗೆ ತನ್ನ ಬೆಳಗು ನೋಡಲು ಕಣ್ಣಿಲ್ಲದಂತೆ
ಹರಿಯುವ ನದಿಗೆ ತನ್ನ ಹಾದಿ ಅರಿಯದೆ ಓಡುತ್ತದಂತೆ
ಸಮುದ್ರದ ಅಲೆಗಳಿಗೆ ಸಮುದ್ರದ ಆಳ ತಿಳಿಯದಂತೆ
ಆಲದ ಮರಕ್ಕೆ ತನ್ನ ಹುಟ್ಟಿದ ಮೂಲ ತಿಳಿಯದಂತೆ
ಏನೇನೋ ತಿಳಿಯದ ನಾವುಗಳು ಜೀವಿಸುತ್ತಿರುವುದು ಒಂದು
ವಿ........ಸ್ಮ........ಯ!

ಈ ವಿಸ್ಮೃತಿಯ ವಿಕೃತಿಯಲ್ಲಿ ಇಂದಿನ ವಿಶ್ವ ವ್ಯಾಪಾರ ನಡೆಯುತ್ತಿದೆ. ಇದಕ್ಕೆ ಪರಿಹಾರ ಪರಮಾತ್ಮನಿಗೆ ಬಿಟ್ಟದ್ದು. ಏಕೆಂದರೆ ಇದು

ಬ್ರಹ್ಮಾಂಡಗಳನ್ನು ಅಂಟಿಸಿಕೊಳ್ಳಲಾಗದ ಕಾಲ
ಉಸಿರಾಡುತ್ತಾ ಜೀವಿಸುತ್ತಿರುವ ಈ ಮಾನವನಿಗೆ!
ನೋಡಿ, ಪರಿಶೀಲಿಸಿ, ಅನುಶೀಲಿಸಿ ಬೆರಗಾಗಿ
ಅರ್ಥವ ತರ್ಜುಮೆ ಮಾಡುವ ಮುನ್ನ ಕಾಣುವ ಬಯಲ
ಭ್ರಮೆಯಲ್ಲಿ ಬೆರೆತು ಕಳೆದುಹೋಗುತ್ತಿದ್ದಾನೆ ಎಡಬಿಡಂಗಿ!

ಇಲ್ಲಿ ಕವಿ ಕಲ್ಪನೆಯ ವಿಸ್ಮಯಕರ ವಿಡಂಬನೆ ಯಾವ ವ್ಯಾಖ್ಯಾನವನ್ನೂ ಬಯಸುವುದಿಲ್ಲ. ಅಲ್ಲವೆ? (೨೩೭)

* * *

**ಬದುಕು ಚಿಂತೆಯ ಸಂತೆ**

ಅಹುದು, ಅದು ಗೊಂದಲದ ಗೂಡು ಕೂಡ. ಅವೆರಡರ ಮಧ್ಯದಲ್ಲಿ ಹೃದಯ ಶ್ರೀಮಂತಿಕೆಯುಳ್ಳ ವ್ಯಕ್ತಿ ತನ್ನ ತನಕ್ಕೆ ತಿಲಾಂಜಲಿ ಕೊಡದೆ, ತನ್ನ ಒಳಿತನ್ನು ಎಲ್ಲ ಎಲ್ಲರಲ್ಲೂ ಮೆರೆಯಬೇಕು. ಹಾಗಲ್ಲದೆ,

ತಾನು ತನಗೊಬ್ಬನಿಗಾಗಿಯೇ ಬದುಕುವುದು
ತನ್ನ ಮನೆತನಕ್ಕೆ ಬಡತನ ನೀಡಿರುವ ಒಂದು ಮನೋಪ್ರಯೋಗ.



www.srihariKhoday.com

ಅಂದರೆ ಅದು ವ್ಯಕ್ತಿಯ ಮಾನಸಿಕ ದೌರ್ಬಲ್ಯ. ವ್ಯಕ್ತಿ ಅದನ್ನು ದೂರಮಾಡಿ ತಾನು ಬದುಕಿ, ಅನ್ಯರಿಗೂ ಬದುಕು ಕೊಡಬೇಕು. ಅಂತೆಯೇ

ಇಲ್ಲದ್ದನ್ನು ಇದೆ ಎಂದು ಹೇಳದೆ
ತನ್ನ ಮನೋ ಆಡಂಬರಗಳ ಕಸವನ್ನು
ಮನದಾಳದ ತೊಟ್ಟಿಯಲ್ಲಿ ಕೊಳೆಯಲು ಬಿಟ್ಟು,
ಹಗುರಾದ ಪವಿತ್ರ ಭಾವನೆಗಳ ಜೊತೆಗೆ
ಜೀವನದ ಸವಿಯನ್ನು ಹಲವರಿಗೆ ಹಂಚಿ ಬಾಳು ॥

– ಎಂಬ ಅಮೃತೋಪಮ ಸಂದೇಶವಿತ್ತಿದ್ದಾರೆ ಕವಿ (೨೪೧).

* * *

**ಬದುಕು–ಬದುಕು ಕೊಡು :**

ಹಗಲಿರುಳಿನಿಗ್ಗಾಲಿ (ಎರಡು ಚಕ್ರಗಳ ಬಂಡಿ) ನಿರಂತರವಾಗಿ ಉರುಳಿಯೇ ಉರುಳುತ್ತದೆ. ನಮ್ಮ ಬದುಕೂ ಸಹ ಅದರೊಡನೆ ನಾಗಾಲೋಟದಲ್ಲಿ ಓಡುತ್ತಲೇ ಇರುತ್ತದೆ–ಎಡವಿ ಮುಗ್ಗರಿಸಿ ಬೀಳುವುದನ್ನೂ ಕಾಣದೆ! ಆದರೆ ಕವಿ ಎಚ್ಚರಿಸುತ್ತಾರೆ : ಜೀವನ ಎಂಬುದು ಒಂದು ಚಟುವಟಿಕೆಯ ಪ್ರಯೋಗಶಾಲೆ. ಅಲ್ಲಿ ಕಲಿತದ್ದನ್ನು ಆ ಬಂಗಾರದ ಬಾಳನ್ನು ನಿನ್ನ ಜೊತೆಗೂಡಿ ಬಂದ ಇತರರನ್ನು ಹಗುರಾಗಿಸಲು ಬಳಸು. ಆದರೆ ಸ್ವಪ್ರಯತ್ನದ ಸಿದ್ಧಿಯನ್ನು

'ಅದೃಷ್ಟದ ಲಿಖಿತದ ಮೇಲೆ ಹೊರ ಸೂಸುವುದ ಕಂಡರೆ
ಆಕಾಶಕ್ಕೆ ಅಡುಗೆ ಮಾಡು ಎಂದು ಹೇಳುವಂತೆ!'

ಅಂದರೆ ನಮ್ಮ ಜೀವನ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಿ, ಅದನ್ನು ಅನ್ಯರಿಗೂ ಹಂಚಿಕೊಡದಿದ್ದರೆ, ನಮ್ಮ ಜವಾಬ್ದಾರಿತನದಿಂದ ಪಲಾಯನಗೈದು ಆಕಾಶಕ್ಕೆ ಅಡುಗೆಮಾಡಿ ಎಂದು ಹೇಳಿ ತಮ್ಮಟೆ ಬಾರಿಸಿದಂತಾಗುತ್ತದೆ! ಆ ಕಾರಣ ಹದವಾದ ಹಗುರ ಜೀವನ ಸಾಗಿಸಿ ಸಕಲರಿಗೂ ಆದರ್ಶ ವ್ಯಕ್ತಿಯಾಗಿ ಬದುಕು ಎಂಬ ಸದಾಶಯ ತುಂಬಿದ್ದಾರೆ. (೩೪೩)

ಅಂತೆಯೇ,

ಅರಳಿದ ಹೂ ಮುದುಡಿ ಹೋಗಿ
ಮತ್ತೆ ಮತ್ತೆ ಚಿಗುರ ಆಸೆ ಹೊಮ್ಮಿಸಿಕೊಂಡು
ಯಾವ ಯಾವ ಬಣ್ಣದಿಂದ ಚಿಗುರಿ ಮತ್ತೆ ಬರಲಿ ಎಂದು



www.sirinudi.com

ತಾನು ಮುದುಡಿದ ಹೂ ಬಳ್ಳಿಜೊತೆಗೆ ಮಾತನಾಡುತ್ತಿದೆ!

–ಅಹುದು, ಇದು ನಿಸರ್ಗದೇವತೆಯ ದೈನಂದಿನ ಚಟುವಟಿಕೆ. ಇದರಂತೆ ಆಕೆ ಆಶೋತ್ತರಗಳುಳ್ಳ ಪಾಪರಹಿತ ಹಂಬಲ ಮಾನವನ ಮಾನಸಿಕ ಬಳಕೆಯಾಗಿ, ಆ ಬಯಕೆ ಬೇರೆಯವರಿಗೂ ಮೀಸಲಾಗಿ ಸಂತಸ ನೀಡಲಿ. (೩೪೪)

ನಮ್ಮ ಸುಖದ ನೋಟಗಳು ನಮ್ಮಿಂದಲೇ ಪ್ರತಿಬಿಂಬಿಸಲಿ! 'ಸರ್ವೇಜನಾಃ ಸುಖಿನೋ ಭವಂತು' ಎಂಬ ವೇದವಾಕ್ಯಕ್ಕೆ ಸಮಾನ ಸಂದೇಶ ಸಾರಿದ್ದಾರೆ ದಾರ್ಶನಿಕ ಕವಿ ಶ್ರೀಹರಿ ಖೋಡೆಯವರು.

*   *   *

**ತೆರೆ ಮನದ ಬಾಗಿಲನು :**

ದೇವರು ಎಂಬ ಒಂದು ಅವ್ಯಕ್ತ ಶಕ್ತಿ ವಿಶ್ವಾಂತರಾಳದಲ್ಲಿದೆ. ಆದರೆ ಅದನ್ನು ನಮ್ಮ ನಮ್ಮ ಹೊಣೆಗಾರಿಕೆಗೆ ಗುರಿಪಡಿಸುವುದಲ್ಲ. ನಮ್ಮ ಕಾಯಕ ನಿಷ್ಠೆಯಿಂದ ಪ್ರಾಮಾಣಿಕ ಆಚರಣೆಗೈದು, ಅದರ ಫಲಾಫಲಗಳನ್ನು ವೀಕ್ಷಿಸುವ ಸಾಕ್ಷಿಯಾದ ಆ ಭಗವಂತನ ಪಾಲಿಗೆ ಬಿಟ್ಟು ಬಿಡೋಣ. ಅದಕ್ಕಾಗಿ,

ತೆರೆದ ಕಣ್ಣುಗಳಿಂದ ಹೊಸ ಕೆಲಸಗಳನ್ನು ಹುಡುಕೋಣ
ತೆರೆದ ಮನದಿಂದ ಬೇರೆಯವರ ಕಷ್ಟಗಳಲ್ಲಿ ಬೆರೆಯೋಣ
ತೆರೆದ ತೋಳುಗಳಿಂದ ಎಲ್ಲರನ್ನೂ ಪ್ರೀತಿಯಿಂದ ಅಪ್ಪಿಕೊಳ್ಳೋಣ
ತೆರೆದ ಮನೆಯ ಬಾಗಿಲನ್ನು ತೆರೆದು ಬೇರೆಯವರ ಕಷ್ಟಗಳನ್ನು

ಕೇಳೋಣ
ತೆರೆದು ಕರೆಯುತ್ತಿರುವ ಆಕಾಶದಲ್ಲಿ ನಮ್ಮನ್ನೇ ನಾವು ಮರೆತು
ಬಣ್ಣ ಬಣ್ಣಗಳ ಸುಂದರವಾದ ವಿಚಾರಗಳನ್ನು ಚಿತ್ರಿಸೋಣ.

– ಈ ಬಗೆಯ ಮಾನವತೆಯ ಆಶಾವಾದಿತನ ಸಕಲರ ಜೀವನೋತ್ಸಾಹ ಪ್ರೇರಕ ಶಕ್ತಿಶ್ರೀ ಆಗಲಿ ಎಂದು ಕವಿ ಆಶಿಸಿದ್ದಾರೆ. (೨೪೩)

*   *   *

**ಕವಿ, ರಸಿಕ ಮತ್ತು ಹುಚ್ಚ**

ಈ ಮೂವರೂ ಸನಾಭಿಗಳು (ಒಂದೇ ಕರುಳಬಳ್ಳಿಯಿಂದ ಬಂದವರು) ಎಂದು ನಮ್ಮ ಭಾರತೀಯ ಕಾವ್ಯಮೀಮಾಂಸಕರು ಅಭಿಪ್ರಾಯಪಡುತ್ತಾರೆ.

ಈ ಮೂರೂ ಮುಪ್ಪುರಿಗೊಂಡು 'ಶ್ರೀಹರಿ' ಆಗಿದ್ದಾರೆ ನಮ್ಮ ಕವಿ. ಲೌಕಿಕ ಮತ್ತು ಪಾರಮಾರ್ಥಗಳ ಅನುಭೂತ ಪ್ರಾಜ್ಞರಾದ ಶ್ರೀಯುತರು ಲೋಕಹಿತ ಸಾಧಕವಾದ ಸದ್ಗುಣಗಳ ಗಣಿಯಾಗಿ ದೀನರಿಗೆ ದಯೆಯಾಗಿದ್ದಾರೆ, ದಲಿತರಿಗೆ ತಾಯಿಯಾಗಿದ್ದಾರೆ, ತನ್ಮೂಲಕ ರಾಷ್ಟ್ರಹಿತ ಸಾಧನೆಯ ಹೊಂದೇರು ತಾವಾಗಿದ್ದಾರೆ. ಶ್ರೀಯುತರ ಕವಿಪ್ರಜ್ಞೆ ಪ್ರಾತಿಭ ಹೊಂಬೆಳಕಿನ ಪ್ರಭೆಯಿಂದ ರಸವತ್ಕಾವ್ಯವಿತ್ತು ಕನ್ನಡಮ್ಮನ ಮಡಿಲು ತುಂಬಿದ್ದಾರೆ, ಮುಡಿಯ ಸಿಂಗರಿಸಿದ್ದಾರೆ. ಇವರ ರಸಿಕತೆ ಕಾವ್ಯೋದ್ಯಾನಕ್ಕೆ ಮಾತ್ರ ಮೀಸಲಿಲ್ಲ, ಸಂಗೀತ, ಶಿಲ್ಪ, ನೃತ್ಯಾದಿಗಳವರೆಗೂ ವ್ಯಾಪಿಸಿದೆ. ಸಂಗೀತ ಕಲೆ ವ್ಯಾಕರಣವೂ ಇವರಿಗೆ ತಿಳಿದಿದೆ. ಅದಕ್ಕೆ ನಿಂತ ನಿದರ್ಶನ ಈ ವಚನ (೨೪೮).

ಶ್ರುತಿಸುಖ ನಿನದೆ ಕಲರವ ವರದೆಯಾದ ಸಂಗೀತ ಶಾರದೆಯ 'ಸರಿ ಗಮ ಪದನಿ' ಎಂಬ ಸಪ್ತಸ್ವರಗಳಲ್ಲಿ ಅನೇಕ ರಾಗ–ರಾಗಿಣಿಗಳನ್ನು ಬಿಡಿಸಿ, ನುಡಿಸುವ ಎಲ್ಲ ರಾಗಗಳಿಗೂ ಸಮಂಜಸ ತಂಬೂರದ ಶ್ರುತಿ ರಾಗ ಸಂಯೋಜಿತ ಸ್ವರಮೇಳದಲ್ಲಿ ನಾದಮೋದವನ್ನು ಆಹ್ವಾನಿಸಿ ಆನಂದಿಸಿ ಅದನ್ನು ಲಹರಿ ಲಹರಿಯಾಗಿ ಸರ್ವರಿಗೂ ಹಂಚುವ ಶ್ರುತಿ ಸಂಚಾರದ ತಂಬೂರವನ್ನು **'ಅವಧೂತವಾದ್ಯ'** ಎಂದು ಪ್ರಶಂಸಿಸಿದ್ದಾರೆ. ಈ 'ಅವಧೂತವಾದ್ಯ' ತಾಳ ತಪ್ಪಿದ, ಅಪಸ್ವರ ಸ್ರವಿಸಿದ ಇಂದಿನ ಜೀವನವನ್ನೂ ತಿದ್ದಬೇಕು. ಅಲ್ಲಿನ ಯತಿ–ಜತಿ–ಶ್ರುತಿ–ಲಯಗಳಂತೆ ಜೀವನ ಗೀತಕ್ಕೂ ಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ನನ್ನ ಮನದಲ್ಲಿ ಅಪಸ್ವರ ಇಲ್ಲದಿದ್ದಲ್ಲಿ
ಜೀವನದಲ್ಲಿ ಸ್ವರದ ನಾದ ತುಂಬಿಕೊಂಡರೆ
ಜೊತೆಗೆ ಜಗತ್ತಿನ ಇಂಪಾದ ನಾದ ಸಂಗೀತವಾದರೆ
ಕಾಲವೇ ಗೆಜ್ಜೆಯ ಹೆಜ್ಜೆಯಲ್ಲಿ ತಾಳ ಹಾಕುತ್ತಿದ್ದರೆ
ಯಾರಿಗೂ ಕಷ್ಟಗಳು ಭಾಸವಾಗುವುದಿಲ್ಲ!

ಇದು ಕವಿ 'ಶ್ರೀಹರಿ'ಯವರ ಸಂಗೀತಪ್ರಿಯತೆಯ ಜೊತೆಯಲ್ಲಿ ಅವರ ಸಂಗೀತ ಪರಿಣತಿಯನ್ನು ಪ್ರಚುರಪಡಿಸುತ್ತದೆ. ಅಂತೆಯೆ ಅವರ ಹೂವಿನಷ್ಟು ಕೋಮಲವಾದ ಹೃದಯದ ಸದಾಶಯಕ್ಕೆ ಹಿಡಿದ ಪ್ರತಿಫಲಿತ ಪ್ರಾಂಜಲಿತ ರಸಗನ್ನಡಿಯೂ ಆಗಿದೆ. (೨೪೮)

* * *

**ಅನ್ನದೇವರು**

'ಅನ್ನದೇವರ ಮುಂದೆ ಇನ್ನು ದೇವರು ಇಲ್ಲ' ನಿಜ. ಅನ್ನದ ಮೌಲ್ಯ ಪ್ರಶ್ನಾತೀತ. ಈ ಗುಟ್ಟರಿತ ಗಾರುಡಿಗ ಕವಿ

ಅನ್ನದ ಕಾಳಿಗೆ ಇರುವ ಬೆಲೆ ಚಿನ್ನದ ನಾಣ್ಯಕ್ಕಿಲ್ಲ
ಪ್ರೀತಿ–ಮಮತೆಯನ್ನು ಹಣದಿಂದ ಕೊಳ್ಳಲಾಗುವುದಿಲ್ಲ

ಏಕೆಂದರೆ,

ಶ್ರಮದಿಂದ ಬೆಳೆಯುವ ಬೆಳೆ
ತ್ಯಾಗದಿಂದ ಪಡೆಯುವ ಪ್ರೀತಿ ಮತ್ತು ಪ್ರಾಮಾಣಿಕತೆ
'ತಾನು–ತನ್ನದು' ಮರೆತಿರುವ ಸರಳ ಜೀವನ ರೀತಿ

ಇದು,

ಎಂದೂ ಕೊಳ್ಳಲಾಗದ ಹಣವನ್ನು ಮೀರಿಸುವ ಆಸ್ತಿ!

ಎಂದಿದ್ದಾರೆ.

ಇದು ಕವಿಯ ಬಾಳ ಸಾರಳ್ಯಕ್ಕೆ ತೆರೆದಿಟ್ಟುಕೊಟ್ಟ ಮನ್ನಣೆಯ ಮಣೆ!

(೨೫೦)

* * *

**ವೈದೃಶ್ಯ ಪ್ರವೃತ್ತಿ :**

ಬಾಳು ದ್ವಂದ್ವಗುಣಗಳ ಸುಂದರ ಸಮ್ಮಿಶ್ರಣ. ಸುಖದ ಬೆನ್ನಲ್ಲೇ ದುಃಖ ಇದೆ. ಕ್ರೌರ್ಯದ ವಿರುದ್ಧವಾಗಿ ಸಾತ್ವಿಕತೆ ಕಂಕಣ ಕಟ್ಟಿಕೊಂಡು ನಿಂತಿದೆ. ಹಗಲು ಇದ್ದೆಡೆಯಲ್ಲಿ ಇರುಳು ಸಹಜ. ಹಗಲಾಗ ಬಯಸುವೊಡೆ ಇರುಳಿರಲೆ ಬೇಕು. ಇದು ದಾರ್ಶನಿಕ ಕವಿವಾಣಿ. ಒಬ್ಬ ವ್ಯಕ್ತಿಯಲ್ಲೇ ಈ ಎರಡೂ ವ್ಯಕ್ತಿತ್ವಗಳು (Dual personalities) ಒಬ್ಬ ವ್ಯಕ್ತಿಯಲ್ಲೇ ಇರಲು ಸಾಧ್ಯ. ಸ್ಟೀವನ್‌ಸನ್‌ನ 'Dr. Jackail and Mr. Hyde' ಕಥಾ ನಾಯಕನಿಗಿದ್ದಂತೆ!

ಆದರೆ ಕೋಪವನ್ನು ಶಾಂತಿಯಿಂದ, ಮೂರ್ಖತೆಯನ್ನು ಜಾಣ್ಮೆಯಿಂದ, ದ್ವೇಷವನ್ನು ಪ್ರೀತಿಯಿಂದ ಗೆಲ್ಲಬಹುದು. ಹೇಗೆಂದರೆ ಮೃದುತ್ವದ ಮುಂದೆ ಕಾಠಿಣ್ಯ ಕರಗುವುದು ಸತ್ಯ. ಈ ಹಿನ್ನೆಲೆಯಲ್ಲಿ ಕವಿ ಶ್ರೀಹರಿಯವರು ಮೂಲ ತತ್ತ್ವಗಳ ಪರಸ್ಪರ ವೈರುಧ್ಯಗಳನ್ನು ವಿಶ್ಲೇಷಿಸಿ ಸೂಕ್ತ ಸಲಹೆ ನೀಡಿದ್ದಾರೆ. ನೋಡಿ,

ಸಾವು ಹುಟ್ಟುವುದಕ್ಕೆ ಕಾರಣವಾದರೆ
ಹುಟ್ಟು ಸಾವನ್ನು ಜೊತೆಗೇ ತರುವುದು!
ಅಸೂಯೆ ಕೋಪಕ್ಕೆ ಕಾರಣವಾದರೆ
ಶಾಂತಿ–ಪ್ರೀತಿ ಜೀವನಕ್ಕೆ ಸೊಗಸನ್ನು ತರುವುದು!
ಜಗಳಗಳು ಹೊಡೆದಾಟಗಳಿಗೆ ಕಾರಣವಾದರೆ
ಗೆಳೆತನ ಪ್ರೀತಿಯಿಂದ ಬಾಂಧವ್ಯವನ್ನು ಬೆಸೆಯುವುದು!
ಬೇಸರ ಸಂಸಾರದಲ್ಲಿ ಸಂಬಂಧಗಳು ಕಷ್ಟಕ್ಕೆ ಕಾರಣವಾದರೆ
ತುಟಿಯ ಮೇಲಿನ ನಗೆ, ಪ್ರೀತಿ ತುಂಬಿದ ಕಣ್ನೋಟ
ಮರುಕ್ಷಣವೇ ಸುಖವನ್ನು ತರಿಸುವುದು!

–ಈ ಬೋಧಕ ಸಾಮಗ್ರಿಯುಳ್ಳ ಸತ್‌ಚಿಂತನೆ ಎಣ್ಣೆ ಬತ್ತಿಗಳಿಂದ ಉರಿಯುವ ನಿರ್ದೋಷಿ ದೀಪಕ್ಕೆ ದ್ವೇಷದ ಮಣ್ಣೆರಚಬಾರದು–ಎಂಬ ಸಾತ್ವಿಕತೆಯ ಶ್ರೇಷ್ಠತೆ ಇಲ್ಲಿದೆ (೨೫೫)

* * *

**ಸೌಂದರ್ಯ ಮೀಮಾಂಸೆ**

ಸೌಂದರ್ಯವಿರುವುದು ನಮ್ಮ ಕಣ್ಣಿಗೆ ಕಾಣುವ ವಸ್ತುವಿನಲ್ಲಲ್ಲ, ನಾವು ನೋಡುವ ಕಣ್ಣುಗಳಲ್ಲಿ. ಒಂದು ವೇಳೆ ವಸ್ತುವಿನಲ್ಲೇ ಸೌಂದರ್ಯವಿದೆ ಎನ್ನುವುದಾದರೆ ಅದನ್ನು ನೋಡಿದ ಎಲ್ಲರಿಗೂ ಒಂದೇ ರೀತಿಯ ಸೌಂದರ್ಯ ಪ್ರದಾನಗೈಯಬೇಕಿತ್ತು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಅದು ನಮ್ಮ ನಮ್ಮ ಚೇತನಗಳಿಗಾದ ಸಂಸ್ಕಾರ, ಸಂಸ್ಕೃತಿ ಮೊದಲಾದವುಗಳ ಅನುಗ್ರಹ ಅನುಭೂತಿಯಿಂದ ಚೆಲುವು ದರ್ಶಿತವಾಗುತ್ತದೆ. ಜೋಗದ ನೀರ್‌ಬೀಳ ಮಗುವಿಗೆ ಹಾಲು ಸುರಿದಂತೆ ಕಂಡರೆ, ಕುಡುಕನಿಗೆ ಹೆಂಡದಂತೆ ಭಾಸವಾಗುತ್ತದೆ. ಬೇಲೂರು ಶಿಲಾಬಾಲಿಕೆ ರಸಿಕನಿಗೆ ನಾಟ್ಯಮಯೂರಿಯಾಗಿ ಕಂಡರೆ, ಹುಂಬನಿಗೆ ಕಲ್ಲಿನ ಬೊಂಬೆ ಮಾತ್ರವಾಗುತ್ತಾಳೆ.

ಇದನ್ನೇ ಕವಿ

ನಮ್ಮಲ್ಲಿ ಒಳ್ಳೆಯ ಮನಸ್ಸು ಇಲ್ಲದಿರೆ
ಒಳ್ಳೆಯ ಮನಸ್ಸುಗಳ ಜನಗಳು ಸಿಗರು.

(ಅವುಗಳಂತೆ)

ನಮ್ಮ ಕಣ್ನೋಟದಲ್ಲಿ ಸೌಂದರ್ಯವಿಲ್ಲದಿರೆ
ಜಗತ್ತು ಎಂದೂ ಸುಂದರವಾಗಿ ಕಾಣದು!

ನಮ್ಮ ಸಂಸಾರದಲ್ಲಿ ಸಂತಸ ಇಲ್ಲದಿರೆ ಜಗತ್ತಿನಲ್ಲಿ
ಹುಡುಕಿದರೂ ಸಂತಸ ಸಿಗದು!

ಆ ಕಾರಣ ನಮ್ಮ ಹೃದಯ ಪಕ್ವತೆ ಇದ್ದರೆ, ಒಳ ಓವರಿಯಲ್ಲಿ ಪ್ರಾತಿಭ ಜ್ಯೋತಿ ಜಾಜ್ವಲ್ಯಮಾನವಾಗಿದ್ದರೆ ಮಾತ್ರ ನೋಡಿದ ಎಲ್ಲ ವಸ್ತುಗಳಲ್ಲೂ ಸೌಂದರ್ಯ ದರ್ಶಿಸಬಹುದು. (೨೬೦) ಎಂಬ ಭಾವ ಇಲ್ಲಿದೆ.

* * *

**ತರಂಗ ತಾಂಡವ :**

ಲಯಭರಿತ ಸೃಷ್ಟಿ ಈ ವಿಶ್ವ. 'ಲಯ' ಎಂದರೆ ಒಂದು ಗತಿಯ ಓಘ. ಇಡುವ ಹೆಜ್ಜೆಯ ನಡೆ, ಗತಿ, ಗಮನ, ಒಂದು ಬಗೆಯ ಗತಿ–ಗಮ್ಮತ್ತು! ಸೂರ್ಯನಿಂದ ಬೆಳಕು ಪ್ರಸಾರವಾಗುವಾಗಲೂ 'ಲಯ' ಇದೆ, ಗಾಳಿ ಬೀಸುವಾಗಲೂ 'ಲಯ' ಇದೆ. ನೀರು ಹರಿಯುವಾಗ, ಬಳ್ಳಿ ಬಳುಕುವಾಗ, ಹಕ್ಕಿಯ ಕಂಠದಲ್ಲಿ ಹಾಡು ಪಸರಿಸುವಾಗ, ಅಷ್ಟೇಕೆ ಸಮಸ್ತ ಸೌರವ್ಯೂಹವೂ ಒಂದು ನಿಯತ ಗತಿ ಅಥವಾ ಲಯದಲ್ಲಿ ಒಂದು ಗ್ರಹದ ಆಕರ್ಷಣೆಯಲ್ಲಿ ಮತ್ತೊಂದು ಚಲಿಸುತ್ತಲೇ ಇರುತ್ತದೆ. 'ಲಯ' ತಪ್ಪಿದರೆ ಪ್ರಳಯ ಆಗುತ್ತೆ. ನರ್ತನದಲ್ಲಿ ಗೆಜ್ಜೆಯ ಹೆಜ್ಜೆ, ನಡೆ; ಸಂಗೀತ ನಿವೇದನದಲ್ಲಿ ತಾಳ 'ಪೆಟ್ಟು ಮತ್ತು ಹುಸಿ'ಗಳ ಬೆಡಗು! ಸಾಮಾನ್ಯವಾಗಿ 'ಲಯ' 'ತರಂಗ' ಗರ್ಭಿತವಾದಲ್ಲಿ ಸಕಲ ಚಟುವಟಿಕೆಗಳ ವಿನ್ಯಾಸ ಗತಿಯೂ ಅಲೆಯಾಕೃತಿಯ ಆವಿರ್ಭಾವ. ಲಯಬದ್ಧವಾಗಿ ತೇಲಿಬರುವ ವಿಶ್ವ ತರಂಗಗಳೇ 'ವಿಸ್ಮಯಗಳು' ಎಂದು ಭಾವಿಸಿದ ಕವಿ

"ಓ ವಿಶ್ವ ವಿಸ್ಮಯಗಳೇ ತೇಜವೇ
ತರಂಗದರೂಪಿ ಶರೀರಧಾರಣ ಮಾಡಿಸಿ, ಎಲ್ಲ ಕಲೆಗಳ
ಕಲಿಸಿ"

ಎಂದು ಬೇಡಿಕೆ ಸಲ್ಲಿಸಿದ್ದಾರೆ ಅಂತರಾತ್ಮನ ಪರವಾಗಿ. (೨೬೪)

* * *

**ತಪ್ಪು ಮಾಡದ ಅಪ್ಪಗಳಿಲ್ಲ**

ನಮ್ಮಲ್ಲಿ ದೇವತ್ವವೂ ಇದೆ. ದೈತ್ಯತೆಯೂ ಇದೆ. ನಾವು ಅಂತರಾತ್ಮನೆಂಬ ದೇವನಿಗೆ ಧೂಪ ಹಾಕಿದರೆ ನಾವೂ ದೇವರ ಸಮಾನರಾಗುತ್ತೇವೆ; ದೈತ್ಯತೆಗೆ ಧೂಪ ಹಾಕಿದರೆ ದೆವ್ವಗಳೇ ಆಗುತ್ತೇವೆ. ಆ ಕಾರಣ ಮನಸ್ಸು ಸದಾ ಸ್ವಚ್ಛ, ಶುಭ್ರ, ಪಾರದರ್ಶಕ (Transparent) ಆಗಿರಬೇಕು. ದೃಷ್ಟಿಯಂತೆ ಸೃಷ್ಟಿ.

ದೃಷ್ಟಿಯ ಪಾರಿಶುದ್ಧ್ಯಕ್ಕೆ ಬಾಳು ಬೆಳಗುತ್ತೆ, ಮಲಿನಗೊಂಡರೆ ಚರಂಡಿಯ ಕೊಚ್ಚೆಯಾಗುತ್ತೆ. ಇದನ್ನೇ ಕವಿ ಸಂಗೀತದ Image ಬಳಸಿಕೊಂಡು 'ಅಪಸ್ವರದ ಮನೋವಾದ್ಯಗಳು ಅನಾಹುತಕ್ಕೆ ಅಡಿಗಲ್ಲು ಹಾಕಿದರೆ, ಸುಸ್ವರದ ಸುಮಧುರ ಮನೋವಾದ್ಯಗಳು ಹಾವನ್ನೂ ತಲೆದೂಗಿಸುತ್ತವೆ.' ಎಂದು ವಚನ ೨೮೩ರಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಬಂಜೆ ಗಿಡದಲ್ಲೂ ಹೂ ಅರಳುವಂತೆ ಮಾಡುತ್ತೆ. ಸತ್ಕ್ರಿಯೆಗೆ ಅದೇ ಸಾಕ್ಷಿ! ಈ ಸದ್ಭಾವ ತಳೆದ ಕವಿ ನಿಜಕ್ಕೂ ಧನ್ಯ! (೨೮೦)

* * *

**ಆಧುನಿಕತೆ ಎಂಬ ಬಂಗಾರದ ಜಿಂಕೆ**

'ಆಧುನಿಕತೆ ಆಶೀರ್ವಾದದ ಜೊತೆಗೆ ಶಾಪ!
ಅದು ನಮ್ಮ ಸಂಸ್ಕೃತಿಯನ್ನು ಅಲ್ಲಗಳೆಯುವ ತಾಪ!'

ಹೀಗೆ ಆರಂಭಗೊಳ್ಳುವ ಈ ವಚನ ನಾಗರಿಕತೆಗೂ (Civilization) ಮತ್ತು ಸಂಸ್ಕೃತಿಗೂ (Culture) ಅರ್ಥವ್ಯತ್ಯಾಸದ ಆಂತರ್ಯವನ್ನು ತೆರೆದಿಟ್ಟಿದೆ. ವಿಜ್ಞಾನಿ ಐನ್‌ಸ್ಟಿನ್ ಹೇಳುವಂತೆ; 'Civilization is what we have, but Culture is what we are' ನಾವು ಏನೇನು ಪಡೆದಿದ್ದೇವೆ, ಸಂಪಾದಿಸಿದ್ದೇವೆ ಎಂಬುದು ನಾಗರಿಕತೆ, ನಾವು ಏನಾಗಿದ್ದೇವೆ (ಮನುಷ್ಯರಾಗಿದ್ದೇವೊ, ರಾಕ್ಷಸರಾಗಿದ್ದೇವೊ) ಎಂಬುದನ್ನು ತೆರೆದು ತೋರುವುದು ಸಂಸ್ಕೃತಿ! ಆದ್ದರಿಂದ ನಾಗರಿಕತೆ ಬಹಿರಂಗ ಭೂಷಣ, ಸಂಸ್ಕೃತಿ ಅಂತರಂಗದ ಶೋಭೆ! ಈ ಶೋಭೆಯನ್ನು ಶ್ರೀಹರಿಯವರು ಶಬ್ದ ಸ್ವರೂಪದಲ್ಲಿ ಬೆಸೆದಿದ್ದಾರೆ ಈ ವಚನ ಮಾಧ್ಯಮದಲ್ಲಿ.

ಹಳೆಯದಾಗಿರುವ ನಮ್ಮ ಸಂಸ್ಕೃತಿಯ ಹಾದಿಯನ್ನು ಮರೆಯದೆ
ಈಗಿನ ತೀರ್ಪಿಗೆ ನಾಳೆ ವಿಷಾದಿಸದೆ
ಆಧುನಿಕತೆಯ ಜೀವನ ಕಾಣ್ಕೆಯಾಗದೆ
ಹಳೆಯ ಬಾಳಲ್ಲಿ ಅಡಗಿರುವ ಮೌಲ್ಯಗಳನ್ನು ಹಿಂದೆ ಸರಿಸದೆ
ಜೀವನದ ಸತ್ಯ ಇರಾದೆಗಳನ್ನು ಪಾಲಿಸು! (೨೮೮)

'ಹಳೆ ಬೇರು ಹೊಸ ಚಿಗುರು' ಇರಲಿ ಎಂದು ಎಚ್ಚರಿಸಿದ್ದಾರೆ.

* * *

**ಬದಲಾವಣೆಯೇ ಬೆಳವಣಿಗೆ**

ಸೃಷ್ಟಿಯ ಸಮಸ್ತ ವಸ್ತುವಿನಲ್ಲೂ ಬದಲಾವಣೆ ಅನಿವಾರ್ಯ. ಆಂಗ್ಲ ಕವಿ Lord Tennyson ಹೇಳುವಂತೆ. 'Old orders changeth yeilding place to new,......lest a good custom would corrupt the world'– ಹಳೆಯ ಸಂಪ್ರದಾಯ (Convension) ಅಳಿಯಲೇಬೇಕು, ಹೊಸ ಪರಂಪರೆಗೆ (Tradition) ಆಶ್ರಯ ಕೊಟ್ಟು. ಹಣ್ಣೆಲೆ ಉದುರಲೇಬೇಕು ಚಿಗುರಿಗಾಸ್ಪದವಿತ್ತು. ಪಟ್ಟಬದ್ಧ ಹಿತಾಸಕ್ತಿಯಿಂದ ಯಾವುದೂ ಆರೋಗ್ಯಕರವಲ್ಲ. ಆದರೆ ಇಂದಿನ ಜಗತ್ತು ಹದಗೆಟ್ಟು ಹಾಳಾಗುತ್ತಿದೆ. ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಿದೆ. ಇದನ್ನು ನೆನೆದಾಗ ಈ ಬಗೆಯ ಬದಲಾವಣೆ ಬೇಕಿರಲಿಲ್ಲ ಅನ್ನಿಸುತ್ತೆ. ಈ ಅನಿಷ್ಟವನ್ನು ಖಂಡಿಸಿ ಕವಿ ಅಪೇಕ್ಷಿಸುತ್ತಾರೆ–

ಮಲಿನವಿಲ್ಲದ ಭಾವನೆಯ ಪಾದರಕ್ಷೆಗಳನ್ನು ಕಟ್ಟಿಕೊಂಡು
ಕಾಲದ ಹಾದಿಯಲ್ಲಿ ಅಚ್ಚಾಗಿಸುತ ಸುಖದ ಅಪೇಕ್ಷೆಯ ದೆಸೆಗೆ
ಹೆಜ್ಜೆಗಳನ್ನು ಹಾಕಿ ಮುಂದೆ ಸಾಗೋಣ (೨೬೭)

ಎಂದು ಬದಲಾವಣೆಯಲ್ಲೂ ಆಶಾಜ್ಯೋತಿಯನ್ನು ಬೆಳಗಿದ್ದಾರೆ

ಮೇಲಿನ ಎರಡೂ ವಚನಗಳನ್ನು ಇಂಗ್ಲಿಷಿನಲ್ಲಿ Twin Poems (ಅವಳಿ ಕವಿತೆಗಳು) ಎನ್ನುತ್ತಾರೆ. (೨೮೯)

*  *  *

ಆತ್ಮೀಯರೆ,

ಈವರೆಗೆ ಕವಿ ಶ್ರೀಹರಿಯವರ ಸಂಸ್ಕೃತಿ ಭೂಯಿಷ್ಠ, ನೀತಿಬೋಧಕ ವಚನಗಳನ್ನು ಸವಿದಿದ್ದರೆ, ಮುಂದಿನ ಭಾಗದಲ್ಲಿ ಕವಿಯ ವೈಯಕ್ತಿಕ ಲಾಭ–ನಷ್ಟಗಳ ಹಾಗೂ ಅಧ್ಯಾತ್ಮಪರವಾದ ಕೆಲವು ಅನುಭಾವಿಕ ವಚನಗಳನ್ನು ಅನುಭೂತಗೊಳಿಸಿಕೊಳ್ಳೋಣ ಬನ್ನಿ.

ಅಪರ ವಯಸ್ಸಿನ ಒಂಟಿತನ ಕವಿಯ ಮಾನಸ ಸರೋವರದಲ್ಲಿ ಆಗಾಗ ನೆನಪಿನ ಸುನಾಮಿಯನ್ನೆಬ್ಬಿಸಿ ಮನಶ್ಶಾಂತಿಯನ್ನು ಕದಡಿದ್ದರೂ, ವರಕವಿ ಬೇಂದ್ರೆಯವರ 'ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು' ಎಂಬ ಅಮೃತೋಪಮ ವಾಕ್ಕಿನಂತೆ ಸ್ಥಿತಪ್ರಜ್ಞರಾದ ಶ್ರೀಹರಿಯವರು ಬೀಸಿ ಬಂದ ಬಿರುಗಾಳಿಯನ್ನೇ ಧೂಳಿಪಟಮಾಡಿ, ತಮ್ಮ ಮಾನಸಿಕ ನೆಮ್ಮದಿಯ ನೆಲೆಯಲ್ಲಿ ಮರುಕಳಿಸಿದ ಹಳೆಯ ಮಧುರ ಕ್ಷಣಗಳನ್ನು ಕುರುಕುತ್ತಾ ಸ್ವಾತ್ಮಸಾಂತ್ವನ ತಳೆಯಲೆತ್ನಿಸಿದ್ದಾರೆ.

ಆದರೆ ಅದು ನವಯೌವ್ವನದ ದಾಂಪತ್ಯ ಜೀವನದ ರಸನಿಮಿಷಗಳನ್ನು ಮೆಲುಕು ಹಾಕುತ್ತಾ ಖುಷಿಪಡುವುದಲ್ಲ ಅದಕ್ಕೆ ಬದಲು ತಮ್ಮ ಪತ್ನೀಪ್ರೇಮದ ಮೂಲಕವೆ ದೈವೀಪ್ರೇಮವನ್ನು ಸಾಕ್ಷಾತ್ಕರಿಸಿಕೊಳ್ಳುವ ಮಹದಿಚ್ಛೆ! ಇದು ನಾನು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ನಾಲ್ಕು ವರ್ಷಗಳ ಕಾಲ (೩ ವರ್ಷ ಬಿ.ಎ. ಆನರ್ಸ್ ಮತ್ತು ೧ ವರ್ಷ ಎಂ.ಎ) ನನ್ನ ವಿದ್ಯಾಗುರುಗಳಾದ ಮಹಾಕವಿ ಕುವೆಂಪುರವರು ತಮ್ಮ ಧರ್ಮಪತ್ನಿ (ನಮಗೆ ಅವರು ಮಾತೃಶ್ರೀ ಸಮಾನರಾಗಿದ್ದರು) ಅವರನ್ನು ತಮ್ಮ ಅನೇಕ ಭಾವಗೀತ, ಭಕ್ತಿಗೀತ, ಪ್ರೇಮಗೀತಗಳಲ್ಲಿ 'ಹೇಮಾವತಿ ನನ್ನ ಪತ್ನಿ ಮಾತ್ರಳಲ್ಲ; ಅವಳು ನನ್ನ ದೇವತೆ, ತಾಯಿ, ಸೋದರಿ, ಮಗಳು, ನನ್ನ ಕಾವ್ಯದ ಸ್ಫೂರ್ತಿಕನ್ಯೆ' ಎಂದು ಹಾಡಿಹೊಗಳಿದ್ದಾರೆ. ಕುವೆಂಪುರವರಂತೆ ಶ್ರೀಹರಿಯುವರು ತಮ್ಮ ಭಾರ್ಯಾಭಾಗ್ಯವಂತ ದೇವತೆಯ ಮೇಲೆ ತಮ್ಮ ಸ್ಮರಣೆಯ ಸಂಪಿಗೆಯ ಹೂಮಳೆಗರೆದು ಆನಂದಿಸಿದ್ದಾರೆ. ಆ ಆನಂದದಲ್ಲಿ ಭಗವಂತನ ಸಾಕ್ಷಾತ್ಕಾರವನ್ನು ಸಮೀಕರಿಸಿಕೊಂಡು ತಮ್ಮ ಹೃನ್ಮಂದಿರದಲ್ಲಿ ಪ್ರತಿಷ್ಠಾಪಿತಳಾಗಿರುವ ತಮ್ಮ ಹೃದಯೇಶ್ವರಿಯನ್ನು ಎಬ್ಬಿಸಿ, ಅವರ ಜೊತೆಗೂಡಿ ಆದ ಆನಂದವನ್ನೇ ದೇವಿ ಭವಾನಿಯ ಭಕ್ತಿ ಲೇಪನವಾಗಿ ಪರಿವರ್ತಿಸಿಕೊಂಡಿದ್ದಾರೆ. ಹೀಗೆ ಪತ್ನಿಯ ಪ್ರೇಮದಲ್ಲಿ ದೈವವನ್ನು ಕಂಡಿದ್ದರೆ, ದೇವ ಸಾನ್ನಿಧ್ಯದಲ್ಲಿ ಪತ್ನಿಯ ಪ್ರೇಮ ಸಾಕ್ಷಾತ್ಕಾರವನ್ನು ಸಿದ್ಧಿಸಿಕೊಂಡ ಪ್ರೇಮ ಪೂಜಾರಿ ಶ್ರೀಹರಿ ಪ್ರೇಮಯಜ್ಞದ ಅಧ್ವರ್ಯುವಾಗಿದ್ದಾರೆ!

* * *

ಕವಿತೆ ಜಡವಸ್ತುವಲ್ಲ. ಅದೊಂದು ಜೀವಂತ ಚೇತನ. ಸಾವಿಲ್ಲದ ಅರ್ಥ ಸೂಚಿಸುವ ಒಂದು ಮೈಲಿಗಲ್ಲು! (೩೬೭) ಈ ವಿಶ್ವಾಸವಿದೆ ಕವಿ ಶ್ರೀಹರಿಯವರಲ್ಲಿ. ಸುಖವಿರಲಿ, ದುಃಖವಿರಲಿ ಕವಿಯ ಅಂತರಂಗದಲ್ಲಿ ಭಾವಸ್ಪಂದನಗೊಂಡಾಗ ಮಘಮಘಿಸುವ ಹೂವಿನಂತೆ ತನಗೆ ತಾನೆ ವಿಕಾಸಗೊಳ್ಳುವಂಥದು ಕಾವ್ಯ. ಆದರೆ ಆ ಭಾವ ವಿಭಾವವಾಗಿ ಪರಿವರ್ತನೆಗೊಂಡಾಗ ರಸತ್ವದ ಮಜಲು ಮುಟ್ಟುತ್ತದೆ. ಪ್ರಸ್ತುತದಲ್ಲಿ ವಿರಹದಿಂದ ಕವಿಚೇತನ ವಿಪ್ರಲಂಬ ಶೃಂಗಾರದ ದಾರುಣತೆಯನ್ನು ಹಾಡಿನ ರೂಪದಲ್ಲಿ ಅಭಿವ್ಯಕ್ತಿಸಿದೆ. ಆಂಗ್ಲಕವಿ ಶೆಲ್ಲಿ ಹೇಳುವಂತೆ 'Our songs are those that tell of sadest thought' ಆ ನೋವಿನಲ್ಲೂ ಮಾಧುರ್ಯದ ಮಂದಾರ ಇದ್ದೇ ಇರುತ್ತದೆ.

ಅರಳಿದ ಹೂವು ಮುದುಡಿ ಹೋಗಿ
ಮತ್ತೆ ಮತ್ತೆ ಚಿಗುರುವ ಆಸೆ ಹೆಚ್ಚಿಸಿಕೊಂಡು
ಯಾವ ಯಾವ ಬಣ್ಣದಿಂದ ಚಿಗುರಲಿ ಎಂಬ
ಆಸೆ ಮುದುಡಿದ ಹೂವು ಬಳ್ಳಿಜೊತೆ ಮಾತಾಡುತ್ತಿರೆ!
ಆ ಮಾತು ಮಂದಾರ ಪುಷ್ಪವಾಗಿ,
ಬೇರೆಯವರಿಗೂ ಸಂತಸವನು ನೀಡುತ್ತ
ಸುಖಪಡುವ ಸಮಯದಲ್ಲಿ ಕಷ್ಟಗಳ ಅನುಭವದಿಂದಾದ
ಸಂತಸವು ಅಲೆಗಳಂತೆ ತಾನಾಗಿ ಬರುವುದು
ಆದರ್ಶ ಪ್ರೇಮ ದಾಂಪತ್ಯದ ಅಮೃತೋಪಮ ಆನಂದ.

ಈ ಬಗೆಯ ಆಶಾವಾದಿ ರಸಿಕ ಕವಿಗೆ ಆಗಾಗ ಹಳೆಯ ನೆನಪುಗಳು ಬಂದು ಬಂದು ಕಾಡುತ್ತವೆ. ಮಧುರ ನೆನಪುಗಳು ಸ್ಫುರಿಸಿದಾಗ 'Divine Comedy' ಮಹಾಕಾವ್ಯದ ಕರ್ತೃ ಇಟಲಿಯ ಡಾಂಟೆ ನೆನಪಾಗುತ್ತಾನೆ. ಅವನದೇ ಮನೋಧರ್ಮ ಶ್ರೀ ಹರಿ ಖೋಡೆಯವರದು. ಡಾಂಟೆ ಹುಟ್ಟಿದ್ದು ಫ್ಲಾರೆನ್ಸ್‌ನಲ್ಲಿ. ಶ್ರೀಹರಿಯವರು ಹುಟ್ಟಿದ್ದು ಭರತಖಂಡದ ಬೆಂಗಳೂರಿನಲ್ಲಿ. ಡಾಂಟೆ ತನ್ನ ಒಂಬತ್ತನೆಯ ವಯಸ್ಸಿನಲ್ಲಿ ತನ್ನಷ್ಟೇ ವಯಸ್ಸಿನ ಚೆಲುವೆ ಬಿಯಾಟ್ರಿಸಳನ್ನು ನೋಡಿ ಆಕರ್ಷಿತನಾಗುತ್ತಾನೆ. ಅದೇ ಅವರಿಬ್ಬರ ಮೊದಲ ಹಾಗೂ ಕಡೆಯ ಭೇಟಿ. ಶ್ರೀಹರಿ ದಂಪತಿಗಳ Romance -

ಪ್ರೀತಿ ಪ್ರೇಮಗಳ ನಡುವೆ ಕೋಟೆ ಕಟ್ಟಡವಿಲ್ಲದೆ
ಕಾಂತೆ ನೀಡುತ್ತಿರುವ ದೇವರ ಒಲವಂತೆ ಇರುವ ಸುಖ!
ಪ್ರಕೃತಿಯು ಸೃಷ್ಟಿಸಿರುವ ಇಂದ್ರಿಯಗಳು
ಏಕಕಾಲದಲ್ಲೇ ಎಚ್ಚೆತ್ತು ಸುಖದ ತೂಗನ್ನು ಅನುಭವಿಸುತ್ತಾ
ದೇವರ ಅನುಭವ ನನ್ನ ಅನುಭವವಾದಾಗ
ನನ್ನ ಸುಖ ಆಕಾಶದ ಜೊತೆಗೆ ಬೆರೆದು ಹೋಗುತ್ತದೆ!
ಹೆದರಿಕೆ ನಾಚಿಕೆ ನನ್ನ ಮನೋಸತ್ಯದಿಂದ ದೂರವಾಗಿ
ಸತ್ಯವನ್ನು ನನ್ನ ಜೀವನಶೈಲಿಯಲ್ಲಿ ಪ್ರಕಟಿಸುತ್ತಿದ್ದೇನೆ. (೪೩೯)

ಅಂತೆಯೇ,

ಕಾಣೆಯಾದ ಸವಿನೆನಪುಗಳು ಕತ್ತಲಲ್ಲಿ ಕತ್ತೆತ್ತಿ ಹೆಡೆ ಬಿಚ್ಚುತ್ತವೆ. ಆಗ ಕವಿ–

ತುಟಿಗಳಿಗೆ ಮುತ್ತಿನ ಬೇಡಿಕೆ, ಪ್ರೀತಿಯ ಹಂಚಿಕೆ!
ಅಪ್ಪಿಕೊಳ್ಳುವ ತೋಳುಗಳ ಅಪ್ಪಿನಲ್ಲಿ ಪ್ರೀತಿಯ ಶಾಖ!
(೩೧೪)

ಭೋಗದ ಈ ಸುಖದ ಅಂಚಿನಲ್ಲಿ,

ಕಾಂತೆಯ ಜೊತೆ ನಾನಾ ಭಂಗಿಗಳ ಅನುಭವ
ದೇವರನ್ನು ನಾನಾ ದೃಷ್ಟಿಕೋನದಿಂದ ನೋಡಿ ಅನುಭವಿಸುವಂತೆ!
(೪೩೮)

ನಾನು ನನ್ನವಳ ಸುಖ ನಮ್ಮಿಬ್ಬರ ಜೊತೆ ಸುಖ
ದೇವರ ಅಲೆಯನ್ನು ಅನುಭವಿಸುವ ಸುಖ! (೪೧೬)

ಎಂದು ಬಣ್ಣಿಸಿದ್ದಾರೆ.

ಡಾಂಟೆಯದು ಸಾವಿಲ್ಲದ ಪ್ರೇಮ, ಶ್ರೀಹರಿಯವರದು ಚಿರನೂತನ ಪವಿತ್ರ ಪ್ರಾಂಜಲ ಪ್ರೇಮ! ಬಿಯಾಟ್ರಿಸ್ ಬೇರೆಯವನನ್ನು ಮದುವೆಯಾಗಿ ತನ್ನ ೨೩ನೆಯ ವಯಸ್ಸಿನಲ್ಲಿ ಮಡಿಯುತ್ತಾಳೆ. ಶ್ರೀಹರಿಯವರ ಹೃದಯೇಶ್ವರಿ ಲೌಕಿಕ ಪ್ರೇಮ ಪೀಯೂಷವನ್ನು ಕವಿಯೆದೆಗೆ ಇಂದಿಗೂ ಎಂದೆಂದಿಗೂ ಧಾರೆಯೆರೆಯುತ್ತಿದ್ದಾರೆ.

ಡಾಂಟೆ ೧೪ ಸಾವಿರ ಸಾಲುಗಳುಳ್ಳ 'ಡಿವೈನ್ ಕಾಮಿಡಿ'ಯನ್ನು ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಬರೆಯದೆ, ತನ್ನ ದೇಶಭಾಷೆಯಾದ ಇಟ್ಯಾಲಿಯನ್‌ನಲ್ಲಿ ಬರೆದಂತೆ, ನಮ್ಮ ಅನುಭಾವಿ ಕವಿ ಶ್ರೀಹರಿಯವರು ಸುಮಾರು ೫೦೦ ವಚನಗಳ ವ್ಯಾಪ್ತಿ ದೀಪ್ತಿಯುಳ್ಳ ಎರಡು ಸಂಪುಟಗಳ ಬೃಹತ್ಕೃತಿ ನೀಡಿದ್ದಾರೆ ತಮಗೆ ಅನ್ಯಭಾಷೆಗಳ ಮೇಲೆ ಪ್ರಭುತ್ವವಿದ್ದರೂ ಸವಿಗನ್ನಡ ನುಡಿಯಲ್ಲಿ. ಡಾಂಟೆಯ ಕಾವ್ಯದಲ್ಲಿ ನರಕ (Inferno) ಸ್ವರ್ಗ (paradiso) ಮತ್ತು ಪ್ರಾಯಶ್ಚಿತ್ತ (Purgatorio) ಎಂಬ ಮೂರು ಭಾಗಗಳನ್ನು ರೋಮ್ ಚಕ್ರವರ್ತಿ ವರ್ಜಿಲನ ಪ್ರೇತ ಬಂದು ಪರಿಚಯಿಸಿದರೆ ತಮ್ಮ ಮೋಹಮದಿರೆ ಶ್ರೀಮತಿ ಶ್ರೀಹರಿಯವರ ದಿವ್ಯ ಚೇತನವೆ ಕವಿಯ ಕಲ್ಪನೆಯ ತಲ್ಪವಾಗಿದೆ.

೧೩ನೆಯ ಶತಮಾನದ ಆರಂಭದಲ್ಲಿ ಯೂರೋಪಿನಲ್ಲಿ ರಾಜಕಾರಣಕ್ಕೂ ಧರ್ಮಕಾರಣಕ್ಕೂ ವಿರಸ ಬಂದು ದೊಡ್ಡ ದಂಗೆಯೇ ಆಗುತ್ತದೆ. ಆಗ ಡಾಂಟೆ ಧರ್ಮಾಧಿಕಾರಿ ಪೋಪ್‌ರ ಪಕ್ಷವಹಿಸಿದ್ದಕ್ಕಾಗಿ, ರಾಜಕಾರಣಿಗಳ ಪ್ರಭಾವದಿಂದ ದೇಶಭ್ರಷ್ಟನಾಗಿ ರಾವೆನಾ ನಗರಕ್ಕೆ ಹೋಗುತ್ತಾನೆ. ಯಾರು ಎಷ್ಟು ಬೇಡಿದರೂ ಇಟಲಿಗೆ ಹಿಂತಿರುಗಿ ಬರುವುದಿಲ್ಲ. ಶ್ರೀಹರಿಯವರಲ್ಲಿ ಸಾತ್ವಿಕ ಸ್ವಭಾವದ ಶ್ರೀಮಂತಿಕೆ ಇದ್ದರೂ ಕೆಲವು ವೇಳೆ ಸ್ವಾಭಿಮಾನದ ಶಿಶು ತಾವಾಗಿ,

ನಾನು ನೀನು ಕೂಡಿದರೆ ಬೇರೆಯವರಿಗೇನು ಕಷ್ಟ
ನಾನು ನಿಶೆಯನ್ನು ಸೇವಿಸಿ ಸುಖ ಪಡೆಯುತ್ತಿರೆ
ಬೇರೆಯವರಿಗೇನು ನಷ್ಟ?....

ನನ್ನ ಕಾಂತೆಯ ಜೊತೆಗೆ ಪಡೆದಿರುವ
ಸುಖ ಹೇಳುವುದು ತಪ್ಪೇ? (೪೩೯)

ಎಂದು ಆಕ್ರೋಶ ವ್ಯಕ್ತಪಡಿಸಿದರೂ ಆ ಶಾಂತಮೂರ್ತಿ ತಮ್ಮ ಕಾಂತೆಯ,

ಸಿತಾರಿನ ಸಂಗೀತ ಆ ಬೆಳಕು ಆ ಸುಖ
ಕಾಂತೆಯೇ ಪ್ರೀತಿಯಿಂದ ನೀಡುತ್ತಿರುವ ಮಧುಪಾನ
ಉಲ್ಲಾಸವನ್ನು ಹೆಚ್ಚಿಸುವ ಉಲ್ಲಾಸದ ಉಯ್ಯಾಲೆಯಲ್ಲಿ
ನಾನು ವಿಶ್ವದ ಜೊತೆ ತೂಗಾಡುತ್ತಿರುವೆನು?
(೪೦೬)

ಎಂದು ಆ ಸಿತಾರಿನ ನಾದ ಮಾಧುರ್ಯದ ಸವಿ ಸವಿದಿದ್ದಾರೆ.

ಕವಿ ಶ್ರೀಹರಿಯವರಿಗಿರುವ ಈ ಆತ್ಮಸ್ಥೈರ್ಯ ಜೀವನೋತ್ಸಾಹದ ಕಳಸ! ಕವಿಯ ಈ ಧೈರ್ಯ ದಿಟ್ಟತನ ಎಲ್ಲ ಹೆಣ್ಣು, ಗಂಡುಗಳಿಗೂ ಬರಬೇಕು. ಏಕೆಂದರೆ ಹುಟ್ಟು ಆಕಸ್ಮಿಕ, ಮರಣ ಅನಿವಾರ್ಯ (Birth is accidental, death is inevitable). ಈ ಚಿರಂತನ ಸತ್ಯ ಹಾಡು ಹಗಲಂತೆ ಬೆಳಗುತ್ತಿದ್ದರೂ ಮಾನವ ವರ್ಗದ ೯೯ ಭಾಗ ಮರಣಕ್ಕೆ ಹೆದರಿ, ಜೀವವಿದ್ದೇ ಜೀವ ಹೆಣವಾಗುವುದುಂಟು. ಸಾವು ದೇವನನ್ನೂ ಬಿಟ್ಟಿಲ್ಲ ಅಂದಮೇಲೆ ಮನುಷ್ಯ ಯಾವ ಲೆಕ್ಕ, ಕಾಡುಪ್ರಾಣಿ ಹಾಗೂ ಪಕ್ಷಿಗಳ ಸಾವಿನ ಗುಟ್ಟು ಯಾರಿಗೂ ತಿಳಿದಿಲ್ಲ. ನಿಸರ್ಗದೇವತೆಯ ಮಕ್ಕಳಾದ ಪಕ್ಷಿಗಳಿಗೆ ರೋಗ ರುಜಿನಗಳ ಗೋಳಾಗಲಿ, ಮರಣದ ಭೀತಿಯಾಗಲಿ ಯಾವುದೂ ಕಾಡುವುದಿಲ್ಲ. ವೈಶಿಷ್ಟ್ಯವೆಂದರೆ ಸ್ವಾಭಾವಿಕವಾಗಿ ಮನುಷ್ಯ ಆಯುಸ್ಸು ಮುಗಿದ ಕೂಡಲೆ ಸಾವನ್ನಪ್ಪುವಂತೆ, ಯಾವ ಪಕ್ಷಿಯೂ ಸತ್ತದ್ದನ್ನು ಯಾರೂ ಕಂಡಿಲ್ಲ. ಇದನ್ನು ನರೇಶ ಸಾದ್ವಾನಿ ಎಂಬಾತ 'Where do birds go to die? Yes, this is a strange question, but the answer may be even stranger' ಎಂದು ಅಚ್ಚರಿ ವ್ಯಕ್ತಪಡಿಸಿದ್ದಾನೆ. ಇದನ್ನು ಕುರಿತು ಆಲೋಚಿಸಿದರೆ, ಮನುಷ್ಯ ಗುಬ್ಬಿಗಿಂತಲೂ ಪುಕ್ಕಲ ಜೀವಿ ಅನ್ನಿಸದಿರುವುದಿಲ್ಲ. ಹುಟ್ಟು ಸಾವುಗಳ ನಡುವಣ ಬಾಳು ಋಜುವಾಗಬೇಕು, ಸೈತಾಗೇಕು, ಸತ್ಯವಾಗಬೇಕು. ಆಗ ಸಾವು ನಮಗೆ ಹೆದರಿ ಹಿಂದೆ ಸರಿಯುತ್ತದೆ. 'ಮರಣವೇ ಮಹಾನವಮಿ' ಎಂಬ ಧ್ಯೇಯವಾಕ್ಯ ನಮ್ಮದಾಗಬೇಕು. ಕವಿ ಶ್ರೀಹರಿಯವರು 'ಸಾವು' ಎಂಬ ಸಂಕಲ್ಪದ ನೆರಳು

ಸದಾ ಕ್ರಿಯಾಶೀಲವಾದ ಅವಿರತ ಮನೋರಥದ ತೇರು!
ಅದು ತನ್ನ ಗುರಿಯನ್ನು ಸಾಧಿಸಿಕೊಳ್ಳುವವರೆಗೂ
ತನ್ನ ಕಾರ್ಯವೈಖರಿಯನ್ನು ರೂಪಿಸಿಕೊಳ್ಳುತ್ತಿರುತ್ತದೆ.

‘ಹಸಿವು’ ‘ಬಾಯಾರಿಕೆ’ಯಿಲ್ಲದೆ ದುಡಿಯುವ ನೆರಳು
ಕಾಲದ ಜೊತೆಗೆ ಹಗಲು ರಾತ್ರಿ ದುಡಿಯುತ್ತಾ
ಸಂಕಲ್ಪದ ನೆರಳುಗಳಿಗೆ ಸಂಕಲ್ಪಿಸಿದ ತನ್ನ
ಸಂಕಲ್ಪದ ನೆರಳುಗಳಿಗೆ ಸಂಕಲ್ಪಿಸಿದ ತನ್ನ ಕರ್ತವ್ಯವನ್ನು ಬಿಡದೆ
ಕಾಲ ಗತಿಸಿದ್ದರೂ ಕಾಲದ ಜೊತೆಗೇ ಬೆರೆದು ಬರುತ್ತದೆ
ಶುಭಾಶೀರ್ವಾದದ ಮುದ್ರೆಯಂತೆ!
ಆದರೆ, ಮರಣ ಮುಕ್ತಿಯ ಮಹಾದ್ವಾರ, ಏಕೆಂದರೆ
ನಾವು ಯೋಚಿಸುವ ನಮ್ಮ ಭಾವನೆಗಳಿಗೆ ಸಾವಿಲ್ಲದೆ,
ಇಂದಲ್ಲ ಮುಂದಿನ ನೆರಳಲ್ಲಿ
ಸಾಧನೆ ಎದುರಿಗೆ ಬಂದು ನಿಲ್ಲುವುದರಿಂದ! (೨೨೫)

ಎಂದು ಕವಿ ಶ್ರೀಹರಿಯವರು ಎಚ್ಚರಿಸಿದ್ದಾರೆ.

* * *

ಆತ್ಮೀಯರೆ,

ಕಡೆಯದಾಗಿ ‘ಶ್ರೀಕವಿ’ ಶ್ರೀಹರಿಯವರು ಉಜ್ವಲ ಪ್ರತಿಭೆ, ಅಪೂರ್ವ ಕಲ್ಪನೆ, ಪ್ರಬುದ್ಧ ಸಂವೇದನೆಗಳ ಸಂಗಮ ಸ್ವರೂಪರಾಗಿದ್ದಾರೆ, ಸೌಂದರ್ಯದ ಸೂರೆಗಾರರಾಗಿದ್ದಾರೆ, ರಸಿಕತೆಯ ರಸಜ್ಞರಾಗಿದ್ದಾರೆ, ಪತ್ನೀಪ್ರೇಮದ ಆರಾಧಕರಾಗಿದ್ದಾರೆ, ಶ್ರೇಷ್ಠ ದಾಂಪತ್ಯ ಜೀವನದ ಧರ್ಮಗ್ರಂಥಕ್ಕೆ ಹೊಸ ಭಾಷ್ಯ ಬರೆದ ವಿದ್ವನ್ಮಣಿಗಳಾಗಿದ್ದಾರೆ. ದ್ಯುತಿವಡೆದ ದೈವ ಭಕ್ತಿಯಲ್ಲಿ ಅದ್ವಿತೀಯರೆನಿಸಿದ್ದಾರೆ, ಹೃದಯವಂತಿಕೆಯ ಮಹಾ ಮಾನವರಾಗಿದ್ದಾರೆ. ಸಕಲರ ಸರ್ವೋತೋಮುಖ ಪ್ರಗತಿಯ ಹಂಬಲದ ಹುಚ್ಚರೂ ಆಗಿದ್ದಾರೆ. ಕವಿವರ್ಯ ಶ್ರೀಹರಿ ಖೋಡೆಯವರ ಲೇಖಣಿ ಶ್ರೀಮಂತವಾಗಲಿ ಧೀಮಂತವಾಗಲಿ. ಇಂಥವೇ ಹಲವು ಕೃತಿಗಳು ಈ ಕವಿವರ್ಯರ ಲೇಖಣಿಯ ಮೂಲಕ ಹೊರ ಬರಲಿ ಎಂದು ಹಾರ್ದಿಕವಾಗಿ ಹಾರೈಸುತ್ತೇನೆ.

‘ರಾಗಿಣಿ’ **– ಸಾ.ಶಿ. ಮರುಳಯ್ಯ**
೧೫ ಏಪ್ರಿಲ್ ೨೦೧೩

210

ನಮ್ಮದೇ ಅಲ್ಲದ ಹಾದಿಗಳು
ನನ್ನನ್ನು ಎಳೆದುಕೊಂಡು ಹೋಗಲು
ನನ್ನ ಜೊತೆಗೆ ಬಾ ಎಂದು ಬಯಸುತ್ತಿರುವ ಎಳೆತ
ನನ್ನ ಇರುವಿಕೆಯನ್ನು ಮರೆಸಿ ಅನಂತದಲ್ಲಿ ಬೆರೆಸಿದೆ!

ಬಣ್ಣ ಬಣ್ಣಗಳ ಮಿಲನ ಬಣ್ಣ ಬಣ್ಣಗಳ ಮಿಲನದ ಚೇಷ್ಟೆ
ನನ್ನ ನಿಶ್ಶಬ್ದಗಳ ಪ್ರತಿಧ್ವನಿಗಳು
ಉಲ್ಲಾಸದಿಂದ ಎಲ್ಲಾ ದೆಸೆಗಳಲ್ಲಿ ಮಿನುಗುತ
ಎಲ್ಲಾ ದೆಸೆಗಳಲ್ಲಿ ಕಾಮನಬಿಲ್ಲುಗಳನ್ನು ಮೂಡಿಸಿಕೊಂಡು
ನನ್ನ ನಿಜ ಇರುವಿಕೆಯನ್ನು ಪ್ರತಿಬಿಂಬಿಸುತ್ತಿದೆ!

ನನ್ನ ಇರುವಿಕೆಯನ್ನು ಪ್ರತಿಬಿಂಬಿಸಿ ಕಲಿಸಿದ್ದರೂ
ಕಲ್ಲಾಗಿದ್ದರೂ ಕಲ್ಲಲ್ಲಿ ಮೃದು ತುಟಿಗಳ ಚುಂಬನಕ್ಕೆ
ಕೊಚ್ಚೆಯಲ್ಲಿ ಕೊಳೆಯುತ್ತಿರುವ ಕೊಳೆಯಲಾಗದ ಕಸದ ಕಮಲಗಳು
ಸುವಾಸನೆಗೆ ಆದಿಯಾಗಿರುವ ದುರ್ಗಂಧಗಳು
ಗೆಳೆತನದ ಮಾತುಗಳಲ್ಲಿ ಕೊಳೆಯುತ್ತಿರುವ ಗೆಳೆತನ

ಸತ್ಯದ ರೂಪಕ್ಕೆ ಹಿನ್ನೆಲೆ ಇಲ್ಲದೆ
ಒಲುಮೆಯ ಸಪ್ತ ಸ್ವರಗಳಿಗೆ ಬಿದಿರಿನ ಕೊಳಲು ಸಿಗದೆ
ಕೋಟಿಗಳ ಜೊತೆಗಿದ್ದರೂ ಕೈ ಚಾಚುತ್ತಿರುವ
ರಾಜಕಾರಣಿಯ ಬಡತನ



ದಿಗಂತಗಳು ದಿಕ್ಕನ್ನು ತೋರಿಸಲು ಹಿಂಜರಿಯುತ
ನಿಶ್ಶಬ್ದ ಮನ ಭ್ರಮಣೆಯಿಂದ ತೆರೆಯಲಾಗದ ಸದ್ದಿನ ಸಪ್ಪಳಗಳು

ರಾತ್ರಿ ಹಗಲುಗಳ ಈ ದಿನ ನನಗೆ ರಾತ್ರಿಯಾಗಲು ಬೇಜಾರು
ಬೆಳಕು ಈ ದಿನ ಹೋಗಲಾಗಲಿಲ್ಲ ಬೇಜಾರೆಂಬ ಸರದಿ ನಿದ್ರೆ
ಜಾಗರೂಕತೆಯ ಮಾತುಗಳನ್ನು ಕೇಳಿಸಿಕೊಂಡು
ನಾನು ಮೂಕನಾಗಿರುವೆನು!

**- ಶ್ರೀ ಹರಿ.**

19-03-2012

## 211

ನೋವನ್ನು ಅಳಿಸುವ ನೆನಪುಗಳು
ನೋವನ್ನು ಮರೆಸುವ ನಮ್ಮ ಹೊಸ ಹೊಸ ಮನಸುಗಳು
ನೋವನ್ನೇ ತಿಳಿಯದ ಎಳೆ ಮನಸುಗಳು
ನನ್ನ ಮನದ ಆಳಕ್ಕೆ ಇಳಿದು ನಾಲ್ಕು ದಿಕ್ಕುಗಳನ್ನು ಮಿನುಗಿಸುತ
ನನ್ನ ಎಳೆಯ ಮನಗಳು ಜೊತೆಯಾಡಿಸುತ್ತಿರುವ
ಹೊಸ ಬಣ್ಣಗಳು ವಿಚಿತ್ರವೇ ವಿಚಿತ್ರ !

ಭೂತ ಭವಿಷ್ಯ ವರ್ತಮಾನಗಳು ಅರಿವಾಗುತ್ತಿರುವ ನನಗೆ
ಮರುಭೂಮಿಯಲ್ಲಿ ನೀರನ್ನು ಹರಿಸುವ ಆಸೆ
ಭಾವವಾಗಿ ಹರಿಸುತ್ತಿರುವ ಈ ಕಾಗಜ
ಐಶ್ವರ್ಯ ಸುಟ್ಟು ಹೋಗಿ ಮೌಲ್ಯ ಅರಿಯದ ಆರ್ಥಿಕ ಸೃಷ್ಟಿ
ಸಿರಿತನ ಬಡತನ ಇರುವ ಅಂತರಗಳು ಅರಿಯದ ಇರುವಿಕೆ

ಸೂರ್ಯನನ್ನು ಕಾಯುತ್ತ ಕತ್ತಲನ್ನೂ ಕಾಯುತ್ತ
ಕಾಲ, ಸಮಯ ಶರೀರಗಳನ್ನೂ ಕಾಯುತ್ತ
ಸಮೃದ್ಧಿ ನಮ್ಮನ್ನು ಬಳಸಿಕೊಳ್ಳಲು ಕಾಯುತ್ತ
ಬಳಸಿಕೊಳ್ಳಲು ತಿಳಿಯದೆ ಅದೇ ಭಕ್ತಿಯಿಂದ ಬೇಡುತ್ತಿದ್ದರೆ
ಸಾವಿಲ್ಲದ ಯೌವ್ವನ ಕೊನೆಬರದ ಗೆಳೆತನ

ಎಂದೂ ಮುಗಿಯಲಾರದ ದಿಗಂತಗಳು
ವಿಶ್ವವೇ ಒಂದು ಹಳ್ಳಿಯಾಗಿ
ದಶಕೋಟಿ ವರ್ಷಗಳೇ ನಮ್ಮ ವಿಮರ್ಶೆಗಳ ಅವಧಿಯಾಗಿ

29-04-2011



www.sriharikhoday.com

ಜೀವನವೇ ಒಂದು ಆಶೀರ್ವಾದ
ನೋವಿಲ್ಲದ ಆಳತೆಯ ಆಳದಲ್ಲಿಳಿದು ಎಲ್ಲದರಲ್ಲಿ ಬೆರೆತು

ಇರುವಿಕೆಯಲ್ಲಿ ನಮ್ಮ ಇರುವಿಕೆಯನ್ನು ಕಳೆದುಕೊಂಡು
ಇರುವಿಕೆ ನೆರಳೇ ಇಲ್ಲದೆ
ನಮ್ಮ ನೆನಪನ್ನು ನೋಡಲು ಹಿಂಜರಿಯುತ್ತಿರಲು
ನಮ್ಮ ಸಂಬಂಧಗಳು ಮಾತ್ರ ಬೆಳಕೇ ಬೆಳಕು

**- ಶ್ರೀ ಹರಿ.**

19-03-2012

# 212

ದ್ವೇಷ ಅಸೂಯೆ ಅವಮಾನಗಳು
ಬಡತನದ ತಂದೆ-ತಾಯಿಗಳಾಗಿದ್ದರೆ
ನಾನು-ನನ್ನದು ಅಹಂಕಾರದ ಮೂಲವಾಗಿದ್ದರೆ
ಬದುಕುತ್ತಿರುವ ಮಾನವನಿಗೆ ನಿಜಸ್ಥಿತಿ ತಿಳಿಯದಾಗಿದೆ!

ನಾನು ನನ್ನದೆಂಬುದ ಮರೆತು
ಎಲ್ಲಾ ರೀತಿಯ ಶ್ಲಾಘನೆಗಳನ್ನು ಸ್ವೀಕರಿಸಿ
ಅದು ನನ್ನದಲ್ಲವೆಂದು ಜೊತೆಗಿರುವ ದೇವರಲ್ಲಿ ಬೆರೆತು
ನಮ್ಮ ನಿಜಸ್ಥಿತಿಗಳ ಅರಿವು ಪ್ರಯತ್ನವಿಲ್ಲದೆ ಭಾಸವಾಗುತ್ತದೆ!

ಏನೂ ಬೇಡದ ಪ್ರಕೃತಿಯ ಬೇಡಿಕೆ
ನಮ್ಮಗಳೆಲ್ಲದರ ಮನದ ಸಂತಸವಾದರೆ
ಪ್ರಕೃತಿಯಲ್ಲಿ ಮಿನುಗಿ ಪ್ರತಿಬಿಂಬವಾಗಿ
ಕಾಣದ ಸೃಷ್ಟಿಕರ್ತನ ನೆರಳಿನ ತರಂಗಗಳು ಭಾಸವಾದರೆ

ಈ ಶರೀರದ ಉಸಿರು-ನಿಟ್ಟುಸಿರುಗಳು
ಹಬ್ಬದ ಔತಣವಾಗಿ, ಬೇಡುತ್ತಿರುವ ಕೈಗಳಿಗೆ
ಪ್ರೀತಿಯ ಬಯಸುತ್ತಿರುವ ಮನಗಳಿಗೆ
ಸಹಾಯ ಅವಶ್ಯಕವಾಗಿರುವ ಸಮಾಜಕ್ಕೆ
ನಿರಾಳ ಭಾವನೆಗಳಿಂದ ಆಸರೆ ನೀಡಿ

ಹೊಸ ಮನಸ್ಸಿನಿಂದ ಮಮತೆಯ ಹಂದರದಲ್ಲಿ
ವಿಶ್ವದ ಜೊತೆ ಬೆಳೆಯೋಣ
ಈ ಹೊಸ ತರಹದ ಮನ ಈ ಹೊಸ ವರುಷದಲ್ಲಿ
ಮನಸ್ಸಿನ ಅನಿಸಿಕೆಯನ್ನು ಮನದಲ್ಲಿ ಅರಳಿಸೋಣ!

**- ಶ್ರೀ ಹರಿ.**

22-03-2012



# 213

ಯುಗದ ಆದಿಯಾದ ವಾರ
ಯುಗಾದಿಯ ವಾರ
ಶುಕ್ರವಾರದ ಈ ದಿನ ಮನದ ಹೊಸ್ತಿಲಿಗೆ
ಸ್ಫೂರ್ತಿಯ ಹೊಸ ತೋರಣವನ್ನು ಕಟ್ಟಿ ಹಳತನ್ನು ಮರೆತು
ಹೊಸತನವ ತರುವ ವಾರ ಯುಗಾದಿಯ ವಾರ!

ದ್ವೇಷ-ಅಸೂಯೆಗಳ ಮರೆತು
ಪ್ರೀತಿ ಮಮಕಾರಗಳಿಂದ ಹೊಸ ಹೊಸ ಭಾವನೆಗಳಿಂದ
ಹೊಸ ಹೊಸ ಭಾವನೆಗಳ ಉಡುಪನ್ನು ತೊಟ್ಟುಕೊಂಡು
ಕಷ್ಟಗಳ ಮರೆತು ಸುಖದ ಹೊಸ್ತಿಲನ್ನು ದಾಟುತ

ಗುರು-ಹಿರಿಯರ ಆಶೀರ್ವಾದ ಬೇಡುತ
ಹಳೆ ಸ್ನೇಹದಲ್ಲಿ ಹೊಸ ಚಿಗುರನ್ನು ನೋಡುತ
ಹಳೆ ಕಷ್ಟಗಳಿಗೆ ಕಣ್ಣೀರು ಹಾಕದೆ
ಹೊಸ ಉಸಿರು ಕಟ್ಟಿಕೊಂಡು ಓಡುತ
ಹೆಂಡತಿ ಅತ್ತೆ-ಸೊಸೆ ಮಾಡಿದ್ದ ಸಿಹಿ ಊಟವ ಸವಿಯುತ್ತ

ಬೇವು-ಬೆಲ್ಲವ ಉಂಡು
ಕಷ್ಟ ಸುಖಗಳ ಸಮ ಭಾವನೆಗಳಿಂದ ನೋಡುತ
ಮನೆತನಕ್ಕೆ ರಾಜಕಳೆ ತರಲು ಪ್ರೀತಿಯ ಧ್ವಜ ಹಾರಿಸುತ
ಕೆಟ್ಟ ಭಾವನೆಗಳು ಮನದಲ್ಲಿ ಇಲ್ಲವಾಗಿಸಿ
ಪ್ರಗತಿಯ ತರುವ ಭಾವನೆಗಳ ಜೊತೆ ಮುನ್ನಡೆಸಿಕೊಂಡು

ಹಿಂದಿನದೆಲ್ಲವನ್ನು ಮರೆಸುತ ಮನಕ್ಕೆ ಸುಖ ಬಯಸುತ
ಕಾಲದ ಜೊತೆ ಸಿಹಿ ಹಂಚಿಕೊಳ್ಳೋಣ

**- ಶ್ರೀ ಹರಿ.**

23-03-2012



www.sriharikhoday.com

## 214

ಯೋಚನೆಗಳಿಂದ ಯೋಚಿಸಿ ಯೋಚಿಸಿ
ಚಿಂತೆ ಪಡುತ್ತ ಮತ್ತೆ ಮತ್ತೆ ಯೋಚಿಸುತ್ತಿದ್ದರೆ
ಹಾಲಿನ ಜೊತೆ ಮತ್ತೆ ಮತ್ತೆ ಹಾಲು ಬೆರೆಸಿದರೆ
ಮೊಸರಾಗುವುದಿಲ್ಲವೋ ಹಾಗೆ
ಬರಿ ಚಿಂತನೆಗಳು ಫಲ ನೀಡುವುದಿಲ್ಲ!

ಚಿಂತನೆಯಲ್ಲಿ ಕಾಲದ ಜೊತೆಗೆ ಸಂಕಲ್ಪ ಮಾಡಿ
ಹಾಲಿಗೆ ಹೆಪ್ಪು ಹಾಕಿ ಮೊಸರಾಗಿ
ಬೆಣ್ಣೆ ತುಪ್ಪಗಳ ಫಲ ಸಿಗುವಂತೆ
ಸಂಕಲ್ಪದ ಫಲಕ್ಕೆ ಕಾಲ ಲೋಕ
ತನ್ನ ತೀರ್ಪನ್ನು ನೀಡುವುದು!

ಬರಿಯ ಗಾಳಿಗೆ ಗುದ್ದುವಂತೆ ಗುದ್ದದೆ
ಚಿಂತಿಸುವ ಸುಳ್ಳಿನ ಸುಳಿಯ ಜೊತೆಗೆ ಸಿಗದೆ
ತನ್ನ ಜೀವನಕ್ಕೆ ಬೇಕಾದ ಅಪೇಕ್ಷೆ ಮಾತ್ರ ಪಟ್ಟು
ದೇವರ ರೂಪದಲ್ಲಿರುವ ಪ್ರಕೃತಿಯ ಸಹಾಯ ಬೇಡುತ
ತಮ್ಮ ಸಂಕಲ್ಪಕ್ಕೆ ಕಾಲದ ಸಹಾಯ ಮನಸಾರೆ ಬೇಡಿದರೆ

ಅಪೇಕ್ಷೆಗಳ ಮೀರಿಸುವ ಸುಖ ಸಂಪತ್ತು
ನಾ ಮಾಡಿದೆ ಎಂದು ಕಾಲ ಹೇಳದೆ
ಸಂಕಲ್ಪದ ಸಿದ್ಧಿಗೆ ಕಾಲ ಜಯ ಘೋಷಿಸುವುದು!

**- ಶ್ರೀ ಹರಿ.**

26-03-2012



## 215

ಹುಟ್ಟಿನಿಂದ ನನ್ನ ಜೊತೆ ದ್ವೇಷ ಹುಟ್ಟಿಲ್ಲ
ನಂತರ ನಮ್ಮ ಮನದಲ್ಲಿ ಬೆಳೆದಿರುವ ಕಳೆ
ಈ ಕಳೆಯನ್ನು ಮನದಿಂದ ತೆಗೆಯುವ ಆಯುಧ
ನನ್ನ ಹುಟ್ಟಿನಿಂದ ಬರದ ಪ್ರೀತಿ ಮಾತ್ರ
ನನ್ನ ಜೊತೆ ಹುಟ್ಟಿರುವ ಆಯುಧ!

ಎಲ್ಲರ ಮನದಲ್ಲಿ ಗಾಳಿಯಂತೆ ಆವರಿಸಿರುವ ಪ್ರೀತಿ
ದ್ವೇಷವನ್ನೇ ತಿಳಿಯದ ಗಿಡ-ಮರ ಹೂ-ಲತೆಗಳು
ದ್ವೇಷ ಏನೆಂಬುದು ಅರಿಯದ ಗಾಳಿ-ಬೆಳಕು ಕತ್ತಲುಗಳು
ಪ್ರೀತಿ ಮಾತ್ರ ಬೆಳೆಸಿರುವ ನನ್ನ ತಾಯಿಯ ತಾಯ್ತನ
ಸೂರ್ಯನ ಪ್ರಕಾಶದಂತೆ ಎಲ್ಲರ ಮನದಲ್ಲಿಯೂ
ಪ್ರಕಾಶಿಸುತ್ತಲೇ ಇದೆ !

ಪ್ರೀತಿಯಿಂದ ಜ್ಞಾನೋದಯ ದಯಪಾಲಿಸಿದ ಗುರು
ಪ್ರೀತಿಯಿಂದ ಹಿರಿಯರು ನೀಡಿರುವ ಆಶೀರ್ವಾದಗಳು
ಪ್ರೀತಿಯಿಂದ ಊರಿನ ಜನ ಜೊತೆಗಿದ್ದು ತೋರುತ್ತಿರುವ ಅಕ್ಕರೆ
ದ್ವೇಷಕ್ಕೆ ನಮ್ಮ ಮನದಲ್ಲಿ ಉಳಿಗಾಲವೇ ಇಲ್ಲ!

ಕೋಪದಿಂದ ಉದ್ರೇಕಗೊಂಡ ವ್ಯಕ್ತಿಯ ಮನದ ಬಿಲದೊಳಗೆ
ಸೇರಿಕೊಂಡು
ನಮ್ಮನ್ನೇ ಆಳಲು ಯತ್ನಿಸುತ್ತಿರುವ ದ್ವೇಷ ಅದು ನಮ್ಮದಲ್ಲ
ಬೇರೆಯವರ ಮನದಲ್ಲಿ ಹುಟ್ಟಿರುವ ವಿಷ ಎಂದು ತಿಳಿದರೆ
ನಮಗೆ ತಿಳಿಯಾಗಿ ಉಳಿಯುವುದು ದ್ವೇಷರಹಿತ ಪ್ರೀತಿ ಮಾತ್ರ!

**- ಶ್ರೀ ಹರಿ.**

27-03-2012



www.sriharikhoday.com

# 216

ಕನ್ನಡಿ ಎದುರಿಗೆ ನಿಂತು
ಮುಖವ ಕನ್ನಡಿಗೆ ತೋರಿದರೆ
ಮಾತಾಡು ಎಂದು ನಾ ಕನ್ನಡಿಗೆ ಕೇಳಿದರೆ
ಮಾತಾಡು ಎಂದು ಮರು ಉತ್ತರ ನೀಡುತ್ತಿದೆ!

ಕವಿತೆ ಬರೆ ಎಂದು ಮನಕ್ಕೆ ಹೇಳಿದರೆ
ನೀ ಬರೆ ಎಂದು ಮರು ಉತ್ತರ ನೀಡಿ
ನಮಗೇ ತಿಳಿಯದೆ ಕವಿತೆ ತಾನೇ ರಚಿಸಿಕೊಂಡು
ನಿಶ್ಶಬ್ದದಲ್ಲಿ ಕರಗಿ ಹೋಗುತ್ತಿದೆ!

ಹೂವು ತಾನು ಬೆಳೆಯುತ್ತಿರುವುದು ತನಗೇ ತಿಳಿಯದೆ
ತಾನು ಯಾವ ಬಣ್ಣ ಎಂದು ನೋಡಿಕೊಳ್ಳಲು ಕಣ್ಣುಗಳೆ ಇಲ್ಲದೆ
ತನ್ನ ಆದಿ ತಿಳಿಯದೆ ಕೊನೆಯೂ ತಿಳಿಯದೆ
ಕಾಲದ ಹೊಲದಲ್ಲಿ ಬೆಳೆದು ಅರಳಿ
ಸುವಾಸನೆಯನ್ನು ನೀಡುವಂತೆ
ಕವಿತೆಗಳು ಬೆಳೆಯಲು ಮನದ ಹಸನಾದ ಹೊಲ ಬೇಕಾಗಿದೆ!

ಮಾತಾಡಲು ಬರದ ಅಕ್ಷರಗಳಿಗೆ
ಮರೆಯಾಗಿ ಪದಗಳಲ್ಲಿ ಅವಿತುಕೊಂಡು
ಕವಿಯ ಮನದ ಆಳವನ್ನು ಹುಡುಕುತ್ತಿರಲು
ದೊರಕಿದ ಮಾತ್ರವೇ ತಮ್ಮಿಂದಲೇ ತಾವೇ ವಿಚಾರ ಹುಡುಕಿ
ಭೂಮಿಗೆ ಮಾರ್ಗದರ್ಶನವ ಮಾಡಲು
ಭೂಮಿಯ ಜೊತೆಗೆ ನಾವು ಹುಟ್ಟಿರುವೆವು ಎಂದು

ಕವಿಯ ಲೇಖನಿಯು ಚಲಿಸಿ
ಸಮಾಜದ ಕನ್ನಡಿಯಾಗಿ ಪ್ರತಿಬಿಂಬಿಸುತ್ತಿವೆ!

28-03-2012



www.sriharikhoday.com

# 217

- ಶ್ರೀ ಹರಿ.

ಸುಖ ಸಂತಸ ಧೈರ್ಯ ಮಾರ್ಗಗಳ ದೆಸೆ ನೀಡುತ್ತ
ಅಕ್ಷರಗಳು ಪದಗಳ ನಾನಾ ಭಂಗಿಯ ನೃತ್ಯ
ಆ ಪದಗಳ ನೃತ್ಯಕ್ಕೆ ಸಾವಿರಾರು ಮೇಳಗಳು
ಮೊಳಗುತ್ತಿರುವ ಭಾವನೆ

ಆ ರಂಗು ರಂಗಿನ ಘಳಿಗೆಗಳನ್ನು ಕವಿ ಎಂದೂ ಬೇಡ ಎನ್ನದೆ
ಸದಾ ಭಾವುಕನಾಗಿ ಪ್ರಕೃತಿಯಲ್ಲೇ ಹರಿಯುತ್ತಿರುವ ಬಿಂಬ
ಪ್ರತಿಬಿಂಬಗಳ ಓಕುಳಿಯಲ್ಲಿ ತಾನೇ ಅನುಭವದ ಬಣ್ಣಗಳನ್ನು
ಬಳಸಿಕೊಳ್ಳುತ್ತ ಮಾತುಗಳೇ ಇಲ್ಲದ ಭಾವನೆಗಳಲ್ಲಿ
ಕಾಲದ ಜೊತೆಗೆ ಬೆರೆತು ಮುಳುಗಿ ತೇಲಿ

ತನ್ನ ಬದುಕೇ ಪ್ರಕೃತಿಯ ವಿಸ್ಮಯ ಎಂದು ಅರಿತು
ತೆರೆದ ಕಣ್ಣಿಂದ ನೋಡುತ್ತ ಅನುಭವಿಸುತ್ತ
ನಿಶ್ಶಬ್ದದಲಿ ಮೊಳಗುತ್ತಿರುವ ವಾದ್ಯವೃಂದಗಳು
ಶಬ್ದಗಳು ಬಿಂಬಿಸುತ್ತಿರುವ ಬಣ್ಣಗಳು
ತನ್ನ ಜೊತೆ ಜೀವನದಲ್ಲಿ ಜೊತೆ ಜೊತೆ ಕುಣಿಯುತ್ತಿರುವ
ಬೆಳಕು ಕತ್ತಲುಗಳು ಈ ಸುಖದ ರಾಶಿಗಳು

ದೇವರ ಇರುವಿಕೆಯ ಸುವಾಸನೆಯನ್ನು ಬೀರುತ್ತಿರಲು
ಅಮೂಲ್ಯ ಘಳಿಗೆಗಳ ಜೊತೆ ಮಿಲನದಲ್ಲಿ

28-03-2012

ಲಜ್ಜೆಯಿಂದಿರುವ ಭಕ್ತಿ ದೇವರಲ್ಲಿ ಬೆರೆಸುತ
ತಾನೇ ತನ್ನನ್ನು ಮರೆತಿರುವ ಕವಿಗೆ
ದೇವರೇ ಪ್ರತಿಬಿಂಬವಾಗಿ

ನಮ್ಮನ್ನೇ ನಾವೇ ಕನ್ನಡಿಯಲ್ಲಿ ನೋಡಿದಂತೆ
ತನ್ನ ಮನೋದೃಶ್ಯಗಳಲ್ಲಿ ದೇವರ ಪ್ರತಿಬಿಂಬ ನೋಡುತ
ಸಾವಿಲ್ಲದ ಬರವಣಿಗೆಯಲ್ಲಿ ಬೆಸೆದುಹೋಗಿ
ಕಾಲ ಇಲ್ಲದ ಜೀವನದಲ್ಲಿ ಜೀವಿಸುತ್ತಿರುವರು
ಕಣ್ಣಿಗೆ ಕಾಣದ ಅನೇಕ ಕವಿ ತಪಸ್ವಿಗಳು

**- ಶ್ರೀ ಹರಿ.**



# 218.

ವಿಶೇಷ ಘಳಿಗೆಗಳು
ತಮ್ಮ ಕಾಲಿಗೆ ಗೆಜ್ಜೆ ಕಟ್ಟಿಕೊಂಡು
ಎಲ್ಲರನ್ನು ಸುಖದ ಸಾಗರದಲ್ಲಿ ಬೆರೆಸಲು
ನಮ್ಮ ಬರುವಿಕೆಗಾಗಿ ಕಾಯುತ್ತಿದೆ!

ವಿಶೇಷ ಘಳಿಗೆಗಳಲ್ಲಿ ಏನು ವೈಶಿಷ್ಟ್ಯ
ಅದಕ್ಕೆ ನಮ್ಮ ಸುಖದಲ್ಲಿ ಬೆರೆತುಕೊಂಡು
ತಾನು ನಮ್ಮ ಸುಖದ ಭಾಗಿಯಾಗಲು
ವಿಶೇಷ ಘಳಿಗೆಗಳು ಕಾದು ನಿಂತಿರುವುದು!

ನಮ್ಮ ಕಷ್ಟಗಳನ್ನು ಮರೆಸಿ ಹಗುರಾಗಿಸಲು
ನಮ್ಮ ಭಾವಿ ಅನಿಸಿಕೆಗಳನ್ನು ಸಜ್ಜುಗೊಳಿಸಿಕೊಳ್ಳಲು
ತಮ್ಮ ಸ್ವಪ್ನಗಳನ್ನು ನನಸಾಗಿಸಲು
ವಿಶೇಷ ಘಳಿಗೆಗಳನ್ನು ಮನದಲ್ಲಿ ಕೂಗಿ ಕರೆದುಕೊಳ್ಳಬೇಕು!

ನಮ್ಮನ್ನೇ ಮರೆಸುವ ವಿಶೇಷ ಘಳಿಗೆಗಳು
ದೇವರನ್ನು ಬೆರೆಸುವ ವಿಶೇಷ ಘಳಿಗೆಗಳು
ನಮ್ಮ ಪ್ರಿಯತಮೆಯ ಜೊತೆಗೆ
ಏಕಾಂತ ಬಯಸುವ ವಿಶೇಷ ಘಳಿಗೆಗಳು

ಬೇಡಿದ ತಕ್ಷಣವೇ ಬರುವ ವಿಶೇಷ ಘಳಿಗೆಗಳಿಗೆ
ಮಾನವನು ಮಾನ್ಯತೆ ನೀಡಿಲ್ಲ!

**- ಶ್ರೀ ಹರಿ.**
29-03-2012

www.sriharikhoday.com

## 219

ನಿರಾಳ ಭಾವನೆಗಳ ಆಳ
ಪಾತಾಳದ ಆಳದಲ್ಲಿಳಿದರೂ
ನಿರಾಳ ಮನೋವೃತ್ತಿಗೆ
ಆಳ ಸಿಗದು !

ಆಳಕ್ಕೆ ಎಳೆದುಕೊಂಡು ಹೋಗುವ ಗಾಳ ನಿರಾಳ
ಆಕಾರವಿಲ್ಲದೆ ಜೊತೆ ಬಂದು
ಕಾಣುವ ದೃಷ್ಟಿಕೋನಗಳನ್ನು ಬದಲಿಸುವ ಶಕ್ತಿ
ನಿರಾಳ ಭಾವನೆಗಳ ಗುಣ!

ಹರಿದು ಹೋದ ಬಟ್ಟೆಯನ್ನು ಹೊಲಿಯಲು
ಸೂಜಿಯ ಬೇಡಿಕೆಯಿರುವಂತೆ
ಪ್ರಕೃತಿಯ ಸಾಧನೆಗೆ ನಿರಾಳ ಭಾವನೆ ಅಗತ್ಯ
ಹೋದ ಕಡೆ ಬೇಡದೆ ಸದಾಕಾಲ
ಜೊತೆಗಿರುವ ಜೀವನ ಸಂಗಾತಿ !

ಸಾಧನೆಗಳಿಗೆ ದಿಕ್ಸೂಚಿಯಾದ ನಿರಾಳ
ಸತ್ಯವನ್ನು ಅರಿಯಲು ಬೇಕಿರುವ ನಿರಾಳ
ಕಾಣುವ ಎದುರಲ್ಲಿ ಬೆರೆಯಲು ಬೇಕಿರುವ ನಿರಾಳ
ಜಗತ್ತಿಗೆ ಒಳ್ಳೆಯದನ್ನು ಮಾಡಲು
ದೇವರ ಬೇಡಲು ಬೇಕಿರುವ ನಿರಾಳ

ಪ್ರೀತಿಯನ್ನು ಬೆಳೆಸಿ
ಪ್ರೀತಿಯನ್ನು ಪ್ರತಿಬಿಂಬಿಸುವ ಸಹಕಾರಿ ನಿರಾಳ
ಕಾರ್ಯಸಿದ್ಧಿಗೆ ಸಂಕಲ್ಪದ ಬೇಡಿಕೆಗೆ
ಬೇಕಾಗಿದೆ ನಿರಾಳ ಆಳದ ಭಾವನೆಗಳು !

**- ಶ್ರೀ ಹರಿ.**

30-03-2012



## 220

ಯಾರ ಮೇಲೆಯೂ ಸ್ಪರ್ಧೆ ಅಸೂಯೆಗಳಿಲ್ಲದೆ
ಎಲ್ಲರ ಜೊತೆ ಬೆರಕೆಯಾಗಿ
ಪ್ರೀತಿ ವಿಶ್ವಾಸವ ಗಳಿಸಿ
ಎಲ್ಲರ ವಿಶ್ವಾಸ ಗಳಿಸಿಕೊಳ್ಳುವುದೇ ಜೀವನ !

ಉದಾರ ಮನಸ್ಸಿನಿಂದ ನೋಡಿ
ಆದಷ್ಟು ಸಹಾಯ ಮಾಡುತ
ಯಾರ ಮನಸ್ಸಿಗೂ ಕಷ್ಟ ನಷ್ಟಗಳ ನೀಡದಿದ್ದರೆ
ಜಗವು ನಿನ್ನನ್ನು ನಿನ್ನ ಮನಸ್ಸನ್ನು ಅಮೂಲ್ಯವೆನ್ನುವುದು!

ನಿನ್ನ ಮತಿಗೆ ತಿಳಿದಷ್ಟು ನೀ ಮಾಡುತ
ಮಾಡುತ್ತಿರುವ ಕೆಲಸದಲ್ಲಿ ಸುಖಪಡುತ್ತಿದ್ದರೆ
ನೀ ಮಾಡುತ್ತಿರುವ ಕೆಲಸಗಳಿಗೆ
ದೇವರು ಕೈ ನೀಡುವರು !

ಕೈಯಿಂದ ಒಂದು ಕೆಲಸ ಮಾಡಲು ಸಾಧ್ಯವಾದರೆ
ಮನಸ್ಸಿನಿಂದ ನೂರು ಕೆಲಸವನ್ನು
ಮಾಡಲು ಸಾಧ್ಯವಿರುವಾಗ
ವೆಚ್ಚವಿಲ್ಲದ ನಮ್ಮ ಮನೋ ಓಟಕ್ಕೆ ಅಡಚಣೆಯೇಕೆ ?

**- ಶ್ರೀ ಹರಿ.**

30-03-2012



www.sriharikhoday.com

## 221.

ರಸ್ತೆಯಲ್ಲಿ ನೂರಾರು ದೇಗುಲಗಳು
ನೂರಾರು ಬೇಡಿಕೆಗಳು ನಾಳೆ ಸಿಗುವುದು ಬೇಡ
ಇಂದೇ ಸಿಗಬೇಕೆಂದು ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ
ರಸ್ತೆಯಲ್ಲಿ ಹುಡುಕಾಡುತ್ತ ಓಡಾಡುತ್ತಿರುವುವು !

ಬೇಡಿಕೆಗಳಿಗೆ ಫಲ ಸಿಗದೆ
ಕತ್ತಲಲ್ಲಿ ಗುಡಿಸಲಿನಲ್ಲಿ ಕುಳಿತು
ಎಣ್ಣೆಯಿಲ್ಲದ ಹಣತೆಯಲ್ಲಿ ಕಣ್ಣೀರನ್ನು ತುಂಬುತ
ಬೆಳಕು ಕೊಡಲು ಹಣತೆಯಲ್ಲಿ
ಬೆಳಕಿನ ತೆನೆಯನ್ನು ಹುಡುಕುತ್ತಿರುವರು !

ದೇವರು ನೀಡಿರುವ ನಿದ್ರೆಯಲ್ಲಿ
ಕಷ್ಟಗಳೆಲ್ಲ ಕತ್ತಲಲ್ಲಿ ಇಲ್ಲವಾಗಿ ಸುಖದ ನಿದ್ರೆ ಮಾಡಿ
ಸೂರ್ಯೋದಯದಲ್ಲಿ ತಾಳ್ಮೆಯಿಂದ ಎದ್ದು
ಈ ವರುಷದಲ್ಲಿ ನಿನಗೆ ಒಳ್ಳೆಯದಾಗುವುದೆಂಬ ಪಿಸುಮಾತಿನ ನೆನಪು
ಸತ್ತು ಹೋಗಿರುವ ನಮ್ಮ ಬೇಡಿಕೆಗಳಿಗೆ ಜೀವ ತುಂಬುತ್ತಿದೆ!

ನನಗೆ ತಿಳಿಯದೆ ಬೇರೆ ಯಾರಿಗೂ ತಿಳಿದಿಲ್ಲವೆಂಬ
ಅರ್ಥವಿಲ್ಲದ ಭಾವನೆಗಳು ಇರುವವರೆಗೂ
ನಮ್ಮ ಮನದ ದೇಗುಲದ ದೇವರು ಫಲ ನೀಡದೆ
ಬರಿ ನಿಂದಿಸುತ ರಸ್ತೆಯಲ್ಲಿ ತಿರುವುದ ಬಿಟ್ಟು
ಹಿರಿಕರ, ಗುರು-ಹಿರಿಯರ ಆಶೀರ್ವಾದ ಹುಡುಕಿದರೆ
ಮನದಲ್ಲಿ ಸಂತಸದ ಹಣತೆಯಲ್ಲಿ
ಬೆಳಕಿನ ತೆನೆ ಫಲ ಸಿಗುವುದು ನಿಶ್ಚಯ !

**- ಶ್ರೀ ಹರಿ.**

02-04-2012



## 222.

ಮನಸ್ಸು ಕಲ್ಪಿಸಿ ಮುಗಿಸಿಕೊಳ್ಳುತ್ತಿರುವ ಆಯಸ್ಸು
ಗುಣಿಸಿ-ಭಾಗಿಸಿ-ಕೂಡಿಸುವವರು ಬೇರೆ ಯಾರೂ ಇಲ್ಲದಿದ್ದರೂ
ಮಾನವ ತನ್ನ ಮನದಿಂದ ತನ್ನ ಆಯಸ್ಸನ್ನು ನಿರ್ಧರಿಸುತ್ತ
ಕಷ್ಟಗಳ ಹೆದರಿಸಲು ಹೆದರುತ್ತಿರುವ ಹೇಡಿತನ
ಆಯಸ್ಸನ್ನು ನಿರ್ಧರಿಸುತ್ತಿರುವುದು!

ಪ್ರಕೃತಿಯಲ್ಲಿ ಸಾವಿಲ್ಲದ ಸೃಷ್ಟಿ ಇಲ್ಲ
ತಮ್ಮ ಇಚ್ಛೆಯಿಂದಲೇ ಸಾವನ್ನು ತರಿಸಿಕೊಳ್ಳುತ್ತಿರುವರು
ಗಿಡ- ಮರ ಹುಲಿ ಆನೆ ಜಿಂಕೆಗಳು ಬಣ್ಣ ಬಣ್ಣದ ಚಿಟ್ಟೆಗಳು
ತಾನು ಮುದಿಯಾಗುತ್ತಿದ್ದೇನೆಂದು ಎಂದೂ ಕಾಣದೆ
ಮನಸಾರೆ ಸಾವನ್ನು ಅಪ್ಪಿಕೊಳ್ಳುತ್ತಿರುವುವು !

ವಯಸ್ಸನ್ನು ಎಣಿಕೆ ಮಾಡುತ್ತಿರುವ ಕಾಲ
ಪ್ರಕೃತಿ ಸೃಷ್ಟಿಸಿರುವುದನ್ನೆಲ್ಲಾ ನೋಡಿ
ಎಲ್ಲರಲ್ಲಿ ಸಾವಿನ ಭಯವನ್ನು ಕಂಡು
ತಾನು ಸಾವಿಗೆ ಹೆದರದೆ ಕಾಲದ ಎಣಿಕೆಯನ್ನೇ ಮರೆತು
ಸಾವಿಲ್ಲದ ಪ್ರಕೃತಿಯ ಸೃಷ್ಟಿ ಎನ್ನುತ

ನಾ ದಿನವೂ ಹುಟ್ಟುತ್ತಿದ್ದೇನೆ ಎಂದು
ದಿನವೂ ಹೊಸತನದ ಅನುಭವ
ಕಾಲಕ್ಕೆ ಕೊನೆಯಿರದ ಆಯಸ್ಸನ್ನು ಪ್ರಕೃತಿ ನೀಡಿದೆ ಎಂದರೆ
ದಿನವೂ ನಾವು ಹೊಸತನವನ್ನು ಅನುಭವಿಸಿದರೆ
ಯಾವ ಅಡ್ಡಿಯಿಲ್ಲದೆ ನಾವು ನೂರು ಕಾಲ ಬಾಳಬಹುದು!

**- ಶ್ರೀ ಹರಿ.**

03-04-2012



www.srikharikhoday.com

## 223

ಮುಂದಿನ ಕಲ್ಪನೆಯ ಸರಮಾಲೆಯೇ ಯೌವ್ವನ
ಏನೂ ತಿಳಿಯದೇ ಇರಬಹುದು ಎಂಬ ಭಾವನೆ
ಯೌವ್ವನಕ್ಕೆ ಎಂದೂ ಕೊನೆಬರದ ಆಸೆಗಳು!

ಕಂಡದ್ದನೆಲ್ಲಾ ಜೊತೆ ಚಿಂತಿಸುತ್ತ
ತನ್ನ ಶರೀರ ಭಾವನೆಗಳ ಜೊತೆ ರೂಪ ಕನ್ನಡಿಯಲ್ಲಿ
ಪ್ರತಿಬಿಂಬಿಸುತ್ತಿರೆ ನಾನೇ ಮಹಾನ್ ಮನ್ಮಥ
ನಾನೇ ರತಿ ಎಂಬ ಸ್ಥಾನವನ್ನು ತಾವೇ ಪಡೆದುಕೊಂಡು
ಕಣ್ಣೋಟದ ಬಾಣಗಳು ಮನಸ್ಸಿನ ಬಿಲ್ಲಿನಿಂದ
ಹೊರಹೋಗುತ್ತಿರುವುದೇ ಯೌವ್ವನದ ಮಹಾ ಶಕ್ತಿ!

ಗೂಳಿ ಮಣ್ಣಿನ ಜೊತೆ ಕೊಂಬನ್ನು ತೂರಿಸಿ ಆಟವಾಡುವಂತೆ
ದೊರಕಿದ ಮರು ಪ್ರೀತಿಯ ಮನದ ಕರೆ
ಕಣ್ಣಿನ ಸಂಚಿನ ಕರೆ ಪ್ರೀತಿ-ಪ್ರೇಮಗಳ ದಾರಿ ತೋರಿಸುತ
ನನ್ನವನು ನನ್ನವಳು ಎಂಬ ಆನಂದ ಕಣ್ಣಿನ ಭಾಷ್ಪಗಳು
ಹಗಲು-ರಾತ್ರಿ ಒಂದುಮಾಡುವ ಯೌವ್ವನ
ಭಾವನೆಗಳ ಸ್ಪರ್ಶದಿಂದ ರೋಮಾಂಚನದ ಕನಸುಗಳು
ನಿಜಕ್ಕೂ ನಿಜವಾಗುವುದೆಂಬ ನಂಬಿಕೆ

ಅವಳು ಮತ್ತು ಅವನು ನನ್ನದಾಗದಲ್ಲಿ ಪ್ರಾಣತ್ಯಾಗ?
ಎಂಬ ಮರ್ಮ ಭಾವನೆಗಳು ಎಲ್ಲರಿಂದ ನಮ್ಮನ್ನು ಪ್ರತ್ಯೇಕವಾಗಿಸುತ
ಅವಳ ನೋಟ ಅವಳ ನಗೆ ಅವಳ ಪಿಸು ಪಿಸು ಮಾತುಗಳಿಗೆ
ಕಾತುರದಿಂದ ಕಾಯುವುದು ಮನೋದಾತ ಯೌವ್ವನ

**- ಶ್ರೀ ಹರಿ.**

04-04-2012



www.sriharikhoday.com

## 224

ರೋಮಾಂಚನದ ಯೌವ್ವನದ ಸಾಧನೆ
ಪೀಳಿಗೆಗೆ ಫಲವಾಗಿ ದೊರಕುವ ಸಂತತಿ
ದಾಂಪತ್ಯದ ಜೀವನದ ಸುಖದ ಫಲವಾಗಿ
ಸಂತತಿಯೇ ಜೀವನವೆಲ್ಲಾ ನಮ್ಮಿಬ್ಬರ ಪ್ರೀತಿ-ಪ್ರೇಮಗಳ ಹಂತಗಳು
ನಮ್ಮ ರೋಮಾಂಚನದ ಯೌವ್ವನದ ಸಾಧನೆಯನ್ನು
ನಮ್ಮಿಬ್ಬರ ಉಸಿರಾಟ ಮರೆಸುವುದಿಲ್ಲ!

ರೋಮಾಂಚನದ ಪ್ರೀತಿ-ಪ್ರೇಮಗಳು
ನಮ್ಮ ಆಧ್ಯಾತ್ಮಿಕ ಮನೋ ಕಲ್ಪನೆಯ ಸಾಧನೆಗಾಗಿ
ದೂರವಾಗಿದ್ದ ನಾವುಗಳು ಒಂದಾಗುವ ವಿಧಾನ
ದೂರವಿರುವ ದೇವರ ಜೊತೆ ಒಂದಾಗಿಸುವ ಸಾಧನೆ

ಯೌವ್ವನ, ಪ್ರೀತಿ-ಪ್ರೇಮಗಳು
ಯೌವ್ವನದ ಸರಿ ಅರ್ಥವ ನೀಡಲು ಸಹಕರಿಸಿ
ನಮ್ಮಲ್ಲಿ ಪೂರ್ಣವನ್ನು ಅನುಭವಿಸಲು ಬುನಾದಿಯಾಗಿ
ನಂಬಿಕೆಯಲ್ಲಿ ಫಲವಿದೆ ಎಂದು ತೋರಿ ಸೂಚಿಸುವುದು
ರೋಮಾಂಚನದ ಪ್ರೀತಿ-ಪ್ರೇಮಗಳು!

ಯಾರಿಂದಲೂ ಕಲಿಯದ ತನ್ನ ಅಂತರಾಳದ ಆಳದ ಭಾವನೆಗಳು
ಅಂತರಾಳದಲ್ಲಿ ಭಾಸವಾಗುವ ಧೈರ್ಯ, ತೃಪ್ತಿ
ಪ್ರೀತಿ-ಪ್ರೇಮಗಳ ರೋಮಾಂಚನ ಸತ್ಯಗಳನ್ನು
ಕಾಲ ನಮ್ಮನ್ನು ಜೊತೆ ನಡೆಸುತ್ತ

05-04-2012

ಸಮಾಜಕ್ಕೆ ಬೇಕಾದಾಗ
ಬೇರೆಯವರ ಕಷ್ಟಗಳ ಅನುಭವಿಸಲು
ದೇವರು ನೀಡಿರುವ ನಮ್ಮ ರೋಮಾಂಚನ
ಪ್ರೀತಿ - ಪ್ರೇಮಗಳ ಹಿನ್ನೆಲೆಯಲ್ಲಿ
ರೋಮಾಂಚನ ಇಂದು ಫಲದ ರೂಪ ತಾಳಿ

ಅಸಾಧ್ಯಗಳ ಸಂಕಲ್ಪ ಮಾಡಲು ಸಹಕಾರಿ
ಪ್ರೀತಿ-ಪ್ರೇಮ ರೋಮಾಂಚನದ ಭಾವನೆಗಳು !

**- ಶ್ರೀ ಹರಿ.**



## 225.

ಸಾವಿಲ್ಲದ ಉದ್ದೇಶಗಳ ನೆರಳು
ನಾವು ಗತಿಸಿಹೋದರೂ
ಉಸಿರಾಡುತ್ತಲೆ ಇರುವ ಸಂಕಲ್ಪದ ನೆರಳುಗಳು
ಸಂಕಲ್ಪ ಮುಗಿದ ನಂತರ
ಯಾರಿಗೂ ಕಾಣದೆ ಮಾಯವಾಗುತ್ತದೆ !

ಯಾವ ಶಕ್ತಿಯೋ ಯಾವ ಪ್ರಕೃತಿಯ ಫಲವೋ
ತನ್ನ ಗುರಿಯನ್ನು ಸಾಧಿಸುವವರೆಗೂ ಎಲ್ಲರ ಮನದಲ್ಲಿ ಹೂಡಿ
ತನ್ನ ಕಾರ್ಯಗಳನ್ನು ರೂಪಿಸಿಕೊಳ್ಳುತ್ತ
ಹಸಿವು ಬಾಯಾರಿಕೆಯಿಲ್ಲದೆ ದುಡಿಯುವ ನೆರಳು
ಕಾಲದ ಜೊತೆಗೆ ಹಗಲು ರಾತ್ರಿ ದುಡಿಯುತ್ತ

ಸಂಕಲ್ಪದ ನೆರಳುಗಳಿಗೆ ಸಂಕಲ್ಪಿಸಿದ ತನ್ನ ದಾತ
ಮರೆಯಾಗಿ ಮಡಿದು ಹೋಗಿದ್ದರೂ
ತಾನು ತನ್ನ ಕರ್ತವ್ಯವನ್ನು ಬಿಡದೆ
ಕಾಲ ಗತಿಸುತ್ತಿದ್ದರೂ ಕಾಲ ಜೊತೆಗೇ ಬೆರೆತು
ಕಾರ್ಯ ಮುಗಿದ ನಂತರ ಕರಗಿ ಹೋಗುತ್ತದೆ !

ನಾವು ಬೇರೆಯವರನ್ನು ಪೂಜಿಸುವಂತೆ
ನಮ್ಮ ನೆನಪುಗಳ ಪೂಜಿಸಿ
ನಮ್ಮ ನೆನಪಿನ ನೆರಳಿಗೆ ಮಾನ್ಯತೆ ನೀಡಿದರೆ
ಅವುಗಳು ನೀಡುವ ಆಶೀರ್ವಾದಗಳ ಪಡೆದು
ಭಾರವಿಲ್ಲದ ಜೀವನದ ಸುಖ ಪಡೆದು

ಯೋಚಿಸುವ ನಮ್ಮ ಭಾವನೆಗಳಿಗೆ ಸಾವಿಲ್ಲದೆ
ಇಂದಲ್ಲ ಮುಂದಿನ ನೆರಳಲ್ಲಿ
ಸಾಧನೆ ಎದುರಿಗೆ ಬಂದು ನಿಲ್ಲುವುದು

**- ಶ್ರೀ ಹರಿ.**
08-04-2012

www.sriharikhoday.com

## 226

ಅಸಾಧ್ಯ ಎಂಬ ಪದ ಪ್ರಕೃತಿ ಹುಟ್ಟಿಸಿಲ್ಲ
ಎಲ್ಲಾ ಸಾಧ್ಯತೆಗಳು ಎದುರಿಗೆ ನಿಂತರೂ
ನೆನಪುಗಳು ಧೈರ್ಯವಿಲ್ಲದೆ ಹಿಂದಿರುಗಿ
ಸಾಧ್ಯತೆಯ ಬದಲು ಅಸಾಧ್ಯವನ್ನು ಒಪ್ಪಿಕೊಳ್ಳುತ್ತಿರುವುದು!

ದಿನಚರಿಯ ನೆನಪುಗಳ ಗುಂಪುಗಳು
ಹೊಸತನ್ನು ಯೋಚಿಸಲು ಬಿಡದೆ
ಅವುಗಳು ಹೇಳುವುದನ್ನೇ ಸರಿ ಎಂದು ಸಾಧಿಸುತ
ತಾವು ಹೇಳುವುದೆಲ್ಲ ಸತ್ಯ ಅಲ್ಲವೆಂದು ತಿಳಿದಿದ್ದರೂ
ಅಸಾಧ್ಯ ಅಸಾಧ್ಯವೆಂದು ಘೋಷಿಸಿ ಹೆದರಿಸುವರು
ದಿನಚರಿಯ ನೆನಪುಗಳ ಗುಂಪುಗಳು!

ನೆನಪುಗಳ ಒಡೆಯರಾದ ನಾವುಗಳು
ನಮ್ಮ ಒಡೆತನವನ್ನು ಮರೆತು
ನೆನಪುಗಳ ಮೇಲೆ ಆಡಳಿತ ಮಾಡಲಾಗದೆ
ಸಾಧ್ಯತೆಗಳ ವರವ ತಾವಾಗಿಯೇ
ಸ್ವೀಕರಿಸದೆ ಇರುವುದ ಕಂಡರೆ
ಪ್ರಕೃತಿ ಕೊಟ್ಟಿರುವ ಧೈರ್ಯವನ್ನು ತುಂಬಿಕೊಂಡು

ಕೋಡಿ ಹರಿಸುವ ಶಕ್ತಿ ಕೊಟ್ಟಿದ್ದರೂ
ಆ ಮಹಾನ್ ಶಕ್ತಿಯನ್ನು ಕಳೆದುಕೊಂಡು
ಬರಿ ಸುಖದ ಸ್ವಪ್ನಗಳನ್ನು ಮನದಲ್ಲಿ ತೇಲಿಸಿಕೊಂಡು
ನೆನಪುಗಳ ಸಿರಿತನವನ್ನು ಹೆಚ್ಚಿಸಿಕೊಳ್ಳುತ್ತ
ಪ್ರಕೃತಿಯ ವರದಾನಕ್ಕೆ
ಮಾನವ ಮಾನ್ಯತೆ ಕೊಡುತ್ತಿಲ್ಲ!

**- ಶ್ರೀ ಹರಿ.**

11-04-2012



## 227

ಕಾಣುವ ಪಂಚೇಂದ್ರಿಯಗಳ ಅನುಭವ ಜೀವನವಾದರೆ
ಕಾಣದೇ ಇರುವ ದಶೇಂದ್ರಿಯಗಳ ಅನುಭವ ತಿಳಿಯದೆ
ಮಾನವ ತನ್ನ ಜೀವನವನು ಸರಿ ರೂಪದಲ್ಲಿ ಸಜ್ಜುಗೊಳಿಸಿಕೊಳ್ಳದೆ
ದಿಕ್ಕು ದೆಸೆ ತಿಳಿಯದೆ ಅನಾಥ ಜೀವನ ನಡೆಸುತ್ತಿರುವರು !

ಜೀವನ ಜೊತೆಗಿರುವ ಸಂಸಾರ
ಸಂಸಾರ ಜೊತೆಗಿರುವ ಸಮಾಜ
ಸಮಾಜ ಜೊತೆಗಿರುವ ಮಾನವ ಪ್ರತಿಕ್ರಿಯೆಗಳು
ಮುಂದೇನು ಮುಂದೇನು ಎಂಬ ಸಂಶಯದ ಕಾಟ
ಜೀವನದ ಹಂತ ಹಂತದಲ್ಲಿ ತನ್ನ ನಿಲುವನ್ನು ಬದಲಿಸುತ್ತಿದೆ !

ನೋಟ ಕಾಣದ ಕಣ್ಣುಗಳು
ನಿಶ್ಶಬ್ದವನ್ನರಿಯದ ಕಿವಿಗಳು
ಬೇಡವೆಂದು ಹೇಳಲು ತಿಳಿಯದ ಬಾಯಿ
ತೃಪ್ತಿಯ ಅರಿಯಲಾಗದ ಉಸಿರಾಟ
ತೃಪ್ತಿಯ ಪಡೆಯಲಾಗದ ಸ್ಪರ್ಶಾಂಗಗಳು
ಮಾನವ ತೃಪ್ತಿಯೇನೆಂದು ತಿಳಿಯದಾಗಿಹನು !

ಜ್ಞಾನ ಬುದ್ಧಿ ಕಾಲ, ಪ್ರೀತಿ-ಪ್ರೇಮ ಸಂಬಂಧಗಳು
ನಂಬಿಕೆ-ವಿವೇಕ-ಸಂಶೋಧನೆ -ಕ್ರಿಯೆಯೆಂಬ
ದಶೇಂದ್ರಿಯಗಳು ಕಣ್ಣಿಗೆ ಕಾಣಿಸದೆ ಇರುವುದ ತಿಳಿಯದೆ
ದಿವ್ಯರೂಪವಿರುವ ಮಾನವನ ಮನ
ಕುರೂಪಿಯಾಗಿ ಕ್ರೂರ ರೂಪ ಪಡೆಯುತ್ತ
ತೃಪ್ತಿಯೇ ಬರದ ಉಸಿರಾಟದ ಜೀವನ ನಡೆಸುತ್ತಿಹನು

**- ಶ್ರೀ ಹರಿ.**

13-04-2012



www.sriharikhoday.com

## 228.

ಸಂಬಂಧಗಳು ಜೊತೆ ನೋಡಲು ಕಣ್ಗಳಿದ್ದರೂ
ಸಮಾಜವನ್ನು ನೋಡಲು ಕಣ್ಣುಗಳಿಲ್ಲ
ಕಣ್ಣುಗಳಿಂದ ಕಾಣದ ಸಮಾಜದ ಕಷ್ಟಗಳು
ಪ್ರೀತಿ-ಪ್ರೇಮದ ಕಣ್ಗಳಿಂದ ಮಾತ್ರ ನೋಡಬಹುದು!

ಸಂಬಂಧಗಳ ಜೊತೆ ಪಂಚೇಂದ್ರಿಯಗಳು ಸುಖಪಡಬಹುದು
ಸುಖವೆಂದು ಅನುಭವಿಸಿ ಕಷ್ಟಗಳ ಜೊತೆಮಾಡುತ
ಜೊತೆ ಜೊತೆಯಾಗಿ ಕೂಡಿಕೊಂಡು
ಬರುತ್ತಿರುವ ಕಷ್ಟಗಳ ಕಂಡರೆ
ನಾವು ಎಚ್ಚರಿಸಿಕೊಳ್ಳಿ ಎಂಬ
ಪ್ರಕೃತಿಯ ಕೂಗು ಕೇಳಿಸಿಕೊಳ್ಳುತ್ತಿಲ್ಲ

ಸಂಬಂಧಗಳನ್ನು ಮರೆತು ನೋಡುವ ಕಣ್ಣುಗಳು
ಹತ್ತಿರ ದೂರ ಎಂದು ತಿಳಿಯದ ಕಣ್ಣುಗಳು
ಕಾಣುವ ಎದುರಲ್ಲಿ ಬೆರೆಯುವ ಕಣ್ಣುಗಳು
ಪ್ರೀತಿ ಪ್ರೇಮಗಳ ಎರಡು ಕಣ್ಗಳನ್ನು
ಸಮಾಜ ಕಣ್ತೆರೆದು ನೋಡಿದರೆ
ಸಮಾಜದಲ್ಲಿ ಪ್ರಯತ್ನವಿಲ್ಲದೆ ಸುಖವೋ ಸುಖ
ಸುಖವೋ ಸುಖ ಎದ್ದು ಕಾಣುವುದು

ಬರಿ ಪಂಚೇಂದ್ರಿಯಗಳೇ ಮಾನವನ ಇಂದ್ರಿಯಗಳಲ್ಲ
ಕಾಣದೇ ಇರುವ ಮನದಲ್ಲಿ ಆವರಿಸಿಕೊಂಡಿರುವ
ದಶೇಂದ್ರಿಯಗಳ ಜೊತೆ ಜೀವಿಸಲಾರಂಭಿಸುವುದು
ಮಾನವನಿಗೆ ಈಗ ಸಕಾಲವಾಗಿದೆ!

**- ಶ್ರೀ ಹರಿ.**

13-04-2012



www.sriharikhoday.com

## 229.

ಕತ್ತಲಲ್ಲಿ ಕನ್ನಡಿಯ ಮುಂದೆ ಮುಖ ನೋಡಿದೆ
ಏನೂ ಕಾಣದೆ ಎಲ್ಲೆಡೆ ಮೌನ ಆವರಿಸಿತ್ತು
ನನ್ನ ಮುಖ ಏಕೆ ಕಾಣುತ್ತಿಲ್ಲ ಎಂದು ಮನಕ್ಕೆ ಕೇಳಿದರೆ
ಮನದ ಕೋಣೆಯಲ್ಲಿ ಬೆಳಕಿಲ್ಲ ಎಂದು ಉತ್ತರಿಸಿತು

ಹೊಸ ಹೊಸ ರೂಪಧಾರಣೆ ಮಾಡಬಲ್ಲ ಮನಸ್ಸು
ಹೊಸ ಹೊಸದನ್ನು ಹಂಬಲಿಸಿ ಹಾರಾಡುವ ಮನ
ಹೊಸತನವ ಅನುಭವಿಸಲು ಇಚ್ಛಿಸುವ ಮನಕ್ಕೆ
ಹೊಸತನ್ನು ನೋಡಿ ಅನುಭವಿಸಲು ಮನಕ್ಕೆ ಬೆಳಕು ಬೇಕು!

ಎಣ್ಣೆಯಿಲ್ಲದೆ ಬೆಳಗುವ ಮನದ ದೀಪ
ಕತ್ತಲಲ್ಲಿ ಬೆರೆಯಲು ಆಸೆಪಡುವ ದೀಪ
ಬೆಳಕು ಬೀಳುತ್ತಲೇ ಕತ್ತಲೆ ಸಿಗದೆ ಓಡುತ್ತಿರುವುದು
ಹೊಸತನವನ್ನು ನಾವು ಅನುಭವಿಸಲೆಂದು ಕತ್ತಲೆ
ಕಾಣೆಯಾಗುವುದು!

ಹೊಸ ವಿಚಾರಕ್ಕೆ ನಾವು ಬರಿ ಕತ್ತಲಲ್ಲಿ ಹುಡುಕಿದರೆ ಸಿಗದೆ
ಕಾಣುವ ಕಷ್ಟಗಳಲ್ಲಿ ಬೆಳಕು ತುಂಬಿಕೊಳ್ಳುವಂತೆ
ಮನದಲ್ಲಿರುವ ದೀಪದ ಹಣತೆ ಎದುರು
ಹೊಸ ಮನದ ಹಂಬಲಗಳನ್ನು ಎದುರಿಗೆ ನಿಲ್ಲಿಸಿದರೆ

ಹಣತೆ ತಾನೇ ಉರಿಯಲಾರಂಭಿಸಿ
ಕಷ್ಟಗಳಿಗೆ ಹೊಸ ಹೊಸ ಉಪಾಯಗಳು
ಮನದ ಕನ್ನಡಿಯಲ್ಲಿ ಪ್ರತಿಬಿಂಬಿಸುತ್ತದೆ!

**- ಶ್ರೀ ಹರಿ.**

15-04-2012

## 230

ಮನದ ಅಂಗಳದಲ್ಲಿ ಮುಳ್ಳು ಕಳೆ ಬೆಳೆಸದೆ
ಪ್ರೀತಿ ಪ್ರೇಮದ ಬೆಳೆ ಬೆಳೆಸಿ

ಬುದ್ಧಿಯೆಂಬ ಪಾಕಶಾಲೆಯಲ್ಲಿ
ಜಗತ್ತು ಒಪ್ಪಿಕೊಳ್ಳುವ ರುಚಿಕರವಾದ
ತಿಂಡಿಯ ಪಾಕ ಮಾಡಿ
ಬೇರೆಯವರಿಗೆ ಉಣಿಸಿ ತಾನೂ ತಿಂದು
ನಾನು ಮಾಡಿದ ಅಡುಗೆ ಎಲ್ಲರೂ ಒಪ್ಪಿಕೊಂಡಿರುವರು

ಅತಿಯಾದ ರುಚಿಯಾಗಿದೆ ಎಂದು ನೀನು
ಬುದ್ಧಿಯ ಪಾಕಶಾಲೆಯಲ್ಲಿ ರುಚಿಕರವಾದ
ತಿಂಡಿ ಮಾಡಿರುವೆ ಎಂದು ಕೂಗಿ ಕೂಗಿ ಕೂಗುತ್ತ
ಕರೆದು ಅವರಿಗೆ ಉಣಿಸಿ ಸುಖ ಪಡಿಸು!

ದಿನಚರಿಯಲ್ಲಿ ಹಸಿವು ಹೇಗೆ ಸಹಜವೋ
ಹಸಿವಿಗೆ ನಾವು ಉಂಡು ತೃಪ್ತಿ ಪಡೆಯುವೆವೋ
ಜೀವನಕ್ಕೆ ಪಾಕಶಾಲೆ ಅಗತ್ಯವೋ
ನಮ್ಮ ಬುದ್ಧಿಯ ಮತ್ತು ವಿವೇಕಗಳ ಪಾಕಶಾಲೆಯಲ್ಲಿ
ಎಂದೂ ಬೆಂಕಿಯನ್ನು ಆರಿಸದೆ

ಸದಾ ಸಿದ್ಧವಾಗಿರುವ ಅಡುಗೆ ಮನೆಯಂತೆ
ಬೇಡಿಕೆ ಕಂಡ ಮಾತ್ರವೇ ಹಿಂಜರಿಯದೆ



www.sriharikhoday.com

ಸಮಾಜ ಒಪ್ಪುವಂತಹ ಅಡುಗೆ ಮಾಡಿ
ಸಂತಸದಿಂದ ಜೀವನ ಕಳೆಯುವುದೇ
ಜೀವನ ಎಂದು ನೆನೆಯುತ್ತ

ಜಗಳ ಅಸೂಯೆ ದ್ವೇಷಗಳ ಪಾಕ ಮಾಡದೆ
ಎಲ್ಲರಲ್ಲಿ ಬೆರೆತು ಕಾಣುವ ಕಷ್ಟಗಳಲ್ಲಿ ಭಾಗಿಯಾಗಿ
ನೀ ಮಾಡಿದ ಸಹಾಯ ಬೇರೆಯವರಿಗೆ ಸುಖ ಕೊಟ್ಟರೆ
ನಿನ್ನ ಬುದ್ಧಿಯ ಪಾಕಶಾಲೆಯ ಅಡುಗೆ ನಳಪಾಕವೇ ಸರಿ

**- ಶ್ರೀ ಹರಿ.**

17-04-2012

# 231

ಹೇ ಕಾಲವೇ ನನ್ನ ಜೊತೆಗಿರಲು ಅಂಜಿಕೆಯೇ
ನಿನ್ನ ರೂಪ ನೋಡಲು ನನಗೆ ಆತುರ
ನೀ ನೆರಳಲ್ಲಿ ಬೆರೆತಿರುವೆಯೋ
ಬೆಳಕಲ್ಲಿ ಬೆರೆತಿರುವೆಯೋ

ಅಥವಾ ಕತ್ತಲಲ್ಲಿ ಬೆರೆತು ಅಂಜುತಾ ಅಂಜುತಾ
ಪ್ರಕೃತಿಯಲ್ಲಿರುವ ಎಲ್ಲಾ ಸೃಷ್ಟಿಯು
ತನ್ನ ರೂಪವನ್ನು ಹೊರತೋರಿಸುತ್ತಿರಲು
ನಾನು ಸೃಷ್ಟಿಯನ್ನು ಅರಿತು ಅನುಭವ ಪಡೆಯುವ

ಸಾಧ್ಯತೆಗಳು ನಿನ್ನಲ್ಲಿ ದೊರಕದೆ ಕಣ್ಣಿಗೆ ಕಾಣದ
ದಿಗಂತದ ಆಕಾಶವೋ
ಆಕಾಶದ ದಿಗಂತವೋ ತಿಳಿಯಲಾಗದೆ
ನಿನ್ನ ನೋಡುವ ಇಚ್ಛೆ ಎಂದೂ ತಿಳಿಯದಾಗಿದೆ!

ಎಲ್ಲರನ್ನೂ ನೀ ಗೆದ್ದರೆ ಜಗವನ್ನು ಆಳಬಹುದು ಎನ್ನಬಹುದು
ನನ್ನ ಹತ್ತಿರವೇ ಇರುವ ನಿನ್ನ ಗೆಳೆತನ ನಿನ್ನನ್ನು ನಾ ಗೆದ್ದರೆ
ಅಸಾಧ್ಯವ ಮಾಡಬಲ್ಲೆ ನಾ

ನಿನ್ನನ್ನೇ ಚಿಂತಿಸು ನಿನ್ನ ನೋಡಲು ಕಾದಿಹೆನು
ನಿನಗೆ ಅಡ್ಡವಾಗಿರುವುದು ನನ್ನ ಮನೋ ಚಿಂತನೆಯೋ



ನಿನಗೆ ಅಡ್ಡವಾಗಿರುವುದು ನನ್ನ ಭಾವನೆಗಳೋ
ನಿನ್ನನ್ನು ಅಪ್ಪಿಕೊಳ್ಳಲಾಗದ ನಿನ್ನ ಇರುವಿಕೆಯನ್ನು ಅರ್ಥ
ಮಾಡಿಕೊಂಡು

ನಮ್ಮ ದೇಶದ ಭವಿಷ್ಯವನ್ನು ಸರಿಪಡಿಸು ಎಂದು ಜೊತೆ ಬೇಡುತ
ಲೋಕದ ಭವಿಷ್ಯವನ್ನೇ ಸರಿಪಡಿಸು ಎಂದು ಕೋರುತ
ಜೊತೆಗಿದ್ದರೂ ಸಂಬಂಧಗಳನ್ನು ಬೇಡದ ನಾವಿಬ್ಬರೂ
ದೂರದಿಂದಲೇ ಸುಖಪಡುತ್ತ
ನನ್ನ ಹತ್ತಿರ ಇರುವವರಿಗೆ ಯಶಸ್ಸನ್ನು ಕೊಡು ಎಂದು ಕೇಳುತ

ನನ್ನ ಜೊತೆ ನೀ ಅಂಜದೆ
ನಿನ್ನ ನಗ್ನ ರೂಪದಲ್ಲಿ ನಾವಿಬ್ಬರೂ
ನನ್ನ ಮನೋ ಏಕಾಂತದಲ್ಲಿ ಅಂಜದೇ ಬೆರೆಯೋಣ
ಹೇ ಕಾಲವೇ ನನ್ನ ಜೊತೆಗಿರಲು ಅಂಜಿಕೆಯೇ ಅಂಜಿಕೆಯೇ!

**- ಶ್ರೀ ಹರಿ.**

18-04-2012



www.sriharikhoday.com

## 232

ಹಗಲಲ್ಲಿ ಸ್ವಪ್ನಗಳು ಮಾಯ
ಇರುಳಲ್ಲಿ ನಾವೇ ಮಾಯ
ಸ್ವಪ್ನಗಳಲ್ಲಿಯೂ ಹೆದರಿಕೆ
ಹಗಲಲ್ಲಿ ಹೆದರಿಕೆ ಜೊತೆಗೆ ಬೆದರಿಕೆ !

ಸುಖವನ್ನು ಅನುಭವಿಸಲು ಅರಿಯದ ಜೀವಿಗಳು
ಸುಖವನ್ನು ಎಂದೂ ರೂಪಿಸಿಕೊಳ್ಳಲಾಗದ ಜೀವಿಗಳು
ಇದು ಇಲ್ಲಾ- ಅದು ಇಲ್ಲಾ ಎಂಬ ಮನೋವಾದಕ್ಕೆ
ಹೆದರಿ ಸುಖದ ವಾಸನೆ ಕೂಡ ಅನುಭವಿಸದೆ
ಸಾವಿನ ಜೊತೆಗೆ ಬೆರೆತು ಹೋಗುವನು !

ಒಂದೆಡೆ ನಿಲ್ಲದ ಮನ, ಸುಖದ ನೆರಳೂ ಕಾಣದೆ
ಚಂಚಲ ವೃತ್ತಿಗೆ ಸಿಲುಕಿರುವ ಮನಕ್ಕೆ
ಗಾಂಭೀರ್ಯದಿಂದ ಆಲೋಚನೆ ಮಾಡದೆ
ಮನವು ನಿರ್ಧಾರ ಮಾಡಿದ ಮಾತ್ರವೇ
ಸುಖದ ಬೆಳಕು ಕಾಣಲು ಸಾಧ್ಯ !

ನಮಗೇನು ಬೇಕು ? ನಮಗೇನು ಬೇಡ?
ನಾವು ಯಾಕೆ ಜೊತೆಗಿದ್ದೇವೆ ? ಯಾರ ಜೊತೆಗಿರಬೇಕು ?
ಇಂದೇನು ಬೇಕು ? ನಾಳೆ ಏನು ?
ಯಾವುದು ಸಾಧ್ಯ , ಯಾವುದು ಅಸಾಧ್ಯ ಎಂಬ
ವಿವೇಕ ವಿಮರ್ಶೆ ಮಾಡಿದ ತಕ್ಷಣವೇ

ಸುಖದ ಬೆಳಕು ಕಾಣಲಾರಂಭಿಸಿ
ಮನ ಸುಖ ಪಡೆದು
ತೃಪ್ತಿ ಹೊಂದಿರುವೆನು ಎನ್ನುವನು !

**- ಶ್ರೀ ಹರಿ.**

18-04-2012



www.sriharikhoday.com

## 233

**ಸಮರ್ಪಣೆ**

ಪ್ರೀತಿಯಿಂದ ನಮ್ಮಿಬ್ಬರ ಸ್ನೇಹದ ಪ್ರೇಮ
ಅತಿಯಾದ ಸರಳವಾಗಿ ನೀವು ನನಗೆ
ಬರವಣಿಗೆ ತೋರಿಸಿದ ದೆಸೆ
ಮಹಾನ್ ವ್ಯಕ್ತಿತ್ವ ಪಡೆದಿರುವ
ಗುರು ಗೆಳೆಯರಾಗಿರುವ ನೀವು
ತಮಗೆ ನನ್ನ ಮನಸ್ಸಿನ ಅನಿಸಿಕೆಯ ಜೋಡಣೆಯ ಪ್ರತಿ!

ತಮ್ಮನ್ನು ಅಪ್ಪಿಕೊಂಡು ನಮ್ಮಿಬ್ಬರ ಕಾಲದ ಹಾದಿಯಲ್ಲಿ
ಜಾರಿ ಹೋಗಿರುವ ಕಾಲಹೆಜ್ಜೆಗಳನ್ನು ನೆನೆಸುತ್ತ
ನಮ್ಮಿಬ್ಬರ ಕಣ್ಣಗಳಲ್ಲಿ ಮಿನುಗುತ್ತಿರುವ
ಕಣ್ಣೀರಿನ ಆನಂದ ಭಾಷ್ಪಬಿಂದುಗಳು ತೊಟ್ಟಿಡುತ್ತ
ನಿಮಗೆ ಅರ್ಪಿಸಲು ಇಚ್ಛಿಸುತ್ತಿರುವೆ !

ಕಾಮನ ಬಿಲ್ಲಿಗೆ ಬಣ್ಣವನ್ನು ಅರ್ಪಿಸಲೇ
ಸೂರ್ಯನಿಗೆ ಬೆಳಕನ್ನು ಅರ್ಪಿಸಲೆ
ಚಂದಿರನಿಗೆ ಬೆಳ್ಳಿಬೆಳಕ ಅರ್ಪಿಸಲೇ
ನೀವು ತೋರಿಸಿಕೊಟ್ಟ ಹಾದಿಗಳಿಗೆ ದೆಸೆಗಳ ಅರ್ಪಿಸಲೇ
ನಮ್ಮ ಗೆಳೆತನದ ಬೆಳೆ ನಿಮ್ಮ ಪಾದಗಳಿಗೆ ಅರ್ಪಿಸಿ
ನನಗೆ ಹೆಚ್ಚಿನ ಜ್ಞಾನ ವರ ನೀಡುವಂಥವರಾಗಿ
ಬರವಣಿಗೆಯ ಹೊಸ್ತಿಲಿಗೆ ಸದಾ ಮಾರ್ಗದರ್ಶಿಗಳಾಗಿ

ಈ ಜಗತ್ತಿಗೆ ಬೇಕಾದ ಬರವಣಿಗೆ
ನನ್ನಿಂದ ಹರಿದು ಸಾಗಲಿ ಹರಸಿ ಎಂದು ಬೇಡುತ್ತ
ನನ್ನ ಮನೋ ಸಮರ್ಪಣೆ
ತಾವು ಸಂತಸದಿ ಸ್ವೀಕರಿಸಿ ಎಂದು
ಬೇಡುವ ಗೆಳೆಯ ಶ್ರೀ ಹರಿ.

**- ಶ್ರೀ ಹರಿ.**

20-04-2012



## 234.

ಹಿಂದಿಲ್ಲದೆ ಮುಂದಿಲ್ಲ
ಕಷ್ಟಗಳ ತಿಳಿಯದೇ ಇರುವವನಿಗೆ ಸುಖ ತಿಳಿಯುವುದಿಲ್ಲ
ಕಣಜ ಖಾಲಿ ಇದ್ದಲ್ಲಿ ತುಂಬುವ ಪ್ರಯತ್ನ
ಕತ್ತಲಾದ ಮೇಲೆ ಬೆಳಕು ಜಾರಿ ಬರುವುದು!

ಸುಖ ಬಯಸುವ ಪ್ರಕೃತಿಯ ಇಚ್ಛೆಗಳು
ಕಷ್ಟಗಳ ಅರ್ಥ ಪ್ರಕೃತಿಗೆ ತಿಳಿಯದೇ ಇರುವಾಗ
ಕಷ್ಟಗಳ ಸೃಷ್ಟಿಕರ್ತ ನಮ್ಮ ಮನಸ್ಸಿನ ನೆನಪುಗಳಾಗಿ
ಆದಿ ಮೊದಲೇ ತಿಳಿಯದೇ ತಿಳಿಯದ ನೆನಪುಗಳು
ಇಚ್ಛೆ ಬಂದಂತೆ ಮೆರೆಯುತ್ತಿರುವುದು !

ನಮ್ಮ ಮನಸ್ಸಿಗೆ ಆದಿ ತಿಳಿದರೆ
ಹುಟ್ಟು ಬೆಳೆಯುವ ರೀತಿ ತಿಳಿದುಕೊಂಡರೆ
ನಮ್ಮ ಹತೋಟಿಯನ್ನು ಸಡಿಲಪಡಿಸುವ
ನಮ್ಮ ಮನಸ್ಸಿನ ನೆನಪುಗಳಿಗೆ
ನಿರಾಕಾರಾ ದರ್ಶನ ಮಾಡಿಸಲೇಬೇಕು

ನಿಶ್ಶಬ್ದದಲ್ಲಿ ಸ್ನಾನವ ಮಾಡಿಸಿ
ಬೇಕು ಬೇಡಗಳ ಮರೆಸಿ
ದ್ವೇಷವಿಲ್ಲದ ಪವಿತ್ರ ಭಾವನೆಯ
ಮಡಿಯ ಉಡುಗೊರೆಯ ತೊಡಿಸಿ
ಭೂತ ಭವಿಷ್ಯ ವರ್ತಮಾನ



www.sriharikhoday.com

ನಮ್ಮ ಹತೋಟಿಯಲ್ಲಿಡಿದುಕೊಂಡು
ಹಿಂದಿಲ್ಲ ಮುಂದಿಲ್ಲದ ನಿರಾಳ ಭಾವನೆಯ ಬೆಳಕಲ್ಲಿ
ಅಗಾಧ ಕೆಲಸಗಳ ಪ್ರವೃತ್ತಿಯಲ್ಲಿ
ನಾವೇ ಕರಗಿಹೋಗಿ
ಕಷ್ಟಗಳೇ ಇಲ್ಲದ ಸಮುದ್ರದಲ್ಲಿ ಈಜಾಡೋಣ!

**- ಶ್ರೀ ಹರಿ.**

21-04-2012



## 235

ವ್ಯಾಪಾರಕ್ಕೆ ನಾಣ್ಯಗಳು ಹೇಗೆ ಅವಶ್ಯಕವೋ
ಜಗದ ಜೀವಿಗಳು ಜಗತ್ತಿನ ನಾಣ್ಯಗಳು
ನಾವುಗಳು ಜಗತ್ತಿನ ಚಲಾವಣೆಯಲ್ಲಿ ಇರಬೇಕೆಂದರೆ
ನಾವುಗಳು ನಮ್ಮ ಜೀವನದ ಮೌಲ್ಯಗಳನ್ನು ಸರಿಪಡಿಸಿಕೊಂಡರೆ
ಸಮಾಜದಲ್ಲಿ ನಮ್ಮ ಬೆಲೆ ಹೆಚ್ಚಿಸಿಕೊಂಡರೆ
ಕಷ್ಟವಿಲ್ಲದೆ ನಮ್ಮ ಸಾಧನೆಗಳು ಹೆಚ್ಚಾಗುತ್ತದೆ!

ನಮ್ಮ ಮೇಲೆ ನಮಗೆ ಗೌರವವಿಲ್ಲದ್ದಲ್ಲಿ
ಗೌರವ ಬೇರೆಯವರಿಂದ ಪಡೆಯುವುದು ಅಸಾಧ್ಯ
ಒಂದೆಡೆ ನಿಂತಿರುವ ಹಣಕ್ಕೆ ಮೌಲ್ಯವಿಲ್ಲವೋ
ನಾವು ಜಗತ್ತಿನ ಪ್ರಗತಿಯಲ್ಲಿ ಭಾಗಿಯಾದರೆ
ಮೆಚ್ಚುಗೆ ಸಂಬಂಧಗಳು ಹೆಚ್ಚಾಗಿ
ನಮ್ಮ ಚಲಾವಣೆಗೆ ಜಗತ್ತಿನ ಬೇಡಿಕೆ ಹೆಚ್ಚಾಗುತ್ತದೆ

ಸರಿ ಸರಕನ್ನು ವ್ಯಾಪಾರ ಮಾಡುವಂತೆ
ಸರಿ ಯೋಚನೆಗಳನ್ನು ಜೀವನದಲ್ಲಿ ರೂಪಿಸಿಕೊಂಡು
ಬದುಕಲ್ಲಿ ಬದುಕನ್ನು ಕೊಡುವ ಯೋಚನೆ ಮಾಡಿಕೊಂಡು
ಜೀವನದಲ್ಲಿ ಪ್ರತಿ ಪ್ರೀತಿ ಪ್ರೇಮಗಳ ಲಾಭ ಪಡೆದು
ಲಾಭವಾಗಿ ಪಡೆದಿರುವ ಪ್ರೀತಿ-ಪ್ರೇಮಗಳನ್ನು
ಹೊಸ ವ್ಯಾಪಾರದಲ್ಲಿ ಬಂಡವಾಳವಾಗಿ ಹೂಡಿಸಿ
ನಮ್ಮ ಮೌಲ್ಯವನ್ನು ನಾವೇ ಹೆಚ್ಚಿಸಿಕೊಳ್ಳೋಣ!

**- ಶ್ರೀ ಹರಿ.**
25-04-2012



www.sriharikhoday.com

## 236

ಹೊಟ್ಟೆಪಾಡಿಗೆ ಕಾಲದ ಹಾದಿಯಲ್ಲಿ
ಮನುಷ್ಯ ಬೇಟೆಯಾಡಿ ಜೀವಿಸುತ್ತಿದ್ದನು
ದಿನವೂ ಹಸಿವಿನ ಬಾಧೆಗೆ ದಿನಚರಿಯ ಹೋರಾಟ
ದೊರಕಿದ ಬೇಟೆಗೆ ಹತ್ತಾರು ಬಾಯಿಗಳ ಹೋರಾಟದ ಭಯ!

ಕಾಲದ ನಡಿಗೆಯಲ್ಲಿ ಸಂಸಾರ ಸಮಾಜ ಬೆಳೆದಾಗಲೆಲ್ಲ
ಮಾನವನ ಕಷ್ಟ ದೇವರು ನೋಡಿ
ಹೊಸ ರೀತಿಯ ಬುದ್ಧಿಯ ವರಮಾನ
ಬೇಟೆಯಿಲ್ಲದೆ ಹಸಿವಿನ ನಿರ್ಮೂಲ
ಯಾವ ಆಯುಧವೂ ಇಲ್ಲದೆ ಬೇಟೆ ನಡೆಸಿ
ತನ್ನ ಸಂಸಾರ ಸಮಾಜ ಸುಖ ನೆಮ್ಮದಿಯ ವರದಾನವೇ
ದೇವರು ನೀಡಿರುವ ಬುದ್ಧಿ ಮತ್ತು ವಿವೇಕ!

ಬುದ್ಧಿ ವಿವೇಕದಿಂದ ಹೊಸ ಹೊಸ ಯೋಜನೆ
ಯೋಜನೆಯಿಂದ ವರಮಾನ
ವರಮಾನದಿಂದ ಸಂಸಾರ ಸಮಾಜ
ಬೆಳೆಸುತ್ತಿರುವುದು ಬುದ್ಧಿ ವಿವೇಕಗಳು
ಈ ದೇವರು ನೀಡಿರುವ ವರದಾನಕ್ಕೆ
ಮಾನವ ಎಂದೆಂದಿಗೂ ಚಿರಋಣಿಯಾಗಿರಬೇಕು.!

**- ಶ್ರೀ ಹರಿ.**

26-04-2012



www.sriharikhoday.com

## 237

ಬಣ್ಣಗಳಿಗೆ ತನ್ನ ಬಣ್ಣವ ನೋಡಲು ಕಣ್ಣಿಲ್ಲದಂತೆ
ಸೂರ್ಯನಿಗೆ ತನ್ನ ಬೆಳಕ ನೋಡಲು ಕಣ್ಣಿಲ್ಲದಂತೆ
ಹರಿಯುವ ನದಿಗೆ ತನ್ನ ಹಾದಿ ಅರಿಯದೆ ಓಡುತ್ತಿರುವಂತೆ
ಸಮುದ್ರದ ಅಲೆಗಳಿಗೆ ಸಮುದ್ರದ ಆಳ ತಿಳಿಯದಂತೆ
ಆಲದಮರಕ್ಕೆ ತಾನು ಹೇಗೆ ಹುಟ್ಟಿದೆನೆಂದು ತಿಳಿಯದಂತೆ
ಏನೇನು ತಿಳಿಯದ ನಾವುಗಳು ಜೀವಿಸುತ್ತಿರುವುದು ಒಂದು ವಿಸ್ಮಯ!

ತನ್ನ ರುಚಿಯನ್ನು ತಿಳಿಯದ ಮಾಗಿದ ಮಾವು
ದಾಹ ಏನೆಂದು ಅರಿಯದ ನೀರು
ನಾನೆಲ್ಲಿಂದ ಬಂದೆ ಎಲ್ಲಿ ಹೋಗುತ್ತಿರುವೆನೆಂದು ತಿಳಿಯದ
ಉದಯಾಸ್ತಮಾನಗಳಿಗೆ ತಿಳಿಯದ ಚಕ್ರದಲ್ಲಿ
ದಿಕ್ಕು - ದೆಸೆ ತಿಳಿಯದ ನಿಲ್ಲದ ಓಟ
ಎಣಿಕೆಗಳೇ ಇಲ್ಲದ ದಿಗಂತಗಳ ಕಾಲ!

ದೇವರನ್ನು ತಿಳಿಯದ ಬ್ರಹ್ಮಾಂಡ
ಸೃಷ್ಟಿಸಿರುವ ದೇವರನ್ನು ಮರೆತಿರುವ ಬ್ರಹ್ಮಾಂಡ
ಸೃಷ್ಟಿಗೆ ಹಾದಿ ತಿಳಿಯದೆ ಹಾದಿಗೆ ಸೃಷ್ಟಿ ತಿಳಿಯದೆ
ಬ್ರಹ್ಮಾಂಡಗಳನ್ನು ಅಂಟಿಕೊಳ್ಳಲಾಗದ ಕಾಲ
ಉಸಿರಾಡುತ್ತ ಜೀವಿಸುತ್ತಿರುವ ಈ ಮಾನವನಿಗೆ

ನೋಡಿ ವೀಕ್ಷಿಸಿ ಅನುಭವಿಸಿ ಬೆರಗಾಗಿ
ಅರ್ಥವ ತರ್ಜುಮೆ ಮಾಡುವ ಮುನ್ನ
ಕಾಣುವ ಆಕಾಶದಲ್ಲಿ ಬೆರೆತು
ಕಳೆದುಹೋಗುತ್ತಿರುವವನು!

**- ಶ್ರೀ ಹರಿ.**

28-04-2012

## 238

ಜೀವಿಗಳ ಅಂತರಾಳದ ಕತ್ತಲಲ್ಲಿ
ಮಾಯೆಯೆಂಬ ತೆರೆಯ ಹಿಂದೆ
ರೂಪು-ರೇಖೆ ಇರುವಿಕೆಯೇ ಕಾಣದ ನೆನಪುಗಳೇ
ಸಮಾಜದಲ್ಲಿ ಹೆಚ್ಚಾಗಿರುವ
ಪ್ರೀತಿ ಪ್ರೇಮಗಳಿಗೆ ವಿಷವ ಹಿಂಡಬೇಡಿ!

ಸುಖ ಸಂತಸದ ಬಾಳಿಗೆ ಹೆಚ್ಚಿನ ನೆಮ್ಮದಿ ಬರುವಂತೆ
ತಾವು ಸಂಚು ನಡೆಸಿ ಯಾವ ದ್ವೇಷವೂ ಬರದಂತೆ
ಯಾವ ಕೆಟ್ಟ ಅಭಿಪ್ರಾಯಗಳೂ ಬರದಂತೆ
ಸಮಾಜ ಸುಖದಲ್ಲಿ ನೀವೂ ಬೆರೆತು
ಜಗತ್ತಿಗೆ ಕಾಣುತ್ತಿರುವ ಈ ಶರೀರಗಳಿಗೆ
ಯಾರಿಂದಲೂ ಪರಸ್ಪರ ಬೇಸರ ಬರದಂತೆ ನೋಡಿಕೊಳ್ಳಿ!

ಹೊಸ ಹೊಸ ಆಲೋಚನೆಯಲ್ಲಿ ಮಗ್ನರಾಗಿರುವ ತಾವುಗಳು
ಯಾರ ಕಣ್ಣಿಗೂ ಬೀಳದೆ ನಿಶ್ಶಬ್ದದಲ್ಲಿ ಕರ್ತವ್ಯನಿಷ್ಟರಾಗಿ
ಜೀವಿಗಳಿಗೆ ಹೊಸ ಲೋಕವನ್ನು ಸೃಷ್ಟಿಸುತ
ತುಂಬುತನವ ಅವರುಗಳು ಅನುಭವಿಸುವಂತೆ ಮಾಡಿ
ತೊಂದರೆ ಕಷ್ಟಗಳನ್ನು ನೆನಪಿನಿಂದ ದೂರ ಮಾಡುವಂಥವರಾಗಿ
ನಮ್ಮ ಹಿತಚಿಂತಕರಾದ ಜೊತೆ ಜೊತೆಗಿರುವ ನಮ್ಮ ನೆನಪುಗಳೇ

ತಾವು ಕಾಲದ ಜೊತೆಗೆ
ನಮ್ಮ ಈ ಜಗದ ಜೀವಿಗಳಿಗೆ ಜೀವನವನ್ನು ರೂಪಿಸಿಕೊಡಿ!

**- ಶ್ರೀ ಹರಿ.**

30-04-2012



## 239

ಕಣ್ಣಿಲ್ಲದ ನನ್ನ ನೆನಪಿನ ಕನ್ನಡಿಗಳು
ಹೊಸ ಹೊಸತನ್ನು ನೋಡಲು ಇಚ್ಛೆ
ಬರಿ ನೋಡುವುದರಲ್ಲಿ ನನ್ನ ಪಂಚೇಂದ್ರಿಯಗಳ ಜೊತೆ
ಸುಖವನ್ನು ಪಡೆಯುವ ದೀರ್ಘ ಆಸೆ!

ನನ್ನಲ್ಲಿರುವ ಪ್ರೀತಿಯನ್ನು ಕದ್ದು
ತಾನು ಹೊಸ ಹೊಸದನ್ನು ಪ್ರೀತಿಸುತ
ತಮ್ಮಗಳ ಪ್ರೀತಿ ಬರಿ ಕನಸಾಗದೆ
ನೆನಸು ಮಾಡಿಕೊಳ್ಳುವ ದಿನಚರಿಯ ಪ್ರಯತ್ನ!

ದಿನಚರಿಯಲ್ಲಿ ಹಾಸುಹೊಕ್ಕಾಗಿರುವ ಈ ನೆನಪುಗಳು
ತಮ್ಮಗಳಿಗೆ ನೆಮ್ಮದಿ ಏನೆಂದು ತಿಳಿಯದೆ
ನನ್ನ ಮನೋ ಸಂಕಲ್ಪಗಳಿಗೆ ಅಡ್ಡವಾಗಿ
ನಮ್ಮ ಜೀವನದ ಗುರಿಯನ್ನು ತಪ್ಪಿಸುತ್ತಿದೆ!

ವಿವೇಕದ ಸಹಾಯದಿಂದ ಪ್ರೀತಿಯಿಂದ ಸರಿಪಡಿಸಿದರೆ
ನಮ್ಮ ಸಂಕಲ್ಪಗಳು ದೃಢಸಂಕಲ್ಪಗಳಾಗಿ
ಎದುರಿಗೆ ಕಾಣುವ ಪ್ರಕೃತಿಯ ಬೇಡಿಕೆಗಳಲ್ಲಿ ಒಂದಾಗುತ
ಪಂಚಭೂತಗಳಿಗೆ ಪ್ರಯೋಜಕವಾಗಿ

ಉಸಿರು - ನಿಟ್ಟುಸಿರುಗಳ ಫಲವ
ಜಗತ್ತಿಗೆ ಕೊಡುಗೆಯಾಗಿ ನೀಡುವ
ಪ್ರಯತ್ನ ಮಾಡೋಣ !

**- ಶ್ರೀ ಹರಿ.**

02-05-2012



www.sriharikhoday.com

## 240

ಬಡವನಿಗೆ ಕಾಲವೆಲ್ಲ ಅಳುವುದಕ್ಕೇ ಕಣ್ಣೀರು
ನನಗೂ ಕಷ್ಟವಿದೆ ಎಂದು ಹೇಳಲು     ಕೊನೆ ಬರದ ಹಸಿವು
ತನಗೂ ಕಷ್ಟಗಳು ಮರೆಯಲು ಗೊತ್ತು ಎಂದು ಹೇಳಲು
ಚಾಪೆಗೆ ತಲೆ ತಟ್ಟಿದ ತಕ್ಷಣವೇ ಗೊರಕೆ ನಿದ್ರೆಗಳು

ದಿನವೂ ಸೂರ್ಯನ ಬೆಳಕಿನ ಸ್ನಾನದ ತಣ್ಣೀರು
ಮಡಕೆಯಲ್ಲಿ ತಂಗಳನ್ನ ತಂಗಳನ್ನವೇ ಮೃಷ್ಟಾನ್ನ ಭೋಜನವು
ನಾಯಿಗಾಗಿ ಮಿಕ್ಕಿರುವ ಅನ್ನ ಸಿರಿತನದ ಅನ್ನದಾನ
ನಾಯಿಯ ಪ್ರೀತಿಯ ಬೊಗಳೇ ದಿನದ ರಾಜನ ಪರಾಕು!

ಗುಡಿಸಲ ಎದುರಿಗೆ ಬಿಡಿಸಿರುವ ರಂಗೋಲಿ
ದಿನದ ಭವಿಷ್ಯದ ಜೊತೆಗೆ ಅದೃಷ್ಟದ ರೇಖೆಗಳು
ಮಡದಿಯ ಹಣೆಯ ಮೇಲಿನ ಕುಂಕುಮದ ನಗೆ
ಗಂಡನ ಕೈಕಾಲು ತೊಡೆಗಳಿಗೆ ಹೊಸ ಚೇತನ!

ಕಣ್ಣೀರು ಒರೆಸಲು ನಾನಾ ಸವಾಲು
ದಿನವೂ ಹೊಸ ಹೊಸ ಯೋಜನೆಗಳು
ಇದು ಮಾಡಿದರೆ ಹೇಗೆ? ಅದು ಮಾಡಿದರೆ ಹೇಗೆ
ಎಂಬುದರ ಬೇಕು ಬೇಡಗಳು

ತಮ್ಮ ಕಷ್ಟಗಳಿಗೆ ಕಣ್ಣೀರು ಹಾಕಲಿ ಎಂಬ ಬಯಕೆ
ತನ್ನ ಕಣ್ಣಿನಲ್ಲಿ ಸದಾ ಹರಿಯುವ ತೊಟ್ಟು ತೊಟ್ಟಿನಲ್ಲಿ
ಮುಂಬರುವ ಭವಿಷ್ಯದ ಸ್ವಪ್ನಗಳು
ತೇಲಿ ತೇಲಿ ಬಂದು ಸ್ವಪ್ನಗಳು ಬರುವ
ಮೊದಲೇ ಕಣ್ಣೀರು ಆರಿಹೋಗುತ್ತಿದೆ!

**- ಶ್ರೀ ಹರಿ.**

02-05-2012



## 241

ತಾನು ತನಗೊಬ್ಬನಿಗೇ ಮಾತ್ರ ಬದುಕುವುದು
ತನ್ನ ಮನೆತನಕ್ಕೆ ಬಡತನ ನೀಡಿರುವ ಮನೋ ಪ್ರಯೋಗ
ತಾನು ತನ್ನದು ಎಂಬ ಅಹಂಕಾರಗಳು
ತನ್ನ ಬದುಕಲ್ಲಿ ಬಂಧು-ಮಿತ್ರರನ್ನು ದೂರ ಮಾಡುವುದು!

ಒಳ್ಳೆಯವರಾಗಿ ಬದುಕಿರುವವರನ್ನು ನೋಡಿ ಕಲಿತು
ಗೌರವದಿಂದ ಅವರಲ್ಲಿ ಬೆರೆತು
ಅಂಟಿಕೊಂಡಿರುವ ಕಷ್ಟ-ನಷ್ಟಗಳು
ತನ್ನ ಜೀವನದಿಂದ ಜಾರಿ ಹೋಗುವುದು!

ಈ ದಿನದ ಸೂರ್ಯ ನೀಡಿರುವ ಕಾಲದ ಅವಧಿಯಲ್ಲಿ
ತಾನು ಬೇರೆಯವರ ಜೊತೆಗೆ ಏನು ಸಾಧನೆ ಮಾಡಬೇಕು
ಈ ದಿನದ ತನ್ನ ಜವಾಬ್ದಾರಿಯೇನು ಎಂದು ಮನೋ ಅನಿಸಿಕೆಗಳು
ಜೀವನದಲ್ಲಿ ಅನೇಕ ಸಾಧನೆ ಮಾಡಿ ಸಮಾಜದ ಗೌರವ ಪಡೆದು
ತನ್ನ ಸಿರಿತನದ ತೃಪ್ತಿ ಪಡೆಯುವನು!

ಇಲ್ಲದ್ದನ್ನು ಇದೆ ಎಂದು ಹೇಳದೆ
ತನ್ನ ಮನೋ ಆಡಂಬರಗಳ ಕಸವನ್ನು
ಮನದ ಆಳದ ತೊಟ್ಟಿಯಲ್ಲಿ ಕೊಳೆಯಲು ಬಿಟ್ಟು
ಹಗುರಾದ ಪವಿತ್ರ ಭಾವನೆಗಳ ಜೊತೆಗೆ
ಜೀವನದ ರುಚಿಕರ ವಿಷಯಗಳನ್ನು ಬೆರೆಸುತ್ತ
ಸಂತಸದಿ ಬಾಳೋಣ!

**- ಶ್ರೀ ಹರಿ.**

03-05-2012

www.sriharikhoday.com

## 242

ಓಡೋಡಿ ಹಗಲು ಬರುತ್ತಿದೆ
ಓಡೋಡಿ ರಾತ್ರಿಗಳು ಸಹ ಬರುತ್ತಲೇ ಇದೆ
ಮನಸ್ಸಿನ ಹೆಗಲ ಮೇಲೆ ಭಾರವ ಹಾಕುತ
ಇದಿಲ್ಲ ಅದಿಲ್ಲ ಎಂದು ನಾವುಗಳು ಬೊಗಳುತ್ತಿರುವೆವು !

ದಿನಚರಿಯ ಸೂಚಿಸುವ ಹಗಲು ರಾತ್ರಿಗಳು
ದಿನಚರಿಯ ಜವಾಬ್ದಾರಿಯನ್ನರಿಯದೆ
ಅದೃಷ್ಟವೆಂಬ ಕಾಣದ ಲಿಖಿತಕ್ಕೆ ನಿಂದಿಸಿ
ಜೀವನ ಜೀವನದ ಜವಾಬ್ದಾರಿಯನ್ನು
ಅದೃಷ್ಟದ ಲಿಖಿತದ ಮೇಲೆ ಹೊರಸೂಸುವುದ ಕಂಡರೆ
ಆಕಾಶಕ್ಕೆ ಅಡುಗೆ ಮಾಡು ಎಂದು ಹೇಳುವಂತೆ

ಕೈಕಾಲು ಮುದುಡಿಕೊಂಡು ಕೂರದೆ
ಮನಸ್ಸಿನ ಜೊತೆಗೆ ಕೈ ಕಾಲು ಸೇರಿಕೊಂಡರೆ
ಗಾಳಿಯಲ್ಲಿ ಬೆಳೆದ ರಾಗಿಯನ್ನು ತೂರುವಂತೆ
ಬೇಡದ ಕಷ್ಟ-ನಷ್ಟಗಳು ತೂರಿ ಹೋಗಿ
ಗಟ್ಟಿಕಾಳಾದ ರಾಗಿಯ ರಾಶಿ ಹಾಕಿದರೆ
ಜೀವನದಲ್ಲಿ ರಾತ್ರಿ ಹಗಲುಗಳಂತೆ ದುಡಿದು

ಹಗುರಾಗಿ ಬಂದು ಹೋಗುವಂತೆ
ನಮಗೆ ಕಷ್ಟಗಳು ಬಂದು ಹೋಗಿ
ಜೀವನವನ್ನು ಹಗುರಾಗಿಸುತ
ಜೀವಿಸಬೇಕು ಎಂಬ ಆಸೆ ಚಿಗುರಿಸುತ್ತದೆ !

**- ಶ್ರೀ ಹರಿ.**

07-05-2012



## 243

ನಂಬಿಕೆ ದೇವರು ನೀಡಿರುವ ವರದಾನ ನಮ್ಮನ್ನು ನಾವು ನಂಬಿ
ನಮ್ಮಲ್ಲಿ ಬರುವ ವಿಚಾರಧಾರೆಯಲ್ಲಿ ನಂಬಿ ಕಾಣದೆ ಇರುವ
ಸತ್ಯ ಎನಿಸಿಕೊಂಡಿರುವ ದೇವರ ನಮಿಸುತ್ತ
ಕಾರ್ಯನಿರತರಾಗುವುದೇ ಕಾರ್ಯಸಿದ್ಧಿ!

ಬೇರೆಯವರಿಗೆ ನೀವು ಮಾಡುವುದನ್ನು
ಬೇರೆಯವರಿಗೆ ಮಾಡಿ ತೋರಿಸಿ ಎನ್ನುವುದು ಕೆಲಸಗಳಲ್ಲಿ ಕೆಡಕು ತರಿಸಿ
ಕುಂಬಾರನ ಮಡಕೆಯನ್ನು ಕುಂಬಾರ ತನ್ನ ಕೈಯ್ಯಲ್ಲೇ ಮಾಡುವಂತೆ
ನಮ್ಮ ಮನಸ್ಸು ಬುದ್ಧಿ ಮತ್ತು ನಮ್ಮ ಶರೀರದಲ್ಲಿ
ಕೆಲಸದ ಛಲ ತುಂಬಿಕೊಂಡರೆ ನಾವು ಪ್ರಗತಿಯತ್ತ ಸಾಗುವೆವು!

ನಮ್ಮ ಕೆಲಸದಲ್ಲಿ ಬೇರೆಯವರ ಕೆಲಸ ಮಾಡಿದ್ದಲ್ಲಿ
ಪ್ರಕೃತಿ ಒಪ್ಪಿ ನಮ್ಮ ಕೆಲಸಗಳಲ್ಲಿ ತಾನೇ ಭಾಗಿಯಾಗಿ
ಸಮಾಜದಲ್ಲಿ ಶ್ರೇಯಸ್ಸು ಸಾಧಿಸಿ
ಜನಗಳು ಒಪ್ಪುವ ನಮ್ಮ ಜೀವನ ರೀತಿ
ನಮ್ಮನ್ನು ಬಲಶಾಲಿಯಾಗಿ ಮಾಡಿ
ಹಿಡಿದಿದ್ದನ್ನು ಬಿಡುವವರಲ್ಲ ಎಂಬ ಹೆಸರು ಕೊಡಿಸುತ್ತದೆ !

ತೆರೆದ ಕಣ್ಣುಗಳಿಂದ ಹೊಸ ಕೆಲಸಗಳನ್ನು ಹುಡುಕೋಣ
ತೆರೆದ ಮನದಿಂದ ಬೇರೆಯವರ ಕಷ್ಟಗಳಲ್ಲಿ ಬೆರೆಯೋಣ
ತೆರೆದ ತೋಳುಗಳಿಂದ ಎಲ್ಲರನ್ನು ಪ್ರೀತಿಯಿಂದ ಅಪ್ಪಿಕೊಳ್ಳೋಣ
ತೆರೆದ ಮನೆಯ ಬಾಗಿಲನ್ನು ತೆರೆದು ಬೇರೆಯವರ ಕಷ್ಟಗಳನ್ನು ಕೇಳೋಣ
ತೆರೆದು ಕರೆಯುತ್ತಿರುವ ಆಕಾಶದಲ್ಲಿ ನಮ್ಮನ್ನೇ ನಾವು ಮರೆತು
ಬಣ್ಣ ಬಣ್ಣಗಳ ಸುಂದರವಾದ ವಿಚಾರಗಳನ್ನು ಚಿತ್ರಿಸೋಣ !

**- ಶ್ರೀ ಹರಿ.**

09-05-2012



www.sriharikhoday.com

## 244.

ಅರಳಿದ ಹೂವು ಮುದುಡಿ ಹೋಗಿ
ಮತ್ತೆ ಮತ್ತೆ ಚಿಗುರುವ ಆಸೆ ಹೆಚ್ಚಿಸಿಕೊಂಡು
ಯಾವ ಯಾವ ಬಣ್ಣದಿಂದ ಚಿಗುರಲಿ ಎಂಬ ಆಸೆ
ಮುದುಡಿದ ಹೂವು ಬಳ್ಳಿ ಜೊತೆಗೆ ಮಾತನಾಡುತ್ತಿದೆ!

ವರ ಸಿಗದೆ ಆಸೆಗಳು ಕೂಡ ಮುದುಡಿ
ಮತ್ತೆ ಆಸೆಗಳ ಚಿಗುರಿಸಲು ಸಮಯದ ಜೊತೆಗೆ ಕೂಡಿಕೊಂಡು
ನಾನಾ ರೀತಿಯ ಬೇಕು ಬೇಡಗಳ ಗುರುತಿಸಿಕೊಂಡು
ಹೆಚ್ಚಾಗುತ್ತಿರುವ ಆಸೆಗಳು ಬೇಡಿಕೆಗಳಾಗಿ
ಬೇಡಿಕೆಗಳು ಪ್ರಕೃತಿಯ ಜೊತೆಗೆ ಕಾಲದ ಜೊತೆಗೆ ಸೇರಿಕೊಂಡು
ಆಸೆಗಳು ವರದಾನವಾಗಿ ಕಾಲವೇ ಮುಂದೆ ಬಂದು ನೀಡುತ್ತಿವೆ!

ಆಸೆ ಪಡುವುದು ಪ್ರಕೃತಿಯಿಂದ ಕಲಿತು
ಆಸೆ ಪಡೆದಾದ ಮೇಲೆ ತೃಪ್ತಿಯ ಅನುಭವಿಸಿ
ತೃಪ್ತಿಯ ನಿಟ್ಟುಸಿರು ಹೊಸ ಆಸೆಗಳನ್ನು ಚಿಗುರಿಸುತ
ಹೊಸ ಹೊಸ ಬಣ್ಣರಂಜಿತವಾದ ಆಸೆಗಳು
ಸಾಲು ಸಾಲಾಗಿ ಸೇರಿಕೊಳ್ಳುತ್ತಿರುವುದು ಆಸೆಗಳ ತಪ್ಪಲ್ಲ

ಯಾವ ಪಾಪವೂ ಮಾಡದಿರುವ ಆಸೆಗಳು
ತಾವೇ ಉತ್ತೇಜಿತರಾಗಿ ಆಸೆಗಳ ಮನದ ಬಯಕೆಗಳಾಗಿ
ತಮ್ಮ ಬಯಕೆಯನ್ನು ನಿಭಾಯಿಸುವ ಸಮಯದಲ್ಲಿ



ಬೇರೆಯವರಿಗೂ ಕೂಡ ಸಂತಸವನ್ನು ನೀಡುತ
ಸುಖಪಡುವ ಸಮಯದಲ್ಲಿ ಕಷ್ಟ ಕೆಲಸಗಳ ಅನುಭವಿಸಿ
ಸುಖ ಸಂತಸವು ತಾನಾಗಿ ಅಲೆಗಳಂತೆ ಬರುತ್ತಿರುವುದು!

ಬಂದ ಅಲೆಗಳಿಂದ ಹೊಸತನವ ಅನುಭವಿಸಿ
ನಮ್ಮ ಶರೀರ ಭಾವನೆ
ನಮ್ಮ ಸುಖ ತುಂಬಿರುವ ನೋಟಗಳು
ನಮ್ಮಿಂದ ಪ್ರತಿಬಿಂಬಿಸುತ್ತಿದೆ!

**- ಶ್ರೀ ಹರಿ.**

10-05-2012



www.sriharikhoday.com

## 245.

ನಮ್ಮನ್ನು ನಾವೇ ಸಮರ್ಪಿಸಿಕೊಂಡರೆ
ದೇವರಲ್ಲಿ ನಮ್ಮನ್ನು ಅರ್ಪಿಸಿಕೊಂಡಂತೆ
ನಮ್ಮಲ್ಲಿ ನಾವು ಸಾಧಿಸಿದ ಕೆಲಸದಲ್ಲಿ ಸಂತಸದಿ ಬೆರೆತರೆ
ನಾವು ದೇವರಲ್ಲಿ ಸಂತಸದಿಂದ ಬೆರೆತಂತೆ!

ಕನ್ನಡಿ ಜೊತೆಗೆ ಹತ್ತಿರ ನಾವು ಇರುವಂತೆ
ನಮ್ಮನ್ನು ಪ್ರಾಣದ ಜೊತೆಗೆ
ಜೊತೆ ಜೊತೆ ಜೀವಿಸುತ್ತಿರುವಂತೆ
ಜೊತೆ ಜೊತೆ ದೇವರು ಇರುವುದ ಅರಿತರೆ

ನಮ್ಮ ಮನೋ ಸಂಕಲ್ಪಗಳು ದೈವ ಸಂಕಲ್ಪಗಳಾಗಿ
ಸಂಕಲ್ಪಗಳು ಕಾರ್ಯಸಾಧನೆ ಆದ ಮೇಲೆ
ಸಂಕಲ್ಪಗಳೇ ಎದುರಿಗೆ ಬಂದು ಜಯವಾಗಿರುವ ಸಿದ್ಧಿಗೆ
ನಮ್ಮ ಮನವೇ ಶ್ಲಾಘಿಸುತ್ತದೆ!

ಸಿಗದೆ ದೂರ ಇರುವುದರ ಆಸೆ ಪಡದೆ
ಹತ್ತಿರದ ಇರುವಿಕೆಯಲ್ಲಿ ಸಂತಸ ಪಟ್ಟರೆ
ನಮ್ಮಲ್ಲಿ ಜೊತೆಯಿರುವ ಸಿರಿತನ ಮಿನುಗಿ
ಭ್ರಮೆಗಳನ್ನು ದೂರಪಡಿಸುತ್ತದೆ!

ಮನೋಸಂಕಲ್ಪದ ವಾತಾವರಣದಲ್ಲಿ
ಸಾಧನೆ ಮೇಲೆ ಸಾಧನೆಗಳನ್ನು ಸಾಧಿಸುತ



www.sriharikhoday.com

ನಾವು ಬೇಡದೆ ಜನಗಳು ಜಯ ಘೋಷಿಸುತ
ನಿಮ್ಮನ್ನು ಮೀರಿಸುವವರು ಯಾರಿಲ್ಲ ಎಂಬ
ಬಿರುದುಗಳಿಂದ ಹೊಗಳಿ

ನನ್ನ ಮನೋ ಹೊಸ್ತಿಲಿಗೆ
ಜನಗಳೇ ಬಂದು ಪ್ರೀತಿಯ ತೋರಣ ಕಟ್ಟುತ್ತಿದ್ದರೆ
ಈ ಸ್ಥಿತಿಯಲ್ಲಿ ಜೊತೆ ಇರುವ ದೇವರ ಜೊತೆ ಬಿಡದಿದ್ದರೆ
ಪೂರ್ಣತೆಯನ್ನು ಅನುಭವಿಸಲು ಸಾಧ್ಯ!

**- ಶ್ರೀ ಹರಿ.**

11-05-2012

## 246

ಭಯ ತಿಳಿಯದ ಭವಿಷ್ಯ ಕಾದು ನಿಂತಿದೆ
ಭವಿಷ್ಯವ ನಾವು ಕಾಣದೇ ಹೆದರಿ
ಹತ್ತಿರ ಬರುತ್ತಿರುವ ಭವಿಷ್ಯವನ್ನು
ದೂರ ತಳ್ಳುತ್ತಿದ್ದೇವೆ!

ಒಳ್ಳೆಯದಾಗುವುದೋ ಕೆಟ್ಟದಾಗುವುದೋ
ನನಗೆ ಸುಖ ಬರುವುದೋ ಕಷ್ಟ ಬರುವುದೋ
ಎಂಬ ದ್ವಂದ್ವ ಮನೋವೃತ್ತಿ
ನಮ್ಮ ಇರುವಿಕೆಯನ್ನು ನಮ್ಮ ನಿಜಸ್ಥಿತಿಯನ್ನು ಸಡಿಲಪಡಿಸಿ
ವಾತಾವರಣಕ್ಕೆ ಸರಿಯಾದ ಸಿದ್ಧತೆ ತಪ್ಪಿ ಹೋಗಿ
ಬಾಳಿನ ಹಳಿಯಿಂದ ತಪ್ಪಿಸುತ್ತಿದೆ!

ನನ್ನ ಸಂಸಾರವನ್ನು ಸರಿಪಡಿಸುವ ಪ್ರಯತ್ನ
ನನ್ನ ವ್ಯಾಪಾರ ಹೆಚ್ಚಿಸುವ ಪ್ರಯತ್ನ
ನನ್ನ ಆರೋಗ್ಯ ಸುಧಾರಿಸುವ ಪ್ರಯತ್ನ
ನನ್ನ ಸಮಾಜದ ಬಿರುದುಗಳ ಬಯಕೆಗಳ
ಪ್ರಯತ್ನ ಹೆದರಿಕೆಯನ್ನು ಮರೆತು
ನಮ್ಮ ಜೊತೆಗಿರುವ ದ್ವಂದ್ವ ಮನಗಳನ್ನು ಸರಿಪಡಿಸಿಕೊಂಡರೆ

ಭವಿಷ್ಯ ನಾವು ನೆನೆದು ರೂಪಿಸಿದ ಮಿತಿಗಳು ಹೆಚ್ಚಾಗಿ
ಸುಂದರವಾಗಿ ಹೆಜ್ಜೆ ಹೆಜ್ಜೆಗಳು - ಹೆಜ್ಜೆ ಹೆಜ್ಜೆಗಳಲ್ಲಿ
ಆನಂದ ನೀಡುವ ಜೀವನ
ಭವಿಷ್ಯದ ಜೊತೆಗೆ ಸೇರಿಕೊಳ್ಳುತ್ತದೆ!

**- ಶ್ರೀ ಹರಿ.**

12-05-2012



## 247

ಸಂತೆಯಲ್ಲಿ ಕಳೆದುಹೋಗಿರುವ ಅವಳ ಕಣ್ಣೋಟ
ಹುಡುಕುತ್ತಲೇ ಇರುವೆನು ಸಿಗುತ್ತಿಲ್ಲ!

ಅವಳ ಮುಗುಳ್ನಗೆ ಮರುಭೂಮಿಯಾಗಿದ್ದ ನನ್ನ ಮನಸ್ಸಿಗೆ
ನೀರಿನ ತೊಟ್ಟುಗಳು ಸಿಕ್ಕಿದಂತೆ

ಸಂತೆಯಲ್ಲಿ ಕಳೆದುಹೋಗಿರುವ ಅವಳ ಕಣ್ಣೋಟ
ಹುಡುಕುತ್ತಲೇ ಇರುವೆನು ಸಿಗುತ್ತಿಲ್ಲ!

ಕ್ಷಣದಲ್ಲಿಯೇ ಮಿಂಚಿನಂತೆ ಹರಿದಾಡಿದ ಪ್ರೇಮದ ರಸಿಕತೆ
ಹತ್ತಿರವೇ ದೊರಕಿದ್ದು ಕಳೆದುಹೋಗಿದೆ
ಯಾವ ಊರೋ ಯಾವ ಹಳ್ಳಿಯೋ
ಏನನ್ನು ಕೊಳ್ಳಲು ಬಂದಳೋ ಅರಿಯದೆ
ಬೆಲೆ ಕಟ್ಟದೆ ನನ್ನ ಮನಸ್ಸನ್ನು ಕೊಂಡು ಹೋಗಿದ್ದಾಳೆ

ಸಂತೆಯಲ್ಲಿ ಕಳೆದುಹೋಗಿರುವ ಅವಳ ಕಣ್ಣೋಟ
ಹುಡುಕುತ್ತಲೇ ಇರುವೆನು ಸಿಗುತ್ತಿಲ್ಲ!

ಕ್ಷಣ ನೋಟದಲ್ಲೇ ಅವಳು ಬೆಳೆಸಿದ ನಂಟು
ಬೆರೆತ ಕಣ್ಣೋಟಗಳ ನಗೆ ವಿರಹದ ಕಣ್ಣೀರು ಹರಿಸುತ್ತಿದೆ
ಹೆಸರೇ ತಿಳಿಯದ ವಿಳಾಸವೇ ತಿಳಿಯದ
ಅವಳ ಕಣ್ಣೋಟದ ಪ್ರೇಮದ ಬಣ್ಣಗಳಿಗೆ ಹುಡುಕುತ್ತಲೇ
ನಡೆದಿದೆ ಈ ನನ್ನ ಜೀವನ!

ಸಂತೆಯಲ್ಲಿ ಕಳೆದುಹೋಗಿರುವ ಅವಳ ಕಣ್ಣೋಟ
ಹುಡುಕುತ್ತಲೇ ಇರುವೆನು ಸಿಗುತ್ತಿಲ್ಲ!

**- ಶ್ರೀ ಹರಿ.**

15-05-2012



www.sriharikhoday.com

## 248

ಜಗತ್ತಿನಲ್ಲಿ ಎಲ್ಲರ ಮನಸ್ಸುಗಳು
ಬೇರೆ ಬೇರೆ ಸಂಗೀತದ ವಾದ್ಯಗಳು
ಎಲ್ಲರ ಮನಸ್ಸುಗಳು ಒಂದಾದರೆ ಅದು ಇಂಪಾದ ಸಂಗೀತ
ಎಲ್ಲರ ವಾದ್ಯಗಳಿಗೆ ಒಂದು ನ್ಯಾಯ ಶೃತಿ ತಂಬೂರಿ ಅವಶ್ಯಕತೆ
ಆ ವಾದ್ಯವೇ ಅವಧೂತವಿನ ಮನದಾಳದ ಅವತಾರ!

ನನ್ನ ಮನದಲ್ಲಿ ಅಪಸ್ವರ ಇಲ್ಲದ್ದಲ್ಲಿ
ಜೀವನದಲ್ಲಿ ಸ್ವರದ ನಾದ ತುಂಬಿಕೊಂಡರೆ
ಜೊತೆಗೆ ಜಗತ್ತಿನ ಇಂಪಾದ ನಾದ ಸಂಗೀತವಾದರೆ
ಕಾಲವೇ ಹೆಜ್ಜೆ ಹಾಕುತ ತಾಳ ಹಾಕುತ್ತಿದ್ದರೆ
ಯಾರಿಗೂ ಕಷ್ಟಗಳು ಮನಸ್ಸಿಗೆ ಭಾಸವಾಗುವುದಿಲ್ಲ!

ಶೃತಿಯ ತೇಲಿಸುತ್ತಿರುವ ತಂಬೂರಿಯ ನಾದ
ಕಾಣದ ಅವಧೂತನ ನಾದ
ಅವನ ಹುಡುಕಾಟವೇ ಗುರುವಿನ ಹುಡುಕಾಟ
ಜೀವನದಲ್ಲಿ ಇಂಪನ್ನು ಅನುಭವಿಸಲು ಇಚ್ಛೆಪಟ್ಟರೆ
ತಾಳಬದ್ಧವಾದ ಜೀವನದ ಅನುಸರಿಸುವಿಕೆ

ಜೊತೆ ಜೊತೆಗೆ ವಾದ್ಯಗೋಷ್ಠಿಯ ಸದ್ದು
ಎಲ್ಲರ ಮನಗಳಲ್ಲಿ ಹರುಷ ತುಂಬಿ
ಎಲ್ಲರಿಗೂ ಸಂತಸ ಪಡಿಸುತ್ತ
ಎಲ್ಲರಲ್ಲಿಯೂ ಹರುಷ ತುಂಬಿಸುತ್ತಾ
ಸಂತಸದಿ ಕುಣಿಯುತ್ತಿದ್ದರೆ
ಎಲ್ಲೋ ಒಂದೆಡೆ ಗುರುಗಳ
ಇಂಪಾದ ತಂಬೂರಿ ಮೀಟಿದಂತಿದೆ

**- ಶ್ರೀ ಹರಿ.**

20-05-2012



## 249

ಮನಸ್ಸಿನ ಹರಕೆಗಳು ದೇವರ ಇಚ್ಛೆಗಳು
ಮನಸ್ಸಿನ ಅನಿಸಿಕೆಗಳು ಭವಿಷ್ಯದ ಪದರಗಳು
ಮನಸ್ಸೇ ಜಗತ್ತು, ಜಗತ್ತೇ ಮನಸ್ಸಿನ ಬೇಡಿಕೆಗಳು
ಮನಸ್ಸು ಮಾತ್ರ ಭವಿಷ್ಯವನ್ನು ರೂಪಿಸಬಲ್ಲದು!

ಮನಸ್ಸಿಲ್ಲದೆ ಸುಖ ಜೊತೆ ಬರಲು ಸಾಧ್ಯವಿಲ್ಲ
ಮನಸ್ಸು ಇಲ್ಲದೆ ಕಷ್ಟಗಳನ್ನು ಮರೆಸಲು ಆಗದು
ಮನಸ್ಸೇ ಎಲ್ಲ ಸುಖ ಬಯಕೆಗಳನ್ನು ತೀರಿಸಬಲ್ಲದು
ಮನಸ್ಸಿದ್ದಲ್ಲೇ ಮಹದೇವ ಎನ್ನುವರು ಜ್ಞಾನಿಗಳು

ಮನಸ್ಸೇ ಭಕ್ತಿಯ ಮೂಲ
ಮನಸ್ಸೇ ದೇವರನ್ನು ಬೆರೆಸುವ ಪ್ರಚೋದನೆ
ಮನಸ್ಸಿಗೆ ಚಾಂಚಲ್ಯವನ್ನು ಮರೆಸಿ
ಶಬ್ದಸ್ಥಿತಿಯ ಕಲೆ ಕಲಿಸಿದರೆ ಮನಸ್ಸಿನ ಕಲ್ಪನೆ
ಸಿದ್ಧಿಯ ಎದುರಿಗೆ ನಿಲ್ಲುವುದು

ಮನಸ್ಸೇ ದೇವರು ನೀಡಿರುವ ಅಪೂರ್ವ ಆಶೀರ್ವಾದ
ಬೇರೆಯವರ ಕಷ್ಟಗಳು ನಿವಾರಣೆಯಾಗಲಿ ಎಂಬ ಮನಸ್ಸು
ಬೆಳೆಯುತ್ತಿರುವ ಜಗತ್ತಿನ ಪ್ರಗತಿಗೆ ಮನಸ್ಸಿನ ಒಲವು ಇದ್ದಲ್ಲಿ
ಅಣ್ಣ-ತಮ್ಮ ಅಕ್ಕ- ತಂಗಿಯರ ಜೊತೆ
ಮನಸಾರೆ ಜಗತ್ತಿನ ಜೊತೆಗೆ ಜೀವಿಸುತ್ತಿದ್ದರೆ

ಮುಂಬರುವ ಎಲ್ಲಾ ಭವಿಷ್ಯಕ್ಕೆ
ಭವಿಷ್ಯ ನಮ್ಮನ್ನು ಶುಭಕೋರುತ್ತಿರಲು
ಮನಸ್ಸಿನ ಶಕ್ತಿಯನ್ನು ನಿಶ್ಯಬ್ದದಲ್ಲಿ ಬೆರೆಸಿ ಹೆಚ್ಚಿಸೋಣ

**- ಶ್ರೀ ಹರಿ.**

22-05-2012



www.sriharikhoday.com

## 250

ಅನ್ನದ ಕಾಳಿಗೆ ಇರುವ ಬೆಲೆ ನಾಣ್ಯಕ್ಕಿಲ್ಲ
ಪ್ರೀತಿ ಮತ್ತು ಮಮತೆಯನ್ನು ಹಣದಿಂದ ಕೊಳ್ಳಲಾಗುವುದಿಲ್ಲ
ಹಣ ಕೊಟ್ಟು ಪ್ರೀತಿ ಮತ್ತು ಪ್ರಖ್ಯಾತಿಗಳನ್ನು ಕೊಳ್ಳುವುದು
ಬೆಂಕಿಯನ್ನು ಕೊಳ್ಳುವಂತೆ!

ಶ್ರಮದಿಂದ ಬೆಳೆಯುವ ಬೆಳೆ
ತ್ಯಾಗದಿಂದ ಬೆಳೆಯುವ ಪ್ರೀತಿ ಮತ್ತು ಪ್ರಾಮಾಣಿಕತೆ
ತಾನು ತನ್ನದು ಮರೆತಿರುವ ಸರಳ ಜೀವನದ ರೀತಿ
ಎಂದೂ ಕೊಳೆಯಲಾಗದ ಹಣವನ್ನು ಮೀರಿಸುವ ಆಸ್ತಿ

ಸತ್ಯದ ಹಾದಿಯಲ್ಲಿ ನಡೆದು
ಸತ್ಯವನ್ನೇ ನುಡಿಯುತ
ಪ್ರೀತಿ ಮಮತೆಯ ಬೆಳೆ ಬೆಳೆಸಿದರೆ
ನಿನಗೆ ಯಾರೂ ಕೈಬೆರಳುಗಳನ್ನು ತೋರಿಸದೆ

ನಿನಗೆ ನೋಡಿದಾಗೆಲ್ಲ ಸಮಾಜ ಆದರದಿಂದ ಕೈಮುಗಿದು
ಅವರುಗಳ ಜೀವನಕ್ಕೆ ನಾವೇ ರಹದಾರಿಗಳಾಗಿ
ಸುಖದ ಸಂಪತ್ತಿನ ಸಂಪಾದನೆ
ಸಮಾಜದಲ್ಲಿ ದಿನೇ ದಿನೇ ಹೆಚ್ಚುವುದು!

**- ಶ್ರೀ ಹರಿ.**

25-05-2012



www.sriharikhoday.com

## 251

ಶರೀರ ಮಣ್ಣು ನಾರಾಯಣ
ಹುಟ್ಟು ಸಾವು ನಾರಾಯಣ
ಸಂತೋಷ ದುಃಖ ನಾರಾಯಣ
ಜೀವನ ತ್ಯಾಗ ನಾರಾಯಣ
ರೂಪ ಸ್ವರೂಪ ನಾರಾಯಣ

ನೋವು ನಲಿವು ನಾರಾಯಣ
ಪ್ರೀತಿ ದ್ವೇಷ ನಾರಾಯಣ
ಸುಖ ದುಃಖ ನಾರಾಯಣ
ಬದುಕು ಸಾವು ನಾರಾಯಣ
ಹತ್ತಿರ ದೂರ ನಾರಾಯಣ

ಕನಸು ನನಸು ನಾರಾಯಣ
ದೇವರು-ಗುರು ನಾರಾಯಣ
ಗುರು ಶಿಷ್ಯರು ನಾರಾಯಣ
ಸಂಬಂಧಗಳು ನಾರಾಯಣ
ಬರುವುದು ಹೋಗುವುದು ನಾರಾಯಣ

ಕಷ್ಟ ನಷ್ಟಗಳು ನಾರಾಯಣ
ಹೂವು ಮುಳ್ಳು ನಾರಾಯಣ
ಆಸೆ ನಿರಾಸೆಗಳು ನಾರಾಯಣ
ಸೋಲು ಗೆಲುವು ನಾರಾಯಣ
ಕತ್ತಲು ಬೆಳಕು ನಾರಾಯಣ

ಶಾಂತಿ ಚಾಂಚಲ್ಯ ನಾರಾಯಣ
ಬರುವುದು ಕಳೆದು ಹೋಗುವುದು ನಾರಾಯಣ
ಜೊತೆ ಅಜ್ಜ-ಅಜ್ಜಿ ನಾರಾಯಣ
ಅಪ್ಪ ಅಮ್ಮ ನಾರಾಯಣ
ಬಂಧುಗಳು ಮಿತ್ರರು ನಾರಾಯಣ

ಮಿತ್ರರು ಶತ್ರುಗಳು ನಾರಾಯಣ
ಸ್ವರ್ಗ ನರಕ ನಾರಾಯಣ
ಇವರು ಅವರು ಜೊತೆಗೆ ನಾರಾಯಣ
ಬಾಧೆಗಳು ನಾರಾಯಣ
ನೀರು ಮರುಭೂಮಿ ನಾರಾಯಣ

ಹಸಿವು ತೃಪ್ತಿ ನಾರಾಯಣ
ಪತಿ ಪತ್ನಿ ನಾರಾಯಣ
ಗಂಡು ಹೆಣ್ಣು ನಾರಾಯಣ
ಆಗುವುದು ಹೋಗುವುದು ನಾರಾಯಣ
ಶಬ್ದ-ನಿಶ್ಶಬ್ದ ನಾರಾಯಣ

ಹೆಚ್ಚು ಕಡಿಮೆ ನಾರಾಯಣ
ಎತ್ತರ ಆಳ ನಾರಾಯಣ
ದೂರ ಹತ್ತಿರ ನಾರಾಯಣ
ತ್ಯಾಗಿ ಭೋಗಿ ನಾರಾಯಣ
ಆಕಾಶ ಶೂನ್ಯ ನಾರಾಯಣ

ಗೆಳೆಯ ಗೆಳತಿಯು ನಾರಾಯಣ
ದ್ವೇಷ ಪ್ರೀತಿ ನಾರಾಯಣ
ಅಸೂಯೆ ಪ್ರೇಮ ನಾರಾಯಣ
ರಾಜ ಪ್ರಜೆ ನಾರಾಯಣ
ಉಸಿರು - ನಿಟ್ಟುಸಿರು ನಾರಾಯಣ



www.sriharikhoday.com

ಭೋಗಿ-ರೋಗಿ ನಾರಾಯಣ
ಬೆಳೆ ಬರಗಾಲ ನಾರಾಯಣ
ಹೂವು ಹಣ್ಣು ನಾರಾಯಣ
ಮಳೆ ಬೆಳೆ ನಾರಾಯಣ
ಕಳೆ ಬೆಳೆ ನಾರಾಯಣ

ಸಿಡಿಲು ಕಡಲು ನಾರಾಯಣ
ಕಡಲಿನ ಅಲೆಗಳು ಮನಸ್ಸಿನ ಬೆಲೆಗಳು ನಾರಾಯಣ
ಬಣ್ಣ ಬಣ್ಣಗಳು ನಾರಾಯಣ
ಕುರುಡು ದೃಷ್ಟಿ ನಾರಾಯಣ
ಶಕ್ತಿ ನಿಶ್ಶಕ್ತಿ ನಾರಾಯಣ

ಗುರಿ ಸಾಧನೆ ನಾರಾಯಣ
ಸೃಷ್ಟಿ ಲಯ ನಾರಾಯಣ
ಎಲ್ಲರಲ್ಲೂ ಸತ್ಯವಾಗಿ ಇರುವುದು
ಸತ್ಯದ ಜೊತೆಗೆ ನಾರಾಯಣ
ಅದುವೇ ಶ್ರೀಮನ್ ನಾರಾಯಣ

**- ಶ್ರೀ ಹರಿ.**

29-05-2012

## 252

ಅನಂತವನ್ನು ಹಂತ ಹಂತದಲ್ಲಿ ನೋಡುವುದೇ
ಜೀವನ !
ಬರಿ ಉಸಿರಾಡುತ್ತ ಉಂಡು ನಿದ್ರಿಸುವುದು
ಜೀವನವಲ್ಲ!

ಅನಂತವನ್ನು ತನ್ನಲ್ಲಿ ತುಂಬಿಕೊಂಡು
ಬಿಡಿ ಬಿಡಿಯಾಗಿ ಮನದ ಕಣ್ಣು ನೋಡುವುದೇ ಜೀವನ !
ನೋಟ ಬರಿ ನೋಟವಾಗದೆ
ನೋಟದ ಬಣ್ಣಗಳಲ್ಲಿ ಬೆರೆತು ಅನುಭವಿಸುವುದೇ ಜೀವನ

ಜೊತೆಗಿರುವ ಜಗತ್ತಿನಲ್ಲಿ ಆಗು-ಹೋಗುಗಳ ಅರಿತು
ಅನಂತದ ಶಕ್ತಿಯನ್ನು ತಮ್ಮ ವ್ಯಕ್ತಿತ್ವವಿಲ್ಲದೆ ಸರಳವಾಗಿ
ಜಗತ್ತಿನ ಬೇಡಿಕೆಗಳಲ್ಲಿ ಕ್ರಿಯಾಶೀಲರಾಗುವುದೇ ಜೀವನ !

ಎಲ್ಲರಲ್ಲಿರುವ ವಿಶ್ವ ಶಕ್ತ ಆತ್ಮನಲ್ಲಿ ಬೆರೆತುಹೋಗಿ
ಭೂತ-ಭವಿಷ್ಯ ವರ್ತಮಾನಗಳನ್ನು ನೆನೆಸುತ್ತ
ನಮ್ಮ ಕ್ರಿಯೆಗಳಲ್ಲಿ ಸಮಾಜವನ್ನು ಉಪಯೋಗಿಸಿಕೊಂಡು
ಮುನ್ನಡೆಸುವುದೇ ಜೀವನ !

ಉದಯವಾಗಿರುವ ನಾವುಗಳು ಅಸ್ತಮವಾಗುವ ಮೊದಲು
ಉಸಿರಾಡುತ್ತಿರುವ ನಾವುಗಳು ಅನಂತದ ಪ್ರಭೆಯನ್ನು
ಜಗತ್ತಿಗೆ ಚೆಲ್ಲಿ ನಮ್ಮಲ್ಲಿ ಉದ್ಭವವಾಗಿರುವ
ಒಳ್ಳೆ ಉದ್ದೇಶದ ಬೆಳೆ ಬೆಳೆಸುವುದೇ ಜೀವನ !

**- ಶ್ರೀ ಹರಿ.**

30-05-2012



## 253

ಆಕಾಶದಲ್ಲಿರುವ ದೇವರೇ
ಬೇಡಲು ತಿಳಿಯದ ಮುಗ್ಧ ಮನದ
ಅನಿಸಿಕೆಗಳನ್ನು ಈಡೇರಿಸು !

ಎಲ್ಲವೂ ನಿನಗೆ ತಿಳಿದಿದೆ ಎನ್ನುವರ ಮಾತು ಸುಳ್ಳಾಗದೆ
ಹಸಿದ ಹೊಟ್ಟೆಗೆ ಕೂಳು ನೀ ಕೊಡಲು ಗೋಳಾಡಿಸದೆ
ಏಕೆ ಹಸಿವಾಗುತ್ತಿದೆ ಎಂದು ತಿಳಿಯದ
ಮುಗ್ಧ ಮನಸ್ಸುಗಳಿಗೆ
ಅವರ ಬಯಕೆಗಳನ್ನು ಈಡೇರಿಸು !

ಸುಮ್ಮನೇ ಇದ್ದು ಹರಡಿಕೊಳ್ಳುತ್ತಿರುವ ರೋಗಗಳು
ಸುಮ್ಮನೇ ಇದ್ದರೂ ಬೇರೆಯವರ ಜಗಳಗಳು ನಮ್ಮ ಜಗಳಗಳಾಗಿ
ಯಾರೋ ಮಾಡಿದ ತಪ್ಪಿಗೆ
ಬಡತನ ಕಷ್ಟ ಅನುಭವಿಸುತ್ತಿರುವುದ ನಾ ಕಂಡು
ತಿಳಿದು ತಿಳಿಯದಂತೆ ಏಕೆ ನೀ ಸುಮ್ಮನಿರುವೆ!

ಸೂರ್ಯ ಚಂದ್ರ ನಕ್ಷತ್ರಗಳು ಬೇಡಿಕೆಯಿಲ್ಲದೆ ಜೀವಿಸುತ್ತಿರುವುದ
ಕಂಡರೆ
ನಿನ್ನ ಬ್ರಹ್ಮಾಂಡದಲ್ಲಿ ಚುಕ್ಕಿಯಾದ ಈ ಜಗತ್ತಿನ ಮೇಲೆ
ನಿನ್ನ ಗಮನ ಹರಿಸಿ
ನಿನ್ನ ಸುಮ್ಮನಾಗಿರುವ ಭಾವನೆಯಿಂದ ಹೊರಬಂದು
ಬಡತನ ಸಿರಿತನವೆಂಬ ಭಾವನೆ ಬರಿಸದೆ!



www.sriharikhoday.com

ಬೇಸತ್ತಿರುವ ಮಾನವ ಕೋಟಿ ಸುಖವಾಗಿ ಜೀವಿಸಲು
ನಿನ್ನ ಸೃಷ್ಟಿಗೆ ಕೆಟ್ಟ ಹೆಸರು ಬರದಂತೆ
ಇಂದಿನಿಂದ ನೀ ಮರೆತಿರುವ ಜಗತ್ತಿನ ಕಷ್ಟಗಳಿಗೆ
ಸುಖದ ರೂಪವನ್ನು ಕೊಟ್ಟು ದ್ವಂದ್ವ ಆಶೀರ್ವಾದವಿಲ್ಲದಂತೆ
ಸಮಭಾವನೆಯ ಬೆಳಕನ್ನು ಬೆಳಗಿಸು ದೇವರೇ!

**- ಶ್ರೀ ಹರಿ.**

01-06-2012



www.sriharikhoday.com

## 254

ನಿನಗೆ ಕೋಪ ಬಂದರೆ
ಕೋಪದ ಬೆಂಕಿಯ ಹೊಗೆ ನಿನಗೆ ಒಂದು ದಿನ
ಕಣ್ಣೀರು ತರಿಸುತ್ತದೆ!

ಸಾಲು ಸಾಲು ನೆನಪುಗಳು ಕಾದು ನಿಂತಿದ್ದರೆ
ನಾ ಮುಂದೆ, ನೀ ಮುಂದೆ ಎಂಬ ನೆನಪುಗಳ ಜಗಳ
ನೀ ಅದರರ್ಥ ತಿಳಿಯದೆ
ಒಲೆಯ ನೀರು ಕಾಯಿಸುವ ಹಾಗೆ
ಕುದಿಯುತ್ತ ಗುಳ್ಳೆಗಳು ಹೊರ ಬರುವಂತೆ

ಕೋಪ ಹೊರ ಬಂದು ಬೇರೆಯವರ
ಮನಸ್ಸಿಗೆ ನೋವು ನೀಡಿ
ಅದರಿಂದ ನೀ ಪಡೆಯುವ ಕಷ್ಟಗಳು
ನಿನ್ನ ಕಣ್ಣಲ್ಲಿ ಕಣ್ಣೀರು ಹರಿಸುತ್ತದೆ!

ಅವರ ಕಷ್ಟ ಅವರದು ಎಂಬ ಮನಸ್ಸಿನ ಮಾತು
ನಮ್ಮ ಕಷ್ಟ ನಮ್ಮದೆನ್ನುವ ಮನಸ್ಸಿನ ಮಾತು
ನಾವು ಜೊತೆ ಮಾನವನಾಗದೆ
ನೀ ಬೇರೆ ನಾ ಬೇರೆ
ಅದರ ಸತ್ಯದ ಆಳವನ್ನರಿಯದ ನಾವುಗಳು
ಕೋಪದ ಮಾರ್ಗವ ಹಿಡಿದು

ಈ ಮಾರ್ಗದಲ್ಲಿ ಕೋಪಿಷ್ಟರಾಗಿ ಹೋದವರೆಲ್ಲರೂ
ಮತ್ತೆ ಹಿಂತಿರುಗಿ ಬರಲು ತಿಳಿಯದೆ
ಕೋಪದಿಂದ ಜೀವಿಸುವವರೆಲ್ಲ ಸತ್ಯವನ್ನರಿಯದೆ
ಮತ್ತೆ ಹಿಂತಿರುಗಿ ಬರಲೇ ಇಲ್ಲ.

**- ಶ್ರೀ ಹರಿ.**

02-06-2012

## 255

ಸಾವು ಹುಟ್ಟುವುದಕ್ಕೆ ಕಾರಣವಾದರೆ
ಹುಟ್ಟು ಸಾವನ್ನು ಜೊತೆಗೆ ತರುವುದು!

ಅಸೂಯೆ ಕೋಪಕ್ಕೆ ಕಾರಣವಾದರೆ
ಶಾಂತಿ ಮತ್ತು ಪ್ರೀತಿ ಜೀವನಕ್ಕೆ ಸೊಗಸನ್ನು ತರಿಸುವುದು!

ಜಗಳಗಳು ಹೊಡೆದಾಟಗಳಿಗೆ ಕಾರಣವಾದರೆ
ಗೆಳೆತನ ಪ್ರೀತಿಯಿಂದ ಬಾಂಧವ್ಯವನ್ನು ಬೆಳೆಸುವುದು !

ಬೇಸರ ಸಂಸಾರದಲ್ಲಿ ಸಂಬಂಧಗಳು ಕಷ್ಟಕ್ಕೆ ಕಾರಣವಾದರೆ
ತುಟಿಯ ಮೇಲಿನ ನಗೆ
ಪ್ರೀತಿ ತುಂಬಿದ ಕಣ್ಣೋಟ
ಮರುಕ್ಷಣವೇ ಸುಖವನ್ನು ತರಿಸುವುದು !

ಅದಿಲ್ಲ ಇದಿಲ್ಲ ಎಂಬುದು ಸಂಕಟಕ್ಕೆ ಕಾರಣವಾದರೆ
ದೇವರಿಂದಾದ ನಾವು ನನಗೂ ಸಿಗಬಹುದು
ಎಂಬ ನಂಬಿಕೆ ಜೀವನದಲ್ಲಿ ಸುಖ ಸಂತಸದ ಜೊತೆಗೆ
ಸುಖದ ಬಾಳು ತರಿಸುವುದು !

ನನ್ನ ಕೈಯಿಂದ ಆಗುವುದಿಲ್ಲ ನನಗೆ ಆ ಶಕ್ತಿಯೇ ಇಲ್ಲ ಎಂದು
ಮನೋ ನಿಶ್ಶಕ್ತಿ ಕಾರಣವಾದರೆ
ನಮ್ಮ ಮನಸ್ಸಿನ ನೆನಪುಗಳ ಕಲ್ಪನೆಯೆಂದು
ನಿರಾಸಕ್ತಿ ನಮ್ಮ ಮನಸ್ಸಿನ ಚೇಷ್ಠೆ ಎಂದು ತಿಳಿದರೆ

ಎಂದೂ ತಿಳಿಯದ ಮನದಲ್ಲಿ ಹೊಸತನವನ್ನು ಮೂಡಿಸಿ
ಸಾಧನೆಗೆ ಹೊಸ ಶಕ್ತಿಯನ್ನು ತರಿಸುವುದು !

**- ಶ್ರೀ ಹರಿ.**

04-06-2012



## 256

ಹಳೆಯದನ್ನು ನೆನೆಯುತ್ತ ನೆನೆಪು ಎನ್ನದೆ
ಹೊಸತನ್ನು ಹಳೆಯ ಬುನಾದಿ ಮೇಲೆ ಇದೆ ಎನ್ನುತ
ಇಂದು ನಾಳೆಗಳ ಹಾದಿಯಲ್ಲಿ
ಪ್ರೀತಿ ತುಂಬಿದ ಹೆಜ್ಜೆಗಳ ಹಾಕುತ
ಜೀವನ ರಸ್ತೆಯಲ್ಲಿ ಬರುವವರು ಹೋಗಿರುವವರು

ಇರುವವರು ನಮ್ಮ ಜೊತೆಗಿಲ್ಲದವರ ನೆನಪುಗಳು
ಅವರ ನೆನಪಿನಿಂದ ನಮ್ಮ ಪ್ರೀತಿಯಿಂದಲೇ
ಪ್ರೀತಿಯನ್ನು ನೀಡುತ್ತ
ಪೂರ್ಣ ಭಾವನೆಯಿಂದ ಹೊಸ ಕೆಲಸಗಳಲ್ಲಿ ಜೊತೆ ಸೇರಿ
ಸಾಧನೆಗಳು ಹಳೆ ನೆನಪುಗಳ ಬೆಳೆ ಎನ್ನುತ
ಅಂತರಾಳದಲ್ಲಿ ಗೌರವಿಸುತ್ತಿದ್ದರೆ

ಜನಗಳೇ ನೆನೆಯುವ ಇತಿಹಾಸ
ಈ ಹೊಸ ಕಟ್ಟಡ
ಹಳೆಯ ಬುನಾದಿ ಮೇಲೆ ಕಟ್ಟಿದರೆ ಆ ಕಟ್ಟಡ
ಮನೋಭಾವನೆಗಳ ಕಟ್ಟಡಗಳು
ಕಾಲ ಮೀರಿ ಬಾಳುವುದು

**- ಶ್ರೀ ಹರಿ.**

05-06-2012



www.sriharikhoday.com

## 257

ಎಣ್ಣೆಯಿಂದ ಬತ್ತಿ ಬತ್ತಿಯಿಂದ ದೀಪ
ದೇವರಿಂದ ಕಾಲ ಕಾಲದಿಂದ ಜೀವನ
ಉರಿಯುತ್ತಿರುವ ದೀಪಕ್ಕೆ ಏನೂ ದ್ವೇಷವಿಲ್ಲದೆ
ಸುಖವಾಗಿ ಉರಿಯುತ್ತಿರುವಂತೆ
ಜೀವಿಸುತ್ತಿರುವವರಿಗೆ ಏಕೆ ದ್ವೇಷ? ಎಲ್ಲಿಯ ಸುಖದ ಬಯಕೆ?

ಉರಿಯುತ್ತಿರುವ ದೀಪ ಬೆಳಕು ಹರಿಸಿದರೆ
ಉರಿದು ಉರಿದು ತಾನು ಬೆಳಕು ನೀಡುತ್ತಿರುವೆನೆಂದು ಹೇಳದೆ
ಉರಿಯುತ್ತಿರುವ ದೀಪವ ನೋಡಿ
ನಾವುಗಳು ಇದು ಮಾಡಿದ್ದೀವಿ ಅದು ಮಾಡಿದ್ದೇವೆ
ಎಂಬ ಅಹಂಕಾರ
ನಮ್ಮ ಜೀವನದ ಮೌಲ್ಯದ ಬೆಳಕನ್ನು ಪ್ರಕಾಶಿಸುತ್ತಿಲ್ಲ!

ಅಹಂಕಾರವಿಲ್ಲದೆ ನೆಮ್ಮದಿಯ ಅಸೂಯೆಗಳಿಲ್ಲದ
ನಿರಾಳ ಭಾವನೆಯ ದೇವರಿಂದಾದ ನಾವು
ಬೇರೆಯವರ ಸುಖದಲ್ಲಿ ನಮ್ಮ ಆನಂದ ಸುಖ ಪಡೆಯುತ್ತ
ಎಣ್ಣೆಯಿರುವವರೆಗೂ ಬೆಳಕು ಎಂಬ ಅರಿವು ದೀಪಕ್ಕಿರುವಾಗ
ದೇವರ ಕೃಪೆಯಿರುವವರೆಗೂ ಕಷ್ಟ ಪಡುತ್ತ
ಜೀವ ಇರುವವರೆಗೂ ಜೀವನ ಎಂದು ತಿಳಿಯುವ

ಕಣ್ಣಿಗೆ ಕಾಣುವ ಸತ್ಯಗಳನ್ನು ಮನಸಾರೆ ತುಂಬಿಕೊಂಡು
ಕಿವಿಗೊಡುವ ಮಾತುಗಳಿಗೆ ಮನಸಾರೆ ಸ್ವೀಕರಿಸಿ
ತನಗೆ ಬರುವ ಕೆಲಸಗಳನ್ನು ದೇವರ ಕೆಲಸಗಳೆನ್ನುತ
ಕಾಲದ ಜೊತೆ ಇರುವ ದಿನಗಳಲ್ಲಿ
ನಿರಾಳ ತ್ಯಾಗ ಸತ್ಯದ ಭಾವನೆಗಳ ಜೊತೆಗೆ
ಜೀವನ ಸಾಗಿಸೋಣ

**- ಶ್ರೀ ಹರಿ.**

06-06-2012



## 258

ಯಾರು ಮೊದಲಿಗರು ಯಾರು ದೊಡ್ಡವರು ?
ಜೀವನದ ನೆನಪಿನ ಜಾತ್ರೆಯಲ್ಲಿ ತನ್ನನ್ನು ತಾನೇ ಮಾರಿಕೊಳ್ಳುವ
ಜೀವನದ ಇರುವಿಕೆಯನ್ನೇ ಮಾರಿಕೊಳ್ಳುವ ವೇದಿಕೆ
ಯಾರು ಮೊದಲಿಗರೋ ಯಾರು ದೊಡ್ಡವರೋ!

ವಿಶ್ವವನ್ನೇ ನಿರ್ಮಿಸಿರುವ ದೇವರೇ ತಾನು ಯಾರೆಂದು
ಹೇಳಿಕೊಳ್ಳದೆ
ವಿಶ್ವವನ್ನೇ ನಡೆಸುತ್ತಿರುವ ದೇವ
ತಾನು ದೊಡ್ಡವನು ಎಂದು ಹೇಳಿಕೊಳ್ಳದೆ
ವಿಶ್ವದ ಗಾತ್ರದಲ್ಲಿ ಮಾನವ
ಅಣುವಿನಲ್ಲಿ ಅಣುವಾಗಿರುವ ನಾವುಗಳು

ಶುಭ್ರವಾದ ನೆನಪುಗಳನ್ನು
ಜಾತ್ರೆಯಲ್ಲಿ ಕಳಪೆ ಮಾತುಗಳನ್ನಾಡುತ್ತ
ನಾನು ದೊಡ್ಡವನು ನಾನು ಮೊದಲಿಗನೆಂದು
ಜಾತ್ರೆಯಲ್ಲಿ ಎಲ್ಲರೂ ಕೇಳಿಸಿಕೊಳ್ಳುವಂತೆ
ಕುಣಿದು ಕುಣಿದು ಕುಪ್ಪಳಿಸುತ್ತಿರುವುದು
ಒಂದು ಸೋಜಿಗವೇ ಸರಿ!

ದೇವರ ಸೃಷ್ಟಿಯನು ನಮಿಸಿ ವಂದಿಸುವವನೇ ದೊಡ್ಡವನು
ದೇವರ ಸ್ವರೂಪವನ್ನು ಮನದ ಆಳದಲ್ಲಿ ನೋಡಿರುವವನೇ
ದೊಡ್ಡವನು
ಅತಿ ದೊಡ್ಡದಾದ ದೇವರ ಪ್ರಮಾಣದಲ್ಲಿ ಕರಗಿ ಹೋಗಿರುವವನೇ
ದೊಡ್ಡವರಿಗಿಂತ ಅತಿ ದೊಡ್ಡವನು!

**- ಶ್ರೀ ಹರಿ.**

07-06-2012



www.sriharikhoday.com

# 259

ಎಂದಿಗೂ ನನಗೆ ಎಲ್ಲಾ ತಿಳಿದಿದೆ ಎಂದು ತಿಳಿಯದೆ
ದಿನವೂ ಸೂರ್ಯನಿಂದ ವಾರ್ತೆಗಳ ಕೇಳಿಕೊಂಡು
ವಾರ್ತೆಗಳ ಸತ್ಯವನ್ನು ಜೀವನದಲ್ಲಿ ಅಳವಡಿಸಿದರೆ
ಬೇರೆಯವರ ಕಣ್ಣಿಗೆ ನೀವು ಮತ್ತು ನಿಮ್ಮ ಮನಕ್ಕೆ
ಸುಂದರ ಜೀವನ!

ಹೊಸತನ್ನು ತಿಳಿಯಬೇಕೆಂಬ ಹಂಬಲ ನಿಜ
ನನಗೆ ಏನು ತಿಳಿದಿದೆ ನನಗೇನು ತಿಳಿಯಬೇಕೆಂಬ
ಮನದ ಪಟ್ಟಿ
ನನಗೆ ಏನು ದೇವರು ನೀಡಿರುವರು ನನಗೆ ಮತ್ತೆ ಏನು ಬೇಕು
ನಿರಾಳ ಭಾವನೆಯ ಮನೋ ಸಂಚಲನೆ
ಮನಸ್ಸಿನಲ್ಲಿ ತುಂಬುತನವನ್ನು ತುಳುಕಿಸುತ್ತದೆ!

ಒಳ್ಳೆಯ ಸಾಧನೆ ಮಾಡಬೇಕೆಂಬ ಭಾವನೆ
ಒಳ್ಳೆಯದು ಮಾಡಲು ಮನದ ಹುಡುಕಾಟ
ಸಾಧನೆಗೆ ಅಡ್ಡಬರುವ ಕಷ್ಟಗಳಿಗೆ
ಕೇಳದೆಯೇ ಉತ್ತರ ದೊರೆತು
ತಲೆಯೆತ್ತಿ ಸೂರ್ಯನು ಬೆಳಗುವಂತೆ
ನೀ ತಲೆ ಎತ್ತಿ ಸಮಾಜದಲ್ಲಿ ಜೀವಿಸುವೆ!

**- ಶ್ರೀ ಹರಿ.**

8-06-2012



# 260

ಹನಿ ಹನಿಯಿಂದ ಹೊಳೆ ನದಿ ಸಮುದ್ರ
ಬಿಂದು ಬಿಂದುಗಳಾಗಿರುವ ಪ್ರೀತಿಯ ಸಮುದ್ರ
ಹಗಲು ರಾತ್ರಿ ಸಮುದ್ರದ ಪ್ರೀತಿ ಏನೆಂದು ತೋರಿಸಲು
ಅಲೆ ಅಲೆಯಾಗಿ ಬಂದು ದಡದ ಜೊತೆ ಸೇರಿ ಹರಡುತ್ತಿರುವುದು
ಪ್ರೀತಿಯನ್ನು ಮನಬಿಚ್ಚಿ ಬೆರೆತು ನಿರಂತರ ಜೋಡಿಯ ಬೆಸುಗೆ
ನೂರೆ ನೂರೆಯಾಗಿ ಉಕ್ಕಿ ತೋರಿಸುತ್ತಿದೆ !

ನಮ್ಮಲ್ಲಿ ಪ್ರೀತಿ ಇಲ್ಲದಿರೆ ಜಗತ್ತಿನಲ್ಲಿ ಹುಡುಕಿದರೂ ಸಿಗದು
ನಮ್ಮಲ್ಲಿ ಜೊತೆ ಜೀವನ ಇಲ್ಲದಿರೆ ಜಗತ್ತಿನಲ್ಲಿ ಯಾವ ಜೀವ ಜೊತೆ
ಸೇರದು
ನಮ್ಮಲ್ಲಿ ಒಳ್ಳೆಯ ಮನಸ್ಸು ಇಲ್ಲದಿರೆ ಒಳ್ಳೆಯ ಮನಸ್ಸುಗಳ
ಜನಗಳು ಸಿಗರು
ನಮ್ಮ ಕಣ್ಣೋಟದಲ್ಲಿ ಸೌಂದರ್ಯವಿಲ್ಲದಿರೆ
ಜಗತ್ತು ಎಂದೂ ಸುಂದರವಾಗಿ ಕಾಣದು
ನಮ್ಮ ಸಂಸಾರದಲ್ಲಿ ಸಂತಸ ಇಲ್ಲದಿರೆ ಜಗತ್ತಿನಲ್ಲಿ
ಹುಡುಕಿದರೂ ಸಂತಸ ಸಿಗದು!

ಯಾವ ಬೇಡಿಕೆಗಳು ಇಲ್ಲದ ಸೂರ್ಯ ಬೆಳಕು ನೀಡುವಂತೆ
ದೊಡ್ಡವರು ಚಿಕ್ಕವರೆಂಬ ಭೇದವಿಲ್ಲದ ಭೂಮಿ
ಸಮಬೆಳೆಯನ್ನು ಭೂಮಿ ಕೊಡುವಂತೆ
ಸಕ್ಕರೆಯಿಲ್ಲದ ಭೂಮಿ ಸಿಹಿಯಾದ ಹಣ್ಣುಗಳನ್ನು ಬೆಳೆಸುವಂತೆ
ಯಾವ ಕೆಲಸ ಮಾಡಿದರೂ ಯಾರಿಗೂ ನೋವಾಗದಂತೆ



www.sriharikhoday.com

ಪವಿತ್ರವಾದ ಭಾವನೆ ಪವಿತ್ರವಾದ ಮನದಿಂದ
ಸೌಂದರ್ಯ ನೀಡುವ ಕಣ್ಣಿನಿಂದ ಈ ಜಗವನ್ನೇ ಅಪ್ಪಿಕೊಂಡು
ಜಗದಲ್ಲಿರುವ ಐಶ್ವರ್ಯವೆಲ್ಲಾ ತಮ್ಮದೆಂದು ತಿಳಿಸುತ್ತ
ಯಾವುದಕ್ಕೂ ನಾವು ಕಮ್ಮಿ ಇಲ್ಲವೆಂದು
ತಲೆಯತ್ತಿ ಸಂತಸದಿ ಮೆರೆಯೋಣ!

**ಶ್ರೀ ಹರಿ.**

11-06-2012



## 261

ಕೆಟ್ಟ ಭಾವನೆಯಿಲ್ಲದೆ ನಿರಾಳ ಭಾವನೆಯೇ ಮನೋ ನಿಶ್ಶಬ್ದ
ಕಾಣುವ ಎದುರಲ್ಲಿ ಬೆರೆತು ಮರೆಯುವ ಕ್ಷಣಗಳೇ ನಿಶ್ಶಬ್ದ
ಸಮಸ್ಯಗಳಲ್ಲಿ ಸಮಸ್ಯೆಯ ಜೊತೆ ಬೆರೆತು ಬೆರೆತಿರುವ ಸಮಯವೇ
ನಿಶ್ಶಬ್ದ!

ಕತ್ತಲಲ್ಲಿ ಸ್ವಪ್ನಗಳಿಲ್ಲದೇ ನಿದ್ರಿಸುವ ನಿದ್ರೆಯೇ ನಿಶ್ಶಬ್ದ
ನೀರಲ್ಲಿ ಮುಳುಗುತ್ತಿರುವವನಿಗೆ ತಾನು ಧುಮಿಕಿ
ಸಹಾಯ ಮಾಡಬೇಕೆಂಬ ಮನೋ ವಿಚಾರಗಳ ಸಮಯವೇ ನಿಶ್ಶಬ್ದ!

ಪತಿ-ಪತ್ನಿಗಳು ಜೊತೆ ಬೆರೆತು ಅಂತರಾಳದ ಅನುಭವವೇ ಮನೋ
ನಿಶ್ಶಬ್ದ
ಕಾಣುವ ಕಷ್ಟಗಳ ನೋಡಿ ಕಣ್ಣೀರು ಹರಿಸುವ ಸಮಯಗಳು ನಿಶ್ಶಬ್ದ
ಪ್ರೀತಿ-ಪ್ರೇಮಗಳ ಸಂಬಂಧದಲ್ಲಿ ಕಣ್ಣೀರು ತರಿಸುವ ಸಮಯವೇ
ನಿಶ್ಶಬ್ದ!

ಸಮಾಜದ ಜನಗಳು ನಿನ್ನ ಕೆಲಸಗಳನ್ನು ಮೆಚ್ಚಿ ಅಭಿನಂದಿಸುವ
ಕ್ಷಣಗಳು ನಿಶ್ಶಬ್ದ
ಯಾರ ಗೋಚರಕ್ಕೆ ಬರದೆ ಪ್ರಕೃತಿ ಜೊತೆ ಜೀವಿಸುವುದೇ ನಿಶ್ಶಬ್ದ
ಗೋಚರವಿಲ್ಲದೆ ಸಹಾಯ ಮಾಡುವ ಮನಸ್ಸು ನಿಶ್ಶಬ್ದ!

ತಾನು ಚಿತ್ರಿಸಿದ ಚಿತ್ರವನ್ನು ನೋಡಿ ಮರೆಯುವ ಕ್ಷಣಗಳು
ನಾ ಮುಗಿಸಿರುವೆನೆಂಬ ಆ ಕ್ಷಣಗಳು ನಿಶ್ಶಬ್ದದ ಕ್ಷಣಗಳು



www.sriharikhoday.com

ಇದು ಮಾಡಲಿಲ್ಲ, ಅದು ಮಾಡಲಿಲ್ಲವೆಂದು ಮನವು ಸೂಚಿಸುವ
ಸಮಯಗಳು ನಿಶ್ಶಬ್ದ.

ಕನ್ನಡಿ ಎದುರಿಗೆ ತನ್ನ ಭಾವವನ್ನೇ ತಾನು ನೋಡಿಕೊಂಡು
ಸಂತಸದಿ ಮನ ಮರೆಯುವ ಸಮಯಗಳು ನಿಶ್ಶಬ್ದ
ಗಂಡೋ ಹೆಣ್ಣೋ ಹೆರೆಗೆಯ ಸುದ್ದಿ ಕೇಳುವ ಆತುರದ
ಸುಖದ ಆ ಸಮಯಗಳೇ ನಿಶ್ಶಬ್ದ

ನಿಶ್ಶಬ್ದದ ಮನದ ಚಲನೆ ಜಗತ್ತಿಗೇ ಹೊಸ ಹಾದಿಯನ್ನು
ತೋರಿಸುವುದು
ಮನೋ ನಿಶಬ್ಧದ ಮನೋ ವಾತಾವರಣ ನಮ್ಮ ಜೀವನದಲ್ಲಿ
ನಮ್ಮ ಜೀವನ ಫಲದಾಯಕವಾಗುವುದು!

**- ಶ್ರೀ ಹರಿ.**

13-06-2012



www.sriharikhoday.com

262.

ನೆನಪುಗಳಿಗೆ ತಿಳಿಯದ ಆನಂದ
ನೆನಪುಗಳಿಗೆ ಪ್ರೀತಿ-ಪ್ರೇಮ ತಿಳಿದರೂ
ಆನಂದದ ಅರಿವು ನೆನಪುಗಳಿಗೆ ಇಲ್ಲವಾಗಿ
ಜೀವನದಲ್ಲಿ ಸುಖವೇನು ಎಂದು ತಿಳಿಯದೆ
ಸುಖವನ್ನೇ ಅನುಭವಿಸಲು ಹಿಂಬಾಲಿಸುತ
ಆನಂದದ ಅನುಭವಗಳನ್ನು ನಾವು ಅನುಭವಿಸುತ್ತಿಲ್ಲ!

ರೋಮ ರೋಮಗಳಲ್ಲಿ ಹರಿದು ನಿಲ್ಲದೇ ಬರುವ ಆನಂದ
ಬುಡ ಬೇರು ರಂಬೆ ಕೊಂಬೆ ಎಲೆ-ಹಣ್ಣುಗಳ ಹೊತ್ತು
ಜೋಕಾಡುತ್ತಿರುವ ಗಿಡದ ಆನಂದ
ಶರೀರವನ್ನೇ ಮರೆತು ಆನಂದವನ್ನು ಅನುಭವಿಸುತ್ತ
ಆನಂದಭಾಷ್ಪವನ್ನು ಸುರಿಸುತ್ತಿರುವ ಯೋಗಿಗಳು
ಬಣ್ಣ ಬಣ್ಣದ ಚಿಟ್ಟೆಗಳು ಅರಳಿರುವ ಹೂವಿನ
ಮಕರಂದವನ್ನು ಅನುಭವಿಸುತ್ತ
ಕಷ್ಟ-ನಷ್ಟಗಳ ಅರ್ಥ ತಿಳಿಯದ ಅವುಗಳ ಆನಂದ
ಆನಂದವೋ ಆನಂದ ಆನಂದವೋ ಆನಂದ!

ಹೋಲಿಕೆಗಳಿಲ್ಲದ ಆನಂದ, ಸಿರಿತನ-ಬಡತನ ತಿಳಿಯದ ಆನಂದ
ಹಡೆದ ತಾಯಿಯು ತನ್ನ ಕಂದನ ಮೊದಲ ತೊದಲನುಡಿಯ
ಕೇಳುವ ಆನಂದ
ಮಗನ ಬೆಳೆಸಿರುವ ತಂದೆಗೆ ಮಗನ ಏಳಿಗೆಯ ಕಂಡು ಉಕ್ಕುವ
ಆನಂದ

ಆಳವೇ ತಿಳಿಯದ ಆನಂದ ಎಲ್ಲರ ಜೊತೆ ಜೀವಿಸಲು
ಅಪೇಕ್ಷಿಸುವ ಆನಂದ

ನಮ್ಮ ಜೀವನದಲ್ಲಿ ಎಲ್ಲವನ್ನು ಶೇಖರಿಸುವಂತೆ
ಆನಂದ ಶೇಖರಣೆ ಇಲ್ಲವಾಗಿ
ಸುಖ-ದುಃಖಗಳ ತೂಗಿನಲ್ಲಿ ಅರಿವಾಗದ ಆನಂದವನ್ನೇ ಮರೆತು
ಮಾನವ ಪ್ರಕೃತಿಯ ಜೊತೆಗೆ ಪ್ರಕೃತಿಯಲ್ಲಿರುವ
ಜೀವನ ಆನಂದವನ್ನು ತಿಳಿಯದೇ ಇರುವಾಗ
ನಮ್ಮಲ್ಲಿರುವ ಆನಂದ ಅದರ ಇರುವಿಕೆಯ ಮಾರ್ಗ
ಹುಡುಕುವುದೇ ಆನಂದ!

**- ಶ್ರೀ ಹರಿ.**

14-06-2012



## 263

ಅಗಲಿಸುವುದು ಕಾಲ ಜೊತೆ ಮಾಡಿಸುವುದು ಕಾಲ
ಸುಖ ಕೊಡಿಸುವುದು ಕಾಲ
ದುಃಖದ ಅನುಭವ ದೂರದಿಂದಲೇ ನೋಡುವ ಕಾಲ!

ಎಲೆಯನ್ನು ಚಿಗುರಿಸುವ ಕಾಲ
ಎಲೆಯನ್ನು ಹಣ್ಣು ಮಾಡಿ ಉದುರಿಸುವುದೇ ಕಾಲ
ಸೂರ್ಯ ಚಂದ್ರರನ್ನು ಕರೆಸುವುದು, ಕಾಲ ಕಳಿಸುವುದೂ ಕಾಲ!

ಜನನವನ್ನು ನೋಡಿ ವೀಕ್ಷಿಸುವುದು ಕಾಲ
ಸಾವನ್ನು ನೋಡಿ ತಿಳಿಯದಂತೆ ಇರುವ ಕಾಲ
ಸ್ವಪ್ನಗಳ ನನಸು ಮಾಡುವುದು ಕಾಲ
ಸಂಬಂಧಗಳನ್ನು ಬೆಳೆಸುವುದು ಕಾಲ!

ಸಂತಸದಲಿ ಅಪಾರವಾದ ಸುಖವನ್ನು ತೀರಿಸುವುದು ಕಾಲ
ದುಃಖದ ಕಣ್ಣೀರನ್ನು ದೂರದಿಂದ ನೋಡುವ ಕಾಲ
ಸುಖ-ದುಃಖ ಒಂದೇ ಎನ್ನುತ್ತಿದೆ ಕಾಲ, ಅಪಾಯಗಳನ್ನು ತಪ್ಪಿಸುವ ಕಾಲ!

ಪ್ರಕೃತಿಗೆ ಸಹಪಾಠಿಯಾಗಿ ಜೊತೆ ಹೆಜ್ಜೆ ಹಾಕಿಸುವ ಕಾಲ
ಬ್ರಹ್ಮಾಂಡದ ಮೂಲ ಸೂತ್ರವಾಗಿರುವ ಕಾಲ
ಆಕಾರವಿಲ್ಲದೆ ಎಲ್ಲರ ಜೊತೆಗಿರುವ ಕಾಲ
ಮನೋನಿರ್ಧಾರಕ್ಕೆ ಅವಕಾಶ ನೀಡುವುದು ಕಾಲ!



www.sriharikhoday.com

ಸಾಧನೆಗೆ ಮೆಚ್ಚುಗೆ ಸೂಚಿಸುವ ಕಾಲ
ಬೀಜವನ್ನು ಚಿಗುರಿಸಿ ಗಿಡವಾಗಿ ಬೆಳೆಸುವ ಕಾಲ
ಭೂತ ಭವಿಷ್ಯ ವರ್ತಮಾನಗಳಲ್ಲಿ ಇದ್ದು
ಹರಿದುಕೊಂಡು ಹೋಗುತ್ತಿರುವ ಕಾಲ!

ಹೇ ಕಾಲವೇ ವಿಶ್ವದಲ್ಲಿ ಎಲ್ಲವನ್ನೂ ಸರಿಪಡಿಸುತ್ತ
ಎಲ್ಲರ ಮನದಲ್ಲಿ ಸಂತಸ ಹೆಚ್ಚಾಗಿ ನೀಡಿ
ಕಷ್ಟಗಳು ಬಂದಾಗ ತ್ಯಾಗದ ಬುದ್ಧಿ ನೀಡು!

**- ಶ್ರೀ ಹರಿ.**

15-06-2012



264

ನಾನು ಎಂದು, ನನ್ನನ್ನು ತೋರಿಸಿಕೊಟ್ಟ ವಿಶ್ವ ತರಂಗಗಳೇ
ತರಂಗಗಳಾಗಿ ನನಗೆ ಮಾನವನ ರೂಪವನ್ನು ತರಿಸಿದ ವಿಶ್ವ
ತರಂಗಗಳೇ
ಕಾಲ ಜೊತೆಗೂಡಿಸಿ ಶರೀರಗಳಿಂದ ಸಾಧನೆಗಳನ್ನು
ಮಾಡಿಸುತ್ತಿರುವ
ವಿಶ್ವದ ವಿಸ್ಮಯಗಳೇ

ಕಣ್ಣಿಗೆ ಕಾಣದೆ ಎಲ್ಲಾ ಇಹಪರಗಳ ಸಾಕ್ಷಿಗಳೇ
ಶರೀರವನ್ನೇ ಮರೆತು ನೀನು ಎಂದು ಹೆಸರುಕೊಟ್ಟವನಿಗೆ
ನನ್ನ ನಮೋ ನಮಃ!

ನನ್ನ ಇಷ್ಟಗಳಿಗೆ ತನ್ನ ಜವಾಬ್ದಾರಿಗಳಿಗೆ ಶರೀರಧಾರಣೆ ಮಾಡಿಸಿ
ಜಗತ್ತಿನ ಕೆಲಸಗಳಿಗೆ ಶಕ್ತಿ ಬುದ್ಧಿ ಕೊಟ್ಟು
ಬೆಳೆಯುತ್ತಿರುವ ವಿಶ್ವದ ನಾನಾ ಶರೀರಗಳಿಗೆ
ಹೊಸ ಹೊಸ ಕನಸುಗಳನ್ನು ತೋರಿಸುತ್ತ
ವಿರಾಮವಿಲ್ಲದೆ ಹಗಲು-ರಾತ್ರಿ ದುಡಿಯುತ್ತಿರುವ ಬ್ರಹ್ಮಾಂಡ ಕರ್ತೃ
ಶರೀರದ ಜೊತೆಗೆ ನಾನು ಎಂದು ಮರೆತಿರುವ ಅರಿವಿಗೆ ತಿಳಿ ನಮೋ
ನಮಃ

ಬ್ರಹ್ಮಾಂಡದ ನೀತಿ ಸಂತತಿಯೊ ಅಥವಾ
ಬ್ರಹ್ಮಾಂಡವನ್ನೇ ಸೃಷ್ಟಿಸಿದ ಸೃಷ್ಟಿಕರ್ತನೋ
ನೀ ಬ್ರಹ್ಮಾಂಡದ ಬ್ರಹ್ಮಲಿಖಿತ ಬರೆಯುವ ಬರೆಯುವ ಬ್ರಹ್ಮನೋ



www.sriharikhoday.com

ಬೆಳಕಿನಲ್ಲಿರುವ ಕತ್ತಲೆಯೋ ಕತ್ತಲೆಯಲ್ಲಿರುವ ಬೆಳಕೋ
ಸೂತ್ರಗಳೇ ಇಲ್ಲದ ನಿನ್ನ ಆಟ ಕಾಣದ ತರಂಗಗಳ ಆಟ
ಶರೀರವಾಗಿಸಿ ತರಂಗವಾಗಿರುವ ಆತ್ಮನಿಗೆ ಶರೀರಧಾರಣೆ ಮಾಡಿಸಿ
ಎಲ್ಲಾ ಕಲೆಗಳ ಕಲಿಸಿ ನಾನು ಯಾರೆಂದು ಎದುರಿಗೆ ಬರದೆ

ಅದೃಶ್ಯ ರೂಪದಲ್ಲಿ ವಿಶ್ವವನ್ನೇ ಉಸಿರಾಡಿಸುತ್ತಿರುವ ಜೀವಧಾತುವೇ
ಈ ಜಗತ್ತಿನ ಕಷ್ಟಗಳನ್ನು ಅರಿತಿರುವ ನೀ
ಈ ಜಗತ್ತಿಗೆ ವರದಾನವಾಗಿ
ನಿನ್ನ ಮಕ್ಕಳಾಗಿರುವ ಈ ತರಂಗಗಳಿಗೆ ಜೊತೆಯಾಗಿ ಎಂದು ಬೇಡುತ್ತ
ನನ್ನಂತೆ ಶರೀರಧಾರಣೆ ಮಾಡಿರುವ ಅನೇಕ ತರಂಗಗಳ
ಕಷ್ಟ ಅರಿತು ಮರೆಯದೆ ವಿಶ್ವಾಸ ಪಾತ್ರನಾಗು!

ಗೋಳು ಕಷ್ಟಗಳಿಲ್ಲದ ಬೇಕು-ಬೇಡ ಎನ್ನದ
ಶರೀರಧಾರಣೆ ಮಾಡಿರುವ ಶರೀರಗಳಿಗೆ ನೀ ಎದುರಿಗೆ ಬರದೆ
ಪೂರ್ಣವನ್ನು ಅನುಭವಿಸುವ ವರದಾನವಾಗಿ ನೀಡು ನಮೋ ನಮಃ

**- ಶ್ರೀ ಹರಿ.**

16-06-2012



www.sriharikhoday.com

## 265

ಗಡಿಗಳಿಲ್ಲದ ಪ್ರೀತಿ, ಹೊಸ್ತಿಲು ತೋರಣಗಳಿಲ್ಲದ ಪ್ರೀತಿ
ಸಂಬಂಧಗಳನ್ನು ಮೀರಿಸುವ ಪ್ರೀತಿ
ಆಕಾಶದಂತೆ ಎಲ್ಲೆಡೆ ಆವರಿಸಿ ಎಲ್ಲರ ಮನದಲ್ಲಿ
ಚಿಗುರಿಸುವುದು ಪ್ರೀತಿ!

ತಾಯ್ತನವ ಬೆಳೆಸುವ ಪ್ರೀತಿ
ಸಂಬಂಧಗಳನ್ನು ದೃಢಪಡಿಸುವುದೇ ಪ್ರೀತಿ
ಗಂಡು ಮಕ್ಕಳು, ಹೆಣ್ಣು ಮಕ್ಕಳು - ಈ ಭೇದವನ್ನು ಪ್ರೀತಿಸುವ ಪ್ರೀತಿ
ತಲೆಮಾರುಗಳು ಉರುಳಿದರೂ ಸಂಬಂಧಗಳನ್ನು
ಜೊತೆಗೂಡಿಸುವುದೇ ಪ್ರೀತಿ!

ವಧು-ವರರನ್ನು ಹಸೆಮಣೆಯ ಮೇಲೆ
ಜೀವನಪರ್ಯಂತ ಜೊತೆ ಸೇರಿಸುವುದು ಪ್ರೀತಿ
ಜೊತೆ ಬರದೆ ದೂರವಾಗಿರುವ ಕರುವನ್ನು ಅಂಬಾ ಎಂದು
ಕರೆಯುವ ಹಸುವಿನ ಪ್ರೀತಿ

ಕೊಕ್ಕರೆಯ ಬಾಯಿಗೆ ಸಿಲುಕಿರುವ ಬಣ್ಣ ಬಣ್ಣದ ಮೀನುಗಳನ್ನು
ನೋಡಿ ನುಂಗದೆ ಬಿಡುವುದೇ ಪ್ರೀತಿ
ನಾಯಿ ಬೆಕ್ಕು ಸಲಹಿ ಸಾಕುವವರಿಗೆ ಸಿಗುವುದು ಅವುಗಳ ಪ್ರೀತಿ
ಬರಗಾಲ ಬಂದಾಗ ಮೋಡ ಮಳೆ ಸುರಿಸುವುದು ಆಕಾಶದ ಪ್ರೀತಿ
ಕಷ್ಟದಲ್ಲಿ ಜೊತೆಗಿದ್ದು ಸೇವೆ ಮಾಡಿಸುವುದು ಪ್ರೀತಿ

ಯಾರದೋ ಮನೆಯಲ್ಲಿ ಹುಟ್ಟಿ ಮತ್ತೊಬ್ಬರ ಮನೆಗೆ ಸೊಸೆಯಾಗಿ
ಬಂದು
ಸಂಸಾರಕ್ಕೆ ಸೇವೆ ಮಾಡಿಸುವುದು ಪ್ರೀತಿ
ದೇಶದಲ್ಲಿ ರಾಜಕಾರಣಿಗಳು ನಿಜ ಸೇವೆಯನ್ನು ಸಲ್ಲಿಸುವುದೇ
ದೇಶಪ್ರೀತಿ
ನನ್ನ ಮಗ, ನನ್ನ ತಾತ, ನನ್ನ ಮುತ್ತಾತ ಎಂಬ ತೊದಲಿನ
ನುಡಿಗಳ ಉಚ್ಛಾರಣೆ ಪ್ರೀತಿ

ಜೀವನಪರ್ಯಂತ ಜೊತೆ ದಾಂಪತ್ಯದ ಬುನಾದಿ ಪ್ರೀತಿ
ಪ್ರೀತಿಯಿಂದಲೇ ದಯೆ ಹುಟ್ಟುವುದು
ದೇಶದ ಪ್ರೀತಿಯಿಂದಲೇ ದೇಶದ ಮೇಲೆ ಭಕ್ತಿ ಬೆಳೆಯುವುದು
ಮಾನವನಾಗಿ ಬಾಳಲು ಅತಿಯಾಗಿ ಬೇಕಾಗಿರುವ ವಸ್ತು ಪ್ರೀತಿ
ಪ್ರೀತಿಯಿಲ್ಲದೆ ಜಗತ್ತೇ ಉಸಿರಾಡದು
ನಿರ್ಮಲವಾದ ಪ್ರೀತಿಯೇ ದೇವರು!

**- ಶ್ರೀ ಹರಿ.**

18-06-2012



## 266

ಉದ್ರೇಕ ಭಾವನೆಗಳು ಕವಿಯನ್ನು ಕವಿತೆ ಬರೆಸುತ್ತ
ಪ್ರೀತಿ - ಪ್ರೇಮಗಳ ಉದ್ರೇಕ ಕವಿ ವರ್ಣಿಸುತ್ತ
ಅದರ ಜೊತೆಗೆ ಬೆಸೆಯುತ್ತ
ಕವಿಯ ಭಾವನೆಗಳು ಸುಖ ದುಃಖಗಳು
ಹಾಡುವವನ ಕೊರಳಿನಿಂದ ಹಾಡಿಸಿ
ಕವಿಗೆ ಪದಗಳ ಚದುರಂಗದ ಆಟಕ್ಕೆ ಇಳಿಸುತ್ತದೆ...!

ಯಾರದೋ ಕಷ್ಟವ ನನ್ನ ಕಷ್ಟವೆಂದು ಮನದಲ್ಲಿ ನೊಂದು
ಯಾರದೋ ಸುಖವ ಕವಿಯು ತನ್ನ ಸುಖವೆಂದು
ತನ್ನಲ್ಲೇ ವ್ಯಕ್ತಪಡಿಸಿಕೊಂಡು
ಕವಿಯ ಮನ ಋತುಗಳಿಲ್ಲದ ಕಾಲದಲ್ಲಿಯೂ
ಮನದಲ್ಲಿ ಋತುಗಳನ್ನು ತರಿಸಿ
ಕಲ್ಪನೆಗೆ ಮೀರಿದ ಸುಖವನ್ನು ತಾನು ಏಕಾಂತದಲ್ಲಿ ಪಡೆಯುತ್ತ
ವಿಶ್ವದ ಸಿರಿತನವನ್ನು ಅನುಭವಿಸುತ
ಒಂಟಿ ಜೀವನದ ಪಯಣ ನಡೆಸುತ್ತಿದ್ದಾನೆ... !

ಬೇರೆಯವರ ಸಾಧನೆ ತನ್ನ ಸಾಧನೆ ಎನ್ನುತ
ತಾನೆ ಭುಜಗಳ ತಟ್ಟಿ ತನ್ನ ಭುಜಬಲಗಳನ್ನು ಗಟ್ಟಿ ಮಾಡುತ್ತ
ಬಂಜರಾಗಿರುವ ಮನಗಳಲ್ಲಿ
ಬಂಜರಾಗಿರುವ ಮಾನವ ಕಲ್ಪನೆಗಳಿಗೆ ಹಸಿರನ್ನು ತೊಡಿಸಿ
ಪ್ರೀತಿಸುವ ಹೂವುಗಳನ್ನು ಬೆಳೆಸುವನು



www.sriharikhoday.com

ಉದ್ರೇಕ ಕಷ್ಟಗಳು ಕವಿಯನ್ನು ಕಾಡಲು ಕಾತುರರಾಗಿರುವಾಗ
ಕವಿ ಅರಿತು ಎದುರಿರುವ ಉದ್ರೇಕದಿಂದ

ಹೆಚ್ಚಿನ ಉದ್ರೇಕವನ್ನು ತಾನು ಬೆಳೆಸಿಕೊಂಡು
ಪದಗಳ ಪಗಡೆ ಆಟದಲ್ಲಿ ಹಾಡಿಸುತ
ದುಃಖತರ ಮನಗಳಿಗೆ ಆಟದ ಗೆಲುವಿನ ಹರುಷವ ತರಿಸಿ
ಜೀವನವನ್ನೇ ಹಗುರಾಗಿಸುತ
ತಾನು ತನ್ನ ಕವಿತೆಗಳ ಧ್ವಜಗಳನ್ನು ಹಾರಿಸುತ
ಯಾರ ಎದುರಿಗೂ ಬರದೆ ಏಕಾಂತದ ಅನುಭವಿ
ಯಾರಿಗೂ ಕಾಣದ ಕವಿ ... !

**-ಶ್ರೀ ಹರಿ.**

19-06-2012



## 267.

ಕಾಲ ಬದಲುತ್ತದೆ ಹಾದಿಗಳು ಬದಲಾಗುತ್ತಿದೆ
ಮನಸ್ಸು ಬದಲಾಯಿಸುತ್ತಿದೆ
ಜೀವನದ ರೀತಿ ನಡೆಗಳು ಬದಲುತ ಜಾರುತ್ತಿದೆ
ಋತುಗಳು ಬದಲಾಗುತ್ತಿದೆ ಆದರೆ
ಮಾನವನ ಮನೋವೃತ್ತಿ ಹೊಸದಾಗುವ ಬದಲು
ಕೆಟ್ಟ ಹಾದಿಗೆ ಬದಲುತ್ತಿದೆ!

ಬದಲಾಗಿರುವ ಗುರುಗಳ ಭಾವನೆಗಳು
ಬದಲುತ್ತಿರುವ ಗಂಡು ಹೆಣ್ಣುಗಳ ಸಂಬಂಧಗಳು
ಹಳೆಯದನ್ನು ಮರೆತು ಹಳೆತನವ ಮರೆಸುವ ಪ್ರಯತ್ನಗಳು
ಸತ್ಯದ ಹಾದಿಯನ್ನೇ ಬದಲಿಸುತ್ತಿದೆ!

ಗುರು-ಹಿರಿಯರಲ್ಲು ಭಕ್ತಿ ವಿನಯವಿಲ್ಲದೆ
ಜನುಮ ಕೊಟ್ಟ ತಾಯಿ-ತಂದೆಗಳಿಗೆ ಭಕ್ತಿ ಗೌರವಗಳಿಲ್ಲದೆ
ಸ್ನೇಹಿತ ಎಂದು ಹೇಳುವ ಅಂತರಾಳದಲ್ಲಿ
ದ್ವೇಷದ ದುರ್ಗಂಧ ತುಂಬಿಕೊಂಡು
ಸರಿ ರಸ್ತೆಯಲ್ಲಿ ಸಾಗದೆ ಅರಿವಿಲ್ಲದ ಮನೋ ಕತ್ತಲಲ್ಲಿ
ಮನಸ್ಸಿನ ಜೀವನಕ್ಕೆ ಗುರಿಗಳೇ ಕಾಣುತ್ತಿಲ್ಲ!

ಮನೋ ಬೇಡಿಕೆಗಳು ಹೆಚ್ಚಾಗುತ್ತಿರಲು
ತಮ್ಮದೇ ಆದ ನವರೀತಿಯ ಹೋಲಿಕೆಗಳು

www.sriharikhoday.com

ಜಗತ್ತಿನಲ್ಲಿ ಪರಸ್ಪರ ಅನ್ಯೋನ್ಯ ಭಾವನೆಗಳು ಇಲ್ಲವಾಗಿ
ಜಗತ್ತನ್ನು ಸುಧಾರಿಸುವ ಬದಲು
ಹೀನಾಯಸ್ಥಿತಿಗೆ ಕೊಂಡೊಯ್ಯುತ್ತಿದ್ದಾರೆ!

ತಮ್ಮ ಮನದಲ್ಲಿ ನಿಶ್ಶಬ್ದದ ಪ್ರತಿಧ್ವನಿಯಿಲ್ಲದೆ
ಮನದಲ್ಲಿ ಸತ್ಯದ ಬೆಳಕು ಮಿನುಗದೆ
ಅಸಹಾಯ ಮನಸ್ಸುಗಳಿಗೆ ದೇವರ ಕೃಪೆ ಬೇಡುತ್ತ
ಜೊತೆ ಜೀವನದ ಹಾದಿಗಳು ಚಿಗುರಲಿ ಎಂದು ಬಯಸುತ್ತ

ಮನದಲ್ಲಿರುವ ದ್ವೇಷಗಳು ಲವಲೇಶಗಳಿಲ್ಲದೆ ಕರಗಿ
ನೆಮ್ಮದಿಯ ಬಾಳಿಗೆ ಆಮಂತ್ರಿಸುತ್ತ
ಮಲಿನವಿಲ್ಲದ ಭಾವನೆಯ ಪಾದರಕ್ಷೆಗಳನ್ನು ಕಟ್ಟಿಕೊಂಡು
ಕಾಲದ ಹಾದಿಯಲ್ಲಿ ಅಚ್ಚಾಗಿಸುತ
ಸುಖದ ಅಪೇಕ್ಷೆಯ ದೆಸೆಗೆ
ಹೆಜ್ಜೆ ಹೆಜ್ಜೆಗಳನ್ನು ಹಾಕಿ ಮುಂದೆ ಹೋಗೋಣ

**-ಶ್ರೀ ಹರಿ.**

21-06-2012



## 268

ಅಮೃತವನ್ನು ಕೆಸರಲ್ಲಿ ಸೇರಿಸಿ ಸೇವಿಸಬೇಡ
ಗುರುಗಳ ವಾಕ್ಯಗಳಿಗೆ ತಮ್ಮ ಕೆಟ್ಟ ಮಾತುಗಳ ಬೆರಸಬೇಡ
ನಿರ್ಮಲವಾದ ಪ್ರೀತಿಯನ್ನು ದ್ವೇಷಗಳಿಂದ ಬಗ್ಗಡೆ ಮಾಡಬೇಡ
ನಿರಾಳ ಕಣ್ಣಿನ ನೋಟದಲ್ಲಿ ಕೋಪವನ್ನು ಬೆರಸಬೇಡ
ಸೇರಿಸಬೇಡ

ನಮ್ಮವರು ಅವರು ಅವರಂತೆಯೇ.... ನಾವುಗಳೆಂಬ
ಹಿರಿಯರ ಮಾತು ಪ್ರೀತಿಯಿಂದ ಸ್ವೀಕರಿಸಿ
ತೃಪ್ತಿಯನ್ನು ಅನುಭವಿಸಿ
ನಮ್ಮ ಬುದ್ಧಿ ಅವರಿಗಿಂತ ಹೆಚ್ಚು
ಅವರಿಗೆ ನನ್ನಷ್ಟು ಬುದ್ಧಿ ಇಲ್ಲವೆನ್ನದೆ
ನಮ್ಮೆಲ್ಲರ ಬುದ್ಧಿಗಳು ದೇವರು ನೀಡಿರುವ ಪ್ರಸಾದವೆಂದು
ಸ್ವೀಕರಿಸೋಣ!

ನಾನು ಹೇಳಿದ್ದೇ ನಡೆಯಬೇಕು
ನಾನು ಹೇಳಿದ್ದೇ ಕೇಳಬೇಕೆಂಬ ಮನೋ ಜಂಭ ಹೆಚ್ಚಿದ್ದಲ್ಲಿ
ಬೇರೆಯವರ ಜ್ಞಾನದ ಬಿಸಿಗೆ ಶೀಘ್ರದಲ್ಲೇ ನಿನ್ನ ಜಂಭ ಕರಗಿ
ಹೋಗುತ್ತದೆ
ಹಳೆಯದನ್ನು ಹಿಡಿಯಲಾಗದೆ ಮುಂದು ನಮ್ಮ ಕೈಯ್ಯಲ್ಲಿಲ್ಲವೆನ್ನುತ
ಉಸಿರು-ನಿಟ್ಟುಸಿರುಗಳಲ್ಲಿ ತ್ಯಾಗದ ಬುದ್ಧಿಯನ್ನು ಉಸಿರಾಡಿಸೋಣ!



www.sriharikhoday.com

ಸಂಸಾರದ ಜಗತ್ತಿನ ಜಗಳಗಳಲ್ಲಿ
ನಿಶ್ಶಬ್ದವನ್ನು ಹುಡುಕೋಣ
ದಿಕ್ಕು ದೆಸೆ ತಿಳಿಯದ ಮನಸ್ಸಿಗೆ ಗುರಿ ತೋರಿಸೋಣ
ಬಂದಿರುವರು ಬಂದಿಲ್ಲ ಕಳೆದು ಹೋಗಿರುವವರು ಕಳೆದುಹೋಗಿಲ್ಲ
ಎಲ್ಲವೂ   ಒಂದು ನಿರಂತರ ತೂಗು ಎನ್ನುತ
ಬರಿ ಚಿಂತನೆ-ಜಗಳಗಳ ಬಿಟ್ಟು
ನಿರಾಳ ಭಾವನೆಯ ತೊಟ್ಟಿಲಲ್ಲಿ ಮಲಗಿ
ಜೀವನದ ತೃಪ್ತಿಯನ್ನು ಅನುಭವಿಸೋಣ!

**- ಶ್ರೀ ಹರಿ.**

23-06-2012



www.srihariKhoday.com

## 269.

ಕಳೆದು ಬಚ್ಚಿಟ್ಟುಕೊಂಡಿರುವ ಪದಗಳೇ
ಕವಿಯ ಮನಸ್ಸಿನ ತೋಟದಲ್ಲಿ ಬಂದು ಒಟ್ಟುಗೂಡಿ ಆಡುವ
ಬಣ್ಣ ಬಣ್ಣಗಳ ಉಡುಪ ಧರಿಸಿ ದಣಿದು ಹೋಗಿರುವ ಕವಿಯ ಮನಕ್ಕೆ
ಉತ್ಸಾಹ ಚೇತನ ಹೊಸ ಹುರುಪನ್ನು ನೀಡಿ
ನನ್ನಲ್ಲಿ ನಾನೇ ಕಳೆದುಹೋಗಿರುವ ನನಗೆ ಎಚ್ಚರಿಸಿ
ಕಳೆದುಹೋಗಿರುವ ಲೇಖನಿಯನ್ನು ಹತ್ತಿರ ತರಿಸಿ ಪದಗಳೇ!

ಕನ್ನಡಿ ಎದುರಿಗೆ ಯಾರೂ ಬರದಿದ್ದರೆ
ಏನೂ ಮಾಡದೆ ಯಾರೂ ಎದುರಿಗೆ ಬರದೆ ಪ್ರತಿಬಿಂಬಿಸುತ್ತಿರೆ
ಯಾವ ಹೊಸತನವೂ ಬರದೆ, ಯಾವ ಹೊಸ ಬಣ್ಣಗಳೂ ಕಣ್ಣಿಗೆ
ಕಾಣದೆ,
ಸೋತು ಹೋಗಿರುವ ಕನ್ನಡಿಯಂತೆ ಕನ್ನಡಿಯಾದ ಕವಿಗೆ

ಪದಗಳು ಎದುರಿಗೆ ಬರದೆ, ಜೊತೆ ಕುಣಿಯದೆ
ಬೇಸತ್ತಿರುವ ಅವನಿಗೆ ನೀವುಗಳು ಬೇಸರವಿಲ್ಲದೆ, ಅಂಜಿಕೆಯಿಲ್ಲದೆ,
ನಾನಾ ಗುಂಪಾಗಿ, ನಾನಾ ಬಾವ ಬಂಗಿಗಳಲ್ಲಿ,
ನನ್ನ ಮನದ ಜೊತೆಗೆ ಆಡುತ, ಕುಣಿಯುತ,
ಮನದ ಪದಗಳೇ ಉಯ್ಯಾಲೆಯ ಜೊತೆಗೆ ತೂಗೋಣ

ಕವಿಯ ಮನ ತನ್ನಲ್ಲಿ ಅದು ಅದರದು ಜಗತ್ತಿನ
ಸುಖ-ಕಷ್ಟಗಳಲ್ಲಿ ಅಂಜಿಕೆಯಿಲ್ಲದೆ ಬೆರೆತು
ಇಲ್ಲದಿರುವವರ ಜೊತೆ ಸಂಬಂಧ ಬೆಳೆಸಿ

ಹತ್ತಿರವಿರುವವರ ಜೊತೆ ಬೆರೆತು
ಕಲ್ಮಶವಿಲ್ಲದ ಮಂಜಿನಂತೆ ಮನೋಕಣಿವೆಯಲ್ಲಿ

ಕನ್ನಡಿಯಲ್ಲಿ ಹೊಸ ಕವನವ ನೀಡುವ ಅಪೇಕ್ಷೆಯಿಂದ
ಹೊಸದನ್ನು ಹುಡುಕುತ ಹೊಸ ಅನುಭವ ಬರವಣಿಗೆಯಾಗಿಸಿ
ಓದುವವರಿಗೆ ಹೊಸ ಅನುಭವ ನೀಡುತ
ತಾನೇ ಇಲ್ಲವಾಗುವ ಕವಿಯು ಅಂಟಿಯೂ ಇಲ್ಲದ ಇರುವಿಕೆ
ನೆಂಟಿಲ್ಲದ ವಿಶ್ವದಲ್ಲಿ ಬೆಳಕು ಹರಿಯುವಂತೆ ಹರಿದು

ಕತ್ತಲಲ್ಲಿ ಒಂಟಿತನವನ್ನು ಅನುಭವಿಸುತ ವಿಶ್ವಕ್ಕೇ ಸಾವಿಲ್ಲವಾಗಿಸಿ
ಹೊಸ ಮನೋ ಪರಿಸರದಲ್ಲಿ ಬರವಣಿಗೆಯಾಗಿ
ಮುಪ್ಪೇ ಬರದ ವಿಶ್ವಕ್ಕೆ ಉಸಿರು ನಿಟ್ಟುಸಿರು
ತಾನು ಉಸಿರು ಕೊಟ್ಟಂತೆ ವಿಶ್ವಕ್ಕೆ ಉಸಿರು ನಿಟ್ಟುಸಿರು
ನೀಡುತ್ತಿರುವವನೇ ಕವಿ.

**- ಶ್ರೀ ಹರಿ.**

29-06-2012



www.sriharikhoday.com

# 270.

ಆತ್ಮನ ಜೊತೆ ಹುಟ್ಟಿದ ಭಾವನೆಗಳು ಅಪರಂಜಿ
ಶರೀರ ಭಾವನೆಯಿಂದ ಹುಟ್ಟಿದ ಭಾವನೆಗಳ ವ್ಯತ್ಯಾಸ ಗುಲಗಂಜಿ
ನಾನು ನನ್ನದೆಂಬ ಭಾವನೆಗಳಿಂದ ದೂರವಿರುವ
ಎಲ್ಲಾ ಭಾವನೆಗಳು ಅಪ್ಪಟ ಅಪರಂಜಿ!

ನಾವು ಕನ್ನಡಿ ಎದುರಿಗೆ ನಿಂತು ಏನೂ ಕೇಳದಿದ್ದರೂ
ನಮ್ಮ ರೂಪವನ್ನು ಪ್ರತಿಬಿಂಬಿಸುತ್ತದೆ
ನಾವು ನಮ್ಮ ಭಾವನೆಗಳ ಮುಂದು ಭಾವನೆಗಳು ಎದುರು ನಿಂತರೆ
ನಮ್ಮ ಭಾವನೆಗಳ ರೂಪವೇ ಬದಲಾಗುತ್ತದೆ!

ಭಾವನೆಗಳು ನಮ್ಮನ್ನು ಬಿಟ್ಟು ತಾನೇ ನಾವು ಎಂದು ರೂಪಗೊಳ್ಳುತ್ತ
ಬೇರೆ ಬೇರೆ ಭಾವನೆಗಳು ಅದರ ಎದುರಿಗೆ ನಿಂತರೆ
ಒಂದು ಕನ್ನಡಿ ಮತ್ತೊಂದು ಕನ್ನಡಿಯೆದುರು ನಿಂತರೆ
ನಿಲ್ಲದೆ ಪ್ರತಿಬಿಂಬಿಸುತ್ತದೆ!

ಸತ್ಯದಿಂದ ದೂರವಿರುವ ಪ್ರತಿಬಿಂಬಗಳನ್ನು ನಂಬಿ
ಜೀವಿಸುತ್ತಿರುವೆವು ನಾವು
ಕೊರತೆಯಿಲ್ಲದೆ ಆತ್ಮ ಭಾವನೆಯ ಜೊತೆ ಬೆರೆತು
ಕಾಣುವ ಎದುರು ಕಷ್ಟಗಳಲ್ಲಿ ಬೆರೆತು
ಸಾಧ್ಯವಾದಷ್ಟು ಕಷ್ಟಗಳ ಭಾರವನ್ನು ಇಳಿಸಿದರೆ

ಗುಲಗಂಜಿ ವ್ಯತ್ಯಾಸವಿಲ್ಲದ ಅಪರಂಜಿಯಾಗಿ
ಜೀವ ಜನುಮ ಫಳ ಫಳನೆ ಮಿನುಗುತ್ತದೆ!

**- ಶ್ರೀ ಹರಿ.**

30-06-2012

# 271.

ನಾವೆಲ್ಲರೂ ಸೀಮಿತ ಬ್ರಹ್ಮ
ನೆಮ್ಮಲ್ಲರ ಭ್ರಮೆಯಿಂದ ಬಿಡುಗಡೆಯಾದರೆ
ಜೀವನವೇ ಒಂದು ಸಂಭ್ರಮ
ಎಲ್ಲರೂ ನಮ್ಮವರಾಗುವ ಸಂಗಮ
ಹಂತ ಹಂತದಲ್ಲಿ ಹೊಸ ಹೊಸ ಭಾವನೆಗಳ ಆಗಮನ

ಎಲ್ಲವ ಮರೆತು ಹೊಸ ಜನುಮದ ಭಾವನೆಗಳು
ನಾ ಮುಂದು , ನೀ ಹಿಂದು ಎಂಬ ಭಾವನೆಗಳ ಹಂಗಾಮ
ನಾವೇನೂ ಕೇಳದಿದ್ದರೂ ನಮ್ಮನ್ನು ಜಗತ್ತಿನ ಸೌರ್ವಭೌಮ ಎಂದು
ಸಾರುತ

ಜಯ ಘೋಷಿಸುತ ಭಾವನೆಗಳ ಕೂಗಾಟಗಳು
ಬದಲುತ್ತಿರುವ ಅನುಭವದ ಸಂಭ್ರಮ

ಹೊಸ ಭಾವನೆಗಳಲ್ಲಿ ನಾವು ಕಾಣದ ಆಳದಲ್ಲಿ ಧುಮುಕಿ
ನಾನು ನನಗೇ ಕಾಣದೆ
ನಿರಾಳ ದಿಗಂತದ ಹೊಸ ದಿಗಂತಗಳು
ಹೊಸ ಹೊಸ ರೂಪದ ಅನುಭವದ ಸಂಭ್ರಮ
ಕಾಲದ ಜೊತೆಗೆ ಕಾಲವೇ ಆಗಿ

ದಿಗಂತಗಳ ಜೊತೆಗೆ ದಿಗಂತಗಳಾಗಿ
ಬಣ್ಣ ಬಣ್ಣ ಗಳ ಜೊತೆ ಬಣ್ಣಗಳಾಗಿ
ಬೆಳಕಿನ ಜೊತೆ ಕತ್ತಲಾಗಿ ಕತ್ತಲಿನ ಜೊತೆ ಬೆಳಕಾಗಿ
ಹರುಷದ ಮನೋಸ್ಫೋಟನೆಗಳನ್ನು
ಕಾಲವೇ ಸಂಭ್ರಮಿಸಿ ಸಂಭ್ರಮಿಸಿ ಸಂಭ್ರಮದಿಂದ
ಯಾರನ್ನೂ ಲೆಕ್ಕಿಸದೆ ಮುಂದೆ ಓಡುತ್ತಿದೆ

**- ಶ್ರೀ ಹರಿ.**

30-06-2012



# 272.

ದಾರಿ ಇರುವವರೆಗೂ...ನಡಿಗೆ
ಓದು ಓದುವವರೆಗೆ ಬುದ್ಧಿ
ಬುದ್ಧಿಯ ವಿವೇಕದಿಂದ ಜ್ಞಾನ
ಜ್ಞಾನದ ಜೊತೆ ಬೆರೆತರೆ ಸತ್ಯದರ್ಶನ!

ಸತ್ಯದರ್ಶನದಲ್ಲಿ ಬೆರೆತು ನಾವು ಕಳೆದುಹೋದರೆ
ತುಂಬು ಪರಿಪೂರ್ಣತೆಯ ಅನುಭವ..
ಅನುಭವದ ತುಂಬಿನಲ್ಲಿ ಹೊರಚೆಲ್ಲುವುದೇ...
ಗುರುಗಳ ಪ್ರಸಾದ
ಬೇಡಿಕೆಗಳನ್ನು ಇಲ್ಲವಾಗಿಸುವ ...
ಪರಿಪೂರ್ಣವನ್ನು ಅನುಭವಿಸುವ ಪ್ರಸಾದ..!

ಅನುಭವದ ಆಕಾಶದಲ್ಲಿ ಪೂರ್ಣಚಂದಿರನಂತೆ ಬೆಳಗಿದರೆ
ಗುರುಗಳ ಆಶೀರ್ವಾದ ...
ಸಂಬಂಧಗಳಿಲ್ಲದ ಸ್ವಾತಂತ್ರ್ಯ ಇರುವಿಕೆಯನ್ನು
ತೋರಿಸಿಕೊಟ್ಟ ಗುರುಗಳು
ಗುರು ಪೂರ್ಣಿಮೆಯ ಬೆಳಕು ಮನೋಆಕಾಶದಲ್ಲಿ
ಅನುಭವಿಸುವುದೇ ಗುರು ಪೂರ್ಣಿಮೆಯ ಪ್ರಸಾದ !

**ಶ್ರೀಹರಿ**

03-07-2012



www.sriharikhoday.com

## 273

ಕಣ್ಣು ಕೈಕಾಲಿಲ್ಲದ ನೆನಪುಗಳು
ಮನಸ್ಸನ್ನು ಕದಲಿಸಿ ನೆಮ್ಮದಿಯ ಮನಸ್ಸಿಗೆ
ಗೊಂದಲ ತರಿಸಿ ಮನಸ್ಸನ್ನು ಸೋಲಿಸಿ
ತಾವುಗಳು ಗೆದ್ದಿರುವಂತೆ ತಾವುಗಳು ಹೇಳಿದಂತೆ
ನಡೆಯುತ್ತಿರುವುದು ವಿಶ್ವಕ್ಕೆ ಒಂದು ಸೋಜಿಗ

ನಮ್ಮ ನೆರಳಾದ ನೆನಪುಗಳು
ತಮ್ಮ ಲಗಾಮಿನಿಂದ ನಮ್ಮನ್ನು ಹಿಡಿದು ಓಡಿಸುತ್ತದೆ
ಇವರನ್ನು ದ್ವೇಷಿಸಿ , ಇವರ ದೂರವಿಡು
ಇವರ ಜೊತೆ ಬೇಡ, ಈ ಕೆಲಸ ಬೇಡ
ಆ ಕೆಲಸ ಬೇಡವೆನ್ನುತ , ಇದನ್ನೇ ಮಾಡು ಎಂದು ಹೇಳುತ್ತಿರುವ
ನೆನಪುಗಳ ಆಟ ವಿಶ್ವಕ್ಕೆ ಒಂದು ಆಶ್ಚರ್ಯ

ದೇವರನ್ನು ಬೆರೆಯಲು ಹೊರಟ ಮನಸ್ಸಿಗೆ
ದೇವರನ್ನು ಅನುಭವಿಸಲು ಹೊರಟ ಮನಸ್ಸಿಗೆ
ನಿರಾಳ ಭಾವನೆಯ ಶತ್ರುಗಳಾದ ನೆನಪುಗಳು
ಸತ್ಯದಿಂದ ದೂರವಿರುವ ನೆನಪುಗಳು
ಮನಸ್ಸಿಗೆ ದೇವರ ಅನುಭವಿಸಲು ಬಿಡದೆ

ತಮ್ಮದೇ ಆದ ಬ್ರಹ್ಮಾಂಡವನ್ನು ಸೃಷ್ಟಿಸಿ
ನಮ್ಮ ಹಣೆಬರಹವನ್ನು ಬರೆದು
ತಾವೇ ಜೀವನದ ರೂಢಿಯಲ್ಲಿ ಬೆಸೆದು
ಬಾಳುತ್ತಿರುವುದು ಆಶ್ಚರ್ಯವೋ ಆಶ್ಚರ್ಯ

**- ಶ್ರೀ ಹರಿ.**

03-07-2012



www.sriharikhoday.com

## 274

ಸತ್ಯವನ್ನು ನೆನೆದು ನಡೆಯುವ ಮನ
ನೆನಪುಗಳು ಸುಳ್ಳು ಕಲಿಸಿ ಸುಳ್ಳನ್ನೇ ಹೇಳಿಸುತ
ಸತ್ಯ ಹಾದಿಯ ಜೀವನವನ್ನು ಬಿಡಿಸಿ
ಕೊನೆಯಿರದ ಸುಳ್ಳು ರಸ್ತೆಯ ಮೇಲೆ
ನಮ್ಮನ್ನು ನಡೆಸುತ್ತಿದೆ !

ಸುಳ್ಳಿನ ಹಾದಿ ಒಂದು ಭ್ರಮೆಯ ಹಾದಿ
ಹಾದಿಗೆ ಬೇಕಾಗಿರುವುದು ನೆನಪಿನ ತಳಹದಿ
ಈ ರಸ್ತೆಯ ಮೇಲೆ ನಡೆದಾಗಲೆಲ್ಲ
ನಮಗೆ ಸುಳ್ಳು ನುಡಿಗಳ ಕಲಿಸಿ
ಸುಳ್ಳೇ ಸತ್ಯವಾಗಿ ರೂಪಿಸಿಕೊಳ್ಳುತ್ತದೆ
ನಿರ್ಮಲ ನಿಷ್ಕಳಂಕ ಮನ ಸುಳ್ಳಿನ ಸಂಚಿಗೆ ಹೆದರದೆ
ಸತ್ಯವನ್ನು ನುಡಿದು ಮನಸ್ಸು ತಪ್ಪನ್ನು ಒಪ್ಪಿಕೊಳ್ಳುತ್ತದೆ !

ಜೇಡರ ಬಲೆಯಿಂದ ಯಾವ ವಸ್ತ್ರವೂ ಮಾಡಲಾಗದೆ
ಜೇಡರ ಬಲೆ ಬೇಟೆಯಾಡುವ ಸಾಧನೆಯಾಗಿರುವಂತೆ
ನಮ್ಮ ನೆನಪುಗಳು ತನ್ನ ಪ್ರತಿಷ್ಠೆಗೆ
ಎಲ್ಲವೂ ತನ್ನ ಬಲೆಯಲ್ಲಿ ಬೀಳಬೇಕೆಂಬ ಆಸೆಯಿಂದ
ಸತ್ಯವನ್ನೇ ಬಲೆ ಹಿಡಿದು
ಸತ್ಯದ ಬಲಿ ತೆಗೆದುಕೊಳ್ಳುವ ಸಂಚು !

ನಾವು ಮಾತುಗಳ ಕೇಳುವಾಗ
ಅವರ ಅಂತರಮನದ ಹೇಳು ಅಥವಾ
ಅವನ ನೆನಪುಗಳ ಮಾತೋ
ಸ್ನೇಹ ನೆನಪುಗಳ ಮಾತೋ ಸ್ನೇಹ ಬಾಷೆಯ ಮಾತೋ
ಶತ್ರುತ್ವ ತುಂಬಿದ ಸುಳ್ಳು ಭಾಷೆಯ ಮಾತಿದೋ
ಎಂದು ವಿಲಾವರಿಸಿ

ನಮ್ಮ ನಿರಾಳ ಭಾವನೆಯಿಂದ ವಿಮರ್ಶೆ ಮಾಡಲು
ನಮ್ಮ ಮನವನ್ನು ಪ್ರಚೋದಿಸಿದರೆ
ಮನದ ಸತ್ಯ ಬೆಳಕಾಗುವುದು
ನೆನಪುಗಳು ಅದರ ನೆರಳಾಗುವುದು!

**- ಶ್ರೀ ಹರಿ.**

04-07-2012



# 275

ಕೋಟಿ ದೈವಾಣುಗಳು ಉಳ್ಳವರು ನಾವು
ಹೊಸದಾಗಿ ನಮಗೆ ಅರಿವು ಬಂದಿರುವ
ವಿಶ್ವವನ್ನೇ ಕಟ್ಟಲು ಅಣಿಯಾಗಿರುವ ದೈವಾಣುಗಳು
ಕೋಟಿ ಕೋಟಿ ದೈವಾಣುಗಳ ಒಡೆಯರಾದ ನಾವುಗಳು
ವಿಶ್ವದ ಬೆಳವಣಿಗೆಗೆ ಮಾನವ ಸಹಾಯಕನಾಗಿಲ್ಲ!

ತಮ್ಮ ಅನಿಸಿಕೆಗಳಿಂದ ರೂಪ ಇರುವಿಕೆ ತಾಳಿದ ನಾವುಗಳು
ಕರ್ತವ್ಯಲೋಪದಿಂದ ಕೊನೆಯಿರದ ಹಾದಿಯಲ್ಲಿ ನಡೆಯದೆ
ಸಾವು ಮತ್ತು ಧ್ವಂಸಗಳುಳ್ಳ ವಿಚಿತ್ರ ಭಾವನೆಗಳಿಂದ
ಅನೇಕ ವಿಶ್ವವನ್ನೇ ಕಟ್ಟಲು ಸಾಮರ್ಥ್ಯವುಳ್ಳ ಈ ಮಾನವ
ಮುಳ್ಳಿನ ಮೇಲೆ ಹೂವನ್ನು ಬೆಳೆಸಲು ಯತ್ನಿಸುತ್ತಿದಾನೆ

ಸತ್ಯದ ವಿಚಾರದ ಅರಿವು
ಮಾನವನ ಮನಕ್ಕೆ ತಟ್ಟಬೇಕಾಗಿದೆ
ಬರೀ ನಮ್ಮ ನೆನಪುಗಳ ಹಾದಿಯನ್ನು ಬಿಟ್ಟು
ಬರಿಯ ಮಾನವನಾಗದೆ
ಬರೀ ಉಸಿರಾಡುತ್ತ ಶರೀರವ ಬೆಳೆಸತೊಡಗದೆ
ಈ ಜಗದಲ್ಲಿ ನೆಮ್ಮದಿ ಸಂತಸ ಅನುಭವಿಸದೆ

ಯೋಚಿಸುವ ವಿಧಾನವನ್ನು ಬದಲಿಸಿದರೆ
ಈ ಜಗತ್ತನ್ನು ಕಟ್ಟುವ ಜೊತೆಗೆ ವಿಶ್ವಕ್ಕೆ ಸಹಾಯಕನಾಗಿ
ತ್ಯಾಗ ದಾನ ಬೆರೆತುಕೊಳ್ಳುವುದು. ಅಧ್ಯಾತ್ಮಿಕ ಚಿಂತನೆ
ಸತ್ಯದ ದರ್ಶನ, ಪ್ರೀತಿ-ಪ್ರೇಮ ರಸಿಕತೆ ಸೂಕ್ಷ್ಮ
ಉದ್ದೇಶವುಳ್ಳವರಾಗಲು
ನಮ್ಮ ಮನದ ಹೊಸ್ತಿಲಲ್ಲಿ ಸೂಕ್ಷ್ಮ ಉದ್ದೇಶಗಳು
ಕಾದು ನಿಂತಿರುವುದು ಮಾನವನ ಗಮನ ಹರಿದಿಲ್ಲ. **- ಶ್ರೀ ಹರಿ.**

06-07-2012



www.sriharikhoday.com

## 276

ಕಲ್ಲಿನ ಮೇಲೆ ಮಳೆ ಸುರಿಸಿದರೆ ಏನೂ ಆಗದು
ದಡ್ಡನ ಎದುರು ಏನು ಹೇಳಿದರೂ ಬೇಕೆಂದೆ ಏನೂ
ಕೇಳಿಸಿಕೊಳ್ಳದೆ
ತಾನೂ ಬಂಡೆಯಂತೆ ಅಲ್ಲಾಡದೆ ಕುಳಿತಿರುವುದು
ದಡ್ಡನ ಮನ ಚಾಲನೆ ಇಲ್ಲ ಎಂದು ಅರ್ಥ!

ನಮ್ಮ ಮನಸ್ಸು ನಮ್ಮ ನೆನಪುಗಳಿಗೆ ಬುದ್ಧಿ ಕಲಿಸುವ ಬದಲು
ನಮ್ಮ ನೆನಪುಗಳು ನಮ್ಮ ಮನಸ್ಸಿಗೆ ಕೆಲಸ ಕಲಿಸುವ ನಿಯಂತ್ರಣ
ಭೂಮಿಗೆ ಅವರಿಂದ ಯಾವ ಪ್ರಯೋಜನವಾಗದೆ
ಬದುಕಿನ ಅರಿವು ಅವರಿಗೆ ಅರಿವಾಗದು!

ಪ್ರೀತಿ-ಪ್ರೇಮ ಕಾಣುವ ಎದುರಲ್ಲಿ ಬೆರೆಯುವುದು
ಪ್ರೀತಿ-ಪ್ರೇಮದ ಬೆಳಕನ್ನು ಹುಟ್ಟಿಸಿ ಪ್ರೇಮದಿಂದ
ಹೂವನ್ನು ನೋಡುತ ತನ್ನನ್ನೇ ಮರೆತಿಹ
ಮರೆಸುವ ಪ್ರೇಮದ ದಿಗಂತಗಳಲ್ಲಿ ಬೆರೆತು
ನಮ್ಮ ನೆನಪುಗಳ ಚೇಷ್ಟೆ ಏನೂ ಮಾಡಲಾಗದೆ
ಶಿಸ್ತನ್ನು ಕಲಿತುಕೊಳ್ಳುವುದು!

ನಾವು ಎಲ್ಲದರ ಎದುರು ಪ್ರೀತಿ ಪ್ರೇಮ ಬಣ್ಣಗಳ ಹಚ್ಚಿಕೊಂಡು
ಬಣ್ಣಗಳು ಬೇರೆಯವರಿಗೆ ಅಂಟಿಕೊಂಡು
ಜೊತೆ ಮಿಲನ ನಾನಾ ಮನದ ಬಣ್ಣಬಣ್ಣಗಳ ಓಕುಳಿ
ಈ ಬಣ್ಣಗಳು ದಿಗಂತದಲ್ಲಿ ಸೂರ್ಯನ ಕಿರಣವ ನುಂಗಿ
ನುಂಗಿರುವೆ ಎಂದು ಹೇಳಲಾಗದೆ
ಕಾಮನಬಿಲ್ಲು ನಮ್ಮ ಎದುರು ನಿಲ್ಲಿಸಿ ತೋರಿಸುತ್ತದೆ!

**- ಶ್ರೀ ಹರಿ.**

09-07-2012



## 277

ಪ್ರೀತಿಯ ಬುನಾದಿಯಿಂದ ಜನ್ಮ ಪಡೆದ ನಾವುಗಳು
ನಮ್ಮ ಬುನಾದಿಯ ಮೇಲೆ ಬೆಳೆಯುತ್ತಿರುವ ನೆನಪುಗಳು
ನೆನಪುಗಳೇ ತಮ್ಮ ಕನಸನ್ನು ಕಟ್ಟಿಕೊಳ್ಳುತ್ತ ನನಸು ಮಾಡಲು
ಸುಳ್ಳು ಕಂತೆಗಳ ವ್ಯಾಪಾರ ಮಾಡುತ್ತಿರುವರು
ಜಗತ್ತಿನ ಜಾತ್ರೆಯಲ್ಲಿ ಕಣ್ಣಿಗೆ ಕಾಣದ ಮಾರಾಟಗಾರರಾದ ನೆನಪುಗಳು!

ಪವಿತ್ರವಾದ ಹಾಲಿನಂತಿರುವ ನಮ್ಮ ಮನಸ್ಸಿಗೆ
ನೆನಪುಗಳ ಹೆಪ್ಪು ಹಾಲಲ್ಲಿ ಮಿಶ್ರವಾಗಿ ಮೊಸರಾಗಿ ಬದಲಾದಂತೆ
ನಿಷ್ಪ್ರಯೋಜಕ ಹುಳಿ ಮೊಸರಾಗಿ ಎಷ್ಟು ಕಡೆದರೂ ಬೆಣ್ಣೆ ಬರದೆ
ಹುಳಿಯಾದ ಮೊಸರು ಕೆಟ್ಟು ಹೋಗಿರುವಂತೆ
ಮನಸ್ಸುಗಳು ಮನಸ್ಸನ್ನು ಕೆಡಿಸುತ್ತಿದೆ!

ಸತ್ಯದ ಬೇಡಿಕೆ ಇದ್ದಲ್ಲಿ ಸಾಧನೆಶೀಲರಾಗಬೇಕಾಗಿದ್ದಲ್ಲಿ
ನಮ್ಮ ಜನ್ಮ ಸಾರ್ಥಕ ಮಾಡಬೇಕಾದ್ದಲ್ಲಿ
ಬುನಾದಿಯಾದ ಪ್ರೀತಿ ಬರಿ ಬುನಾದಿಯಾಗದೆ
ಸುಮ್ಮನಿರದ ಸೂರ್ಯನಂತೆ ಎಚ್ಚರಗೊಂಡು
ದಿನಚರಿಯ ಕೆಲಸಗಳಲ್ಲಿ ನೆನಪುಗಳ ಹಾದಿ ತಿಳಿದುಕೊಂಡು

ಪ್ರೀತಿಯ ಆಧಾರದ ಮೇಲೆ ಜೀವನ ನಡೆಸದೆ ಇದ್ದರೆ
ಜೀವನ ವ್ಯರ್ಥವಾಗುವುದು ...
ಹೇ ... ಮನವೇ, ಎಚ್ಚರವಾಗು ಸುಳ್ಳು ನೆನಪುಗಳ ಚೇಷ್ಟೆಗಳನ್ನು
ಕಣ್ತೆರೆದು ನೋಡಿ ನೆನಪುಗಳಿಗೆ ಪ್ರೀತಿಯ ಸ್ನಾನ ಮಾಡಿಸಿ
ನೆನಪುಗಳ ತೊಳೆದುಬಿಡು..!

**-ಶ್ರೀ ಹರಿ.**

10-07-2012



www.sriharikhoday.com

## 278.

ಕಾಲಕ್ಕೆ ಶಕ್ತಿಯಿದಯೋ ಇಲ್ಲವೋ
ಕಾಲ ಪ್ರಕೃತಿಯ ಸಹಪಾಠಿಯೋ ಅಲ್ಲವೋ
ಕಾಲ ಕಷ್ಟ-ಸುಖಗಳ ಸೃಷ್ಟಿಕರ್ತನೋ ಅಲ್ಲವೋ
ಕಾಲ ಕಷ್ಟ-ಸುಖಗಳ ಮಾಪಕವೋ
ಕಾಲ ಬರುವವರೆಗೂ ಬೇಡಿಕೆಗಳು ಸಿಗವೋ!

ಕಾಲಕ್ಕೆ ಅರಿವುಂಟೋ ಅಥವಾ ಬರೀ ಮೈಲಿಗಲ್ಲೋ
ಕಾಲ ಮನಸ್ಸಿನ ನಂಬಿಕೆಯೋ ಅಥವಾ ಬರಿ ಜೊತೆಗಿರುವುದೋ
ಕಾಲ ಮಾಯೆಯ ಬುನಾದಿಯೋ
ಕಾಲವಿಲ್ಲದೆ ನಡಿಗೆಯಿಲ್ಲ ಕಾಲವಿಲ್ಲದೆ ತರಂಗಗಳಿಲ್ಲ
ಕಾಲ ಸತ್ಯವನ್ನೋಡಿಸುವ ಕನ್ನಡಿ!

ಕಾಲ ಏಕಕಾಲದಲ್ಲೇ ವಿಶ್ವವನ್ನರಿಯಬಲ್ಲ ಮಹಾನ್‌ಶಕ್ತಿ
ಕಾಲ ಅವಶ್ಯಕ್ಕೆ ಬೆಸುಗೆ ಮಾಡುವ ಚೈತನ್ಯ
ಕಾಲ ಇಲ್ಲದ್ದಲ್ಲಿ ಭೂತ-ಭವಿಷ್ಯ-ವರ್ತಮಾನಗಳೇ ಇಲ್ಲ
ಕಾಲವೇ ಶತ್ರು-ಮಿತ್ರ ಸಂಬಂಧಗಳ ಜೋಡಣೆಯ
ನಿರ್ಧರಿಸುವ ಪುರುಷ!

ಎಲ್ಲಾ ದೇವರ ಶ್ಲಾಘನೆಗಳಿಗೆ ಕಾಲವೇ ಹೆದ್ದಾರಿ
ಕಾಲವೇ ಪ್ರೀತಿ-ಪ್ರೇಮ, ಹತ್ತಿರ-ದೂರ
ಬಂದದ್ದು-ಹೋದದ್ದು ರಹಸ್ಯಗಳಿಗೆ
ಅದು ಅಷ್ಟೆ, ಇದು ಇಷ್ಟೆ ಎಂಬುದರ ಬಿಡಿಸಲಾಗದ ರಹಸ್ಯಗಳ
ಭವಿಷ್ಯ



ಮೂಲಪುರುಷನಾದ ಸೃಷ್ಟಿಕರ್ತನಿಗೆ
ಮುನ್ನಡೆಸುವ ಆಯುಧ ಕಾಲ
ಕಾಲದ ಜೊತೆಗೆ ನಾವುಗಳು ಪ್ರೀತಿಯು
ನೆಂಟಸ್ತನ ಬೆಳೆಸಿದರೆ ಶೀಘ್ರದಲ್ಲೇ
ಗೆಳೆಯನಾಗಿ ಕಷ್ಟಗಳಿಲ್ಲಿಯೂ, ಸುಖದ ಕನಸುಗಳನ್ನು ತೋರಿಸಿ
ತೃಪ್ತಿಕೊಡುವ ತಾಯಿ, ಕಾಲವೇ ಸೃಷ್ಟಿಯ ಮೂಲಧಾಮ

**- ಶ್ರೀ ಹರಿ.**

11-07-2012



www.sriharikhoday.com

# 279

ಕಣ್ಣಿಗೆ ಕಾಣದಿರುವ ಸತ್ಯ
ಕಣ್ಣಿಗೆ  ಕಾಣಿಸದೇ ಇರುವ ಕನಸುಗಳು
ಕಣ್ಣಿಗೆ ಕಾಣದ ಬುದ್ಧಿ
ನಾ ಹೇಳುವುದು ಸತ್ಯ ಎಂದರೆ
ನಂಬ ಬೇಕೋ.. ಹೇಳಿಕೆ ತಪ್ಪು ಎಂದು ಹೇಳಬೇಕೋ!

ದೇವರ ಗುಡಿಯಲ್ಲಿ ದೇವರು  ಇಲ್ಲ ಎನ್ನುವರು
ಪೂಜೆ ಪುರಸ್ಕಾರಗಳು ಬೇಡ ಎನ್ನುವರು
ಕಾಲದ ಹಾದಿ  ಹೆಸರುಗಳ ಪರಂಪರೆಯಲ್ಲಿ ತಪ್ಪು ಎನ್ನುವರು
ತಾನು ಹೇಳುವುದ ನಂಬಿ ಎಂದು ನಂಬಿಸುವ  ಪ್ರಯತ್ನ
ಬುದ್ಧಿವಂತನ ಮಾತೋ ತಿಳಿಗೇಡಿಯ ಮಾತೋ!

ದೇವರ ಹೆಚ್ಚುತನವನ್ನು ಒಪ್ಪದೆ
ತಾನು ಬರೆಯುವುದು ಹೆಚ್ಚು ಎನ್ನುವರು
ತಾನು ಅನುಭವಿಸದೆ ತಾನು ಕಾಣದ ಸತ್ಯವನ್ನು
ಹೀನಾಮಾನವಾಗಿ ಖಂಡಿಸಿ, ವಿಶ್ವದ  ವರಗಳನ್ನೇ ಅಲ್ಲಗೆಳೆಯುತ್ತ
ತನಗೆ ಜನ್ಮ ಕೊಟ್ಟ ಸೃಷ್ಟಿಗೆ ನಿಂದಿಸಿ

ಜೊಳ್ಳು ಮಾತುಗಳುಳ್ಳ ಪದಗಳ ಜೋಡಣೆ ಶ್ರೇಷ್ಠ
ಎಂದು ಜಗಕ್ಕೆ ತೋರಿಸುವರು
ತಾನು ವಿಶ್ವದ  ಪ್ರಖ್ಯಾತಿ ಹೊಸ ಪುರುಷನೆಂದು
ಬರೀ ಬುರುಡೆ ಹೊಡೆದರೆ
ತನ್ನಲ್ಲಿ ಅಡಗಿರುವ ಸತ್ಯದ ದರ್ಶನವಾಗದೆ

ದರ್ಶನಕ್ಕೆ ಪ್ರಯತ್ನಗಳು ಮಾಡದೆ ಖ್ಯಾತಿ ಪಡೆಯುವ ಉದ್ದೇಶಗಳು
ಇತಿಹಾಸದ ಬರವಣಿಗೆಗಳಾಗದೆ
ಬರೆದವರ ಜೊತೆಗೆ ಬರವಣಿಗೆ ಬೂದಿಯಾಗುವುದು!

**- ಶ್ರೀ ಹರಿ.**

12-07-2012



www.sriharikhoday.com

# 280

ಬೇರೆಯವರಲ್ಲಿ ಬರೀ ತಪ್ಪು ಹುಡುಕುತ್ತಲೇ ಇದ್ದರೆ
ಕೆಟ್ಟ ಪರಿಣಾಮ ನಮ್ಮ ಮೇಲೆ ಬೀರುತ್ತದೆ
ಬೇರೆಯವರಲ್ಲಿ ಬರೀ  ಒಳ್ಳೆಯದನ್ನೇ ಹುಡುಕುತ್ತಿದ್ದರೆ
ಒಳ್ಳೆ ಪರಿಣಾಮ ನಮಗೆ  ಒಳ್ಳೆಯದನ್ನೇ ಮಾಡುತ್ತದೆ!

ಬೇರೆಯವರಲ್ಲಿ  ಅಡಗಿರುವ ಸಾಧನಾಶಕ್ತಿಯನ್ನು ಗುರುತಿಸಿದರೆ
ಜೊತೆ ನಮ್ಮಲ್ಲಿರುವ ಮನದ ಸೌಂದರ್ಯ ನಮ್ಮ ಮನಕ್ಕೆ
ಅಲಂಕಾರವಾಗಿ ನಮ್ಮನ್ನು  ನೋಡುವವರ ಕಣ್ಣಿಗೆ
ನಮ್ಮ ಕ್ರಿಯಾಶೀಲತೆ - ಸಾಮರ್ಥ್ಯಗಳು  ನಮ್ಮಲ್ಲಿ ಕಾಣುವುದು!

ಮನೋಭಾವನೆಗಳು ನಿರಾಳ ಆಕಾಶದಂತೆ ಇದ್ದರೆ
ಹೊಸ ಕೆಲಸಗಳು ನಕ್ಷತ್ರದಂತೆ ಮಿನುಗಿ
ಬ್ರಹ್ಮಾಂಡದಲ್ಲಿರುವ ಎಲ್ಲಾ ವಿಷಯಗಳು
ಶ್ರಮವಿಲ್ಲದೆ ನಮಗೆ ಗೋಚರಿಸುವುದು!

ನಾವು ಇದ್ದು ಇಲ್ಲದೆ - ಇಲ್ಲದೆ ಅಲ್ಲಿದ್ದು
ನಮ್ಮ ಮನೋ ನೆನಪುಗಳ ಹಿನ್ನೆಲೆ  ಇಲ್ಲದ
ವಾತಾವರಣದಲ್ಲಿ ಕಾರ್ಯಗಳ ಜೊತೆ ಬೆರೆತರೆ
ನಮ್ಮ ಜೀವನದ ನಡಿಗೆಯಲ್ಲಿ

ಹೆಜ್ಜೆ  ಹೆಜ್ಜೆಗೂ ಹೊಸ ಹೊಸ ಅನುಭವ ಕೊಡುವ
ಚಿಗುರುಗಳ ನೋಡುವೆವು!

**- ಶ್ರೀ ಹರಿ.**

13-07-2012

## 281

ಜ್ಞಾನವನ್ನು ವರ್ಜಿಸುವುದು ಮನೋ ಅಕ್ಷರಗಳ ಗುಂಪು
ಜನುಮದ ಜೊತೆ ಜೊತೆಯಾಗಿ ಹುಟ್ಟಿರುವ ಜ್ಞಾನ
ಜ್ಞಾನವನ್ನು ಸರಿ ಅಳವಡಿಸದೆ ಜೀವನದಲ್ಲಿ
ಹಾದಿಗಳನ್ನು ಹುಡುಕುತ್ತಿದ್ದಾರೆ!

ದೇವರ ಜೊತೆ ಹುಟ್ಟಿಕೊಂಡಿರುವ ಅಕ್ಷರದ ತರಂಗಗಳು
ವಿಶ್ವವ ಕಟ್ಟಲು ಬುನಾದಿಯ ಅಡಿಗಲ್ಲುಗಳು
ಜ್ಞಾನದಲ್ಲಿರುವ ಶಕ್ತಿ ಸಾವಿರ ತೋಳ್ಬಲವುಳ್ಳ ಅಕ್ಷರಗಳು
ಪ್ರಗತಿಗೆ ಬೇಕಾದಾಗ ಎಲ್ಲರ ಬಾಯಲ್ಲಿ
ಹೊರಬಂದು ಆಡಿಸುತ್ತದೆ!

ನಾಲಿಗೆ ಬರಿ ರುಚಿ ನೋಡುವ ಸಾಧನೆಯಾಗದೆ
ನಾಲಿಗೆ ರುಚಿಕರವಾದ ಪದಗಳುಳ್ಳ ಅಕ್ಷರಗಳ ಉಚ್ಛಾರದಿಂದ
ವಾತಾವರಣವನ್ನೇ ಬದಲಿಸಿ ಪ್ರಗತಿಗೆ ಬೇಕಾದ
ಹೊಸ ವಾತಾವರಣವನ್ನು ಕ್ಷಣದಲ್ಲಿಯೇ ಕಟ್ಟಿ
ಎಲ್ಲರ ಮನಗಳನ್ನು ಬದಲಿಸುತ್ತದೆ!

ಪದಗಳು ಅಕ್ಷರಗಳ ಸತ್ಯ
ಅದರ ಜೋಡಣೆಯ ಭಾವಭಂಗಿಗಳು
ವಿಚಿತ್ರವಾದ ಶಕ್ತಿಯುಳ್ಳ ಸದ್ದನ್ನು ಮಾಡುತ
ಹೊಸ ಸೃಷ್ಟಿಗೆ ಆಕಾರವನ್ನು ನೀಡಬಲ್ಲ ಶಕ್ತಿ ಸಾಮರ್ಥ್ಯ
ಜನರಿಂದ ಅಕ್ಷರಗಳಿಂದಾದ ಪದಗಳನ್ನು ಜೋಡಿಸುತ

ಪದಗಳಿಂದ ಹೊಸ ವಾತಾವರಣ
ಹೊಸ ವಾತಾವರಣದಿಂದ ಹೊಸ ಸೃಷ್ಟಿಗಳು
ನಿರಂತರ ಹಾದಿಗಳಿಗೆ ದೆಸೆ ತೋರಿಸುತ್ತಿವೆ
ಈ ಜ್ಞಾನದಿಂದ ಹುಟ್ಟಿರುವ ಅಕ್ಷರಗಳ ಗುಂಪು

**- ಶ್ರೀ ಹರಿ.**

14-07-2012



## 282

ಪ್ರಭಾತದ ಸೂರ್ಯೋದಯಕ್ಕೆ ದೆಸೆಗಳ ಮೇಲೆ ಆಣೆ
ಕರಗಿ ಹೋಗುತ್ತಿರುವ ಕತ್ತಲಿಗೆ ಬೆಳಕಿನ ಮೇಲೆ ಆಣೆ
ಅರಳುತ್ತಿರುವ ಬ್ರಹ್ಮಕಮಲದ ಅರಳಿಗೆ ಕತ್ತಲಿನ ಮೇಲಾಣೆ
ಬೆಳೆದು ನಿಂತಿರುವ ತೆನೆಗೆ ಬೀಜ ಚಿಗುರಿಸುವ ಶಕ್ತಿಯ ಮೇಲೆ ಆಣೆ!

ಬಣ್ಣ ಬಣ್ಣಗಳ ಹೂಗಳ ಬಣ್ಣ ಬಳ್ಳಿಯ ಮೇಲಾಣೆ
ಬಣ್ಣ ಬಣ್ಣಗಳ ಮಾತುಗಳಲ್ಲಿ ಕಾಮನ ಬಿಲ್ಲಿನ ಮೇಲಾಣೆ
ಸುಳ್ಳು ಹೇಳುವವರ ನುಡಿ ಸತ್ಯದ ಮೇಲಾಣೆ
ಸುಂದರಿಯ ಸೌಂದರ್ಯ ಕನ್ನಡಿಯ ಮೇಲಾಣೆ!

ರೈತ ಹೇಳುವ ಮಾತುಗಳ ಕಷ್ಟಗಳಿಗೆ ಭೂತಾಯಿಯ ಮೇಲಾಣೆ
ಸತ್ಯವ ನಂಬಿಸುವುದಕ್ಕೆ ಸೂರ್ಯ ಚಂದ್ರರ ಆಣೆ
ಶಿಷ್ಯನ ಕಷ್ಟಗಳಿಗೆ ಗುರುಪಾದಗಳ ಆಣೆ
ಪ್ರೀತಿಸುವ ಪ್ರೇಮಿಗೆ ಪ್ರೀತಿಯ ಮೇಲಾಣೆ!

ಸುಳ್ಳು ಹೇಳುವ ಮಕ್ಕಳು ತಂದೆ-ತಾಯಿಯ ಮೇಲಾಣೆ
ಆಣೆ ನಾಲಿಗೆಯ ತೊದಲಾಗದೆ ಯುಕ್ತಿರಹಿತ
ಶುದ್ಧ ಭಾವನೆ ಕಂಠದ ಮನದಾಳದ ನಿರ್ಣಯದ
ಅರ್ಥದ ಪ್ರತಿಧ್ವನಿಯೇ ಆಣೆ
ಸತ್ಯ ಸತ್ಯದ ಮೇಲಾಣೆ

**- ಶ್ರೀ ಹರಿ.**

16-07-2012



www.sriharikhoday.com

283.

ಅಪಸ್ವರ ನುಡಿಯುತ್ತಿರುವ ಮನೋವಾದ್ಯಗಳು
ಅರ್ಥವೇ ತಾವು ತಿಳಿಯದೆ
ಕೂಗಿ ಕೂಗಾಡಿ ಹೇಳುತ್ತಿರುವ ಅಪಸ್ವರ ನಾದಗಳು
ತಾನೇ ನುಡಿಸುತ್ತಿರುವ ವಾದ್ಯಗಳೇ ಅಪಸ್ವರಕ್ಕೆ ಬೇಸರಗೊಂಡು
ನೀ ನುಡಿಸಿದಂತೆ ನಾವು ನುಡಿಯುವುದಿಲ್ಲವೆಂದು
ಕೋಪಗೊಂಡಿರುವ ವಾದ್ಯಗಳು
ಕೇಳುವವರ ಕಿವಿ ಬೇಸರಗೊಳ್ಳುತ್ತಿರುವುದು ಸಮಾಜದ ವಿಷಾದವೇ
ಸರಿ!

ನೆನಪುಗಳೆಲ್ಲ ಮರೆತಿರುವ ನಿರಾಳ ಭಾವನೆಗಳು
ತಮಗೆ ತಾವೇ ಶಾಪ ಕೊಡುತ್ತಿರುವುದನ್ನು ಕಂಡು
ಕೈಕಾಲು ಕಟ್ಟಿಕೊಂಡು ಜಗತ್ತಿನ ಸಾಗರವನ್ನೇ ದಾಟುವೆನೆಂದು
ಹೇಳುತ್ತಿರುವ
ಭಾಗ್ಯಶಾಲಿ ಎಂದು ಹೇಳಿಕೊಳ್ಳುತ್ತಿರುವ
ದೇಶವನ್ನೇ ಕಾಪಾಡುವೆವು ಎಂದು ಹೇಳುತ್ತಿರುವ ಸಮಾಜ
ಮುಖಂಡರು
ಅಪಸ್ವರದ ನಾದದಲ್ಲಿ ಹೇಳುತ್ತಿರುವ ಅವರ ನುಡಿಗಳಿಗೆ
ಅವರ ಮನೋಚಿಂತನೆಗೆ ದೇವರೇ ದಾರಿ ತೋರಿಸಬೇಕು!

ದೇವರು ದೂರವಾಗಿದ್ದಾರೆ ಎಂದು ಹೇಳುವವರಿಗೆ
ದೇವರು ಹತ್ತಿರವೇ ಇದ್ದಾರೆಂದು ತೋರಿಸಿ



www.sriharikhoday.com

ಆ ಹಾದಿಯ ಒಡನಾಟದಲ್ಲಿ ಮನೋಶ್ರುತಿ ಸರಿಪಡಿಸಿಕೊಂಡು
ಸುಮಧುರವಾದ ಮನೋವಾದ್ಯವ ಜನಗಳಿಗೆ ಒಪ್ಪಿಗೆಯಾಗಿ
ತಲೆತೂಗಿಸಿ ಕಷ್ಟಗಳಲ್ಲಿ ಅದರ ಜೊತೆ ಸೇರಿಕೊಂಡು
ಅಪಸ್ವರವನ್ನು ಮನಸ್ಸಿನ ಗಡಿಗಳಿಂದಾಚೆಗೆ ಬಿಸಾಡಿ
ಅರ್ಥವುಳ್ಳ ಜೀವನವನ್ನು ಸಾಗಿಸಿದರೆ

ಆ ಮನೆಗೆ ಆ ಊರಿಗೆ ಆ ದೇಶಕೆ ಸಮೃದ್ಧಿಯ ಪತಾಕೆ ಹಾರಿಸಿ
ಎಲ್ಲರ ಮನೋವಾದ್ಯವೃಂದದಲ್ಲಿ ಸರಿಸ್ವರಗಳ ಭಾವನೆಗಳನ್ನು
ನುಡಿಸುವಂತಾದರೆ ಹೇಳುವವರೂ ತಲೆತೂಗಿಸಬೇಕು
ಕೇಳುವವರೂ ತಲೆತೂಗಿಸಬೇಕು
ತರವಲ್ಲದ ಮನೋಸ್ವರಗಳ ಬಿಟ್ಟು ಸರಿ ಯೋಗ್ಯ ಸ್ವರಗಳನ್ನೇ
ನನ್ನಲ್ಲಿ ಆದದ್ದು ಎಂದು ದೇವರಲ್ಲಿ ಕೇಳಿಕೊಳ್ಳುವುದೇ
ನಮ್ಮ ಜಗತ್ತಿನಲ್ಲಿ ನಮ್ಮ ಜನುಮ ಸಾರ್ಥಕ!

**- ಶ್ರೀ ಹರಿ.**

16-07-2012

## 284

ಒಂದೇ ಮನೋಗಣಿಯಲ್ಲಿ ನಾನಾ ಲೋಹಗಳು
ಚಿನ್ನ, ತಾಮ್ರ, ಕಬ್ಬಿಣ ಇತ್ಯಾದಿ ಇತ್ಯಾದಿ
ಯೌವ್ವನವನ್ನು ಪ್ರಚೋದಿಸುವ ಭಾವನೆಗಳು
ತ್ಯಾಗವನ್ನು ಅನುಸರಿಸುವ ಭಾವನೆಗಳು
ದ್ವೇಷ ಮಾಡುವ ಭಾವನೆಗಳು, ಪ್ರೀತಿ ಬಯಸುವ ಮಾತುಗಳು
ರೋಮಾಂಚನದ ಚೇಷ್ಟೆ ಮಾಡುವ ಭಾವನೆಗಳು
ವಿಶ್ವದ ರಹಸ್ಯಗಳ ಸಂಶೋಧನೆ ಮಾಡುವ ಭಾವನೆಗಳು

ತನಗಾಗಿ ಮಾತ್ರ ದುಡಿದ ಭಾವನೆಗಳು
ಮಿತ್ರನಾಗುವ ಭಾವನೆಗಳು, ಶತ್ರುವಾಗಿ ಮಾರ್ಪಾಡಾಗುವ
ಭಾವನೆಗಳು
ತನ್ನ ಸಂಸಾರ ಮಾತ್ರ ಹಿರಿದು ಎಂಬ ಭಾವನೆಗಳು
ಜಗತ್ತೇ ತನ್ನ ಸಂಸಾರ ಎಂದು ಹೇಳುವ ಭಾವನೆಗಳು
ಹಿಂಸಿಸುವ ಭಾವನೆಗಳು . . . ಕಾಪಾಡುವ ಭಾವನೆಗಳು

ಸಂತಸದಿಂದ ಹಿಗ್ಗುವ ಭಾವನೆಗಳು
ಆನಂದದಿಂದ ಎಲ್ಲರ ಜೊತೆ ಬೆರೆಯುವ ಭಾವನೆಗಳು
ತನ್ನ ಆದಿಯನ್ನೇ ಮರೆತಿರುವ ಭಾವನೆಗಳು
ಏಕಾಂತದಲ್ಲಿ ಶಾಂತಿಯಿಂದ ಕತ್ತಲಲ್ಲಿ ಜೀವಿಸುವ ಭಾವನೆಗಳು
ಭಾವನೆಗಳೇ ಇಲ್ಲದ ನಿಶ್ಶಬ್ದ ನಿರಾಳ ಆಕಾಶ ಆಗುವ ಭಾವನೆಗಳು
ತ್ಯಾಗಿಯಾಗಿ ಅವಧೂತನಾಗುವ ಭಾವನೆಗಳು



ರಾಜನಾಗಿ ಜಗವನ್ನಾಳುವ ಭಾವನೆಗಳು
ಕವಿಯ ಮನೋಭಾವನೆ ಕವನಗಳ ರಚಿಸುವ
ಶಕ್ತಿಯನ್ನು ತರಿಸುವ ಭಾವನೆಗಳು
ಇಲ್ಲದ್ದನ್ನು ಮನೋಆಕಾಶದಲ್ಲಿ ಕಲ್ಪಿಸಿ
ಎದುರಿಗೆ ಕಾಣಿಸುವಂತೆ ಸಲ್ಲಿಸುವ ಭಾವನೆಗಳು
ಒಂದೇ ಮನೋಗಣಿಯಿಂದ ಬರುತ್ತಿರುವ ಅಮೂಲ್ಯ
ಲೋಹಗಳು

ಚಿನ್ನ ಬೇಕೆಂದು ಅಗೆದರೆ ಚಿನ್ನ ಸಿಗುವುದು
ಬೆಳ್ಳಿ ಸಿಗಬೇಕೆಂದು ಅಗೆದರೆ ಬೆಳ್ಳಿ ಸಿಗುವುದು
ಸುಖ ಬೇಕೆಂದು ಅಗೆದರೆ ಸುಖ ಸಿಗುವುದು
ಕಷ್ಟಗಳು ಬೇಡ ಎಂದರೆ ಕಷ್ಟ ಓಡಿ ಹೋಗುವುದು
ದೇವರು ಬೇಕೆಂದರೆ ಅದಾಗಿಯೇ ದೇವನಾಗುವರು
ವಿಶ್ವದ ಅತಿ ದೊಡ್ಡ ನಿರ್ಮಾಣ ವಿಚಿತ್ರ ನಿರ್ಮಾಣ
ಮಾನವನಿಗೆ ವಿಶ್ವದ ಕೊಡುಗೆ ಮನೋಭಾವನೆಯ ಗಣಿಗಳು

**- ಶ್ರೀ ಹರಿ.**

16-07-2012

www.sriharikhoday.com

## 285

ಸಾರಥಿ ಚಕ್ರಗಳಿಲ್ಲದ ಮನೋರಥ
ಕಡಿವಾಣಗಳಿಲ್ಲದ ಮನೋರಥ
ಹೋದಲ್ಲೇ ಮತ್ತೆ ಮತ್ತೆ ಹೋಗುವ ಛಲ
ಎಷ್ಟು ಸಾರಿ ಆ ದೆಸೆಯಲ್ಲಿ ಹೋದರೂ
ಮತ್ತೆ ಹೋಗಬೇಕು ಸುಖ ಪಡೆಯಬೇಕೆಂಬ
ಬಯಸುವ ಮನೋರಥ!

ಕಾಲದ ಜೊತೆಗೆ ಸೇರಿಕೊಂಡಿರುವ ರಥ
ಸಕಾಲದಲ್ಲಿ ಹೊತ್ತು ಮಾಡದೆ
ಕಷ್ಟಗಳಿಲ್ಲದ ಸುಖ ಅನುಭವಿಸುವ
ಕನಸುಗಳನ್ನು ತೃಪ್ತಿ ಮಾಡಲು ಓಡುವ ರಥ

ಸುಖ ಪಡೆದರೆ ನಾನು ಓಡಿಸಿದೆ
ಕಷ್ಟ ಬಂದರೆ ನಾನು ಓಡಿಸಲೇ ಇಲ್ಲ...
ನನಗೇನು ತಿಳಿದಿಲ್ಲವೆಂದು ಹೇಳುವ ಸಮಯಗಳಲ್ಲಿ
ಸುಳ್ಳು ಜನುಮ ತಾಳುತ್ತಿರುವುದ ಕಂಡರೆ

ಜನಗಳಿರುವ ಬರಿ ಕಷ್ಟಗಳಿರುವ ಹಿನ್ನೆಲೆಯಲ್ಲಿ
ಅನೇಕ ಸುಳ್ಳುಗಳು ಹುಟ್ಟಿ ಜನಗಳ ಪ್ರಜ್ಞೆ
ಅಜ್ಞಾನದ ಕಡೆಗೆ ತಳ್ಳಿ
ಜೀವನದ ಓಟದಲ್ಲಿ ಅಜ್ಞಾನ ಮೈಲಿಗಲ್ಲಾಗಿವೆ!



www.sriharikhoday.com

ನಮ್ಮ ನೆನಪುಗಳನ್ನು ಶಿಸ್ತಿನಿಂದ ಶಿಸ್ತು ಕಲಿಸಿದರೆ
ರಾಜ ರಸ್ತೆಯಲ್ಲಿ ಮನೋರಥವನ್ನು ಓಡಿಸಿದರೆ
ಸುಳ್ಳು ಉದ್ಭವಿಸುವ ಮನಕ್ಕೆ ಕಷ್ಟದ ಸಮಯಗಳು ಬರದೆ
ಸುಖ ಪಡೆದು ಸುಖವ ನೀಡುತ್ತಿದ್ದರೆ

ಎಲ್ಲಾ ಮನಸ್ಸಿನ ಅನಿಸಿಕೆಗಳು ಕಾರ್ಯರೂಪವಾಗಿ
ಎದುರಿಗೆ ನಮ್ಮ ದರ್ಶನ ಪಡೆಯಲು
ನಿಂತಿರುವ ಒಂದು ಮನಸ್ಸಿನ ಜೊತೆ
ಸಾವಿರಾರು ಸುಖಗಳು ನಮ್ಮ ದರ್ಶನಕ್ಕೆ ಕಾದು ನಿಂತಿವೆ!

**- ಶ್ರೀ ಹರಿ.**

19-07-2012

## 286

ಎತ್ತಿ ಹಿಡಿಯುವ ಕವನ ಸಂಕಲನ
ಜ್ಞಾನದ ಬೆಳಕನ್ನು ಸೂಚಿಸುವ ಸಂಕಲನ!

ಹೊಸ ದೆಸೆಯಲ್ಲಿ ಚಿಂತಿಸುವ ದೇವರ ಅರ್ಚನ
ದುಃಖಗಳಿಂದ ಗಾಯ ಆಗಿರುವ ಮನಸ್ಸಿಗೆ ಔಷಧಿಯ ಲೇಪನ!

ಜಾರಿ ಕೆಳಗೆ ಬಿದ್ದಿರುವ ಮನೋ ನೆನಪುಗಳಿಗೆ
ಚೇತನ ನೀಡುವ ಲೇಖನ
ಅರ್ಥಗಳ ಪ್ರಕಟಿಸುವ ಕವನಗಳಿಗೆ ಸಮಾಜವನ್ನು
ಬದಲಿಸುವ ವ್ಯಾಖ್ಯಾನ!

ಶತ್ರುಗಳ ಮನಸ್ಸನ್ನು ಬದಲಿಸಿದ ಆಲಿಂಗನ
ತೆರೆದಿರುವ ಮನೋ ಹೊಸ್ತಿಲಿಗೆ ಹೊಸ ವಿಷಯಗಳ ಆಗಮನ!

ಕಾಂತಿಹೀನ ಮನಸ್ಸಿಗೆ ಜಾಣತನದ ತತ್ವ ಜ್ಞಾನ
ತೆರೆದ ದಿಟ್ಟತನದಿಂದ ದಿವ್ಯ ಜ್ಞಾನದ ದೆಸೆ ಕಡೆ ಪಯಣ!

ದೃಷ್ಟಿಕೋನವನ್ನೇ ಬದಲಿಸುವ ಸ್ವಾಭಿಮಾನ
ಹಿರಿತನ ಕಿರಿತನ ಮರೆಸಿ ಶೃಂಗ ಎತ್ತರವ ತೋರಿಸುವ ಸಂಕಲನ!

ತಿಳಿಗೇಡಿ ಮಾತುಗಳಿಗೆ ಕಿವಿ ಕಿವುಡಾಗಿ
ಭಾವನೆಗಳನ್ನು ಮಾರ್ಪಾಟು ಮಾಡಲು ಕವನ ರಚನ
ಮೇಲೆತ್ತಿ ಹಿಡಿಯುವ ಕವನ ಸಂಕಲನಗಳೇ
ಜೀವನದ ಸತ್ಯ ನಿದರ್ಶನ!

**- ಶ್ರೀ ಹರಿ.**

20-07-2012



## 287

ಕೈ ಚಾಚುವವರೆಗೂ ಮಾತ್ರ ಉದ್ದ
ಕಣ್ಣಾಯಿಸುವವರೆಗೂ ಮಾತ್ರ ಕಣ್ಣುದೃಷ್ಟಿ
ಮನಸ್ಸು ಚಾಚುವವರೆಗೂ ಬ್ರಹ್ಮಾಂಡದ ಉದ್ದಳತೆಗಳು
ಅನೇಕ ರೀತಿಯ ಮನಸ್ಸುಗಳು
ಅನೇಕ ನೆನಪಿನ ಗುಂಪುಗಳ ಬುದ್ಧಿವಂತಿಕೆಯೇ
ಮಾನವನ ಬುದ್ಧಿ!

ಇಂತಹ ಅಮೂಲ್ಯ ಸ್ವತ್ತನ್ನು ತಿಳಿಯದೇ ಇರುವುದು
ಜಗತ್ತಿನ ಗೋಳು
ದೇವರು ಕೊಟ್ಟಿರುವ ಬುದ್ಧಿಯನ್ನು ಕಾಲದ ತೊಟ್ಟಿಯಲ್ಲಿ
ಬಿಸಾಡಿರುವ ನಾವುಗಳು
ಅರ್ಥ ತಿಳಿಯದೆ ಇರುವುದೇ ಮಾನವನ ಗೋಳು!

ಬುದ್ಧಿ ಜೊತೆಗೆ ನೆನಪಿನ ಗುಂಪು ಜೊತೆಗೊಂಡರೆ
ಶಿಸ್ತಿನ ವ್ಯಾಯಾಮ ಮಾಡಿದರೆ
ನಮ್ಮಲ್ಲೇ ನಾವು ಬೆಳೆದುಕೊಳ್ಳುವ ಶಕ್ತಿ
ಬ್ರಹ್ಮಾಂಡ ಸೃಷ್ಟಿಕರ್ತನ ಇರುವಿಕೆಯ ಅರಿವಾಗಿಸಿ
ವಿಶ್ವಚಿಂತನೆಯಲ್ಲಿ ನಾವೇ ತೊಡಗಿಸಿಕೊಂಡು

ಕೆಟ್ಟ ಸ್ವಪ್ನಗಳಾದ ಮನೋಕಷ್ಟಗಳಿಗೆ ಗುರಿಯಾಗದೆ
ಕಾಲದ ಜೊತೆಗೆ ನಮ್ಮ ನೆನಪಿನ ಒಪ್ಪಿಗೆ
ಪರಿಸರಕ್ಕೆ ವಿಶ್ವಕ್ಕೆ ಋತು ಬದಲಿದ ಸಮಯದ ಸಂಭ್ರಮ
ಸುಖ ನಮಗೆ ನಮ್ಮ ನೆರಳಾಗಿರುವ ನೆನಪುಗಳಿಗೆ
ಸೃಷ್ಟಿಯ ಜೊತೆಗೆ ಉಲ್ಲಾಸದಿಂದ ತೂಗಾಡುವುದೇ ಜೀವನ!

**- ಶ್ರೀ ಹರಿ.**

20-07-2012



www.sriharikhoday.com

## 288

ಆಧುನಿಕತೆ ಆಶೀರ್ವಾದದ ಜೊತೆಗೆ ಶಾಪ
ಕಾಲಕ್ಕೆ ಮಸಿ ಬಳಿಯುವ ಇಚ್ಛೆಗಳ ನೆಪ
ನಮ್ಮ ಸಂಸ್ಕೃತಿಯನ್ನು ಅಲ್ಲಗಳೆಯುವ ಕೋಪ
ಆಧುನಿಕತೆಯ ಆಡಂಬರದಲ್ಲಿ ಕಾಣದೆ ಸೇರಿಹೋಗಿದೆ
ಸಂಸ್ಕೃತಿಯ ಕುರೂಪ!

ಉಡುಪು-ತೊಡುಪು, ಕಾಲಿನ ಅಲಂಕಾರ
ಉಗುರುಗಳ ಅಲಂಕಾರ, ತುಟಿ-ಕಣ್ಣುರೆಪ್ಪೆಗಳ ಅಲಂಕಾರ
ನಮ್ಮ ಸಂಸ್ಕೃತಿಯ ನೆನಪುಗಳಿಗೆ
ಜೀವನದ ಹಾದಿ ತಪ್ಪಿಸುತ್ತಿರುವ ಹರಿಕಾರ

ಹಳೆಯದಾಗಿರುವ ನಮ್ಮ ಸಂಸ್ಕೃತಿಯ ಹಾದಿಯನ್ನು ಮರೆಯದೆ
ಈಗಿನ ತೀರ್ಪಿಗೆ ನಾಳೆ ವಿಷಾಧಿಸದೆ
ಆಧುನಿಕತೆಯ ಜೀವನ ಕಾಣ್ಕೆಯಾಗದೆ
ನಮ್ಮ ಹಳೆಯ ಜೀವನದಲ್ಲಿ ಅಡಗಿರುವ
ಮೌಲ್ಯಗಳನ್ನು ಹಿಂದೆ ಸರಿಸದೆ

ಜೀವನದ ಸತ್ಯದ ಇರಾದೆಗಳನ್ನು ಪಾಲಿಸಿ
ಜೀವಿಸು ಎಂದು ಜನುಮ ಕೊಟ್ಟ ಹಿರಿಯರಿಗೆ
ಪ್ರೀತಿಯ ಮರ್ಯಾದೆ!

**- ಶ್ರೀ ಹರಿ.**

22-07-2012



## 289

ಬೆಳೆಯುತ್ತಿರುವ ಜಗತ್ತಿಗೆ ಕೊನೆಯುಂಟೇ
ಜಗತ್ತಿಗೆ ಕೊನೆಯೇ ಇಲ್ಲ ಎಂದು ತಿಳಿದು
ಈಗಿರುವ ಕೆಟ್ಟ ಭಾವನೆಗಳಿಗೆ ಕೊನೆ ಬರುವುದೇ
ಹೆಚ್ಚಾಗುತ್ತಿರುವ ಭೇದ-ಭಾವನೆಗಳಿಗೆ ಕೊನೆಯುಂಟೇ
ನೆಮ್ಮದಿ ಮನೋನಿಶ್ಶಬ್ದ ಪ್ರಜೆಗಳಿಗೆ ಸಿಗುವುದೇ
ನಂಬಿಕೆಯ ಬುನಾದಿಯೇ ಸಡಿಲವಾಗುತ್ತಿದೆ!

ಏರು-ಪೇರು ಆಗುತ್ತಿರುವ ಮನೋತರಂಗಗಳು
ನಂಬಿ ಪ್ರೀತಿಸುತ್ತಿರುವುದಕ್ಕೆ ಯಾವ ಆಧಾರವೂ ಇಲ್ಲದೆ
ದಿಕ್ಕು-ದೆಸೆಗಳಿಲ್ಲದ ಭಾವನೆಗಳ ಚೆಲ್ಲಾಟ
ಸುಮ್ಮನಿರುವ ಜ್ವಾಲಾಮುಖಿಗೆ ಹೊಡೆದು
ಪ್ರಳಯ ತಿಳಿಸುವ ಕಾಲ ಸನ್ನಿವೇಶಗಳೂ
ಹೆದರಿಕೆ ಅಶಾಂತಿ ಅಪನಂಬಿಕೆಗಳ ರಭಸದ ಓಟಗಳು!

ದ್ವೇಷವಿಲ್ಲದ ವಿಶ್ವ ನಿರ್ಮಾಣಕ್ಕೆ ದ್ವೇಷದ ಹೆಪ್ಪಾಕಿ
ಭವಿಷ್ಯದ ಹೊಸ ನೆಮ್ಮದಿಯ ನಿರ್ಮಾಣಕ್ಕೆ ಹೆಜ್ಜೆ ಹಾಕದೆ
ದೇವರ ಆಸ್ತಿಯಾದ ಈ ಜಗತ್ತಿಗೆ ತಮ್ಮ ತಮ್ಮ ಗಡಿಗಳನ್ನು
ವಿಂಗಡಿಸುತ
ಮಾತಾಡದೇ ಮೂಕವಾಗಿರುವ ಗಡಿ ಕಲ್ಕಂಬಗಳು
ಪ್ರಳಯಾಂತಕ ಹೊಸ ಹೊಸ ಜಗಳಕ್ಕೆ ಕುಂಟುನೆಪಗಳ ಕಟ್ಟುತ್ತ
ದ್ವೇಷಗಳ ಕಾಣದ ಜೀವನದ ಪಯಣ ಅನರ್ಥದ ದೆಸೆ ಓಡುತ್ತಿದೆ!

**- ಶ್ರೀ ಹರಿ.**

23-07-2012

www.sriharikhoday.com

## 290

ನನ್ನ ನಾಡು  ಎಂದು ಕನ್ನಡ ಮಾತ್ರ ಅನ್ನಬೇಡ
ಗುಲಾಬಿಯನ್ನು ಎಲ್ಲರೂ ಗುಲಾಬಿ ಎನ್ನುವಂತೆ
ಇತಿಹಾಸದ ರತ್ನಗಳಾದ ನಾವು
ಬೆಳಕು ನಮ್ಮದು ಮಾತ್ರ ಅನ್ನದೆ
ಬೆಳಕು ಎಲ್ಲರದು ಎಂದು ಹೇಳು!

ಮನ ಒಡೆಯದೆ ಎಲ್ಲರ ಮನಸ್ಸೂ ಸೇರಿ
ನಮ್ಮ ನಾಡು ಎಂದು ಹಾಡುತ
ನಾವು ಬಾಳುತ್ತಿರುವ ಬೀಡು ನಮ್ಮದು ಎನ್ನುತ
ಕವಿಗಳು ಬಳಸುವ ಮನೋಭಾಷೆ ನಮ್ಮೆಲ್ಲರದು ಎನ್ನುತ
ಒಳಗೆ-ಹೊರಗೆ ನಾವೆಲ್ಲ ಭೂತಾಯಿಯ ಮಕ್ಕಳು ಎನ್ನೋಣ!

**- ಶ್ರೀ ಹರಿ.**

24-07-2012



## 291

ಜೀವನದ ಒಳ್ಳೆಯ ದಿವ್ಯಲೀಲೆಯಲ್ಲಿ ಮನತೆರೆದು
ಅನುಭವಿಸೋಣ
ಜೀವನ  ಹೆತ್ತಿರುವ ಭಾವನೆಗಳು ತನ್ನದು ಮಾತ್ರ ಎನ್ನದೆ
ಬೇಸರಪಡದೆ-ಗೊಣಗದೆ, ಕೊರಗದೆ
ಒಂದೇ ಜೀವನದ ಬಳ್ಳಿಯಿಂದ ಹುಟ್ಟಿರುವ
ನಾನಾ ಹೂಗಳು ಎನ್ನುತ

ಎಲ್ಲಾ ಹೂಗಳಲ್ಲಿ ಹೊಸಲೋಕದ
ಅಡಿಯಲ್ಲಿರುವ ಕುಸುಮವ ಸೇವಿಸಿ
ಹೊರ ಹೊಮ್ಮುತ್ತಿರುವ ಪ್ರೀತಿಯ ಸ್ವಾದವನ್ನು ಸ್ವೀಕರಿಸಿ
ಗಂಭೀರ ಮನದಿಂದ ಜೊತೆ ಜೀವಿಸೋಣ ಎನ್ನುತ
ಪ್ರೀತಿಯನ್ನು ಎಲ್ಲರ ಜೊತೆಗೆ ಹಂಚುತ
ನಮ್ಮಲ್ಲಿರುವ ದ್ವೇಷವನ್ನು ಮರೆತುಬಿಡೋಣ!

**- ಶ್ರೀ ಹರಿ.**

24-07-2012



www.sriharikhoday.com

## 292

ನನಗಾಗಿ ನಾ ನೋಡಿದನೆಂದು ತೆರೆದು ಹೊರ ತೋರಿಸುತ್ತಿರುವ
ಸಾವಿರಾರು ಕಣ್ಣುಗಳಿಂದ ಚಮುಕಿ ಹೊಳೆಯುತ್ತಿರುವ
ನಿನ್ನ ಕಣ್ಣುಗಳ ನಾ ನೋಡುತ್ತಿದ್ದರೆ
ಬರೆಯುವ ಮಂತ್ರದಿಂದ ನನ್ನನ್ನು ನೀ ಬೆರೆಸಿಕೊಂಡು
ನಿನ್ನ ಹೆಜ್ಜೆಗಳ ಜೊತೆ ನನ್ನ ಮನವ ಆಡಿಸುತ್ತಿರುವ ನವಿಲೆ. .

ಮಾತನಾಡಲು ತಿಳಿಯದ ನೀ
ಬಣ್ಣ ಬಣ್ಣಗಳಿಂದ ಪ್ರೀತಿಯನ್ನು ಮಿನುಗಿಸುತ್ತಿರುವ ನೀ
ಭಾಷೆಗಳ ಬಡತನವನ್ನು ನೀ ನುಂಗಿ
ಸಿರಿತನದ ಸುಖ ನೀಡುತ್ತಿರುವ ನಿನ್ನ ಮಿತ್ರ ಭಾವನೆ
ಹಾರುತ ಹಾರುತ ಪ್ರಕೃತಿಯ ದೆಸೆಗಳಲ್ಲೇ

ಒಂದೇ ಕಾಲದಲ್ಲಿ ನನ್ನನ್ನು ಪ್ರಕೃತಿಯ ಜೊತೆಗೆ ಬೆರೆಸಿರುವೆ
ನೀ ನನ್ನ ಮನದ ಅನಿಸಿಕೆಗಳ ಜೊತೆ ನಿಂತಿರುವುದು
ನಿನ್ನ ಒಪ್ಪಿಗೆಯ ಮನೋ ಪ್ರದರ್ಶನದ ಆಟ
ನನ್ನ ಹಿಗ್ಗನ್ನು ಹೆಚ್ಚಿಸುತ್ತಿರುವೆಯಾ ನವಿಲೆ!

**- ಶ್ರೀ ಹರಿ.**

24-07-2012



## 293

ಹಗುರಾದ ಚಿನ್ನದ ಮಾಂಗಲ್ಯ
ಅಗಾಧವಾದ ಜೀವನ ಭಾರ
ಜೀವನ ಭಾರವಲ್ಲ
ನೀ ನನ್ನ ಜೊತೆ ಜೀವನ ಹಗುರ ಹಗುರ!

ನನ್ನ ಮನದಾಳದ ಸುಳಿಗೆ
ನಿನ್ನ ಪ್ರೀತಿ ನನ್ನೆಡೆಗೆ ತರಿಸಿ
ಕತ್ತಲ ಕೋಣೆಯಲ್ಲಿ ನಿನ್ನ ನಾ ನೋಡಿದ ಮನೋರೂಪ
ಮತ್ತೆ ಮತ್ತೆ ನೀ ನನ್ನ ಅರ್ಧಾಂಗಿಯಾಗಿರುವ ಮನಸ್ಸಿನ ಕನಸು
ನಮ್ಮಿಬ್ಬರ ಬಾಂಧವ್ಯಗಳು ಕನಸನ್ನು ಅರಳಿಸುತ್ತಿದೆ!

ಬರಿದಾಗಿದ್ದ ನನ್ನ ಮನಸ್ಸಿನ ಮೇಲೆ
ಪ್ರೀತಿ-ಪ್ರೇಮ, ರತ್ನ-ಮುತ್ತುಗಳ ಸುರಿಸಿ
ನಮ್ಮ ಬದುಕಿನ ಸಂತೆಯಲ್ಲಿ
ತೆಗೆದುಕೊಳ್ಳಿ ಕೊಂಡುಕೊಳ್ಳಿ ಎಂದು
ಕಿವಿಗೆ ಬೀಳುತ್ತಿರುವ ಧ್ವನಿ

ನಾವು ರತಿ-ಮನ್ಮಥರಾಗಿ
ನಾ ನಿನ್ನ ಮನೆಯ ಗೃಹಲಕ್ಷ್ಮಿಯಾಗಿ
ಸಂತೆಯಲ್ಲಿ ದೂರದಿಂದ ಅಮ್ಮಾ . . . ಎಂದು
ಕೂಗುತ್ತಿರುವ ಅಕ್ಷೀರ ಧ್ವನಿ



www.sriharikhoday.com

ನಮ್ಮ ಮನೆ ನಮ್ಮ ಮನ ತುಂಬಲು
ಮಗು ಬರುತ್ತಿರುವ ಕರೆ

ಚಿರಕಾಲವಾಗಿ ಬಾಳಿ ಎಂದು
ಆಶೀರ್ವದಿಸುತ್ತಿರುವ ಕಾಲ
ತೆಂಗಾಗಿ ಅತಿ ಎತ್ತರಕ್ಕೆ ಬೆಳೆದಿರುವ ತೆಂಗಿಗೆ
ನಮ್ಮಿಬ್ಬರ ಸುಖ ಜೀವನ ಕಾಣಿಸುತ್ತಿದೆ!

**- ಶ್ರೀ ಹರಿ.**

25-07-2012



# 294.

ನನ್ನ ಮನದ ಚೆಲುವೆಯೇ
ನಾಳೆ ನಾವಿಬ್ಬರು ಗಂಡ ಹೆಂಡತಿ
ಹಕ್ಕಿಯಂತೆ ಹಾರುತ್ತಿದ್ದ ನಿನ್ನ ರೂಪ
ನನ್ನ ಮನದ ಬಲೆಗೆ ಸಿಕ್ಕಿ ಬೀಳುವುದು!

ನುಣುಪಾದ ನಿನ್ನ ಮೈಯ್ಯ ನೋಡುವ ನನ್ನ ಕಣ್‌ಗಳು
ನಮ್ಮ ಮುಹೂರ್ತದಲ್ಲಿ ಬೀಳುವ ಅಕ್ಷತೆಕಾಳು
ನಿನ್ನ ಮೈಗೆ ನೋವಾದೀತು
ನಮ್ಮಿಬ್ಬರ ನಂಬಿಕೆಯ ಬಾಳು
ಮನೆ ಊರು ಕೇರಿ ಜನಗಳ ಜೊತೆಗೆ ಸಂತಸದಿ ಜೀವಿಸೋಣ!

ನನ್ನ ಗದ್ದೆಯಲ್ಲಿ ನಿನ್ನ ಕೈ ಕೆಸರಾಗುವುದು ಹಂಗೆ
ನಿನ್ನ ಕೈಕಾಲುಗಳಿಗೆ ಕೆಸರು ಹೇಗೆ ಸೋಂಕಿಸುವುದು
ನೋಡಲು ಕಾಯುತ್ತಿರುವ ಈ ನನ್ನ ಮನಕ್ಕೆ
ನನ್ನ ಗದ್ದೆಯ ಹಳ್ಳ-ಕೊಳ್ಳಗಳಲ್ಲಿ ನಿನ್ನ ಕಾಲಿಗೆ
ನೋವಾಗುವುದಲ್ಲ ಎಂಬ ಕಷ್ಟ ನನ್ನನ್ನು ಕಾಡುತ್ತಿದೆ!

ನಮ್ಮ ದಾಂಪತ್ಯ ಜೀವನದಲ್ಲಿ ಇಂಪಾಗಿ ಮಾತನಾಡುತ್ತ
ನಮ್ಮ ದಾಂಪತ್ಯ ಜೀವನದಲ್ಲಿ ಪ್ರೀತಿ ತುಂಬಿದ ಮಾತನಾಡುತ್ತ
ನಮ್ಮ ದಾಂಪತ್ಯ ಜೀವನದಲ್ಲಿ ತವರಿನ ಸುಖ ಮರೆತು
ನಮ್ಮ ಮನೆ ಎಂದು ನೀ ಹೇಳುತ

ನಮ್ಮ ದಾಂಪತ್ಯ ಜೀವನದಲ್ಲಿ ಹಿರಿಯರ
ಆಶೀರ್ವಾದಗಳನ್ನು ಸುರಿಸಿಕೊಳ್ಳುತ್ತ
ಚಿಕ್ಕ ಮಕ್ಕಳಿಲ್ಲದ ನಮ್ಮ ಮನೆಗೆ ತೊಟ್ಟಿಲು ಕಟ್ಟೋಣ!

**- ಶ್ರೀ ಹರಿ.**

26-07-2012



www.sriharikhoday.com

## 295

ನನ್ನ ನಿನ್ನ ಮೇಲಿರುವ ಪ್ರೀತಿ
ಜಗತ್ತಿಗೇ ತಿಳಿಯದೆ
ನಿನ್ನ ಮೇಲಿರುವ ಮೋಹ
ಹೃದಯದಲ್ಲಿ ನಿನ್ನನ್ನು ಮಾತನಾಡಿಸಲು ಕಾಯುತ್ತಿದೆ!

ನನ್ನ ಮನೆ ಎದುರಿಗೆ ನೀ ಸುಳಿದಾಗಲೆಲ್ಲ
ಆತುರದ ಬಿರುಗಾಳಿ ಯಾರೋ ಯಾರಾದರೊಬ್ಬರು
ನಮ್ಮಿಬ್ಬರ ದೃಷ್ಟಿಗಳಿಗೆ ಗ್ರಹಣಗಳೋ!

ನಿನ್ನ ಹಿಂಬಾಲಿಸಿ ನಾ ನಿನ್ನ ಮನೆ ಎದುರಿಗೆ ಬಂದರೆ
ನಿನ್ನ ಅಜ್ಜಿ ಹೊಸ್ತಿಲ ಮೆಟ್ಟಲಿನ ಮೇಲೆ ಕುಳಿತಿದ್ದರೆ
ನನ್ನ ಕಷ್ಟಾ ದೇವರಿಗೇ ಪಾಲು!

ಬೆಕ್ಕಿನಂತೆ ಹಿಂಬಾಲಿಸುತ್ತಿರುವ ನನಗೆ
ನಿನ್ನ ನೀಲಿ ಕಣ್ಣುಗಳು, ನಿನ್ನ ಕೆಂಪಿನ ತುಟಿಗಳ ಅರೆನಗೆ
ಕಣ್ಣಿಂದ ಪ್ರೇಮದ ಅಲೆಗಳು
ನನ್ನನ್ನು ಅತಿ ಎತ್ತರಕ್ಕೆ ತೇಲಿಸಿದೆ!

ನಾ ಹುಡಗ... ನೀ ಹುಡುಗಿ
ನಾ ಗಂಡು... ನೀ ಹೆಣ್ಣು

0



ನಾ ಗಂಡ ನೀ ಹೆಂಡತಿ
ನಾನು ತಂದೆ... ನೀನು ತಾಯಿ ಎಂಬ ಮನೋ ಚಿತ್ರಗಳು

ನಮ್ಮಿಬ್ಬರ ಜಾತಕಗಳನ್ನು ಹಿರಿಯರು ತರಿಸಿ
ಮದುವೆ ಚಪ್ಪರದ ಏರ್ಪಾಡುಗಳು
ಭರದಿಂದ ನಡೆದಿರಲು ಓಲಗದ ಸದ್ದು
ನನ್ನಿಂದ ನಿನ್ನ ಕೊರಳಿಗೆ ಮಾಂಗಲ್ಯ ಕಟ್ಟಿಸುತ್ತಿದೆ.

**- ಶ್ರೀ ಹರಿ.**

27-07-2012



www.sriharikhoday.com

## 296

ನಮ್ಮಗಳ ಪ್ರೀತಿಯ ಆಳ ಯಾರಿಗೂ ತಿಳಿಯದೆ
ನಾ ನಿನ್ನಲ್ಲಿ ಸೇರಿ ಹೋಗಿರುವೆ ಪ್ರೇಯಸಿಯೇ
ತನು - ಮನದ ಆಳದಲ್ಲಿರುವ ನಮ್ಮ ಜೊತೆ
ಹೆದರಿಕೆಯನ್ನು ಮರೆಸಿದೆ!

ಭಯವಿಲ್ಲದ ನಮ್ಮ ಮನೋಮಿಲನ
ಹೆದರಿಕೆಯಿಂದ ಸಮುದ್ರ ಅಲೆಗಳು
ದಡದಲ್ಲಿ ಸೇರುವಂತೆ

ಮುಂಜಾನೆಯ ಮಂಜು ಕಲ್ಮಶರಹಿತವಿದ್ದಂತೆ
ನಮ್ಮಿಬ್ಬರ ಪ್ರೀತಿ-ಪ್ರೇಮ ಕಲ್ಮಶವಿಲ್ಲದ
ಪವಿತ್ರ ರೂಪ ತಾಳಿದೆ!

ಕಾಲವೇ ತಿಳಿಯದ ನಮ್ಮನ್ನು ಮರೆತಿರುವ
ನಮ್ಮ ಪ್ರೀತಿ-ಪ್ರೇಮ ರಹಸ್ಯಗಳು
ಪ್ರೀತಿ-ಪ್ರೇಮಗಳಿಗೆ ಕೊನೆಯೇ ಕಾಣಿಸದಂತಿದೆ!

ಏಕಾಂಗಿಯಾಗಿರುವ ನನಗೆ, ಏಕಾಂಗಿಯಾಗಿರುವ ನಿನಗೆ
ನಮ್ಮ ಜೊತೆ ಜೋಡಿಗೆ ಕಾಣಲು ಋತುಗಳು
ಕಾದು ಪ್ರೇಮ ಪ್ರಚೋದನೆಯನ್ನು ಮಾಡುತ್ತಿದೆ!

**- ಶ್ರೀ ಹರಿ.**

28-07-2012



## 297

ಜನಗಳೇ ಚಿಂತನೆಗಳನ್ನು ತೊಲಗಿಸಿ. .
ಬುದ್ಧಿಯನ್ನು ಮಂಕು ಮಾಡುತ್ತಿರುವ ಚಿಂತೆ
ಜ್ಞಾನದ ದೀಪವನ್ನು ಆರಿಸುತ್ತಿರುವ ಚಿಂತೆ
ಜನಗಳೇ ಚಿಂತೆಯನ್ನು ತೊಲಗಿಸಿ!

ದ್ವೇಷವ ಹೆಚ್ಚಿಸುವ ಮನೋ ಆಳದ ಚಿಂತೆ
ಹಿತಚಿಂತನವನ್ನು ಹಿತವೆಂದು
ಸಂಬಂಧಗಳನ್ನು ದೂರಪಡಿಸುವ ಚಿಂತೆ
ಯಾರೋ ಒಬ್ಬರ ಚಿಂತೆಗೆ ದೇಶವನ್ನೇ ಬಲಿಕೊಡಿಸುವ ಚಿಂತೆ
ರೂಪ ನೋಡಿ ದ್ವೇಶ ತರಿಸುವ ಚಿಂತೆ
ಜಗದಲ್ಲಿ ಮನದಾಳದಲ್ಲಿರುವ ಚಿಂತೆ ತೊಲಗಿಸಿ!

ತುಟಿಯ ಮೇಲೆ ಬೆಳಗುತ್ತಿರುವ ನಗೆಯನ್ನು ಆರಿಸುವ ಚಿಂತೆ
ಕಷ್ಟಗಳು ತನ್ನದು ಮಾತ್ರ
ಬೇರೆಯವರ ಕಷ್ಟಗಳಿಗೆ ರೆಪ್ಪೆ ಎತ್ತಲಾಗದ ಚಿಂತೆ
ಕನ್ನಡಿ ಎದುರು ತನ್ನ ರೂಪವನ್ನೇ ಕನ್ನಡಿಗೆ ನುಂಗಿಸುವ ಚಿಂತೆ
ನಕ್ಕರೇ ನಷ್ಟ ನಕ್ಕರೆ ಒಪ್ಪಿಗೆ ನಕ್ಕರೆ ಮೋಸ ಎಂದು ಹೇಳಿ
ಜನಗಳ ಸುಖಸ್ಥಿತಿಯನ್ನು ಕಬಳಿಸುತ್ತಿರುವ ಚಿಂತೆ
ಹೆತ್ತವರನ್ನು ಮರೆಸುವ ಅರ್ಥವಿಲ್ಲದ ಚಿಂತೆ

ನಾವೆಲ್ಲರೂ ಸೇರಿ ಚಿಂತೆಗಳನ್ನು ದೂರ ಮಾಡಿ
ಎಲ್ಲರ ಮುಖದ ಮೇಲೆ ನಗೆ ವಿಶ್ವಾಸ ಧೈರ್ಯವನ್ನು ತರಿಸಿ
ಅರ್ಥವುಳ್ಳ ಪ್ರಗತಿ ತರಿಸುವ ಚಿಂತನೆ ಮಾಡಿ
ಜನಗಳಲ್ಲಿ ಸುಖದ ಮೋಡಗಳ ಜೊತೆ ಆಡುತ
ಸಮೃದ್ಧಿಯ ಮಳೆ ಆಕಾಶದಿಂದ ತರಿಸೋಣ
ಹೇ ಜನಗಳೇ, ಚಿಂತನೆಗಳನ್ನು ತೊಲಗಿಸಿ!

**- ಶ್ರೀ ಹರಿ.**

30-07-2012



www.sriharikhoday.com

## 298

ಪ್ರೀತಿ ಕಳೆದು ಹೋಗಿದೆ
ಆಕಾಶ ಮಲಗಿಕೊಂಡು ಭೂಮಿಯನ್ನೇ ಮರೆತಿದೆ
ಭೂಮಿ ಮತ್ತು ಆಕಾಶ ಹೇಗೆ ಬೆರೆಯದೆ
ದಿಗಂತಗಳಲ್ಲಿ ಕಳೆದುಹೋಗುವುದೋ
ನಮ್ಮಿಬ್ಬರ ಪ್ರೀತಿ ಕಳೆದುಹೋಗಿದೆ!

ನಿನ್ನ ಸೆರಗು ನನ್ನ ಮೈ ಮೇಲೆ
ಸರಿದು ಹೋದ ಕ್ಷಣಗಳು
ಜೀವನಪರ್ಯಂತ ಪ್ರೀತಿಯ ಬೆಳಕನ್ನು ಮಿನುಗಿಸುತ್ತ
ನನ್ನ ಮನದ ಕತ್ತಲಾಳದಲಿ
ಮಿನುಗಿ ಮಿನುಗಿ ಉರಿಯುತ್ತಿದೆ!

ನೀ ಕಳೆದುಹೋಗಿಲ್ಲ
ಎಂದೂ ನನ್ನ ಜೊತೆಯೇ ಇರುವ ಮನೋ ಸತ್ಯ
ಈ ಜಗತ್ತಿನಲ್ಲಿ ಸತ್ಯಕ್ಕೆ ಬೆಲೆ ಇದ್ದರೆ
ನೀ ನನ್ನ ಜೊತೆ ಬೆರೆಯುವೆ!

ಋತುಗಳು ಹೇಳುತ್ತಿವೆ, ನಿಲ್ಲದೇ ಘೋಷಿಸುತ್ತಿದೆ
ಅವಳು ನಿನ್ನವಳು, ಅವಳು ನಿನ್ನವಳು, ಅವಳು ನಿನ್ನವಳೆಂದು
ಕಾಲ ನನ್ನ ದುಃಖವನ್ನು ನೋಡಲಾರದೆ
ನನ್ನ ದುಃಖ ನೋಡಲು ಅಂಜುತ ಯಾರಿಗೂ ಸಿಗದೆಡೆ
ನನ್ನ ಜೊತೆ ಕಾಲವೂ ದುಃಖಿಸುತ್ತಿದೆ!



www.sriharikhoday.com

ದುಃಖದಲ್ಲಿ ನೊಂದು ನೊಂದು
ಸ್ವಪ್ನದಲ್ಲಿ ಬರುತ್ತಿದ್ದ ನೀ
ದುಃಖ ನೋಡಿ ಸ್ವಪ್ನಗಳೇ ಬರದೆ
ತಾವಿದ್ದಲ್ಲಿ ಕಳೆದುಕೊಂಡು ಹೋಗಿವೆ!

ಹೇ ಋತುಗಳೇ, ಎಲ್ಲವೂ ತಿಳಿದಿರುವ ನೀವು
ನನ್ನ ಸುಖದ ಜೊತೆಗೆ ನೀವು ಜೊತೆ ಸುಖ ಪಡೆಯಿರಿ
ನಾನು ಏನು ಕೇಳುವೆನೆಂದು ನೀವು ತಿಳಿದು ಹಿಂಸೆ ಕೊಡಬೇಡಿ
ಕಾತುರದಿಂದ ಕಾಯುತ್ತಿರುವ ಋತುಗಳೇ
ನನ್ನ ಪ್ರೇಮದ ಫಲವನ್ನು ಜೊತೆಗೆ ತನ್ನಿ!

31-07-2012

## 299

ಅಂತರಾಳದ ದೇವರು
ಇದ್ದು ಸುಮ್ಮನಿದ್ದು
ನೆನಪುಗಳಿಗೆ ಎಲ್ಲಾ ಧೈರ್ಯವನ್ನು ಕೊಟ್ಟು
ಪೂಜೆಯನ್ನೇ ಕೇಳದ ನಮ್ಮ ಮನೋದೇವರು
ಅಸಾಧ್ಯ ಕೆಲಸಗಳನ್ನು ಮಾಡಿಸುತ
ನಮ್ಮ ಮನದಲ್ಲಿರುವ ಮನೋದೇವರಿಗೆ ನಮೋ ನಮಃ

ಇದು ಇಲ್ಲ. . . ಅದು ಇಲ್ಲಾ ಎನ್ನುವವರಿಗೆ
ಹಿಂದೆ ತಿರುಗಿ ನೋಡುವುದರಲ್ಲಿ
ಬೇಡಿಕೆಗಳು ಸಿದ್ಧವಾಗಿ ನಿಂತಿರುವುದು ಕಂಡಾಗ
ಪುಷ್ಕಳಾದೇವಿ ಆಶೀರ್ವಾದವೆಂದೇ ಹೇಳುವುದು ಹೆಚ್ಚು
ಈ ಅನುಭವ ಬರೀ ಅನುಭವವಲ್ಲ
ಕಾರ್ಯರೂಪದಲ್ಲಿ ಹೊಳೆದು ಮಿಂಚನ್ನು ನೋಡಿರುವ
ಅನುಭವಗಳು !

ನಾವು ಪ್ರಪಂಚವನ್ನೇ ಸರಿಪಡಿಸುವೆನೆಂದರೆ ಆಗದು
ನಾವುಗಳು ನಮ್ಮನ್ನೇ ನಾವು ಸರಿಪಡಿಸುವೆನೆಂದರೆ ಆಗುವುದು
ಜೊತೆ ಜೀವಿಸುತ್ತಿರುವ ನಾವು ಎಲ್ಲರ ಜೊತೆ ಜೀವಿಸುತ
ಉದಯಿಸುತ್ತಿರುವ ಸೌರಾಷ್ಟ್ರ ಕ್ಷತ್ರಿಯ ಮಕ್ಕಳ ಏಳಿಗೆಗೆ
ನಮ್ಮ ಜೀವಿಸುವ ಸಮಯಗಳಲ್ಲಿ ಕಾಲವನ್ನು ನೀಡಿ. . .

ಈ ಪ್ರಪಂಚದಲ್ಲಿ ಜೀವಿಸುತ್ತಿರುವ ಕ್ಷತ್ರಿಯ ಸೌರಾಷ್ಟ್ರ ಸಮಾಜ
ಹೊಸ ತರಹದ ಜೀವನಕ್ಕೆ ತಳಹದಿ ಕಟ್ಟುತ
ಅಸಾಧ್ಯವನ್ನು ಸಾಧ್ಯವಾಗಿಸೋಣ !

**- ಶ್ರೀ ಹರಿ.**

06-08-2012



## 300

ಸಂತಸ ಸಂತೋಷ ನೆನಪುಗಳು ಶತ್ರುಗಳ ತರಿಸಿದರೆ
ದುಃಖ ಸಂತಾಪಗಳು ಮೈತ್ರಿಯನ್ನು ಜೊತೆಗೂಡಿಸುತ್ತದೆ
ಯೋಗಿಗಳ ಸಂಗ ಗುರುಗಳ ಸಂಬಂಧ
ಹೊಸ ಆಕಾಶದ ಅನುಭವ ನೀಡಿದರೆ
ಹಾದಿ ತಪ್ಪಿ ಹೋಗಿರುವ ಜನಗಳ ಜೊತೆ
ನೆನಪುಗಳನ್ನು ದಿನಚರಿಯಲ್ಲಿ ಹಳ್ಳಕ್ಕೆ ಹಾಕುತ್ತಿರುವರು !

ಶರೀರದಲ್ಲಿ ನಡೆಯುತ್ತಿರುವ ಎಲ್ಲಾ ಕ್ರಿಯೆಗಳನ್ನು ನಾವು
ನೋಡುತ್ತಿದ್ದರೆ
ಶರೀರದಲ್ಲಿ ಬದಲುತ್ತಿರುವ ವಿಚಾರಗಳನ್ನು ನಾವು ಗಮನಿಸುತ್ತಿದ್ದರೆ
ಅಂತರಾಳದಲ್ಲಿರುವ ದೇವರೋ ಅಥವಾ ಕಾಣದ ಶಕ್ತಿಯೋ
ತಿಳಿಯದೆ ಹೊಸ ಬೆಳಕನ್ನು ನೀಡುತ್ತಿರುವುದು
ಹೊಸ ಹಾದಿಯಲ್ಲಿ . . ಹಾದಿ ಅಲ್ಲದ ಹಾದಿಯ ದರ್ಶನ
ನಮಗಾಗುವುದು!

ಜನುಮದ ಸಾಹಸ ಬೇಡಿಕೆಗಳು ಈಡೇರಿಸದಾದ ಮೇಲೆ
ಕರೆಯದೆ ಬೆರೆಯುತ್ತಿರುವ ಸಂತಸ ಸುಖಗಳ ನೆನಪುಗಳ
ರಾಶಿ ರಾಶಿ ಎದುರು ನಿಂತಿರಲು
ಅಂತರಾಳದ ದೇವರು ಮಹಾನ್ ಶಕ್ತಿಯ ಪರಿಸರ
ನಮಗೆ ಭವಿಷ್ಯದ ನೆರಳನ್ನು ತೋರಿಸುತ್ತದೆ !



www.srikharikhoday.com

ನಾವುಗಳು ನೆನಪುಗಳ ಗುಂಪು ಕಟ್ಟುತ್ತ
ನೆನಪುಗಳಿಗೆ ಶಿಸ್ತನ್ನು ಕಲಿಸಿ
ಸುಖದ ಗುಂಪುಗಳ ಕಷ್ಟದ ಗುಂಪುಗಳೆಂದು ಜೋಡಿಸಿ
ನಮಗೆ ಬೇಕಾದಾಗ ಉಪಯೋಗಿಸಿಕೊಳ್ಳಲು ಸಾಮರ್ಥ್ಯವನ್ನು ಗಳಿಸಿ
ಕಷ್ಟಗಳು ತಿಳಿಯದ ಹೂವಿನಂತೆ ಜೀವಿಸಿ

ಜೀವನದ ಗಂಧದ ಕುಸುಮವನ್ನು ಹಂಚುತ
ಜೊತೆ ಕಾಣಿಸುತ್ತಿರುವ ಭವಿಷ್ಯದ ಸರಮಾಲೆಯನ್ನೇ ಜೋಡಿಸುತ
ಕಾಲನ ಜೊತೆ ಭೂತ ಭವಿಷ್ಯ ವರ್ತಮಾನಗಳಲ್ಲಿ
ತೃಪ್ತಿಯನ್ನೇ ಕಾಣುತ ನಮ್ಮ ಅಂತರಾಳದಲ್ಲಿರುವ
ಮಹಾನ್‌ಶಕ್ತಿಯ ಮತ್ತೆ ಮತ್ತೆ ನೆನಪಿಸಿಕೊಂಡು ಪೂಜಿಸೋಣ!

**- ಶ್ರೀ ಹರಿ.**

08-08-2012



www.sriharikhoday.com

## 301.

ರೂಪಗಳಿಗೆ ಸ್ವರೂಪಗಳಿಗೆ ಅನಂತ ರೂಪಗಳ ದಾರಿ ತೋರಿಸಿದ
ಅನಂತವೇ
ಜಡವಾಗಿರುವ ಶರೀರಕ್ಕೆ ಅನಂತ ದರ್ಶನ ನೀಡಿರುವ
ಪ್ರಜ್ವಲಿಸುವ ಆಕಾಶದ ಪ್ರಕಾಶವೇ ಮಾನವನಲ್ಲಿ
ಭೂತ ಭವಿಷ್ಯ ವರ್ತಮಾನಗಳ ಅರಿವು ತರಿಸಿದ ಕಾಲ ರೂಪವೇ

ಸತ್ಯದ ಹಾದಿಗಳ ದೆಸೆ ತೋರಿಸುವ ಕೊನೆ ಬರದ ದಿಗಂತದ
ಹಾದಿಯೇ
ಮಾಯಾ ಮೋಹಗಳ ಸೃಷ್ಟಿಸಿ ರಂಗು ರಂಗಿನ ಅನುಭವ
ನೀಡುತ್ತಿರುವ
ರಂಗು ರಂಗುಗಳ ತುಂಬಿಕೊಂಡಿರುವ ಬೆಳಕೇ ಕೊಳಲ ನಾದದಲ್ಲಿ
ಸೃಷ್ಟಿಯ ಅನುಭವ ನೀಡಿರುವ ಎಚ್ಚರವೇ

ಎರಡು ಕಾಲಿನ ಮೇಲೆ ಭಾರ ಹಾಕದೆ ನಂಬಿ ಒಂದು ಕಾಲಿನ ಮೇಲೆ
ಭಾರ ಹಾಕುತ್ತಿರುವ ನಂಬಿಕೆಯ ಭಾವ ತೋರಿಸಿದ ನಂಬಿಕೆಯಲ್ಲೇ
ಇರುವವನೇ
ಮನದ ಅಂತರಾಳದಲ್ಲಿ ಕಾಮದ ಜೊತೆ ಮೋಡಿ ಹರಿಸಿ ಜಗತ್ತಿನ
ಸೃಷ್ಟಿಯನ್ನೇ
ಕೋಮಲ ಸ್ವರೂಪವಾಗಿಸಿದ ಕಮಲವೇ
ಗಿಡವಾಗಿ ಹಸಿರಿನ ಜೊತೆ ಆಡುತ್ತ ಹೂವಾಗಿ ಬಣ್ಣಗಳ ಜೊತೆ
ಆಡುತ್ತ

## 302

ಆಕಾಶದಲ್ಲಿ ನೀಲಿ ಬಣ್ಣದ ಜೊತೆ ಆಡುತ್ತ ಮೋಡಗಳ ಜೊತೆ
ಮಿಂಚುಗಳ ಜೊತೆ ಆಡುತ್ತ ಎಲ್ಲರ ಜೊತೆ ಬೆರೆತು
ಪ್ರೀತಿ ಬಣ್ಣಗಳ ಚೆಲ್ಲುತ್ತ ಭಾವ ಭಂಗಿಗಳನ್ನು ತೇಲಿಸುತ್ತ
ಅತಿ ಎತ್ತರವಾದಾ ಸಾರ್ವಭೌಮನಾಗಿ ಅತಿ ತಗ್ಗಿನ ಗುಲಾಮನಾಗಿ
ಮಾನವ ಭಾವನೆಯ ತರಂಗಗಳಿಗೆ ಸತ್ಯ ದರ್ಶನ ನೀಡುತ್ತ

ಕೋಟಿ ಸ್ವರೂಪವುಳ್ಳ ವಿಶ್ವವೇ ಮತಿಯಿಲ್ಲದ ವರ್ಣನೆಗೆ
ಮಿತಿಯೇ ಸರಿ ಎನ್ನುತ್ತ ಅಂತರಾಳದ ಮನದಲ್ಲಿ ನನ್ನ ಮನೋ
ಏಕಾಂತದಲ್ಲಿ ನಾ ನಿನ್ನನ್ನು ಬೆರೆಸಿಕೊಂಡು

ನಾ ವಿಶ್ವವನ್ನು ಮೀರಿಸುವ ಭಾರವಾಗಿ ತೇಲಾಡುತ್ತಿರುವ
ವಿಶ್ವದಂತೆ ಹಗುರಾಗಿ ನಿನ್ನ ಲೀಲೆಯ ಆಟಗಳಲ್ಲಿ
ನಿನ್ನ ಮೋಹಕ ಕಣ್ ದೃಷ್ಟಿಯಲ್ಲಿ ಕಳೆದುಹೋಗಿರುವ
ಹೇ ಕೃಷ್ಣ, ಹೇ ಕೃಷ್ಣ, ಕೃಷ್ಣ ಕೃಷ್ಣ

**- ಶ್ರೀ ಹರಿ.**

10-08-2012



## 303

ತವರುಮನೆ ಬಿಟ್ಟು ಅತ್ತೆಮನೆಗೆ ಬಂದರೆ
ತವರುಮನೆ ಪ್ರೀತಿ ಜೊತೆ ಅತ್ತೆ-ಮಾವನಿಂದ ಪ್ರೀತಿ ಬೆರೆತರೆ
ಅತ್ತೆಮನೆ ಸಿರಿವಂತ ಮನೆಯಾದರೂ
ತವರುಮನೆಯ ಸೌರಭ ಮರೆಯಲಾಗದು!

ಅಣ್ಣ ತಮ್ಮ ಅಕ್ಕ-ತಂಗಿ
ತಾಯಿಯ ಮನೆಯ ನಾಯಿಯ ಪ್ರೀತಿ
ತಂದೆ-ತಾಯಿಗಳು ಬುದ್ಧಿ ಕಲಿಸಿರುವ ಮಾತುಗಳು
ತನ್ನ ಮಕ್ಕಳ ಮೇಲಿನ ಪ್ರೀತಿ
ಅತ್ತೆ ನಾದಿನಿಯರ ಪ್ರೀತಿ
ತನ್ನ ಪತಿಯ ಪ್ರೀತಿಗಿಂತ
ತವರುಮನೆ ಪ್ರೀತಿ ಹೆಚ್ಚು!

ಕೊರತೆಗಳಿದ್ದರೂ ಕೊರಗಿಲ್ಲದ ತವರುಮನೆ
ಕಿರಿದಾದ ಬಾಗಿಲಿದ್ದರೂ ತವರುಮನೆ ದೊಡ್ಡದು
ಚಿಕ್ಕದಾದ ಅಡುಗೆ ಮನೆಯಾದರೂ ತವರಿನ ಅಡುಗೆ
ಸಿರಿತನವಾದ ಮಾವನ ಮನೆ ಅಡುಗೆಗಿಂತ ರುಚಿ
ತವರುಮನೆ ಅಡುಗೆಗೆ ತನ್ನ ಅಣ್ಣ-ತಮ್ಮಂದಿರು ಪ್ರೀತಿಯ ಅರಮನೆ!

ಎಲ್ಲಾ ಐಶ್ವರ್ಯಕ್ಕಿಂತ ಹೆಚ್ಚಾಗಿ ಮನದಲ್ಲೇ ಬೆಳೆದು
ಬೆರೆತಿರುವ ತವರುಮನೆ ಪ್ರೀತಿ



www.sriharikhoday.com

## 304

ಪ್ರಕೃತಿಯ ಔದಾರ್ಯ ಕಾಲಕ್ಕೆ
ತವರುಮನೆಯ ಸಂಭ್ರಮ
ಹೊಸ್ತಿಲು ದಾಟುತ್ತ ಒಳಗೆ ಬರುತ್ತಲೇ
ಹೊಸ್ತಿಲು ದಾಟುತ್ತಲೇ ಬರುವ ಕಣ್ಣೀರು
ಜೀವನದ ಅತಿ ದೊಡ್ಡ ಪ್ರಕೃತಿಯ ಕರುಣೆ!

ತವರುಮನೆ ಹೊಸ್ತಿಲ ಎದುರು
ಹಾಕಿರುವ ರಂಗೋಲಿಯ ಗೆರೆಗಳು
ಅತ್ತೆಯ ಮನೆಯಲ್ಲಿ ಎಲ್ಲರ ಜೊತೆ ಜೀವಿಸಲು
ಸಲಹೆ ನೀಡುತಿರುವ ಜೀವನ ರೇಖೆಗಳು
ಅತ್ತೆಯ ಮನೆಯಲ್ಲಿ ಜೀವಿಸುವ ರೀತಿ ನೀತಿಗಳನ್ನು ಕಲಿಸುವ
ಗೆರೆಗಳು

**- ಶ್ರೀ ಹರಿ.**

11-08-2012



www.sriharikhoday.com

## 305

ನಾವು ನಮ್ಮ ಮನದಲ್ಲಿ
ಒಂದು ಕೋಣೆ ಕಟ್ಟಿಕೊಳ್ಳೋಣ
ಸದ್ದಿಲ್ಲದ ನಿಶ್ಶಬ್ದ ಕೋಣೆ
ನೆನಪುಗಳಿಲ್ಲದ ಕೋಣೆ
ಅಲ್ಲಿ ನಾವು ಇರಲು ಸೂಕ್ತವಾದ ಕೋಣೆ!

ಯಾವ ಆಕರ್ಷಣೆಗಳಿಲ್ಲದ ಕೋಣೆ
ಮನೋ ಜಗಳಗಳಿಲ್ಲದ ಕೋಣೆ
ನಿರಾಕಾರಾದ ನೆರಳಿಲ್ಲದ ಕೋಣೆ
ತೃಪ್ತಿ ತೇಲಾಡುತ್ತಿರುವ ಕೋಣೆ
ಸಮಾಧಾನದಿಂದ ಹೊಸ ಹೊಸ ಚಿಂತನೆ
ಮಾಡಿಸುವ ಕೋಣೆ

ಚಿಂತನೆ ಜೊತೆಗೆ ಭಾಗಿಯಾಗಿರುವ ಕೋಣೆ
ಪರಿಸರದ ಯಶಸ್ಸನ್ನು ಕೋರಿರುವ ಕೋಣೆ
ಕೋರಿಕೆಗಳು ಮನಸ್ಸಿನ ಆಸೆಯಾಗದೆ
ಸಂಕಲ್ಪ ಮಾಡಿಸುವ ಕೋಣೆ
ಸಂಕಲ್ಪ ಸಿದ್ಧಿಯಾದ ಮೇಲೆ ಕೋಣೆಯಲ್ಲಿ ಮತ್ತೆ ಕುಳಿತು
ತ್ಯಾಗ ಬುದ್ಧಿಯನ್ನು ಹೆಚ್ಚಿಸಿಕೊಳ್ಳುವ ಕೋಣೆ

ಸಂಕಲ್ಪ ನನ್ನದಲ್ಲ ಎಂದು ನೆನೆಯುತ
ನೆಮ್ಮದಿಯಿಂದ ಹೊಸ ಹೊಸ ಸಂಕಲ್ಪ ಮಾಡಿಸುವ ಕೋಣೆ

ನೆಮ್ಮದಿಯ ಕೋಣೆ ಸದಾ ಬಾಗಿಲ ತೆರೆದಿದ್ದರೆ
ಮನಸ್ಸು ನೆಮ್ಮದಿಯಿಂದ ಕಲ್ಪಿಸಲಾಗದ
ಸಾಧನೆಗಳನ್ನು ಮಾಡಿಸಿ
ನೆಮ್ಮದಿಯಿಂದ ಜೀವನ ಸಾಗಿಸುವ ಕೋಣೆ!

ನಮ್ಮ ಮನದಲ್ಲಿ ಒಂದು ಕೋಟೆ ಕಟ್ಟಿಕೊಳ್ಳೋಣ
ನಿಶ್ಶಬ್ದದ ಕೋಣೆ ಕಟ್ಟಿಕೊಳ್ಳೋಣ!

**- ಶ್ರೀ ಹರಿ.**

13-08-2012



## 306

ಪ್ರಕೃತಿಯಲ್ಲಿ ಹುಟ್ಟಿದ ಯಾವುದೂ ಸ್ವರಾಜ್ಯ ಬೇಡಿಲ್ಲ
ಸ್ವಾತಂತ್ರ್ಯ ನೀಡಿರುವ ಜನುಮ
ಜೀವ ನೀಡಿರುವ ಸ್ವಾತಂತ್ರ್ಯ!

ಯಾರ ಹಂಗಿಲ್ಲದೆ ನೀ ಜೀವಿಸು ಎಂದು
ಸ್ವಾತಂತ್ರ್ಯ ಕೊಟ್ಟ ಪ್ರಾಣ
ಯಾವ ರೀತಿಯಲ್ಲಾದರೂ ಜೀವಿಸು
ಯಾವ ದೇವರನ್ನಾಗಲೀ ಆರಿಸಿ ಪೂಜಿಸು
ನೀವುಗಳು ಸುಖದಿಂದ ಜೀವಿಸಿ ಎಂದು
ಹೇಳಿ ಕಳುಹಿಸಿದ ಸ್ವಾತಂತ್ರ್ಯದ ಮಾತುಗಳ ಜೊತೆ

ಬೇರೆಯವರಿಗೆ ಕಷ್ಟ ಕೊಡು
ಬೇರೆಯವರ ಜೊತೆ ಬಾಳಬೇಡ ಎಂದು ಹೇಳದೆ
ಬೇರೆಯವರ ಸ್ವತ್ತು ಕಬಳಿಸು ಎಂದು ಸ್ವಾತಂತ್ರ್ಯ ಪ್ರತಿಪಾದಿಸದೆ
ಅಹಂಕಾರದಿಂದ ಬಾಳಲು ಸ್ವಾತಂತ್ರ್ಯ ನೀಡಿಲ್ಲ ಎಂದು ಎಚ್ಚರಿಸುತ್ತ
ಬಲಾತ್ಕಾರಪಡಿಸುವುದು ಸ್ವಾತಂತ್ರ್ಯವಲ್ಲ ಎಂದು ಸೂಚಿಸಿದ್ದರೂ
ಮಾನವ ತನ್ನ ಅಜ್ಞಾನದಿಂದ ತಾನು ಯಾರೆಂದು ಅರಿಯದೆ

ಪ್ರಕೃತಿಯ ಸ್ವತ್ತನ್ನು ತನ್ನ ಸ್ವಂತ ಸ್ವತ್ತು ಎಂದು
ಹೇಳಿಕೊಳ್ಳುತ್ತಿರುವ ಈಗಿನ ಮಾನವ ಸತ್ಯದ ಆಳ ತಿಳಿಯದೆ
ಅಹಂಕಾರದ ಮನೋ ಅಲೆಗಳಲ್ಲಿ
ಬೇರೆಯವರಿಗೆ ಭಯ ತೋರಿಸುತ್ತ
ದೇವರು ನೀಡಿರುವ ಬೇರೆಯವರ ಸ್ವಾತಂತ್ರ್ಯವನ್ನು
ಕಸಿದುಕೊಳ್ಳುತ್ತಿದ್ದಾನೆ!



www.sriharikhoday.com

ಕೊಕ್ಕರೆ ತನ್ನ ಕಾಲಿನ ಹತ್ತಿರ ಜೀವಿಸುತ್ತಿರುವ ಮೀನನ್ನು ಕಂಡು
ಮೀನನ್ನು ಸಾಯಿಸಿ ತಾನು ತಿನ್ನಬೇಕೆಂಬ ಭಾವನೆ ಬಿಟ್ಟು
ತಾನು ತಿನ್ನದೆ ಮೀನನ್ನು ಬದುಕಲು ಬಿಟ್ಟ ಕೊಕ್ಕರೆ
ಮೀನಿಗೆ ಜೀವಿಸಲು ನೀಡಿರುವ ಸ್ವಾತಂತ್ರ್ಯದಂತೆ
ಬ್ರಿಟಿಷರು ನಮಗೆ ನೀವು ಜೀವಿಸಿಕೊಳ್ಳಿ ಎಂದು.

ನಮ್ಮ ಮೇಲೆ ಆಡಳಿತ ಮಾಡುತ್ತಿದ್ದ ಬ್ರಿಟಿಷರು
ನಮಗೆ ನೀಡಿರುವ ಜೀವಿಸುವ ಹಕ್ಕು
ಇದೇ ಬ್ರಿಟಿಷರು ನಮಗೆ ನೀಡಿರುವ ಸ್ವಾತಂತ್ರ್ಯ!

ಆದರೆ ಈಗ ನಮ್ಮವರು ಆಡಳಿತ ರೀತಿಗಳನ್ನು
ಸ್ವಂತ ಜೀವಿಸಲು ಕಾರ್ಯಗಳನ್ನು ಮಾಡಿ
ತಮ್ಮದೇ ಆದ ಹಕ್ಕುಗಳ ಕಂತೆಗಳಿಂದ ನಮಗೆ ಕೈಕಾಲು ಕಟ್ಟಿ ಹಾಕಿ
ಜೀವನದ ನೀರಲ್ಲಿ ಈಜಾಡು ಎಂದು ಹೇಳುತ್ತಿರುವ
ರಾಜಕೀಯ ವ್ಯವಸ್ಥೆ ಧಿಕ್ಕರಿಸುತ್ತ

ಸ್ವಾತಂತ್ರ್ಯ ಎಂಬ ಕಲ್ಪನೆಗಳ ಕನಸುಗಳನ್ನು
ತ್ರಿವರ್ಣದ ಬಾವುಟಗಳಲ್ಲಿ ನೋಡುತ
ಆನಂದಭಾಷ್ಪೀಯ ಕಣ್ಣೀರ ತೊಟ್ಟಿಕ್ಕಿಸದೆ
ಕಷ್ಟಗಳ ಭಾರ ಹೊತ್ತ ಮನಸ್ಸಿನ ಕಷ್ಟಗಳಿಂದ
ಧ್ವಜವ ಹಾರಾಡಿಸುತ್ತ
ಸುಖ ಕಾಣಲೆಂಬ ಕನಸುಗಳು ಕಣ್ಣೀರು ಹರಿಸುತ್ತಿವೆ!

ಸ್ವಾತಂತ್ರ್ಯ ಬಂದ ಅರವತ್ತೈದು ವರುಷಗಳು ಉರುಳಿದರೂ
ನಮ್ಮ ನೆರಳಿಗೆ ನಾವೇ ಹೆದರಿ ಮುನ್ನಡೆಯುವ ಬದಲು
ನೆರಳನ್ನು ಹಿಂಬಾಲಿಸುತ್ತ ಹಿಂದೆಜ್ಜೆಯಿಡುತ್ತಿದ್ದೇವೆ
ಸ್ವಾತಂತ್ರ್ಯದ ಪದಕ್ಕೆ ಕೈಕಾಲು ಕಟ್ಟಿರುವ
ರಾಜಕೀಯ ವ್ಯವಸ್ಥೆಗೆ ಧಿಕ್ಕಾರ!

**- ಶ್ರೀ ಹರಿ.**

15-08-2012



# 307

ನಮ್ಮದೇ ಆದ ಶಾಂತಿಯ ಮನೋ ಕೊಠಡಿಯಲ್ಲಿ
ದಿನವೂ ಒಂದು ಸಲ ಹೋಗಿ ಬರುತ್ತಿರುವುದು
ನೆಮ್ಮದಿಯಿಂದ ಬಂದ, ತಪೋಬಲ ಬಂದ ಹಾಗೆ
ಅಸಾಧ್ಯಗಳ ಸಾಧ್ಯತೆಗಳ ಮಾಡುತ್ತಿರೆ ಹಂಬಲ ಹೆಚ್ಚುತ್ತಿದೆ!

ಒಲೆಯ ಮೇಲೆ ಅನ್ನದ ಪಾತ್ರೆ ಅಡುಗೆಯಾದ ಮೇಲೆ
ಒಲೆಯಿಂದ ಕೆಳಗಿಳಿಸಿದರೂ ಪಾತ್ರೆ ಬಿಸಿಯಿರುವಂತೆ
ನಮ್ಮ ಮನೋ ನೆಮ್ಮದಿಯ ಕೋಣೆಯ ಪ್ರಭಾವ
ಹೊರಗೆ ಬಂದರೂ ನೆಮ್ಮದಿಯಿರುವಂತಿದೆ!

ಬೆಂದು ಹದವಾಗಿ ಅನ್ನವಾಗಿರುವ ಪಾತ್ರೆ
ಹಸಿದವರಿಗೆ ಕರೆಯುವಂತೆ
ಎದುರು ಕಾಣುತ್ತಿರುವ ಬೇಡಿಕೆಗಳನ್ನು
ನಿಭಾಯಿಸುವ ಶಕ್ತಿ ಸಾಮರ್ಥ್ಯಗಳು ಜೊತೆ ಇದ್ದಂತೆ
ಬರೀ ಸಾಮರ್ಥ್ಯ ಮನೋ ಭಾವದಲ್ಲಿ
ಕಾರ್ಯತಃ ಮಾಡಬಲ್ಲ ಭುಜಬಲ!

ದಾರಿ ತಪ್ಪಿಸುವ ಬೇಡದ ನೆನಪುಗಳು ಸುಮ್ಮನಿರೆ
ದ್ವೇಶವಿಲ್ಲದ ನೆನಪುಗಳ ಮನೋ - ಕರೆ
ಸಂಕಲ್ಪಗಳನ್ನು ಪೂರ್ಣಗೊಳಿಸಲು ಸಾಲು ಸಾಲಾಗಿ ನಿಂತಿರುವ
ಕಾರ್ಯ ನಿರ್ವಹಿಸುತ್ತಿರುವ ಸಂಕಲ್ಪದ ಶಕ್ತಿ ಕಂಡರೆ
ನಿಶ್ಶಬ್ದದಲ್ಲಿರುವ ಶಕ್ತಿ ನಿಶ್ಶಬ್ದಕ್ಕಿರುವ ಸಾಮರ್ಥ್ಯ
ಪ್ರದರ್ಶನವಾಗಿ ಕಾಣುತ್ತಿದೆ!

**- ಶ್ರೀ ಹರಿ.**

17-08-2012



www.sriharikhoday.com

## 308.

ಹೃದಯದಲ್ಲೇ ವಿಶ್ವವು
ಸ್ವರ್ಗ - ನರಕ ಕಷ್ಟ - ಸುಖ
ಎಲ್ಲವೂ ಹೃದಯದಲಿ!

ಬೇಕು ಬೇಡಗಳು ಹೃದಯದಲ್ಲಿ
ಪ್ರೀತಿ-ದ್ವೇಶ - ಗೆಳೆಯ - ಶತ್ರು
ಪ್ರೀತಿ - ಪ್ರೇಮ - ಕಾಮ
ನಮ್ಮದು - ನಿಮ್ಮದು
ಶರೀರ ಪೂಜಿಸುವ ದೇವರು
ಎಲ್ಲವೂ ಹೃದಯದಲಿ!

ನಾ ಸುಂದರ... ನಾ ಸುಂದರಿ
ನಾನು ಯೋಗ್ಯ - ಅವನು ಅಯೋಗ್ಯ
ನಾ ಸಹಿಸಬಲ್ಲೆ - ಅವ ಸಹಿಸಲಾರ
ನನಗೆ ಭಯ ... ನನ್ನಲ್ಲಿರುವ ಧೈರ್ಯ
ಎಲ್ಲವೂ ಹೃದಯದಲ್ಲಿ!

ಈ ಜಗತ್ತು . . ಈ ವಿಶ್ವ
ಸದ್ದು-ನಿಶ್ಯಬ್ದ . . ಬೆಳಕು - ಕತ್ತಲುಗಳು
ನಾದ-ಲಯ . . ಎಚ್ಚರ - ಕನಸುಗಳು
ಸತ್ಯ - ಅಸತ್ಯ . . . ನಂಬಿಕೆ - ಅಪನಂಬಿಕೆ

0



ಸಂಸಾರ . . ತ್ಯಾಗ . . ಪ್ರಾರಂಭ - ಕೊನೆ
ಸಂತಸ - ದುಃಖ

ಹೊಸ ವಿಶ್ವವನ್ನೇ ಕಟ್ಟಬಲ್ಲ
ನಮ್ಮಲ್ಲಿರುವ ಹೃದಯ
ವಿಶ್ವದ ಅತಿ ಆಶ್ಚರ್ಯಕರವಾದ ಕಟ್ಟಡ
ಹೃದಯದ ವರ್ತುಲ ಕೊನೆಯಿಲ್ಲದ ಆಯ!

**- ಶ್ರೀ ಹರಿ.**

18-08-2012



www.sriharikhoday.com

## 309

ತನ್ನನ್ನೇ ಮರೆತು ಕರ್ತವ್ಯ ಮಾಡುತ ಎಲ್ಲವನ್ನೂ ಮರೆತು
ಉಳಿ-ಸುತ್ತಿಗೆ ಆ ವಿಗ್ರಹ ತನ್ನಿಂದಾಯಿತು
ಎಂದು ಹೇಳದೆ . . ತನ್ನನ್ನೇ ಮರೆತು
ತನ್ನ ಹೊಸ ಕರ್ತವ್ಯಗಳಿಗೆ ರೂಪ ಬದಲಾಯಿಸಲು
ಕುಲುಮೆಗೆ ಹೋಗಿ ಕರ್ತವ್ಯಕ್ಕೆ ಸಜ್ಜಾಗುತ್ತಿದೆ!

ತನ್ನನ್ನೇ ಮರೆತಿರುವ
ತನ್ನ ಮನೋಭಾಸದ ಕರ್ತವ್ಯವನ್ನು ಮಾಡುತ್ತಿರುವೆ
ಹೇಳುತ್ತಿರುವ ಲೇಖನಿ ಕಾಗಜ
ಹೊಸ ಹೊಸ ಕವಿ ರಚನೆಗಾರರು
ತಾನು ಬರೆದಿದ್ದು ಎಂದು ಹೇಳದೆ
ಹೊಸ ಹೊಸ ಕಾವ್ಯಗಳ ರೂಪಿಸುತ್ತ
ಹೊಸ ಹೊಸ ಪುಟಗಳನ್ನು ಹುಡುಕುತ್ತಿದೆ!

ಜನರ ಒಪ್ಪಿಗೆಯೇ ವಿಗ್ರಹದ ರೂಪವನ್ನು ಹೆಚ್ಚಿಸುತ
ಹೆಚ್ಚಿಸಿಕೊಂಡಿರುವ ರೂಪ
ಉಳಿ-ಸುತ್ತಿಗೆಗೆ ಹೊಸ ಹೊಸ ಕೆತ್ತನೆಗಳಿಗೆ
ಹೊಸ ಸಾಮರ್ಥ್ಯಗಳು ಆಕಾಶದಿಂದ ಸುರಿಯುತ್ತಿರಲು
ಕವಿಗಳ ರಚನೆಗೆ ಲೇಖನಿ-ಕಾಗಜಗಳು ಆಕಾಶದ ಸ್ಪೂರ್ತಿ
ಆಕಾಶದಿಂದ ತೇಲುತ್ತಿರುವ ಸತ್ಯಾಂಶಗಳು!



ಲೇಖನಿ-ಕಾಗಜ ಕವಿಗಳ ಜೊತೆ ಬೆರೆತು
ಬಣ್ಣ ಬಣ್ಣಗಳ ಜೊತೆ ಆಟ ಓಕುಳಿ ಆಡುವಂತೆ
ಜೀವನಕ್ಕೆ ರೂಪ ಕೊಟ್ಟು
ಅಂತರಾಳದಲ್ಲಿರುವ ಸತ್ಯವನ್ನು
ಹೊಸ ಚೆಲ್ಲುತ್ತಿರುವುದು ಕಂಡರೆ
ನೋಡಿದ್ದನ್ನು ಮರೆತು ಮಾಡಿರುವೆ ಎಂದು ಹೇಳದೆ

ಹೊಸ ಮನೋಬಯಲಲ್ಲಿ
ಬಿದ್ದಿರುವ ರತ್ನಗಳ ಮಿನುಗನ್ನು ಅನುಭವಿಸಿ
ಅದರಲ್ಲಿ ಕಾಲವೇ ಸಾಲದೆ
ಜೀವ ಜೀವಗಳಿಗೆ ರಹಸ್ಯ ರಸಮಯ ರಮ್ಯವಾದ
ರೋಮಾಂಚನ ತರುವ ಹೊಸ ಅನುಭವಗಳು
ರೋಮ ರೋಮಗಳಲ್ಲಿ ಕಲ್ಪನಾಸಾಗರದಲ್ಲಿ ಮುಳುಗಿರುವ
ಕವಿಗೆ ಅಗೋಚರ ರಹಸ್ಯವೇ ಸರಿ!

**- ಶ್ರೀ ಹರಿ.**

19-08-2012

www.sriharikhoday.com

## 310.

ನಾಯಕರು ಬರುತ್ತಾರೆ
ನಾಯಕರು ನಮ್ಮನ್ನಗಲಿ ಹೋಗುತ್ತಾರೆ
ಅವರ ಜೊತೆ ಜೊತೆ ಸವಿದ ಸಮಯಗಳು
ಹೊಸ ಪ್ರಗತಿಯ ಹಾದಿ ಕಟ್ಟುವ ದಿಕ್ಸೂಚಿಗಳು!

ಅನೇಕ ನಾಯಕರ ಜೊತೆ ಜೀವಿಸಿದ ನಾ
ಅನೇಕ ಸಮಾಜದ ಕಷ್ಟಗಳನ್ನು ಅರಿತಿರುವ ನಾ
ಅನೇಕ ಅವಶ್ಯ ಸಮಾಜದ ಬೇಡಿಕೆಗಳು
ನಾಯಕರಿಂದ ಕಲಿತು
ಉತ್ತರಕ್ಕೆ ರೂಪಿಸಿಕೊಳ್ಳುತ್ತಿರುವ ನಾ
ತನ್ನದೇ ಆದ ನಾಯಕರುಗಳ ಆತ್ಮಬಲವನ್ನು
ನಾ ಬೆಳೆಸಿಕೊಳ್ಳಬೇಕಾಗಿದೆ!

ನನ್ನ ನಾಯಕರುಗಳಾದ ಶ್ರೀ ದೇವರಾಜ ಅರಸುರವರ
97ನೇ ಹುಟ್ಟುಹಬ್ಬದ ದಿನದಲ್ಲಿ
ಅದೇ ರೀತಿ ನಮ್ಮ ದೇಶದಲ್ಲಿ
ನಮ್ಮ ಸಮಾಜಕ್ಕೆ ಸಿರಿವಂತಿಕೆ ತಂದ
ರಾಜೀವ ಗಾಂಧಿಯವರ ಹುಟ್ಟುಹಬ್ಬದ ನೆನಪಿನ ದಿನದಲ್ಲಿ
ಅವರು ನಮ್ಮನ್ನು ಬಿಟ್ಟು ಅಗಲಿದರೂ
ಅವರುಗಳ ದೂರದರ್ಶನ.. ಕಾಲವನ್ನು ಸೋಲಿಸಿ
ಅವರ ದೂರದೃಷ್ಟಿ ಸಾವಿಲ್ಲದ ಕಾಲದ ಜೊತೆಗೆ ಬೆಳೆಯುತ್ತಲೇ ಇದೆ
ಜೊತೆಗಿಲ್ಲದಿದ್ದರೂ ಅವರುಗಳ ಅಪಾರ ಸವಿನೆನಪುಗಳು



ಮನದಲ್ಲಿ ಮೆಲುಕು ಹಾಕುತ್ತ ಅವರುಗಳ ಜೊತೆ ಇದ್ದಂತೆ
ಅವರುಗಳ ಜೊತೆ ಮಾತಾಡುತ್ತಿರುವೆ ಎಂದು
ಅವರ ಜೊತೆ ನೆನಪಿನ ಈ ಸುದಿನ
ನಮ್ಮ ನಾಯಕರ ಜೊತೆಗೆ
ಸೂರ್ಯೋದಯದಿಂದ ಸೂರ್ಯಾಸ್ತಮದವರೆಗೂ
ಬೆಳಕಾಗಿ ಪ್ರಜ್ವಲಿಸುತ್ತಿದೆ.

**- ಶ್ರೀ ಹರಿ.**

20-08-2012



www.sriharikhoday.com

## 311

ಜೀವನ ತರ್ಕಗಳ ಹೂ ಬಳ್ಳಿಗಳ ಗೋಜು
ಬಳ್ಳಿಯ ಹೂವುಗಳಲ್ಲಿ ನಾನಾ ಬಣ್ಣ ಬಣ್ಣಗಳ ತರ್ಕಗಳು
ಹಾಯಿಸುವ ಶಕ್ತಿ ಇಲ್ಲದೆ
ಬರೆಯುವ ಕವನ ಮುಗಿಯದೆ
ಕವನ ಹತ್ತಿ ಕುಳಿತಿದೆ ಮೇಜು!

ಯಾವ ಬಣ್ಣಗಳನ್ನೂ ನೋಡದೆ
ಸುವಾಸನೆಯನ್ನು ಹಿಂಬಾಲಿಸಿ
ದೆಸೆಯಲ್ಲಿರುವ ಬೆಳಕಿನ ಅನುಭವ
ಎಚ್ಚರವನ್ನು ತರಿಸಿದೆ ಬೆಳಗಿನ ಜಾವ!

ಒಂದು ಇಲಿಗೆ ನೂರಾರು ಬೋನುಗಳು
ನನ್ನ ಬೋನಿಗೆ ಬರಲಿಲ್ಲ.. ನನ್ನ ಬೋನು ದೂರ
ನನ್ನ ಬೋನಿನ ವಾಸನೆಯ ಆಕರ್ಷಣೆ
ಮನವೆಂಬ ಇಲಿಗೆ ಭಯದ ಬುದ್ಧಿಭ್ರಮಣೆ!

ನಮ್ಮ ಮನ ಪ್ರಭುತ್ವ ಪಡೆಯದ ಭಾವನೆಗಳ
ಬಣ್ಣ ಬಣ್ಣಗಳ ಆಕರ್ಷಣೆಗಳಿಗೆ ಮನ ಒಪ್ಪದೆ
ಸತ್ಯವನ್ನು ತಿಳಿದು ತಿಳಿಯದೇ ಇರುವ
ಮನೋಚಾಂಚಲ್ಯವನ್ನು ಸರಿಪಡಿಸಿಕೊಂಡು

ಸತ್ಯದ ಸುಖದ ಅನುಭವ ಪಡೆಯುವುವವ
ಸುಖದ ಜೊತೆ ಕಾಣುವನು
ಸತ್ಯ ದರ್ಶನ!

**- ಶ್ರೀ ಹರಿ.**

23-08-2012



## 312

ಜೀವನವಿಲ್ಲದ ಕಾವ್ಯಗಳಿಗೆ
ಜೀವನ ಸಾಟಿಯಾಗಲಿಲ್ಲ
ಕಣ್ಣಿಗೆ ಕಾಣದ ಭವಿಷ್ಯ
ಜೀವನದ ಬಾಳಿಗೆ ಭಾಗಿಯಾಗಲಿಲ್ಲ

ಅನೇಕ ಕಲ್ಪನೆಗಳ ರಾಶಿ
ಕಾವ್ಯಗಳಿಗೆ ಉದ್ರೇಕಿಸಿ
ಕವಿಯ ಮನಸ್ಸು
ಕಾಲದ ಗಡಿಗಳನ್ನು ದಾಟಿಸಿ
ತಿರುಗಿ ತಿರುಗಿ ಬುಗುರಿಯಂತೆ ನಮ್ಮನ್ನು ಬೀಳಿಸಿ

ಸೂರ್ಯ-ಚಂದ್ರರು ನಗುತ್ತಾ ಹೇಳುತ್ತಿರುವುದು
ನಾವುಗಳು ನಿಮ್ಮಿಂದ ಸತ್ಯ
ನಾವುಗಳು ಜೊತೆ ಬರೆಯುತ್ತಿರುವ ಕವನಗಳು
ವಿಶ್ವವನ್ನೇ ಉದ್ರೇಕಿಸಿ ನಮ್ಮ ಕವಿತೆಗಳಿಗೆ
ಇರುವ ಕಲ್ಪನೆ ರಹಸ್ಯವಿರುವ ಬಯಲು
ಎಂದು ಹೇಳಿ ನಮ್ಮ ಜೀವನವನ್ನು ಜಾರಿಸುತ್ತಿವೆ

ಭೂತ ಭವಿಷ್ಯ ವರ್ತಮಾನಗಳು
ಜೊತೆ ಸೇರಿ ಆಡುತ್ತಿರುವ ಆಟ
ಕವನಗಳಿಗೆ ಜೀವ ನೀಡಿ
ದೊರಕಿರುವ ಜೀವನದ ಆಸರೆಯಂತೆ
ಓಡಿ. ಓಡಿ. ಓಡು. ಎಂದು ಹೇಳುತ
ಅಖಂಡ ಬಯಲಿನ ಗಡಿಗಳಿಗೆ ಸೇರಿಸುತ್ತಿವೆ

**- ಶ್ರೀ ಹರಿ.**

24-08-2012



www.sriharikhoday.com

## 313

ಎಲ್ಲವೂ ಕಾಯುತ್ತಿದೆ...
ವಿಶ್ವದಲ್ಲಿ ಎಲ್ಲವೂ ಕಾದು...ಕಾದು...
ಸಂತಸ ಪಡುತ್ತಿದೆ...!

ರೂಪ ಪ್ರತಿಬಿಂಬಿಸುವ ಗುಂಗುರು ಕೇಶರಾಶಿ
ಪ್ರೇಮಿಗಳ ಕಣ್ಣೋಟಗಳಿಗೆ ಕಾದು
ನೋಟದಲ್ಲಿಯೇ ಹರಿದಾಡಿದ ಪ್ರೀತಿಯನ್ನು ಸ್ವೀಕರಿಸಿ
ಸಂತಸದಿಂದ ತುಟಿಗಳಲ್ಲಿ ನಗೆಯನ್ನು ಚೆಲ್ಲಿಸುತ್ತಿದೆ!

ಕಣ್ ರೆಪ್ಪೆಗಳು ಚಂದ್ರಮನನ್ನು ಚಿತ್ರಿಸುತ
ಕಣ್ಣ ಹುಬ್ಬುಗಳು ತನ್ನ ಸನ್ನೆಗಳಿಂದ
ಪ್ರತಿಬಿಂಬಿಸುವ ಪ್ರೀತಿಯನ್ನು
ಸ್ವೀಕರಿಸಿ ಆನಂದಿಸುತ್ತದೆ...!

ಕಣ್ ರೆಪ್ಪೆಗಳ ನೋಟಗಳಲ್ಲಿ ತುಂಬಿಕೊಂಡಿರುವ
ನಲ್ಲನ ಪ್ರೀತಿ ಸಂಬಂಧಗಳನ್ನು ವಾದಿಸಿ
ತೇಲಾಡಿದ ಮುತ್ತಿನಂತಹ ಅರ್ಥಗಳೂ
ಒಪ್ಪಿಗೆಯ ಸೂಚಿಸುತ ಆ ಸೂಚನೆಗೆ ಕಾದುನಿಂತಿದೆ!

ಕನಸು-ನನಸುಗಳ ತುಂಬಿಕೊಂಡಿರುವ ಕಣ್ಣುಗಳು
ಜೀವನದ ಜೊತೆಗೆ ಸುಖ ಬಯಸುವ ಅರ್ಥದಲ್ಲಿ
ಹಗಲು-ರಾತ್ರಿ ಕಾದು ಮುಖದ ಬಾಗಿಲನ್ನು ತೆರೆದು
ತನ್ನ ನಲ್ಲನ ಬರುವಿಕೆಗೆ ಕಾದು ನಿಂತಿದೆ!

**- ಶ್ರೀ ಹರಿ.**

27-08-2012



## 314

ತುಟಿಗಳಿಗೆ ಮುತ್ತಿನ ಬೇಡಿಕೆ
ಪ್ರಕೃತಿಯ ಮುತ್ತು ಇಡುತ್ತಲೇ
ಪ್ರೀತಿಯನ್ನು ಹಂಚಿಕೊಳ್ಳುತ್ತದೆ!

ಅಪ್ಪಿಕೊಳ್ಳುವ ತೋಳುಗಳು
ಅಪ್ಪಿನಲ್ಲಿ ಪ್ರೀತಿಯ ಶಾಖ
ಅಂತರಾಳದಲ್ಲಿ ಗಟ್ಟಿಯಾಗಿರುವ
ಮನಸ್ಸನ್ನು ಕರಗಿಸುತ್ತದೆ...!

ಕಣ್ಣುಗಳು...ಕಣ್ ರೆಪ್ಪೆಗಳು...ಕಣ್ಣ ಹುಬ್ಬುಗಳು
ತಮ್ಮ ಅಂತರಾಳದ ಪ್ರೀತಿಯ ರೂಪವನ್ನು
ವ್ಯಕ್ತಪಡಿಸುತ್ತ
ಸಂಬಂಧಗಳನ್ನು ಬಲಪಡಿಸುತ್ತದೆ...!

ದೇಹದ ಬಯಕೆಗಳಿಗೆ
ಪ್ರಕೃತಿಯ ಚಕ್ರದ ಮೂಲಬಿಂದು
ಸರಿ ಅರ್ಥದ ಬಯಕೆಗಳು
ಮನಸ್ಸಿನ ಆರೋಗ್ಯವನ್ನು ಹೆಚ್ಚಿಸುತ್ತದೆ...!

**-ಶ್ರೀ ಹರಿ.**

28-08-2012



www.sriharikhoday.com

## 315

ಬೆರೆತು ಮರೆಯುವುದು ಮಾನವನಿಗೆ ದೇವರು ನೀಡಿರುವ ವರ!
ಸಂಗೀತದಲ್ಲಿ ಬೆರೆತು ಮರೆತು ಹೋಗುವುದು ದೇವರ ವರ
ತಾಯಿಯ ಎದೆ ಹಾಲನ್ನು ಕುಡಿದು
ಮಗು ಮರೆತು ನಿದ್ರಿಸುವುದು ದೇವರ ವರ!
ಮಗುವನ್ನು ಹಡೆಯುವಾಗ ಗರ್ಭದ ನೋವನ್ನು ಮರೆತು
ಹಡೆದಾದ ಮೇಲೆ ಸಿಗುವ ಸುಖದಲ್ಲಿ ಬೆರೆತು
ಕಷ್ಟ ಮರೆಯುವುದು ದೇವರ ವರ!

ಗುರು ಚರಣಗಳು ಒಲಿದಾದ ಮೇಲೆ
ಗುರುಗಳಲ್ಲಿ ಬೆರೆಯುವುದು ದೇವರ ವರ!
ನಲ್ಲ ನಲ್ಲೆಯರು ಸಂತಸ ಸರೋವರದಲ್ಲಿ ಬೆರೆತು
ತಮ್ಮನ್ನೇ ತಾವುಗಳು ಮರೆತಿರುವುದು ದೇವರ ವರ!

ಮುಳುಗಿಹೋದ ಹಡಗಿನಿಂದ ಈಜಿ
ದಡ ಸೇರಿದ ಮೇಲೆ ಕಷ್ಟದ ನಿಟ್ಟುಸಿರುಬಿಟ್ಟು
ಸುಖವನ್ನು ನೆನೆಸುವುದು ದೇವರ ವರ!
ಕಾರಾಗೃಹದಿಂದ ನಿರ್ದೋಷಿ ಎಂದು ಪ್ರಕಟಿಸಿ
ಎಲ್ಲಾ ಆಪ್ತರ ಜೊತೆ ಬೆರೆಯುವ ಸುಖ ದೇವರ ವರ!

ಕಳೆದು ಹೋಗಿ ಮರುಭೂಮಿಯಲ್ಲಿ
ನೀರಿನ ಸರೋವರದಲ್ಲಿ ಬೆರೆಯುವ ಸುಖ ದೇವರ ವರ!



## 316

ಅಪಘಾತದಲ್ಲಿ ತಾನೊಬ್ಬನೇ ಉಳಿದು
ತನ್ನ ಸಂಸಾರದ ಜೊತೆಗೆ ಮತ್ತೆ ಬೆರೆಯುವ
ಕ್ಷಣದ ಸುಖ ದೇವರ ವರ!

ಅತಿ ಬಡತನದಿಂದ ಮಗು ಕಷ್ಟಪಟು ಓದಿ
ದೇಶಕ್ಕೆ ಮೊದಲಿಗನಾಗುವನೆಂಬ ಸುದ್ದಿಬರುವ ಸುಖ ದೇವರ ವರ!
ಹಾಡುತ ಹಾಡುತ ಹಾಡುಗಾರ ಸಂಗೀತದಲ್ಲಿ ತನ್ನನ್ನೇ ತಾನು
ಮರೆಯುವ ಕ್ಷಣಗಳು ದೇವರು ನೀಡಿರುವ ಸುಖ!

ಭಕ್ತನು ದೇವರಲ್ಲಿ ಬೆರೆತು ದೇವರ ಜೊತೆ
ಮಾತನಾಡಿದರೆ ಸುಖವೋ ಸುಖದ ವರ!
ಹಸೆಮಣೆಯ ಮಂಟಪದಲ್ಲಿ ಗಂಡು - ಹೆಣ್ಣಿನ ಕುಡಿನೋಟ
ಜೀವನ ಹೊಸ್ತಿಲನ್ನು ದಾಟುವ ಸುಖ
ದೇವರು ನೀಡಿರುವ ಸುಖದ ವರ!

**- ಶ್ರೀ ಹರಿ.**

29-08-2012



www.sriharikhoday.com

## 318

ಎಲ್ಲವೂ ನೆನದೇ ಮಾಡುವೆವು
ನೆನೆದು ಮಾಡುವುದೇ ಸುಖ
ನೆನೆಯದೆ ಯಾವ ಸುಖವೂ - ಸಂಗವೂ ಬರದು
ಕಾಯುತ್ತಿರುವ ಸುಖಕ್ಕೆ ನಾವು ನೆನೆಸಲೇ ಬೇಕು !

ಎಲ್ಲಾ ಪ್ರಕೃತಿಯ ಹಿಂದೆ ಸುಖದ ಬಯಕೆ
ಎಲ್ಲ ಪ್ರಕೃತಿಯ ಗಡಿ ಸುಖ ತರಿಸುವ ಬಯಕೆ
ನೆನೆಯುವುದೇ ಹೊಸ ಹೊಸ ಮನೋ ಗಡಿಗಳು
ಇರುವ ಗಡಿಯಿಂದ ಹೊಸ ಗಡಿಗೆ ದಾಟಿಸುವುದೇ ನೆನಪುಗಳು !

ನಾನು ಸುಖವಾಗಿರುವೆ ಎಂದು ಹೇಳುವ ನೆನಪುಗಳು
ನನ್ನನ್ನು ಮೀರಿಸುವ ಸೌಂದರ್ಯ ನಿನಗಿಲ್ಲ
ಎಂದು ಹೇಳುತ್ತಿರುವ ನೆನಪುಗಳು
ಒಂದು ಸಂಸಾರಕ್ಕೆ.....ಹೊಸ ಸಂಬಂಧಕ್ಕೆ .....
ಒಂದು ಊರಿಗೆ ..... ಒಂದು ದೇಶದ ಗಡಿಗಳಿಗೆ
ನೆನಪುಗಳು ಚೇತನವ ಹರಿಸುವ ಜೀವ !

ಭವಿಷ್ಯದ ರೂಪ ರೂಪಿಸಿಕೊಳ್ಳಲು ನೆನಪುಗಳ ನೆರವು
ವಿಶ್ವ ತನ್ನ ರೂಪ ತಾಳಬೇಕಾಗಿದ್ದರೆ ರೂಪಿಸಿದ
ಆ ಮಹಾನ್‌ಶಕ್ತಿಯ ನೆನಪುಗಳು
ನೆನಪುಗಳ ಗುಂಪೇ ಭವಿಷ್ಯದ ಸ್ವಪ್ನಗಳಾಗಿ
ಸೃಷ್ಟಿಯ ಯತ್ನವೇ ನೆನಪುಗಳಾಗಿ
ಕೋಟಿ ಕೋಟಿ ಜನಗಳ ಭಾವನೆಗಳು ಅವರ ನೆನಪುಗಳು
ಅಳತೆ ಮೀರಿಸುತ್ತಿರುವ ವಿಶ್ವವಾಗಿ ಎದುರಿಗೇ ನಿಂತಿದೆ !

**-ಶ್ರೀ ಹರಿ.**

30-08-2012



## 319

ಸಂಕಲ್ಪದ ಫಲವತ್ತಾದ ಬೀಜಗಳಿಂದ
ಸಿದ್ಧಿಯೆಂಬ ಎಣ್ಣೆ ಹರಿದಾಡಬೇಕಿದ್ದರೆ
ಮನೋ ಎಂಬ ಗಾಣದಲ್ಲಿ ಹರಿಯುತ್ತಲೇ ಇರಬೇಕು !

ಕಾದು ಕುಳಿತುಕೊಳ್ಳದೆ ಗಾಣ ತಿರುಗುತ್ತಲೇ ಇರುವಾಗ
ಎಣ್ಣೆ ಬಂದಿದೆಯೋ ಇಲ್ಲವೋ ಎಂಬ
ಮನೋ ಶಂಕೆಗಳಿಂದ ಗಾಣ ನಿಲ್ಲಿಸಿ
ಬೀಜದಿಂದ ಫಲ ಬಂದಿಹುದೇನೋ ಎಂದು ನೋಡಿದರೆ
ಎಣ್ಣೆ ಕಾಣದೆ ನಿರಾಶೆಯಾಗಿ
ಗಾಣ ಹರಿಯುವುದನ್ನು ನಿಲ್ಲಿಸಿದರೆ
ಮೂರ್ಖತನದ ಪರಮಾವಧಿ !

ಸಂಕಲ್ಪ ಆಗಿದೆ
ಆ ಸಂಕಲ್ಪ ಪವಿತ್ರವಾದ ಭಾವನೆ ಎಂದು
ಮನದ ಗಾಣದಲ್ಲಿ ಪ್ರಯತ್ನವ ನಿಲ್ಲಿಸದೆ ತಿರುಗಿಸುತ್ತಿದ್ದರೆ
ಕಾಲ ಎಲ್ಲವನ್ನು ಹದಗೊಳಿಸಿ
ಸಂಕಲ್ಪಕ್ಕೆ ಉತ್ತರವಾಗಿ ಕೇಳಿರುವುದು ಒಂದು ಸಿದ್ಧಿಯಾದರೆ
ನಮ್ಮ ತಾಳ್ಮೆಗೆ ಸಿದ್ಧಿಗಳ ಹಿಂದೆ ಸಿದ್ಧಿಗಳು
ನಾಚಿಕೆಯಿಲ್ಲದೆ ಫಲವಾಗಿ ಎತ್ತಿಕೋ ಎಂದು
ಸಂಕಲ್ಪ ನಗುತ್ತಾ ಹೇಳುತ್ತಿದೆ

**- ಶ್ರೀ ಹರಿ.**

04-09-2012



www.sriharikhoday.com

## 320

ಕಣ್ಣಿಲ್ಲದವನಿಗೆ ಕತ್ತಲು ಸಹಜ
ಹಸಿವಿನಿಂದ ನರಳುತ್ತಿರುವವನಿಗೆ ಹಸಿವೇ ಸಹಜ
ದಿನವೂ ಜಗಳವಾಡುವವನಿಗೆ ಜಗಳವೇ ಸಹಜ
ದಿನವೂ ದ್ವೇಷ ಮಾಡುವವನಿಗೆ ದ್ವೇಷವೇ ಸಹಜ

ಪ್ರೀತಿ ಮಾಡುತ್ತಿರುವವನಿಗೆ ಪ್ರೀತಿಸುವುದೇ ಸಹಜ
ದಿನವೂ ದೇವರಲ್ಲಿ ಬೆರೆತಿರುವವನಿಗೆ ದೇವರ ಸ್ಥಿತಿ ಸಹಜ
ರಾಜಕೀಯದಲ್ಲಿ ಜೀವಿಸುವವನಿಗೆ ರಾಜಕೀಯ ಸಹಜ

ಕಣ್ಣಿಲ್ಲದವನಿಗೆ ಹೊಸ ಪ್ರಪಂಚ ತಿಳಿಯುವುದಿಲ್ಲವೋ
ನಾವು ನಮ್ಮ ಸಹಜ ಸ್ಥಿತಿಯಿಂದ ಹೊರಗೆ ನೋಡದಿದ್ದಲ್ಲಿ
ಹೊರಗಿನ ಅವಶ್ಯಕತೆ ಕಾಣದೆ ಜಗತ್ತಿಗೆ ಉಪಯುಕ್ತನಾಗದೆ
ಜೀವನ ಕಳೆಯುತ್ತಿರುವರು ಕೋಟಿ ಕೋಟಿ!

ಒಳಗೆ ಹೊರಗೆ ನೋಡಿ ಹೊರಗಿನ ಕಷ್ಟಗಳಿಗೆ
ನಾವು ಭಾಗಿಯಾಗಿದ್ದಲ್ಲಿನಮ್ಮ ಜೀವನ ಸಾರ್ಥಕ
ನಾವು ನೀರಿನಲ್ಲಿ ಒಣಗಿದ ಕಡ್ಡಿಗಳಂತೆ ತೇಲಾಡುತ
ಕಾಲದ ಸಮುದ್ರದಲ್ಲಿ ನಾವುಗಳು
ಉಸಿರಿರುವವರೆಗೂ ನಾವು ಕಾಲದ ಸಮುದ್ರದಲ್ಲಿ ತೇಲಾಡದೆ

ಕಾಣುವ ಎದುರಲ್ಲಿ ಬೆರೆತು
ಕಣ್ಣಿಗೆ ಕಾಣದಿದ್ದರೂ ಜ್ಞಾನದಿಂದ ಅರಿತು



ಅವಶ್ಯಕತೆಯ ಸಮಾಜಭಾರ ಹಗುರು ಮಾಡಿಸಿದರೆ
ಒಬ್ಬರ ಜೀವನ .. ಮತ್ತೊಬ್ಬರ ಜೀವನ ..ಜೊತೆ ಜೀವನ
ಸಮಾಜ ಸವಿಜೀವನದಲ್ಲಿ ತೃಪ್ತಿಪಡುತ್ತ

ಆ ತೃಪ್ತಿ, ಸ್ವಂತ ತೃಪ್ತಿಯಲ್ಲಿ
ಎಲ್ಲರ ಜೊತೆಗೆ ಮಾನವನಾಗಿ ಬಾಳುವ ತೃಪ್ತಿ ಪಟ್ಟರೆ
ಪ್ರಕೃತಿ ಅತಿ ಸಾಹಸದಿಂದ ಸೃಷ್ಟಿಸಿರುವ ನಮ್ಮಗಳಿಗೆ
ಮಾನವ ಪ್ರಕೃತಿಗೆ ಕೊಡುವ ಕಿರು ಕಾಣಿಕೆ

**- ಶ್ರೀ ಹರಿ.**

05-09-2012



www.sriharikhoday.com

## 321

ಸಂಬಂಧಗಳೇ ಪ್ರೀತಿಯ ಚಿಲುಮೆ
ಕೊನೆ ಬರದ ಸಂಬಂಧಗಳಿಗೆ
ಕೊನೆ ತಿಳಿಯದ ಪ್ರೀತಿಯ ಚಿಲುಮೆ ...!

ಪ್ರೀತಿ ಮೊದಲೋ ...ಸಂಬಂಧಗಳು ಮೊದಲೋ ...ತಿಳಿಯದೆ
ಮಾನವ ಪ್ರೀತಿಯ ಚಿಲುಮೆಯನ್ನು ಮುಚ್ಚಿ
ಮೆಚ್ಚುಗೆಯ ಸಂಬಂಧಗಳನ್ನು ಬೆಳೆಸುವ ಪ್ರಯತ್ನ....
ವಿಫಲವಾಗುವ ಪ್ರಯತ್ನಗಳು!

ತುಂಬಿ ತುಳುಕುತ್ತಿರುವ ಸಮಾಜದಲ್ಲಿ ಒಬ್ಬಂಟಿಗನಾಗಿ
ಸಂಬಂಧಗಳಿಗೆ ನಾಯಕನನ್ನು ಹುಡುಕುತ್ತ
ರಾಜಕೀಯ ವ್ಯವಸ್ಥೆಗಳಿಗೆ ಸಂಬಂಧಗಳ ಬೆಳೆಸದೆ
ಯಾರ ಸಂಬಂಧಗಳನ್ನು ಬೆಳೆಸುವ ನಾಯಕನು
ನಾನಾಗಬೇಕೆಂಬ ಇಚ್ಛೆಗಳು .....

ಚಿರವಾಗಿ ಹರಿಯುತ್ತಿರುವ ಪ್ರೀತಿಯ ಚಿಲುವೆಯನ್ನು ಮುಚ್ಚಿಸಿ
ದ್ವೇಶಗಳ ಬೆಳೆಸುತ್ತ......
ನಿಜ ಸಂಬಂಧಗಳ ಬೆಳೆಯುವ ರೀತಿ ಮರತೇ ಹೋಗಿ
ದೈವದತ್ತವಾದ ಪ್ರೀತಿಯ ಚಿಲುಮೆಯನ್ನು ಮುಚ್ಚುತ್ತಿರುವರು!

ಕಳೆದುಹೋಗಿರುವ ಸಂತಸದ ಅನುಭವ
ಕಳೆದುಹೋಗಿರುವ ಸಂತಸದ ಸಂಬಂಧಗಳು ಇಲ್ಲವಾಗಿ
ಜೊತೆ ಸಮಾಜದಲ್ಲಿ ಸಂತಸವಿಲ್ಲದ ರೋಗಿಗಳಾಗಿ ನರಳುತ್ತಿದ್ದಾರೆ!



ವಿಶ್ವ ಸೂತ್ರವೇ ಸಂಬಂಧಗಳಾಗಿರುವಾಗ
ನಾವುಗಳು ಸಂಬಂಧಗಳನ್ನು ಬೆಳೆಸದೆ
ನಾವುಗಳು ಒಂಟಿಯಾಗಿ .....
ಗಿಡ - ಪಕ್ಷಿ ಹಗಲು ರಾತ್ರಿ ಸುಂದರ ದೃಶ್ಯಗಳು
ಗಂಡು ಹೆಣ್ಣಿನ ಜೋಡಣೆಯಲ್ಲಿ

ಪ್ರೀತಿ - ಮಮತೆ ಮತ್ತು ಹೊಸ ಸಂಬಂಧಗಳು
ಕ್ಷಣ ಕ್ಷಣದಲ್ಲಿಯೂ ಪ್ರತಿಕ್ರಿಯೆ ಮಾಡುವ
ಒಂದು ಹೊಸ ಮಾನವ ಪೀಳಿಗೆಯನ್ನು ಬೆಳೆಸೋಣ
ದೈವದತ್ತವಾಗಿ ದೇವರು ಕೊಟ್ಟಿರವ ಪ್ರೀತಿಯ ಚಿಲುವೆಯನ್ನು
ಎಂದೂ ಮುಚ್ಚದೆ ಉಪಯೋಗಿಸೋಣ !

**-ಶ್ರೀಹರಿ.**

05-09-2012

www.sriharikhoday.com

## 322

ದಿನವೂ ನಡೆಯುತ್ತಿರುವ ಅಂತರಾಳದ ಹೋರಾಟದಲ್ಲಿ
ಗೆಲುವೂ ನಮ್ಮದೇ ಸೋಲೂ ನಮ್ಮದೇ
ದಿನವೂ ಅಪೇಕ್ಷಿಸುವ ಆಸೆಗಳ ಬೇಡಿಕೆಗಳಲ್ಲಿ
ಕೊನೆಗೆ ದೊರೆಯುವುದು ಮಾತ್ರ ದೊರೆಯುವುದು!

ಬದಲುತ್ತಿರುವ ಪ್ರಪಂಚದಲ್ಲಿ
ಹೊಸ ಹೊಸ ಆವಿಷ್ಕಾರದ ಮಿನುಗುಗಳಲ್ಲಿ
ಮನಸ್ಸಿಗೆ ಹೊಸ ಸ್ವಪ್ನಗಳು
ಸ್ವಪ್ನಗಳಿಗೆ ಹೊಸ ಹೊಸ ಕನಸುಗಳ ಸರಮಾಲೆ
ನಿಲ್ಲದೇ ನದಿಯಂತೆ ಹರಿಯುತ್ತಿದೆ!

ಇರುವುದು ಜೊತೆ ಇರುವುದೋ
ಇರುವುದು ಜೊತೆ ಇಲ್ಲದೇ ಹೋಗುವುದೋ
ಇತರರ ಜೊತೆ ಹೋಲಿಕೆಗಳ ಅಂತರಂಗದ ಹೋರಾಟ
ಸತ್ಯದ ದಾರಿಯಿಂದ ದಾರಿಗೋಲಾಗಿ
ಕಲ್ಪನಾ ದಾರಿಗೋಲಾಗಿ ನಂಬಿ ನಡೆಯುತ್ತಿದೆ
ಮಾನವನ ಜೀವನದ ಪಯಣ!

ಮನೋ ಬೇಡಿಕೆಗಳ ಅವಶ್ಯಕತೆಯ ಸಮಾಧಾನ
ಮನೋ ಬೇಡಿಕೆಗಳ ಅವಶ್ಯಕ ಬೇಡಿಕೆಗಳು
ಮನೋ ಕಲ್ಪಿತ ಸ್ಥಾನಮಾನಗಳ ಮನದ ಬೇಡಿಕೆಗಳು



ಹರಿದಾಡುತ್ತಿರುವ ಮನಸ್ಸಿಗೆ ಸ್ಥಿರಸ್ಥಿತಿಯನ್ನು ತರಿಸಲು
ಮನಸ್ಸಿನಲ್ಲಿರುವ ಬೆಳಕನ್ನು ಆರಿಸಿ
ಕತ್ತಲಲ್ಲಿ ದಾರಿ ಕಾಣದೆ ಆದ ಮನೋ ಗದ್ದಲಗಳು
ನಿಶ್ಶಬ್ದ ಸ್ಥಿತಿಯಲ್ಲಿ ಬಂದು..

ಎಲ್ಲಾ ಗದ್ದಲಗಳು ಮಾಡುವ ಮನಗಳು ಒಂದಾಗಿ
ಒಂದಾದ ಮನ ಏಕಾಂತ ಸ್ಥಿತಿಯ ವಾತಾವರಣದಲ್ಲಿ
ಬೇಡಿಕೆಗಳು ಇಲ್ಲವಾಗಿ, ಬೇಡಿಕೆಗಳು ಸಂಕಲ್ಪಗಳಾಗಿ
ಮಾರ್ಪಾಟು ಮಾಡಿಕೊಂಡರೆ ನಮ್ಮ ಜೀವನ
ಬಂದಿದ್ದೂ ತಿಳಿಯುವುದಿಲ್ಲ ಹೋದದ್ದೂ ತಿಳಿಯುವುದಿಲ್ಲ

**- ಶ್ರೀ ಹರಿ**

07-09-2012

www.sriharikhoday.com

## 323

ಅಸಹಾಯಕ ಹೀನಾಯ ಭೂಮಿಯಾಗಿ
ನೆಮ್ಮದಿ ಕಳೆದುಕೊಂಡಿರುವ ಭೂಮಿತಾಯಿಯಾಗಿ
ಅರ್ಥವಿಲ್ಲದ ಮೋಡಗಳ ಸಿಡಿಲಿನ ಗುಡುಗುಗಳು
ನನ್ನ ಭೂಗರ್ಭದಲ್ಲಿ ನೆಮ್ಮದಿಯಿಲ್ಲದ ಭೂಕಂಪಗಳು

ಶಾಂತಿಯನ್ನು ಮರೆತಿರುವ ಸಮುದ್ರ ಸಾಗರಗಳು
ನಿಯಮವನ್ನು ಮರೆತು ಒಂದೆಡೆ ನಿಲ್ಲದೆ
ಹಾರುತ್ತಿರುವ ಗಾಳಿ ಮೋಡಗಳು
ಬಿಸಿಲ ತಡೆಯಲಾಗದೆ ಕುಸಿದು
ಬೀಳುತ್ತಿರುವ ಹಿಮದ ಗೆಡ್ಡೆಗಳು
ಭೂಮಿಯಲ್ಲಿ ಕರಗಿ ಹೋಗುತ್ತಿರುವ ನೀರು

ಫಲವತ್ತಾದ ಭೂಮಿ ಮರುಭೂಮಿಯಾಗಿ
ಬೀಸುತ್ತಿರುವ ಬಿಸಿ ಗಾಳಿಗಳು
ಅಂಜದೆ ಮಾನವ ಮಾಡುತ್ತಿರುವ ಮಲಿನ ವಾತಾವರಣಗಳು
ಜೀವಿಸಲಾಗದೆ ನಶಿಸಿಹೋಗುತ್ತಿರುವ ಗಿಡ ಮರ ಪುಷ್ಪಗಳು
ಹೆದರಿ ಅರಳುತ್ತಿರುವ ಹೂಗಳ ಕಷ್ಟಗಳು

ತೆನೆಯಾಗಿ ಬೆಳೆ ಬೆಳೆಯುವ ಬೆಳೆಗೆ ನೀರಿನ ಭಯ
ಮಿನುಗಲು ಮುದುಡಿಕೊಂಡು ಕುಳಿತಿರುವ ಬಣ್ಣಗಳು
ಅಶಾಂತಿಯಿಂದ ಕೂಗಿ ಕಿರುಚಿಕೊಳ್ಳುತ್ತಿರುವ



www.sriharikhoday.com

ಮಾನವನ ಜಗಳಗಳು, ನಾನು ಬೆಳದ ಮಾನವ ಬೆಳೆಗೆ
ಬೆಳೆಯ ಕಾಳು ಕಾಳುಗಳಲ್ಲಿ ಒಳ ಜಗಳಗಳು
ನನ್ನ ಜೊತೆಗಿರುವ ಸೂರ್ಯ-ಚಂದ್ರರಿಗೆ
ನನ್ನ ಕಂಡರೆ ಹೆದರಿಕೆ!

ಕಲ್ಪನೆಗೆ ಮೀರಿರುವ ಹೊಸ ಹೊಸ ರೋಗ ರುಜಿನಗಳು
ಪ್ರೀತಿ-ಮಮತೆ-ಮೌಲ್ಯ ಅರಿಯದೆ ಹೋಗಿರುವ
ಮಾನವ - ಒಣಗಿದ ಎಲೆಗಳು
ದುಃಖದಿಂದ ಮರೆಯುತ್ತಿರುವ ಎಲ್ಲಾ ಸಮಸ್ಯೆಗಳು
ದಿಕ್ಕು ದೆಸೆ ತಿಳಿಯದ ಧರೆಯಾಗಿ ಅಸಹಾಯಕ
ಭೂಮಿತಾಯಿಯಾಗಿ

ನನ್ನ ತಾಯಿ ಹೆಸರಿಗೆ ಕಳಂಕ ಬಳೆಯುತ್ತಿರುವ ಮಾನವನ
ಪ್ರತಿಷ್ಠೆಗಳು
ಆ ನನ್ನ ಸೃಷ್ಟಿಕರ್ತ ನನ್ನನ್ನು ಕಾಪಾಡು ಎಂಬ ದುಃಖ
ವ್ಯಕ್ತಪಡಿಸುತ್ತಿರುವ
ತಡೆಯಲಾಗದ ದುಃಖಿತ ಭೂತಾಯಿಯ ಕಣ್ಣೀರ ಬಿಂದುಗಳು!

**- ಶ್ರೀ ಹರಿ.**

07-09-2012

## 324.

ಬಂಜೆ ಕನಸುಗಳ ಭಾಗಿದಾರರು
ಅನಾಥ ಮಕ್ಕಳು
ಹಸಿವಿನ ಹೊಟ್ಟೆ ಹಿಡಿದು ಕಾಳು ಕಾಳಿಗೆ
ಬೀದಿ ಬೀದಿ ಅಲೆಯುತ್ತಿರುವ ಅನಾಥ ಮಕ್ಕಳು!

ಅತ್ತು ಅತ್ತು ಅತ್ತರೂ ಕಣ್ಣೀರು ಬರದ ಅನಾಥ ಮಕ್ಕಳು
ತಂದೆ ಯಾರೋ ತಾಯಿ ಯಾರೋ
ಆಶ್ರಯಕ್ಕೆ ಹುಡುಕಾಡುತ್ತಿರುವ
ಅನಾಥ ಮಕ್ಕಳು!

ಕನಿಕರವೇ ಬರದ ಪಾಡು
ಯಾರ ಕಣ್ಣಿಗೂ ಬೀಳದ ಬದುಕಿನ ಬೀಡು
ಸಮಾಜ ಕಸವಾಗಿ ನೋಡುತ್ತಿರುವ
ಅನಾಥ ಮಕ್ಕಳು!

ಅವರಿಗೋಸ್ಕರ ಸೂರ್ಯನು ಹುಟ್ಟೇ ಇಲ್ಲವೋ
ಅವರಿಗೋಸ್ಕರ ನೀರು ಕೂಳು ಬೆಳೆದಿಲ್ಲವೋ
ಅವರಿಗೋಸ್ಕರ ಕರುಣೆ ಕನಿಕರಿಸದೋ
ಸಕಾರಕ ಪ್ರತಿಧ್ವನಿಯಿಂದ ಸುತ್ತಿಕೊಂಡಿರುವ
ಅನಾಥ ಮಕ್ಕಳು



www.sriharikhoday.com

ನಾಗರೀಕತೆ ಕಣ್ತೆರೆಯಲಿ, ಬಲ್ಲವರ ಮನ ಮನ ಕರಗಲಿ
ಸಮಾಜ ಆಳುವ ಮಹಾ ಜನಗಳ ದೃಷ್ಟಿ ಬೀಳಲಿ
ಮಾನವ ಕುಲಕ್ಕೆ ಸೇರಿಸಿಕೊಳ್ಳಿ
ಅವರ ಕಷ್ಟಗಳಿಗೆ ಭಾಗಿಯಾಗು ಎಂಬ ಕನಿಕರ

ಉದ್ರೇಕ ಸ್ಥಿತಿಯಿಂದ ಬಂದ ಕಾರ್ಯರೂಪಕ್ಕೆ ಬರಲಿ
ಎಲ್ಲರ ದೇವರಾದ ಆ ದೇವ ಕೃಪಾದೃಷ್ಟಿ ಹರಿಸಲಿ ಎಂಬ
ಅವಶ್ಯ ಬೇಡಿಕೆ ಎಲ್ಲರ ಮನದಲ್ಲಿ ಮಂಡಿಸಿ
ಕಾರ್ಯರೂಪಕ್ಕೆ ಬರಲಿ

**- ಶ್ರೀ ಹರಿ.**

10-09-2012

# 325

ಮಾನವ ಹೆದರಿ ಹೆದರಿ ಜೀವಿಸಿ
ಜೀವಿಸುತ್ತಲೇ ಇರುವನು
ಒಂದು ಕಡೆ ಜೀವಿಸುವುದು
ನಮ್ಮ ಜೀವನ ರೀತಿಯಾದರೆ
ಮತ್ತೊಂದೆಡೆ ಸಾಯುವುದು ಕರ್ತ್ಯವ್ಯವಾಗಿದೆ!

ಜೀವಿಸುವುದು ಅಗತ್ಯ
ಸಾಯುವುದು ಕಾಲಕ್ಕೆ ಅಗತ್ಯ
ಜೀವನಚಕ್ರದಲ್ಲಿ ಒಂದೆಡೆ ಸಾವು
ಮತ್ತೊಂದೆಡೆ ಜೀವನದ ಮಿನುಗು
ಜೀವಿಸಿ ಧರೆಯ ಬೆಳವಣಿಗೆಗೆ
ಸಹಾಯಕ ಕೆಲಸಗಳು!

ಒಂದು ದಿನದ ರಾತ್ರಿ ಹಗಲನ್ನು
ನಾವು ಜೊತೆ ನೋಡುವಂತೆ
ಜೀವನದಲ್ಲಿ ಜೀವನದ ಸುಖ ಮಾತ್ರ ಬಯಸದೆ
ಜೊತೆ ಇರುವ ರಾತ್ರಿಯ ನಿದ್ರೆ ಸುಖ ಕಾಣುವಂತೆ
ಸಾವಿಗೆ ಹೆದರದೆ ಎಲ್ಲವನ್ನೂ
ಮನಸ್ಸಿನ ಪಾತ್ರೆಯಲ್ಲಿ ತುಂಬಿಸಿಕೊಳ್ಳಬೇಕು!

ಸಾವೇ ಜೀವನದ ಹೊಸ ಜೀವನ
ಸುಖದ ಜೀವನದಲ್ಲಿ



ಸುಖದ ನಿದ್ರೆಯನ್ನು ಸವಿಯುವಂತೆ
ಸಾವಿನ ಒಂದು ಸತ್ಯಕ್ಕೆ ನಾವು ಹೆದರದೆ
ಸತ್ಯವಾದ ಸತ್ಯಕ್ಕೆ ನಾವು ಒಲಿದು
ಹೊಸ ಹೊಸ ಮನೋ ತರಂಗಗಳಲ್ಲಿ

ಕಾದು ನಿಂತಿರುವ ಜೀವನದ ಹೊಸ ಹೊಸ ಹೊಸ್ತಿಲನ್ನು
ತೆರೆಯಲು ಅಭಿಲಾಷಿಗಳಾಗಿ
ಜನುಮ ಪಡೆದ ಆ ಹೊಸ ಜೀವನದಲ್ಲಿ
ಆ ಜೀವನದ ದಿಗಂತದ ಕೊನೆಯನ್ನು ಕಂಡು
ಅದರಲ್ಲಿ ಬೆರೆತು ಸುಖಪಡುತ್ತ

ಹೆದರಿಕೆಯಿಲ್ಲದ ಜೀವನ ಮನಃಸ್ಥಿತಿಗಳಿಂದ
ಹೊಸ ಹೊಸ ಜೀವನದ
ಚೈತನ್ಯಗಳ ದರ್ಶನ ಮಾಡೋಣ
ಆ ಭಾಗ್ಯದ ಭಾಗ್ಯಕ್ಕೆ ಭಾಗಿಯಾಗಲು ಕಾಲವ ಬೇಡಿಕೊಳ್ಳೋಣ!

**- ಶ್ರೀ ಹರಿ.**

11-09-2012

www.sriharikhoday.com

## 326

ಕರ್ತವ್ಯ ಕಾವ್ಯ ಮತ್ತು ನಾನು
ನಾನು ಎಲ್ಲಿ ಎಂದು ಹುಡುಕದೆ
ಕರ್ತವ್ಯ ಏನು ಎಂಬ ಅರ್ಥವ ಹುಡುಕದೆ
ಕಾಣದೆ. . ಕಾವ್ಯ ಬರಿ ಸತ್ಯದ ಪ್ರತಿಧ್ವನಿ ಎಂಬ ಭಾವನೆ!

ಗುಣಗಳನ್ನು ಮೀರಿಸುವ ಕಾವ್ಯ, ಅದು ಕನ್ನಡಿಯಾಗಿರುವ ಕಾವ್ಯ
ನನ್ನ ಆಳದಲ್ಲಿ ಜಾರುತ ಜಾರಿತು . . . ನಾನೇ ಇಲ್ಲವಾಗಿ
ಭೂತ ಭವಿಷ್ಯ ವರ್ತಮಾನಗಳ ದರ್ಶನ
ಅವತರಿಸಿರುವ ಆತ್ಮನ ಬೆಳಕಿನ ದರ್ಶನ!

ಚಿತ್ತದ ಎದುರಿಗೆ ನೆನಪಿನ ಗುಂಪುಗಳ ಜೋಡಣೆ
ಆ ಮಹಾನ್ ಶಕ್ತಿಯ ಎದುರಿಗೆ ನಾ ಮೂಕನಾಗಿ
ಅವರಲ್ಲಿ ನಾ ಅಸಹಾಯಕತೆಯನ್ನು ಕಂಡು
ಎಲ್ಲಿಂದ ಜಾರಿ ಬಂದೆನೋ .... ಎಂದು ನನಗೆ ತಿಳಿಯದೆ
ಪ್ರಚೋದಿಸುವ ಕಾವ್ಯ ರಚನೆಯ ಪ್ರಾರಂಭ!

ಭವಿಷ್ಯಕ್ಕೆ ಸುಖ ಬರಬೇಕಾದರೆ
ಸುಖ ಬರುವ ಕಲ್ಪನಾ ಕಟ್ಟಡಗಳ ಕಟ್ಟಡ
ವರ್ತಮಾನಕ್ಕೆ ದಿಕ್ಕು ತಿಳಿಯದೆ ಸುಖದ ಬೇಡಿಕೆಗಳ ಅಪೇಕ್ಷೆ
ಪರಿಶುದ್ಧವಾದ ನದಿಗಳ ಹರಿದಾಟದ ರಭಸ. . .



www.sriharikhoday.com

ಚಿತ್ತದೆದುರಿಗಿರುವ ನೆನಪುಗಳಿಗೆ
ಹಳೆಯದನ್ನು ಮರೆಸುವ ಜಾಲ
ಕರ್ತವ್ಯ ಏನು ಎಂದು ನನಗೆ ತಿಳಿಯದೆ ಯಾರಿಗೂ ಹೇಳದೆ
ಜಿಗಿದು ಮುಂದು ಓಡುತ್ತಿರುವ ಕಾಲಚಕ್ರ

ಕಾವ್ಯ ಬರಿ ಬರೆಯುವ ಬರವಣಿಗೆಯಾಗದೆ
ಸಾವೇ ಇಲ್ಲದ ಸತ್ಯದ ಬೆಳಕಾಗಿ
ಪ್ರಜ್ವಲಿಸುವ ಬಣ್ಣ ಬಣ್ಣಗಳ ನಿಶ್ಶಬ್ದದ ಸ್ಥಿತಿ
ನೆನಪುಗಳಿಲ್ಲದ ನೆನಪಿನ ಇಂಪು

ನಾನು ಎಂಬ ನನ್ನ ಚಿತ್ತದ ನೆನಪುಗಳು
ಅಸತ್ಯದ ನೆನಪುಗಳ ಪರಿಸರದಿಂದ
ಸಾಕು ಎಂದು ತೇಲಾಡಿ ಮೇಲೆ ಚೆಲ್ಲುತ್ತಿದೆ

- ಶ್ರೀ ಹರಿ.

12-09-2012

# 327

ಅವಶ್ಯಗಳ ಸಹಾಯಕ ಮನೋಕೂಗಿಗೆ
ಮನೋ ಬೇಡಿಕೆಗಳು..
ಬೇರೆಯವರನ್ನು ಬೇಡುವ ಅಂಜಿಕೆ
ಅಸಹಾಯಕ ಮನೋವೇದನೆ ವ್ಯರ್ಥವಾದ ವೇದನೆ!

ಪ್ರತಿಯೊಂದು ಸೃಷ್ಟಿಯಲ್ಲಿ ದೈವಾಂಶವಿದೆ
ದೈವಾಂಶವಾಗಿರುವ ಆತ್ಮ ನಮ್ಮಲ್ಲೇ ಇರುವುದ ಅರಿತು
ಬೆಳಕಾಗಿರುವ ಆತ್ಮ ಅದರ ಜೊತೆಗಿರುವ ಚಿತ್ತ!
ಚಿತ್ತದ ಜೊತೆಗೆ ನೆನಪುಗಳ ಗುಂಪೇ ಗುಂಪು!

ನಮ್ಮ ಅವಶ್ಯಗಳ ಕೇಳುವ ಸಾಧನೆಯಾದ ನೆನಪುಗಳು
ಜೊತೆ ಇರುವ ಆತ್ಮನನ್ನು ಲೆಕ್ಕಕ್ಕೆ ಇರಿಸದೆ
ನಮ್ಮದೇ ಆದ ಪ್ರತಿಷ್ಠೆಯಲ್ಲಿ ಅಂಧರಾಗಿ
ಅಗಾಧ ಶಕ್ತಿಯುಳ್ಳ ಆತ್ಮನನ್ನು ದೂರವಿಟ್ಟಿರುವುದು
ಸೃಷ್ಟಿಯಲ್ಲಿ ಕಷ್ಟ-ಸುಖಗಳ ಕಾರಣಗಳು!

ನಮ್ಮಲ್ಲಿಯೇ ದೈವ ಪ್ರತಿರೂಪವಾಗಿರುವ ಆತ್ಮನಲ್ಲಿ ಬೆರೆತರೆ
ನಮಗೆ ಬಂದಿರುವ ಬೇಡಿಕೆಗಳ ಕಷ್ಟ ಆ ಮಹಾನ್ ಶಕ್ತಿ
ಹೀರಿಕೊಂಡು
ಅಂಜಿಕೆ ಇಲ್ಲದ ಜೀವನದ ಹಾದಿ ಎದುರಿಗೆ ಒಲಿದು ನಿಂತಿರುವುದು
ಅದ್ಭುತವಾದ ಸುಂದರ ಜೀವನ!



www.sriharikhoday.com

ಜಗತ್ತೇ ನಮ್ಮನ್ನು ಉಪಯೋಗಿಸಿಕೊಂಡು
ನಮ್ಮ ಹಿಗ್ಗನ್ನು ಹೆಚ್ಚಿಸಿ ಜಗತ್ತಿನ ಹಿಗ್ಗನ್ನು
ಹೊಸ ಹೊಸ ಚಿತ್ರಲಿಖಿತ ಹಿಗ್ಗನ್ನು ಹೆಚ್ಚಿಸುತ್ತ
ನಮ್ಮಲ್ಲಿಯೇ ಅಗಾಧ ಬಲದ ಅನುಭವ ಅನುಭವಿಸಿ
ಚಿಂತೆಯಿಲ್ಲದ ತುಂಬು ಜೀವನದ ಅನುಭವ ನೀಡಿ

ನಮ್ಮಲ್ಲೇ ಇರುವ ಹೊಸ ಸ್ವರೂಪ
ಆತ್ಮನ ಜೊತೆ ಆತ್ಮೀಯವಾದರೆ
ಜಗತ್ತಿನಲ್ಲಿ ಎಲ್ಲದರ ಜೊತೆಗೆ ಬೆರೆತು ಕಾಲವನ್ನು ಮೀರಿಸಿ
ನಮ್ಮನ್ನು ಅದರ ಜೊತೆ ತೇಲಾಡಿಸುತ್ತದೆ!

ಎಲ್ಲಾ ಮನೋಬೇಡಿಕೆಗಳು ಕರಗಿಹೋಗಿ
ಮುಂಬರುವ ಕಾಲದಲ್ಲಿ ಬೇಡುವ ಮುನ್ನವೇ
ಬೇಕಿರುವುದು ಜೊತೆಯಲ್ಲಿರುತ್ತದೆ
ಈ ರೀತಿ ಪಡೆಯುವುದು ನಮ್ಮಲ್ಲಿರುವ ಆತ್ಮನ ಸಾಹಸ!

**- ಶ್ರೀ ಹರಿ.**

13-09-2012

## 328

ಕಾಲದ ಆಕಾಶದಲ್ಲಿ
ಸುಖ ದುಃಖಗಳ ಹಳ್ಳ ದಿಣ್ಣೆಗಳು
ತಾಯಿಯ ತೊಡೆ ಸಾಕಿದ ಸ್ವರ್ಗದ ಸುಖ
ಕಷ್ಟ ಆವರಿಸಿರುವ ದಾರಿದ್ರ್ಯ.... ಕತ್ತಲಿನ ಹಳ್ಳಗಳು!

ಕಷ್ಟ ಸುಖಗಳ ಆರಿಸುವುದು ನಮಪ್ಪ ನಡಿಗೆ
ಮತ್ತು ಅದರ ದೆಸೆಗಳು
ಅಸೂಯೆಗಳ ಹಳ್ಳಕ್ಕೆ ಬೀಳದೆ
ದ್ವೇಷದ ಹಳ್ಳಗಳಿಗೆ ಬೀಳದೆ

ಸುಳ್ಳು ನೆಪಗಳ ಹಳ್ಳಕ್ಕೆ ಬೀಳದೆ
ಯಾರೂ ಕಂಡಿಲ್ಲದ ಕಾಲದ ಸುಖದ
ರುಚಿಕರ ಹಣ್ಣುಗಳ ನೀಡುವ ತೋಟಗಳು
ಕಾಲದ ಆಕಾಶದಲ್ಲಿ ಅನೇಕ ತೋಟಗಳಿವೆ

ಹೋಲಿಕೆ ಮಾಡುತ ಜಾರಿಹೋಗುವ ಜಾಣ್ಮೆಯ ಹಳ್ಳಗಳು
ಬುದ್ಧಿಯಿಲ್ಲದ ಅಜ್ಞಾನಗಳ ಹಳ್ಳಗಳು
ಸಮಾಜದ ಸತ್ಯ ದೃಶ್ಯಗಳನ್ನು ಮರೆತಿರುವ ಹಳ್ಳಗಳು
ತನ್ನ ಸ್ವಯಂ ಕಲ್ಪಿತ ಮರುಭೂಮಿಗಳು

ತಾವೇ ಸೃಷ್ಟಿಸಿಕೊಂಡು
ತಮ್ಮನ್ನು ತಾವೇ ಕಳೆದುಕೊಂಡು



www.sriharikhoday.com

ದಿಕ್ಕು ದೆಸೆ ಕಾಣದ ಹಗಲು ರಾತ್ರಿಗಳು ಇಲ್ಲದ
ಕತ್ತಲುಗಳ ಕೋಣೆಯಲ್ಲಿ ಕೊಳೆಯುತ್ತಿರುವರು

ಯಾರ ಮೇಲೆ ದ್ವೇಶವಿಲ್ಲದ ಕಾಲಕ್ಕೆ
ತಮ್ಮ ತಪ್ಪನ್ನು ಕಾಲಕ್ಕೆ ನಿಂದಿಸಿ
ಬೇಸರದಿಂದ ಆಕಾಶಕ್ಕೆ ನಾವು ಉಗಿದರೆ
ಅದು ನಮ್ಮ ಮೇಲೆ ಮತ್ತೆ ಬೀಳುವಂತೆ

ಯಾವ ಅಡಚಣೆಯಿಲ್ಲದ ಸುಖದ ಸತ್ಯಕ್ಕೆ
ಹಾದಿಗಳನ್ನು ಹುಡುಕಿಕೊಂಡರೆ,
ಜೀವನದ ಶೈಲಿಗಳನ್ನು ಬದಲಾಯಿಸಿಕೊಂಡರೆ
ನಮ್ಮ ಜೊತೆ ಸುಖವಾಗಿ ಜೀವಿಸಲು ಕಾಲವು
ನಮಗಿಂತ ಹೆಚ್ಚಿನ ಕಾತರದಿಂದ ಕಾಯುತ್ತಿದೆ!

**- ಶ್ರೀ ಹರಿ.**

14-09-2012

## 329

ಅವನು ಬೇರೆ ಅವರು ಬೇರೆ
ಅವನು ನನ್ನವನು ಅವಳು ನನ್ನ ತಮ್ಮನ ಮಗಳು
ಇವರು ನಮ್ಮ ಮಕ್ಕಳು ಎಂದು ನುಡಿಯುವ ಮಾತುಗಳು
ನಮ್ಮ ತುಟಿ ಮೀರಿ ಹೊರ ಬಂದರೆ
ಪ್ರಗತಿ ತುಂಬಿದ ತುಂಬು ಜೀವನ
ಹೊಸ್ತಿಲ ಹೊರಚೆಲ್ಲುತ್ತದೆ!

ಪ್ರಾಣಿಗಳಲ್ಲಿರುವ ನಮ್ಮತನ
ನಮ್ಮತನದ ಜೀವನ ರೀತಿ ನಡವಳಿಕೆಗಳು
ನಮ್ಮ ಓಣಿಯವರು ನಮ್ಮ ಊರಿನವರು
ನಮ್ಮ ದೇಶದವರು ನಮ್ಮ ಹಿರಿಯರು
ನಮ್ಮ ನಾಯಕರೆಂಬ ಭಾವನೆಗಳು
ದ್ವಂದ್ವರಹಿತ ಐಕ್ಯತೆಯ ಜೀವನ ಈಗ
ನಂಬಿಕೆ ಕಳೆದುಹೋಗಿದೆ!

ಆ ಸತ್ಯದ ಭಾವನೆಗಳು ಹೆದರಿಕೆಯಿಂದ
ಸಮಾಜದಲ್ಲಿ ಹೆದರಿ ಹೊರಬರದೆ ಬಚ್ಚಿಟ್ಟುಕೊಂಡು
ಆ ಸತ್ಯದ ಭಾವನೆಗಳು ಆಸರೆಯಿಲ್ಲದ ತಬ್ಬಲಿಯಾಗಿ
ಜಾಹೀರಾತು ವದಂತಿಗಳ ಸೃಷ್ಟಿಸುವುದು
ಸುಂದರವಾದ ಜೀವನಕ್ಕೆ ಹೊಡೆಯುವ
ಹೊಸ ಹೊಸ ಕಾನೂನುಗಳು ರಚನೆಗಳು!



ಒಂದಾಗಿರುವ ಮನಗಳನ್ನು ಭೇದಿಸುವ ರಾಜಕೀಯ ವೃತ್ತಿ
ವೃತ್ತಿಯಲ್ಲಿ ನಿರತವಾಗಿರುವ ರಾಜಕಾರಣಿಗಳು
ತಮ್ಮ ತುಂಟ ನಾಲಿಗೆಯಿಂದ
ದೇವರ ಪ್ರತಿರೂಪವಾದ ಸಮಾಜವನ್ನು ಭೇದಿಸಿ
ತಬ್ಬಲಿಯಾಗಿರುವ ಸತ್ಯದ ಭಾವನೆಗಳಿಗೆ ಆಶ್ರಯ ನೀಡುವ
ಅವರ ಜೊತೆ ಮುಂಬರುವ ಕಾಲಕ್ಕೆ

ಹಳೆಯ ಮಾದರಿಯಂತೆ ಹೊಸ ರೀತಿಯಲ್ಲಿ
ಪ್ರಜೆಗಳ ಮನದಲ್ಲಿ ಬೆಳಗಿಸಿಕೊಂಡು
ಕಳೆದುಕೊಂಡು ಹೋಗಿರುವ
ಸಮಾಜದ ಸತ್ಯದ ಜೀವನವನ್ನು ಹುಡುಕೋಣ
ಅದನ್ನು ಹುಡುಕಿ ಅದರ ಜೊತೆ ಜೀವಿಸೋಣ!

**- ಶ್ರೀ ಹರಿ.**

15-09-2012

www.sriharikhoday.com

## 330

ದುಷ್ಟರ ಜೊತೆಗೆ ನಮ್ಮ ಕಷ್ಟ ಖಂಡಿತ
ವ್ಯಾಪಾರದ ಜೊತೆಗೆ ಬಿನ್ನಾಭಿಪ್ರಾಯಗಳು ಖಂಡಿತ
ಸಂಸಾರದಲ್ಲಿ ಒಳಜಗಳಗಳು ಖಂಡಿತ
ವೈಯ್ಯಾರದಿಂದ ಬಳಕುವ ಹೆಣ್ಣಿನ ಮೇಲೆ
ನಿಂದನೆಗಳು ಖಂಡಿತ!

ಅವಸರ .... ಅವಸರವುಳ್ಳ ನಿರ್ಧಾರಗಳಿಗೆ ಟೀಕೆಗಳು ಖಂಡಿತ
ಎದೆಗಾರಿಕೆಯುಳ್ಳ ಮನ ಭವಿಷ್ಯಕ್ಕೆ ಶುಭ ಖಂಡಿತ
ಚಾಡಿಕೋರ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದು ಖಂಡಿತ
ಜೂಜುಗಾರ ತನ್ನ ಆಸ್ತಿಯನ್ನು ಕಳೆದುಕೊಳ್ಳುವುದು ಖಂಡಿತ
ದಿನಕರನ ಉದಯವು ದಿನವೂ ಖಂಡಿತ!

ಸಹೋದರರ ಜೊತೆ ತಮ್ಮ ಜೀವನ ಕಷ್ಟಗಳಲ್ಲಿ ಸಹಕಾರ ಖಂಡಿತ
ದೇವರ ನೆಂಟಸ್ಥನದಿಂದ ಜೀವನ ಹಗುರಾಗುವುದು ಖಂಡಿತ
ದುರಂಹಕಾರದ ಭಾಷಣಕ್ಕೆ ಕಲ್ಲು ತೂರಾಟ ಖಂಡಿತ
ರಂಗಮಂದಿರದ ಹೆಸರು ನಾಟಕವಾಡುವವರು
ಹೆಸರು ಗಳಿಸುವುದು ಖಂಡಿತ!

ಬರಹಗಾರ ತನ್ನ ಅಂತರಾಳದ ಭಾವನೆಗಳನ್ನು
ಹೊರತೋರಿಸಿ ತಾನು ನಗ್ನವಾಗುವುದು ಖಂಡಿತ
ದುಡಿಮೆಗಾರ ತನ್ನ ಶರೀರದ ಕಷ್ಟದಲ್ಲಿ ಸುಖವನ್ನು



ಅನುಭವಿಸುವುದು ಖಂಡಿತ
ಶ್ರೇಯಸ್ಕರ ಭಾವನೆಗಳು ಜೀವನದಲ್ಲಿ ಅವಶ್ಯ
ಎನ್ನುವುದು ಖಂಡಿತ

ತೃಪ್ತಿಕರ ಮನೋಭಾವನೆ ವಯಸ್ಸಿನ ಮೇಲೆ
ಆಯಸ್ಸನ್ನು ಹೆಚ್ಚಿಸುವುದು ಖಂಡಿತ
ಕನಿಕರದ ಮನದಲ್ಲಿ ಉಕ್ಕುವ ಜೀವನ
ಚರಿತ್ರೆಯು ಅವನ ಮೇಲೆ ಬರೆಯುವುದು ಖಂಡಿತ
ತನ್ನ ಅಂತಃಪುರದ ಕೋಣೆಯಲ್ಲಿ ಸುಖದ ವಿಚಾರಗಳನ್ನು
ಮೆಲುಕು ಹಾಕಿಕೊಂಡರೆ
ತುಂಬುಜೀವನದ ಸುಖ ಖಂಡಿತವೋ ಖಂಡಿತ!

**- ಶ್ರೀ ಹರಿ.**

17-09-2012



www.sriharikhoday.com

## 331

ಹೇಳುವವರು ಹೇಳುತ್ತಲೇ ಇದ್ದಾರೆ
ಕೇಳುವವರು ಕೇಳುತ್ತಲೇ ಇದ್ದಾರೆ
ಮಾಡಿಸುವವರು ಬೇರೆಯವರ ಕೈಯ್ಯಲ್ಲಿ ಮಾಡಿಸುತ್ತ
ಮಾಡುವವರು ಈ ದೇಶದಲ್ಲಿ
ಕೆಲವೇ ಕೆಲವರು ಕೆಲಸ ಮಾಡುತ್ತಿದ್ದಾರೆ!

ಸ್ವರಾಜ್ಯಕ್ಕೆ ದುಡಿದು ಸ್ವರಾಜ್ಯವನ್ನು
ಪರಕೀಯರ ಕೈಯ್ಯಿಂದ ಪಡೆದುದು
ನಮ್ಮ ದೇಶಕ್ಕೆ ಈ ಯುಗದ ಕೊಡುಗೆ
ಸ್ವರಾಜ್ಯವ ಪಡೆದಾದ ಮೇಲೆ
ದೇಶ ಕಟ್ಟುವವರು ಹೇಳುತ್ತಲೇ ಇದ್ದಾರೆ
ಅವರ ಮಾತುಗಳನ್ನು ಕೇಳಿಸಿಕೊಂಡವರು

ಬೇರೆಯವರಿಗೆ ಕೆಲಸ ಮಾಡಿ ಎಂದು
ಹೇಳುತ್ತಲೇ ಇದ್ದಾರೆ
ಅತಿ ಕಡುಬಡವನ ಕೈಯಲ್ಲಿ
ಒಂದು ಹೊತ್ತಿನ ಕೂಳಿಲ್ಲದವನ ಕೈಯ್ಯಲ್ಲಿ
ಅನಕ್ಷರಸ್ಥನ ಕೈಯ್ಯಲ್ಲಿ
ಆಸರೆಯಿಲ್ಲದೆ ಉಸಿರಾಡಿ ಜೀವಿಸುತ್ತಿರುವವನ ಕೈಯಲ್ಲಿ
ದುಡಿ ದುಡಿ ಎಂದು ದುಡಿಸಿಕೊಂಡು

21-09-2012



www.sriharikhoday.com

ಪ್ರಭುತ್ವ ನಾ ದುಡಿಯುತ್ತಿದ್ದೇನೆ ಎಂದು
ದುಡಿಯದೇ ಇರುವ ಕಚೇರಿಯಲ್ಲಿ ಕುಳಿತು
ಕಟ್ಟಿಕೊಂಡಿರುವ ಭದ್ರವಾದ ಬಹುಮಹಡಿಗಳಲ್ಲಿ
ಕುರ್ಚಿಗಾಗಿ ದೇಶಭಕ್ತರು
ದೇಶಕ್ಕಾಗಿ ದುಡಿಯುತ್ತಿದ್ದೇನೆಂದು
ಹೇಳುವವರ ಸಂಖ್ಯೆ ಅತಿಯಾಗುತ್ತಿದೆ!

ಯುವ ಪ್ರಜೆಗಳು ತಾನು ಲೇಖನಿ, ಪುಸ್ತಕ
ಹಾಳೆಗಳ ತಿರುವಿಹಾಕುತ್ತ
ಭೂತಾಯಿಯ ಸೇವೆಯ ಮಾಡಲು ಅಂಜುತಾ
ಇರುವ ವಿದ್ಯಾವಂತರು
ದೇಶಕ್ಕೆ ಕೊಡುಗೆಯೋ . . . ಭಾರವೋ ತಿಳಿಯದೆ
ಕಾಲಕ್ಕೆ ಭಾರವಾಗಿ

ಬರಿ ಮೋಟಾರು, ಕಾರು ರೈಲು
ವಿಮಾನಗಳ ಓಡಾಟ ಮಾಡಿ
ತಣ್ಣನೆಯ ಕಟ್ಟಡಗಳ ಆಶ್ರಯ ಪಡೆದು
ಇಲ್ಲಿಂದ ಅಲ್ಲಿಗೆ . . .ಅಲ್ಲಿಂದ ಇಲ್ಲಿಗೆ
ಕೈಯ್ಯಲ್ಲಿ ಮೂರು ನಾಲ್ಕು ಮೊಬೈಲುಗಳು
ಎಡಕ್ಕೆ ಬಲಕ್ಕೆ ದೂರವಾಣಿಯ ಸಾಧನಗಳು
ಸುದ್ದಿಗಳು ವೀಕ್ಷಣೆಯ ಪತ್ರಿಕೆಗಳು

ಪ್ರಗತಿಯ ಪ್ರಿಯರೋ ಹೇಳುವವರು ಹೆಚ್ಚಾಗುತ್ತ
ಭೂಮಿತಾಯಿಯ ಸೇವೆಗೆ ಬರೀ ವಯಸ್ಸಾದವರು
ಮಾತ್ರ ಮಾಡುತ್ತಿರುವುದು
ಮುಂಬರುವ ಜನಾಂಗ ದೇಶದ ಭಾರ
ಹೊರಲು ಪ್ರಯತ್ನಿಸದೆ
ಕಷ್ಟದಿಂದ ಸ್ವರಾಜ್ಯ ಪಡೆದ ನಮ್ಮ ದೇಶಕ್ಕೆ
ಭಾರ ಹೊರಿಸುತ್ತಿರುವರು!

**- ಶ್ರೀ ಹರಿ.**

21-09-2012

## 332.

ಪ್ರೀತಿ ನೀಡುವುದು ಕನಿಕರವಲ್ಲ
ಕನಿಕರ ನಿನ್ನಲ್ಲಿ  ಪ್ರೀತಿ ಉಗಮವಾಗುವ ಸ್ಥಳ
ಪ್ರೀತಿಯ ಎಲ್ಲರ ಜೊತೆ ಬೆರೆಸಿ ಜೊತೆ ಸೇರಿಸಿ
ಅಳಿಯಲಾಗದ ಸಂಬಂಧದ ಆಳಕ್ಕೆ ಕರೆದೊಯ್ದು
ಪ್ರಕೃತಿಯ ಇಷ್ಟಗಳನ್ನು ಅಡ್ಡವಾಗಿರುವ
ಕೋಟೆಯ ಬಾಗಿಲ ತೆರೆಸಿ

ಎಲ್ಲರ ಜೊತೆಯಲ್ಲಿ ಬೆರೆಯಲು ಬೆರೆತು
ಪ್ರೀತಿಯ ಕನಿಕರ ಪಾಮರನಾಗಿಯೇ ಇರಲಿ
ಸಿರಿವಂತನಾಗಿಯೇ ಇರಲಿ ಸನ್ಯಾಸಿಯಾಗಿಯೇ ಇರಲಿ
ರಾಜನಾಗಿಯೇ ಇರಲಿ ಪ್ರಾಣಿಯಾಗಿರಲಿ
ಎಲ್ಲರ ಪ್ರೀತಿಯು ಒಂದೇ ಒಂದು!

ಕಷ್ಟಗಳ ದಡದಿಂದ ಸುಖದ ದಡಕ್ಕೆ ಎಳೆದೊಯ್ಯುವುದು ಪ್ರೀತಿ
ವಿಶ್ವದ ಭಾವನೆಯನ್ನು ತೆರೆಸಿ ತೋರಿಸುವುದು ಪ್ರೀತಿ
ವಿಶ್ವದ ಜೀವ ವಿಶ್ವದ ನಾಡಿ ವಿಶ್ವದ ಕಾಲವೇ ಪ್ರೀತಿ
ಬುದ್ಧಿಯಿಲ್ಲದ ಯಾವ ದೊಡ್ಡ ಜ್ಞಾನಿಯೂ ಅಲ್ಲದ
ಅತಿಹೀನನೂ ಆದ ಯಾವ ಪಾಂಡಿತ್ಯವೂ ಇಲ್ಲದ
ಎಲ್ಲರ ಜೊತೆ ಜೊತೆಯಾಗಿರುವುದು ಪ್ರೀತಿ

ಹರಡುವ ಸುಗಂಧದ ಸ್ವಾದ ಪ್ರೀತಿ
ಪ್ರೀತಿಸುವವರ ಹತ್ತಿರ ಅವರ ಜೊತೆ

www.sriharikhoday.com



ಮಾತಿನಂತೆ ಪ್ರೀತಿಯ ಸುಗಂಧ ತೇಲಿ
ಇಬ್ಬರ ಜೊತೆ ಬೆಳೆಸಿ ದೇಶದ ನಾಯಕನಾಗಬಹುದು
ಕಲ್ಲಿನ ಮೇಲಿನ ಶಿಲ್ಪಿಯ ಕೆತ್ತನೆ ಮೇಲಿನ ಪ್ರೀತಿ
ರೂಪವೇ ಸುಗಂಧವಾಗಿ ಹರಡುವುದು
ಹರಿದಾಡುತ್ತಿರುವ ಪ್ರೀತಿ ಪಡೆದ ನಾವುಗಳು
ಪ್ರೀತಿ ಕೊಡಬಹುದಾದಂತಹ ಸಾಮರ್ಥ್ಯವುಳ್ಳ ನಾವುಗಳು
ನಾವುಗಳೇ ಈ ಜಗತ್ತಿನ ಅತಿ ಅತಿ ಶ್ರೀಮಂತರುಗಳು

**- ಶ್ರೀ ಹರಿ.**

24-09-2012

## 333.

ಬೇಲಿ ಮರೆಯಲ್ಲಿ ನಿಂತು
ಸಿಳ್ಳೆ ಹಾಕುತ್ತ ಕರೆಯುತ್ತಿರುವರು
ಸುಳ್ಳು ಹೇಳಿ ನಂಬಿಸುವ
ಮಾತಿನ ಮಲ್ಲರು

ಯಾರ ಕಡೆಗೂ ಬರದಂತೆ
ತಮಗೆ ತಾವೇ ಸುಳ್ಳು ಹೇಳುತ್ತ
ತಾವೇ ಮೋಸ ಹೋಗುತ್ತಿರುವರು
ಕೋಟ್ಯಾನುಕೋಟಿ ದೇಶದ ಪ್ರಜೆಗಳು

ಶಾಂತಿಯಿಲ್ಲದ ಅಂತರಾಳ
ದಿನವೂ ಹೊಸ ಹೊಸ ವಿಷಯಗಳ ಕನವರಿಸುತ್ತ
ನನ್ನಿಂದ ನೀವುಗಳು ಎಂದು ಕಲ್ಪಿಸುತ್ತ
ರಾಜಕಾರಣಿಗಳು ಪ್ರಜೆಗಳಿಗೆ ಕಪಟ ಸತ್ಯವ
ತುಂಬಿಕೊಡುವ ಮನೋಭಾಷೆಯಲ್ಲಿ
ಪ್ರಜೆಗಳು ಬದುಕುವ ಬಳ್ಳಿಗೆ ವಿಷವ ಕುಡಿಸುತ್ತಿರುವರು

ಭಾಗ್ಯ ತರುವೆ ಎಂದು ಮನೆ ಬಾಗಿಲಿಗೆ ಬಂದ ರಾಜಕಾರಣಿಗಳು
ತನಗೆ ಓಟು ಕೊಡಿ ಎಂದು ಹೇಳಿ ನಮ್ಮ ಏಳಿಗೆಗೆ ಭಾಷೆ ಕೊಟ್ಟ
ವ್ಯಕ್ತಿಗಳು
ರಾಜಕೀಯ ಗುಂಗಿನ ಅಮಲಿನಲ್ಲಿ ತಮ್ಮ ಏಳಿಗೆಯ ಮಾತ್ರಲೆಕ್ಕಿಸುತ



ಸಂಜೆಗಳಿಲ್ಲದ ಅವರ ದಿವಸಗಳಲ್ಲಿ
ನಮ್ಮ ಕಣ್ಣಲ್ಲೇ ಆಸೆಗಳ ದೀಪವನ್ನು ಹಚ್ಚುತ್ತ
ಅಡುಗೆ ಮಾಡಲು ಒಲೆಯಿಲ್ಲ .... ಆಸರೆ ಇಲ್ಲ
ದಿನಸಿ ಇಲ್ಲ ಅಡುಗೆ ಪಾತ್ರೆ ಮೊದಲೇ ಇಲ್ಲ
ಊಟ ಮಾಡಲು ಒಬ್ಬನಿಗೆ ಒಂದು ಕಂಚವಿಲ್ಲದ ಪರಿಸರದಲ್ಲಿ

ಬೇಲಿ ಮರೆಯಲ್ಲಿ ಮುಂದಿನ ಚುನಾವಣೆಗೆ
ಸಿಳ್ಳೆ ಹಾಕುತ್ತ ಕರೆಯುತ್ತ ಕಾಯುತ್ತಿರುವರು
ಬೆಳಕಿನ ನಿಜ ಅರ್ಥ ತಿಳಿಯದ ಸುಳ್ಳು ಜ್ಞಾನೇಶ್ವರರು

**- ಶ್ರೀ ಹರಿ.**

25-09-2012

www.sriharikhoday.com

## 334

ಅಲ್ಲೋಲ ಕಲ್ಲೋಲ ಮನಸ್ಸುಗಳು
ಜೀವನದಲ್ಲಿ ಅರಿತ ಪಾಠಗಳನ್ನು ಮರೆಸಿ
ಸರಿದಾರಿಯನ್ನು ತಪ್ಪಿಸಿ ತಿಳಿದಿರುವ ಹಳೆಯ ರಸ್ತೆಯನ್ನು
ಮತ್ತೆ .... ಹುಡುಕುತ್ತಿರುವೆವು

ಸತ್ಯದ ಭಾವನಾಲೋಲರಾಗಿ
ತಾವೊಬ್ಬರೆ ನಿಜಸ್ಥಿತಿಗಳ ಅರಿತು
ಸತ್ಯಕ್ಕೆ ಜಯ ಉಂಟು ಎಂಬ ಸತ್ಯದ ನಂಬಿಕೆಯ ಜೊತೆ
ನಿರಾಳ ಭಾವನೆ ಜೊತೆ ನಮ್ಮ ಕಷ್ಟಗಳ ಬೆರೆಸಿದರೆ
ಬ್ರಹ್ಮಕಮಲ ಅರಳುವಂತೆ ಉತ್ತರಗಳು ಅರಳುತ್ತವೆ

ನಾನಾ ನಾಲಿಗೆಗಳಿಂದ ಅನೇಕರು ಅನೇಕ ನುಡಿದರೂ
ನಾವುಗಳು ಕಾರ್ಯಸಿದ್ಧಿಯಾಗಿರುವ ರಸ್ತೆಯಲ್ಲಿ
ಹಾಸುಹೊಕ್ಕಾಗಿ ಬಿದ್ದಿರುವ
ಉತ್ತರಗಳ ರಾಶಿಯಲ್ಲಿ .... ಉತ್ತರವ ಅರಸಿ
ನಮ್ಮ ಮನ ಸಂತಸದಿ ಉತ್ತರವನ್ನು ಸ್ವೀಕರಿಸಿ

ಹೂವುಗಳಂತೆ ಅರಳಿರುವ ಉತ್ತರಗಳನ್ನು
ನಮ್ಮ ಮನಕ್ಕೆ ಶೃಂಗರಿಸಿದರೆ
ನಮ್ಮ ನಿರ್ಧಾರ ಸುಂದರವಾಗಿ ರೂಪುಗೊಂಡರೆ
ಜಯವೋ ಜಯ ಜಯವೋ ಜಯ

**- ಶ್ರೀ ಹರಿ.**

26-09-2012



## 335

ನಂಬಿಕೆ ಎಂಬ ವಿಶ್ವದ ಆಧಾರ ಸ್ತಂಭ
ಒಡೆದು ಚೂರು ಚೂರಾಗಿದೆ
ಪವಿತ್ರವಾದ ನಂಬಿಕೆಯ ಮೌಲ್ಯಗಳು
ಅಪನಂಬಿಕೆಯ ಮಾತುಗಳು
ಸಮಾಜದ ಒಗ್ಗಟ್ಟನ್ನು ಒಡೆಯುತ್ತಿದೆ

ಯಾವುದೇ ಸಾಧನೆಗೆ ನಂಬಿಕೆಯೇ ಮೂಲ
ನಂಬದೆ ಪ್ರಗತಿ ಮುಂದೆ ಸಾಗದು
ವ್ಯಕ್ತಿತ್ವದ ಹೆಸರಿನ ಮೇಲೆ ತೂಕ
ಅವರ ಮೇಲಿರುವ ಚಿತ್ರ ಚರಿತ್ರೆಗಳು ಅವರ ಸಿರಿತನ
ತೂಗು ಹಾಕುತ್ತಿರುವ ಈ ಸಮಾಜ

ಸುಳ್ಳು ವ್ಯಕ್ತಿಗಳ ಪ್ರಚಾರ ಕದ್ದು ಕೇಳಿ
ಮತ್ತೆ ಮರು ಹಂಚುತ್ತಿರುವ ಪ್ರಚಾರಗಳು ನಂಬಿಕೆಯ ಶಕ್ತಿಯನ್ನು
ಮಾನವನಿಂದ ತೊಳೆದು ಹಾದಿ ಖಾಲಿ ಮಾಡುತ್ತಿರುವರು

ನಾನು ಕವನ ಬರೆಯುತ್ತಿದ್ದೇನೆ ಎಂಬ ನಂಬಿಕೆ
ನಾನು ಸತ್ಯದಿಂದ ಕೆಲಸ ಮಾಡುತ್ತಿದ್ದೇನೆ
ಇದು ನನ್ನ ಮನದ ಸತ್ಯದ ಮಾತು
ನಾನು ಈ ನಿಮ್ಮ ಕೆಲಸವನ್ನು ಮಾಡಿಕೊಡುತ್ತೇನೆ ಎಂಬ ನಂಬಿಕೆ



www.sriharikhoday.com

ನಾನು ನಿಮಗೆ ಸಹಾಯ ಮಾಡುತ್ತೇನೆ
ಎಂಬ ಮಾತಿನ ಮೇಲೆ ನಂಬಿಕೆ
ರಾಜಕಾರಣಿಗಳಾಗಿ ನಿಮ್ಮ ಕಷ್ಟಗಳಲ್ಲಿ
ಜೊತೆಯಲ್ಲಿರುವೆನೆಂದು ಹೇಳಿ
ಅವರ ಹುಸಿಮಾತುಗಳು ಪ್ರಜೆಗಳಲ್ಲಿ
ಇಲ್ಲದ ಮನದಲ್ಲಿ ಸಂಕಷ್ಟ ಇಲ್ಲದ ಸಂಕೋಚ
ಇಲ್ಲದ ಅಪನಂಬಿಕೆಗಳು ಎಲ್ಲಾ ಆಧಾರಸೂತ್ರವಾದ ನಂಬಿಕೆಯನ್ನು
ಮಾನವನಲ್ಲಿ ಸರಿಪಡಿಸದೇ ಇದ್ದರೆ ಕಾಲದ ಎದುರು ಗಾಳಿಯಲ್ಲಿ
ಹಾರಾಡುತ್ತಿರುವ ನಮ್ಮ ಜೀವನ ಹಾರಾಡದೇ ಕೆಳಗೆ ಬೀಳುವುದು
ಖಂಡಿತ

**- ಶ್ರೀ ಹರಿ.**

27-09-2012



# 336

ಕೆಟ್ಟ ಹೆಸರು ಒಳ್ಳೆಯ ಹೆಸರು
ಜನಗಳು ಒಪ್ಪಿ ಕೊಟ್ಟಿರುವ ಹೆಸರೋ
ನಿಂದಿಸಿ ಶ್ಲಾಘಿಸುವ ಜನರು ಕೊಟ್ಟ ಹೆಸರೋ

ಬೆತ್ತಲೆ ಬಂದ ನಾಮಗಳಿಗೆ ನಾನಾ ಹೆಸರುಗಳು
ನಾನಾ ವಿಚಾರಗಳ ಅಂಟಿಕೊಳ್ಳುವ ಚೀಟಿಗಳು
ಕೆಲಸಕ್ಕೆ ಪ್ರಯೋಜನ ಇಲ್ಲದ ಹೆಸರು
ಕೆಲಸಕ್ಕೆ ಜೊತೆ ಬರದ ಹೆಸರು
ದೂರ ಇದ್ದರೂ ನಾವುಗಳು ನಮ್ಮ ಹೆಸರಿನ ಫಲಕಗಳನ್ನು
ಕುತ್ತಿಗೆಗೆ ಹಾಕಿಕೊಂಡು ರಸ್ತೆಯಲ್ಲಿ ತಿರುಗಾಡಿದರೆ
ಅಜ್ಞಾನದ ಅತಿ ಎತ್ತರದ ದುರಂತ

ಕಾಲ ಮತ್ತು ಸಮಯದಲ್ಲಿ ಎತ್ತರಕ್ಕೆ ಏರಿದ ಹೆಸರುಗಳು
ಉರುಳಿ ಉರುಳಿ ಜಾರಿ ಬೀಳುತ್ತಿರುವುದು ಅನೇಕ
ಬರೆಯದೇ ಕೊಟ್ಟ ಹೆಸರು
ನಮ್ಮ ಹೆಸರೆಂದು ಹೇಳದ ನಾವುಗಳು ಯಾರ ಕೈಗೂ ಸಿಗದೆ
ಕಾಲ ಹುಡುಕಿದರೂ ಸಿಗದಂತೆ ಆಗಿರುವರು ಅವರು

ನಮ್ಮನ್ನು ನಾವೇ ಮರೆಯದೇ ಇದ್ದಲ್ಲಿ
ನಾವುಗಳು ವಿಶ್ವದಲ್ಲಿ ಅಣು ಎಂದು ತಿಳಿದೇ ಇದ್ದಲ್ಲಿ
ಯಾವ ನೆರಳೂ ಇಲ್ಲದೆ ಪ್ರಕಾಶಿಸಿ



www.sriharikhoday.com

ಕೆಲಸಕ್ಕೆ ಸಾಧನೆಯಾಗುವ ರೀತಿಯಲ್ಲಿ ದುಡಿದು
ಬಿರುದು ಹೆಸರು ಅಭಿಲಾಷಿಗಳಾಗದೆ
ಕಾಣದ ಅಶ್ರಯದಲ್ಲಿ ಜೀವಿಸಿ
ಕಾಣದ ಆಶ್ರಯದ ಮನೆಯ ಮಕ್ಕಳಾಗಿ

ಕಾಣದ ಆಸರೆ ಇವರು ನಮ್ಮ ಮನೆಯವರು
ಎಂದು ಹೆಸರುಗಳಿಸಿಕೊಂಡರೆ
ಮಾನವ ಜನುಮ ಎಂಬ ಹೆಸರಿಗೆ ನಾವೇ ತಲೆಬಗ್ಗಿಸಿ
ಹಿರಿಯರ ಜೊತೆಗೆ ಬಾಳುವುದೇ ಹೆಸರು ಬೇಡದ ಜೀವನ

**- ಶ್ರೀ ಹರಿ.**

28-09-2012



www.sriharikhoday.com

# 337

ಬೆಳಕೆ .... ಓ ಬೆಳಕೇ....
ನೀ ನೀಡಿದ ಬೆಳಕಿನಿಂದ ನಾ ನಿನ್ನ ಕಂಡೆ
ಕರುಣೆ ತುಂಬಿಕೊಂಡಿರುವ ದೇವರ ರೂಪವಾದ ನೀ
ನೀ ನೀಡಿದ ಬೆಳಕಲ್ಲಿ ನಾ ದೇವರ ಕಂಡೆ!

ನಾ ನಿನ್ನ ಬೆಳಕಲ್ಲಿ ನೋಡಿದ ಅನೇಕ ದಾರಿಗಳು
ಹೆಜ್ಜೆ ಹೆಜ್ಜೆಗೂ ಹೊಸ ಹೊಸ ಅನುಭವಗಳು
ನಿನ್ನ ಉಜ್ವಲ ತೇಜ ಹೆಚ್ಚುತ್ತಾ ಹೆಚ್ಚುತ್ತಾ ಆಕಾಶವೆಲ್ಲಾ ಬೆಳಕಾಗಿ
ಸತ್ಯದ ಒಂದು ತಂತಿಯಲ್ಲಿ
ನೀ ನುಡಿಸುತ್ತಿರುವ ಅನೇಕ ಶಬ್ದ ಭಾವನೆಗಳ ಓಡಾಟ
ಬೆಳಕೆ.... ಓ ಬೆಳಕೇ....
ನೀ ನೀಡಿದ ಬೆಳಕಿನಿಂದ ನಾ ನಿನ್ನ ಜೊತೆ ದೇವರ ಕಂಡೆ !

ತಾಯಿಯ ಪ್ರೀತಿ ನಿನ್ನಲ್ಲಿ ಹರಿದಾಡುತ್ತಿರಲು
ನನ್ನನ್ನು ಸೃಷ್ಟಿಸಿರುವ ತಾಯ್ತನವ ನೀ ಅನುಭವಿಸುತ
ಪವಿತ್ರ ಮಹಾನ್‌ಶಕ್ತಿಯ ಜೊತೆ ಬೆರಕೆ
ಪೂರ್ಣತೆ ಅನುಭವ ಪಡೆಯುತ
ನಿದ್ರೆಯ ಎಚ್ಚರ ಮೀರಿಸಿರುವ ಎಚ್ಚರದ ಅನುಭವ
ಓ ಬೆಳಕೆ ನೀ ನೀಡಿದ ಬೆಳಕಿನಿಂದ
ನಾ ಕಂಡ ದೇವರ ಜೊತೆ ಬೆರೆತು ಬೆಳಕಾಗಿರುವೆ

**- ಶ್ರೀ ಹರಿ.**

01-10-2012

## 338

ಉಸಿರು.... ನಿಟ್ಟುಸಿರು...
ನಮ್ಮ ಕರ್ತವ್ಯ
ಹಸಿವು ಬಾಯಾರಿಕೆ.... ನಮ್ಮ ಶರೀರ ಧರ್ಮ
ಈ ಶರೀರವನ್ನು ಕಾಪಾಡುವುದು ನಮ್ಮ ಕರ್ತವ್ಯ

ಈ ಶರೀರವು ಬರೀ ಶರೀರವಲ್ಲ
ವಿಶ್ವದ ಅಸಾಧಾರಣ ಉಪಕರಣ
ಸಹಾಯ ಮಾಡಲು ದೇವರು ಸೃಷ್ಟಿಸಿ
ವಿವೇಚನೆಗಳಿಂದ ಕಷ್ಟಗಳಲ್ಲಿ ಬೆರೆಯುವ ಶಕ್ತಿ
ಈ ಉಪಕರಣದ ವಿಶೇಷ ಶಕ್ತಿ!

ವಿವೇಕ.... ವಿವೇಚನೆ ಜೊತೆಗೆ ಸೃಷ್ಟಿ ಆಗಿರುವ ನೆನಪುಗಳು
ವಿವೇಕದಿಂದ ಕಾರ್ಯ ನಡೆಸುವ ಜೊತೆ ಜೊತೆಯಿರುವ ಮನಸ್ಸು
ಈ ಜಗತ್ತಿನಲ್ಲಿ ಅಸಾಧ್ಯವೆಂಬುದಿಲ್ಲ
ಎಲ್ಲವೂ ಆಗುವುದು ಎಂಬ ಬೀಜಮಂತ್ರವನ್ನು ಉಪಯೋಗಿಸುತ್ತ
ದ್ವೇಷ - ಅಸೂಯೆಗಳನ್ನು ದೂರವಿಟ್ಟು
ಈ ಶರೀರ ಶಕ್ತಿಯನ್ನು ಕುಂದಿಸದೆ ಕಾಪಾಡುತ್ತಿದೆ!

ಆಶೀರ್ವಾದ ಎಂಬ ಮಹಾನ್ ಶಕ್ತಿಯ ಹಂದರದಲ್ಲಿ
ಭಕ್ತಿಯೆಂಬ ಅಸ್ತ್ರಗಳನ್ನು ಉಪಯೋಗಿಸಿ
ಈ ಶರೀರವೆಂಬ ಉಪಕರಣ



ಸರಿಯಾದ ಕೆಲಸಕ್ಕೆ ಮಾತ್ರ ಉಪಯೋಗಿಸಿದರೆ
ಧರ್ಮವೆಂಬ ಶಕ್ತಿಯು ನಮ್ಮನ್ನು ಕೈಹಿಡಿದು ಮೇಲೆತ್ತಿ

ಈ ಶರೀರ ಉಪಕರಣದ ಅನೇಕ ಸಾಧನೆಯ
ಕಾರ್ಯಗಳನ್ನು ಹೆಚ್ಚಿಸುತ್ತ
ಅಳಿಯಲಾಗದ ಪ್ರಕೃತಿಯ ಶಕ್ತಿಗೆ
ಹೆಮ್ಮೆ ತರಿಸುವುದು!

**- ಶ್ರೀ ಹರಿ.**

03-10-2012

www.sriharikhoday.com

## 339

ಹೇ ಆತ್ಮವೇ.... ನೀ ಎಲ್ಲಿ ಹುಟ್ಟುವೆಯೆಂದು ಯಾರಿಗೂ ತಿಳಿಯದೆ
ಲೆಕ್ಕವಿಲ್ಲದಷ್ಟು ಶರೀರಧಾರಣೆ ಮಾಡಿದೆಯೆಂದು ಅರಿವಿಲ್ಲದೆ
ಸಿರಿವಂತ-ಬಡವನೆಂದು ತಿಳಿಯದೆ
ಗಾಳಿಯು ಗಾಳಿಯ ಜೊತೆ ಬೆರೆಯುವಂತೆ
ದೈವದೀಪವಾಗಿರುವ ನೀನು ವಿಶ್ವದೀಪವಾಗಿರುವೆ !

ಕೋಪ-ತಾಪ ಪ್ರೀತಿಗಳ ತಿಳಿಯದೆ
ಕನ್ನಡಿಯ ಹೊರಗನ್ನು ಬರೀ ನೋಡುತ ಮಾತಾಡದೆ
ಕಾಲದ ಜೊತೆಗಿರುವ ಕರ್ಮಗಳ ವೀಕ್ಷಿಸುತ
ಸಮತೋಲನ ಮನಸ್ಸಿನಿಂದ ನಿನ್ನ ಎಚ್ಚರದ ಸ್ಥಿತಿಯಿಂದ
ಮಾನವನಿಗೆ ಧರ್ಮ ಅಧರ್ಮದ ವಿಚಾರದ ಸೂಚನೆ
ಮಾಡಿದರೂ ಮಾನವ ಎಚ್ಚರಗೊಳ್ಳುತ್ತಿಲ್ಲ!

ಎಲ್ಲದರ ಸಾಕ್ಷಿಯಾಗಿರುವ ಶರೀರದ ಅನುಭವಗಳನ್ನು ವೀಕ್ಷಿಸಿದರೂ
ಸುಳ್ಳು ಕಂತೆಗಳ ಮುಚ್ಚುಳಗಳ ಒಳಗಿರುವುದನ್ನು ತಿಳಿದರೂ
ಇದ್ದಂತೆ ಅವರವರ ರೂಪ ಅವರಿಗೆ ತೋರಿಸಿದರೂ ಸುಳ್ಳು
ನೆಪಗಳ ಮಾಡಿ
ಹೊರ .... ಹೊಸ ಧರ್ಮ ಪ್ರದರ್ಶನ ಮಾಡುವುದು ನಾ ಕಂಡು....

ನಿನಗೆ ಮಾನವನ ಮೇಲಿರುವ ಪ್ರೀತಿಯು
ಕಡಿಮೆಯಾಗುತ್ತಿರುವುದು ಈ ಜಗತ್ತು ತಿಳಿಯದೆ
ದಾರಿ ತಪ್ಪಿಸಿಕೊಂಡು ಸರಿದಾರಿ ಕಾಣದೆ ದಿಗ್ಭ್ರಮೆಗೊಳ್ಳುತ್ತಿರುವುದು



ನಿನಗಿರುವ ಗುಣ.... ನಿನಗಿರುವ ಶಕ್ತಿಯಿಂದ
ಈ ಶರೀರ ಮಾನವನ ಮನದ ಮೇಲೆ
ಹೊದಿಸಿಕೊಂಡಿರುವ ಕೆಟ್ಟ ಗುಣಗಳ ಹೊದಿಕೆ
ನೀ ತೆಗೆಯದೇ ಇದ್ದಲ್ಲಿ

ನೀ ಕೆಟ್ಟ ಮಾನವನ ಪರಿಸರದಲ್ಲಿ ಜೀವಿಸಬೇಕಾಗಿರುವ ಸಮಯಗಳು
ನಿನಗೆ ಹತ್ತಿರದಲ್ಲೇ ಬರುವುದು ಎಂಬುದು ನನ್ನ ಮನಸ್ಸಿನ ಅನಿಸಿಕೆ
ಕೃಪೆ ಮಾಡಿ ಮಾನವನ ಮನಸ್ಸಿನ ಮೇಲಿರುವ ಕೆಟ್ಟ ಹೊದಿಕೆಯನ್ನು
ತೆಗೆದು
ಸತ್ಯದ ಹೊದಿಕೆಯಿಂದ ಮಾನವನ ಮನಸನ್ನು ಕಾಪಾಡು ಓ ಆತ್ಮನೇ

**- ಶ್ರೀ ಹರಿ.**

04-10-2012

www.sriharikhoday.com

## 340

ಸುಳ್ಳನ್ನು ನಂಬಿ ಸುಳ್ಳಿನ ಸುಳಿಯಲ್ಲಿ ಸಿಲುಕಿ
ನರಳುತ್ತಿರುವರು ಸುಳ್ಳನ್ನು ಒಪ್ಪಿಕೊಳ್ಳಲು ಹೆದರಿ
ತಮ್ಮನ್ನು ತಾವೇ ಮರೆತಿರುವ
ಪರಿಸರದ ಗುಲಾಮ ಗಿರಿಯನ್ನು ಅನುಭವಿಸುತ್ತಿರುವರು
ಸುಳ್ಳು ನಂಬಿರುವ ಮನುಜರು

ಏಕೆ ಸುಳ್ಳು ಹೇಳಬೇಕೆಂದು ಅರಿಯದೆ
ಸುಳ್ಳು ನಂಬಿ ಈ ಜಗವು ನಡೆಯುವುದಿಲ್ಲ ಎಂದು ತಿಳಿದರೂ ಕೂಡ
ಬೇರೆಯವರ ಅರ್ಥವಿಲ್ಲದ ಮಾತುಗಳನ್ನು ನಂಬಿ
ತಮ್ಮ ಮನವನ್ನು ತಾವೇ ನಂಬದೆ
ಸುಳ್ಳಿನ ಆಧಾರದ ಮೇಲೆ ಮುನ್ನಡೆಯುತ್ತಿರುವುದ ಕಂಡರೆ
ಕಾಣದ ಹಳ್ಳಗಳಲ್ಲಿ ಬೀಳುವುದು ಸತ್ಯ !

ಸುಳ್ಳಿನ ಬುನಾದಿಯಿಂದ
ಯಾವ ಕಟ್ಟಡವೂ ಕಟ್ಟಲಾಗದೆಂದು ತಿಳಿದರೂ
ಒಂದೇ ರಾತ್ರಿಯಲ್ಲಿ ಸಿರಿವಂತನಾಗಬೇಕೆಂಬ ಆಸೆಗಳ ಹಿಂದೆ
ಸುಳ್ಳು ಮಾತುಗಳ ಮಾಲೆಯ ಜೋಡಣೆ
ವಿಚಿತ್ರ ಎಂದು ತಿಳಿದರೂ ಕೂಡ
ಮನವು ಕೂಗಿ ಹೇಳಿದರೂ

ಕಿವುಡು ಮನವು
ನನಗೆ ಸಿರಿತನ ದೊರಕುವುದು ಎಂಬ ನಂಬಿಕೆಯಿಂದ
ಒಂದು ಸುಳ್ಳಿನಿಂದ ನೂರು ಸುಳ್ಳು
ನೂರು ಸುಳ್ಳಿನಿಂದ ಸಾವಿರ ಸುಳ್ಳು
ಸಾವಿರಾರು ಸುಳ್ಳಿನಿಂದ
ಸಾವಿರಾರು ವರುಷಗಳ ಕೆಟ್ಟ ಹೆಸರು !

**- ಶ್ರೀ ಹರಿ.**

09-10-2012



## 341

ಬಿಗಿದಪ್ಪಿ ಪ್ರಚೋದಿತ ಚುಂಬನ
ನಮ್ಮ ಪ್ರಣಯ ಚೆಲ್ಲಾಟದ ಆಟ

ತೆರೆದಿರುವ ಆಕಾಶದ ಅಂದರದಲ್ಲಿ
ನಿನ್ನೆ ನಾವು ತೇಲಾಡಿಸಿದ ಕನಸುಗಳನ್ನು
ಲೌಕಿಕ ಲಜ್ಜೆಯಿಲ್ಲದೆ....
ನಮ್ಮಲ್ಲಿ ಅಡಗಿರುವ ರಸಿಕತೆ
ಪ್ರೀತಿಯ ಘನತೆಯ ಸ್ವೀಕರಿಸುತ
ಈಜಲು ತಿಳಿಯದ ನಿನಗೆ ಈಜಲು ನಾ ಕಲಿಸಿ..

ಕಾಣುವ ವ್ಯಾಪ್ತಿ
ದಿಗಂತದ ನಿಗೂಢ ಅರ್ಥಗಳ ಅನುಭವ
ದೇವರ ಸರೋವರದಲ್ಲಿ ನಾವು ಜೊತೆಗೆ ಮುಳುಗಿ
ಅಮೃತಪಾನ ಮಾಡುತ ಗುಲಾಬಿಯ ಮೂಸುತ
ದೇವರ ಸರೋವರದಲ್ಲಿ ದೇವರನ್ನೇ ಅನುಭವಿಸುತ
ಸವಿಯದೇ ಜೊತೆಗಿರುವ ಸಮಯಗಳು

ಕಾಲಕ್ಕೆ ಕಾಲ್ನಡೆ ತಿಳಿಯದೆ ಈ ರಸನಿಮಿಷದಲ್ಲಿ
ದೇವರನ್ನು ನೆನೆಸುತ್ತ
ಬದುಕುವುದು ಸಾಯುವುದು ತಿಳಿದರೂ
ಕಳ್ಳಹೆಜ್ಜೆ ಹಾಕುತ್ತಿರುವ ಕಾಲಕ್ಕೆ ಲೆಕ್ಕಿಸದೆ
ನಮ್ಮಿಬ್ಬರ ಭದ್ರವಾದ ದೇವರ ಅನುಭವದಲ್ಲಿ

ನಮ್ಮ ಬಿಗಿದಪ್ಪಿದ ಚುಂಬನ
ನಮ್ಮ ಪ್ರೀತಿಯ ಬೆಳಕು
ಅತಿ ದೂರದಲ್ಲಿ ಹೃದಯ ತಾರೆಯಾಗಿ
ಬೆಳಕು ಮಿನುಗಿಸುತ್ತಿದೆ !

**- ಶ್ರೀ ಹರಿ.**

12-10-2012



www.sriharikhoday.com

## 342.

ಉಮರನ ಹೆಸರು ಅಮರ
ಜೊತೆ ಕಾಲದ ಜೊತೆಗಿರುವ ಪ್ರೇಮವೇ
ನಮ್ಮ ಪ್ರೀತಿಯ ಮಂದಿರದ ಗೋಪುರ
ರಾಸಲೀಲೆಯ ಶಿಲ್ಪಗಳಂತೆ
ನಮ್ಮ ಮೂಕ ಮೋಹಕ ಮಿಲನ
ಕನಸುಗಳನ್ನೇ ನನಸಾಗಿಸುತ್ತಿದೆ!

ನಮ್ಮ ಬಿಸಿರಕ್ತದ ಪ್ರೇಮ ಪ್ರವಾಹದಲ್ಲಿ
ತೇಲಾಡುತ್ತಿರುವ ನಮ್ಮ ಪ್ರೇಮದ ದೋಣಿಗೆ
ದೇವರೇ ಹಾಯಾಗಿರುವರು ದೇವರ ದಡವ ಮುಟ್ಟಿ
ಜಿಡ್ಡು ಹಿಡಿದಿರುವ ನಮ್ಮ ಕಲ್ಪನೆಗಳಿಗೆ ನಾಳೆಯನ್ನು ಕುಡಿಸಿ
ಕಲ್ಪನೆಗಳಿಗೆ ಹೊಸ ಭಾವನೆಗಳನ್ನು ನೀಡೋಣ!

ಒಂಟಿಯಾಗಿರುವ ಈ ದಿಬ್ಬದಲ್ಲಿ
ಬಂಜರಾಗಿರುವ ಈ ಪ್ರದೇಶಕ್ಕೆ ದೇವರ ಬೆಳಕು ತೋರಿಸಿ
ದೇವರ ದಡದ ಮೇಲೆ ಪ್ರಣಯಪಕ್ಷಿಗಳಂತೆ ಮಿಂದು
ಎದ್ದು ಕೇಳಿಸುವ ರೋಮಾಂಚಕಗಳ ಸದ್ದು

ಜೀವನದ ಸ್ವಾರಸ್ಯವನ್ನೇ ಈ ಮರುಭೂಮಿಗೆ ಕಳುಹಿಸಿ
ದೇವರ ಎದುರಿಗೆಯೇ ಪ್ರೀತಿಯ ಜೊತೆ ಮಾಡುತ
ಕಲೆತಿರುವ ರೋಮಾಂಚಕ ಚಪಲಗಳ ಯಾಗಶಾಲೆಯಲ್ಲಿ
ಯಜ್ಞಕ್ಕೆ ನಾವೇ ನಮ್ಮ ಪ್ರೀತಿಯನ್ನು ಆಹುತಿಯಾಗಿ ನೀಡಿ



ದ್ವೀಪದಲ್ಲಿ ಬೆಳೆದಿರುವ ಸಿಹಿ ಹಣ್ಣುಗಳಿಂದ
ನಿಶೆಯ ರಸವನ್ನು ಸೇವಿಸುತ
ಯಜ್ಞಕ್ಕೆ ದೇವರು ನೀಡಿರುವ ವರ
ಕಾಲಗರ್ಭದಿಂದ ದೇವರು ನಮ್ಮ ಜೊತೆ ಸೇರಿ

ದೇವರ ಮಾತು ಯಾರೂ ಕೇಳಿಸಿಕೊಳ್ಳಲಾಗದೆ
ಹೇಳಿದ ಮಾತುಗಳ ಅರ್ಥ
ನಮ್ಮ ದೂರದ ನಕ್ಷತ್ರದಲ್ಲಿ
ಬಣ್ಣ ಬಣ್ಣಗಳಾಗಿ ಮಿನುಗುತ್ತಲೇ ಇದೆ!

**- ಶ್ರೀ ಹರಿ.**

12-10-2012



www.sriharikhoday.com

## 343

ಮುಂದೆ ಇರುವ ನೂರು ವರುಷಗಳಲ್ಲಿ
ಈ ದಿನದವರೆಗೂ ನಾವು ಕಳೆದರೆ
ಉಳಿದಿರುವುದು ಹೊಸ ಮುಂದಿನ
ಹೊಸ ಹೊಸ ರಸನಿಮಿಷಗಳು!

ಹಳೆ ದೇಹದ ಕ್ರಿಯೆಗಳನ್ನೆಲ್ಲಾ ಮರೆತು
ಹೊಸ ಕ್ರಿಯೆಗಳಿಗೆ ಪ್ರಚೋದನೆ
ಸೃಷ್ಟಿಯ ಜೊತೆ ಹೊಸ ಕನ್ನಡಿಯಲ್ಲಿ
ಹೊಸದನ್ನು ಪ್ರತಿಬಿಂಬಿಸುತ್ತಿರುವುದು
ವಿಶ್ವದ ಹೊಸತನದ ಬಿಂಬಗಳು!

ಹೊಸ ಹೊಸ ಪ್ರಗತಿಪರ ಭಾವನೆಗಳು
ದ್ವೇಶಿಸಲು ಏನೂ ಇಲ್ಲದೆ
ರಾಶಿ ರಾಶಿ ಪ್ರೀತಿಯ ಬೆಳೆ ನಾ ಉಪಯೋಗಿಸಿ ಉಣ್ಣಲು
ಹೆಚ್ಚು ಹೆಚ್ಚಾಗುತ್ತಿರುವ ರಾಶಿಗಳು
ಜನಗಳ ಕಂಡು ಪ್ರೀತಿಯನ್ನು ಹಂಚಿಕೊಳ್ಳಲು
ಪ್ರೀತಿಯನ್ನು ಕೊಳ್ಳಲು ಹಣವಿಲ್ಲದೆ
ನನ್ನ ಜೊತೆ ಸೇರುತ್ತಿರುವರು!

ಹೊಸತರ ಜೊತೆಗೆ ಹೊಸ ಅನುಭವಗಳಿಂದ
ಹರ್ಷ ಉಲ್ಲಾಸಗಳ ಮನೋಮಾಳಿಗೆಯಲ್ಲಿ



www.sriharikhoday.com

ಹೊಸ ಭಾವನೆಗಳಿಂದ ಜೀವಿಸಲಾರಂಭಿಸಿದರೆ
ಕಾಲದ ಮುಖಂಡರುಗಳು ನಾವಾಗಿ
ಜಗದ ಸುಖ-ದುಃಖಗಳ ಭಾಗಿಯಾಗಿ
ಆನಂದಭಾಷ್ಪವ ಸುರಿಸುತ್ತ

ಹರ್ಷದ ಸುಖಗಳ ಮೆರವಣಿಗೆಯಲ್ಲಿ
ನಾವುಗಳು ಮುಂದಾಗಿ
ಭವಿಷ್ಯ ಮೆರವಣಿಗೆ ಮೇಳ ಭಾರಿಸುತ್ತಿದ್ದರೆ
ಈ ಭೂಲೋಕದ ನಮ್ಮ ಜೀವನ ಸಾರ್ಥಕ!

**- ಶ್ರೀ ಹರಿ.**

15-10-2012

## 344

ನಮ್ಮ ಅಂತರಾಳದಲ್ಲಿರುವ.... ವಿಶ್ವವ ಅನುಭವಿಸುತ
ಹಂತ ಹಂತದಲಿ ಋತುಗಳು ಅರಳುವಂತೆ
ಅರಳಿದ ಮನದ ಸುಗಂಧ ಎಲ್ಲರೂ ಸೇವಿಸಿ
ಕೊನೆಗಳೇ ಇಲ್ಲದ ಸಂಬಂಧಗಳ ಭದ್ರಪಡಿಸಿಕೋ!

ನಾನು ಬೆಳೆಯುತ್ತಿರುವೆನೆಂದು ಗಿಡಕ್ಕೇ ತಿಳಿಯದೆ
ನಾನು ಬೆಳೆಸಿದ ಗಿಡವೆಂದು ಹೇಳಲು ಬೀಜವೇ ಇಲ್ಲದೆ
ಸಲಹುತ್ತಿರುವ ಭೂಮಿ-ನೀರು - ಗಾಳಿ ಬೆಳಕುಗಳು
ತಾವು ಬೆಳೆಸುತ್ತಿರುವುದು ಅವರಿಗೇ ತಿಳಿಯದೆ
ಇದನ್ನು ತಿಳಿದು ನಂಬಿ ವಿಶ್ವದ ಪ್ರಭುತ್ವದಲಿ ಜೀವಿಸು!

ಸುಮ್ಮನೇ ಇರದ ಮನಸ್ಸಿಗೆ ಕರ್ತವ್ಯ ನಿಷ್ಠೆ ಕಲಿಸಿ
ಚಾಂಚಲ್ಯ ಇಲ್ಲದ ಸ್ಥಿರ ಮನಸ್ಸನ್ನು ಮನಸ್ಸಿಗೆ ಕಲಿಸಿ
ಬೇಡದ ನೆನಪುಗಳ ವೈರತ್ವವನ್ನು ಬಿಸಾಡಿ
ಪ್ರಭುತ್ವದಲ್ಲಿ ಜೀವಿಸಲು ಬೇಕಾದ ಅಂಶಗಳ ಜೊತೆ
ನಾನು ಇದೇ ರೀತಿ ಹೀಗೆಯೇ ಇರಬೇಕೆಂದು ಮರೆತರೆ
ವಿಶ್ವದ ಪ್ರಭುತ್ವ ನಿನಗೆ ರಾಜನಾಗಿ ಮರೆಸುವುದು!

ಮನಸ್ಸನ್ನು ಚಲಿಸುವ ಅಧಿಕಾರ ನಮಗಿಲ್ಲ
ಅದು ಅಧಿಕಾರ ಅಲ್ಲ . . .



www.sriharikhoday.com

ಇದು ಜೀವನದ ರೀತಿ - ನೀತಿ ಎಂದು ನೀ ತಿಳಿದುಕೋ
ದಿನವೂ ಆಗಸದಲ್ಲಿ ಉಲ್ಲಾಸಭರಿತವಾಗಿ ಉದಯಿಸುತ್ತ
ನಮ್ಮಲ್ಲೇ ಇರುವ ವಿಶ್ವದ ಬೆಳಕನ್ನು ಎಲ್ಲರಿಗೂ ಹಂಚುತ್ತ

ಹಂಚಿ ಪ್ರತಿಬಿಂಬವಾಗಿ ಬರುತ್ತಿರುವ ಬೇರೆಯವರ ಸುಖದಲ್ಲಿ
ನೀನು ಸುಖದ ಜೇನನ್ನು ಸವಿ ಎಂಬ ಮಾತುಗಳು
ವಿಶ್ವದ ನುಡಿಗಳು!

- ಶ್ರೀ ಹರಿ.

16-10-2012

## 345

ಯುಕ್ತಿಯ ಬುನಾದಿ ಮೇಲೆ ಜೀವಿಸದೆ
ನಿರಾಳ ಭಾವನೆಯ ಬುನಾದಿಯ ಮೇಲೆ ಜೀವಿಸುತ್ತಿದ್ದರೆ
ಶ್ರೇಯಸ್ಸು ಪ್ರಗತಿ ತಾನಾಗಿಯೇ ಬೆಳೆದು ಜೊತೆ ಸೇರಿ
ದಿನವೂ ನಿನಗೆ ಹೊಸ ಮಾನವನಾಗಿ ಮಾರ್ಪಾಟು ಮಾಡುವುದು!

ಬೆಳೆಯುವುದೇ ನಮ್ಮ ಜೀವನ ಧರ್ಮ
ಬೆಳೆಸುವುದೇ ನಮ್ಮ ಜೀವನದ ಕರ್ಮವಾದರೆ
ಬೆಳೆದು ಬೆಳೆದಾದ ಮೇಲೆ ಬರುವ ಫಲ
ತನ್ನ ಮನಕ್ಕೆ ಮೊದಲು
ಉಳಿದಿದ್ದು ಸಮಾಜದ ಜೊತೆಗೆ ಕೂಡಿ
ಹಂಚಿಕೊಂಡು ಜೀವಿಸಿದರೆ ಉಸಿರಾಡುವುದು ಸಾರ್ಥಕ!

ಸಾವನ್ನೇ ಬಯಸದಿರುವ ನಾವುಗಳು
ಸಾರ್ಥಕ ಜೀವನವನ್ನು ಬಯಸಿದರೆ
ಒಂದು ಗಿಡ ನೆರಳು ನೀಡುವಂತೆ
ನಿನ್ನ ಮನೋನೆರಳು ವಿಸ್ತಾರವಾಗಿ ಹರಡಿ
ನೀನೇ ಜೀವನದಲ್ಲಿ ತೃಪ್ತಿಯಿಂದ ತೇಲಾಡಿ
ತುಂಬುತನವ ಅನುಭವಿಸುತ

ಶರೀರದ ತುಂಬ ದಿನವೂ ನಿದ್ರೆಯನ್ನು ಅನುಭವಿಸಿ
ಜೀವಿಸುವುದು ಯುಕ್ತರಹಿತ ಜೀವನ!

**- ಶ್ರೀ ಹರಿ.**

17-10-2012



## 346

ನಾನು ಎಂಥವನು ಎಂದು
ನಾವೇ ವಿಮರ್ಶೆ ಮಾಡದೆ
ಬೇರೆಯವರನ್ನು ನಿಂದಿಸುವುದು
ಮೂರ್ಖತನಕ್ಕೆ ಮೋಸ!

ನಿಂದಿಸುವುದಕ್ಕೆ ಬುದ್ಧಿ ಬೇಕಿಲ್ಲ
ನಿಂದಿಸುವುದಕ್ಕೆ ವಿವೇಕ ಬೇಕಿಲ್ಲ
ನಿಂದಿಸುವುದಕ್ಕೆ ಯಾರ ಬೆಂಬಲವೂ ಬೇಕಿಲ್ಲ
ನಿಂದಿಸುವುದಕ್ಕೆ ನಮ್ಮಲ್ಲೇ ಇರುವ
ನಮಗೇ ತಿಳಿಯದ ದ್ವೇಷ!

ಎದುರಿಗೆ ನಿಂದಿಸದೆ
ಅವರ ಜೊತೆ ಇತರರಿಗೆ
ಅವರ ತಪ್ಪುಗಳ ಚರ್ಚಿಸದೆ
ಬಚ್ಚಿಟ್ಟುಕೊಂಡು ಕಿವಿಮಾತುಗಳ
ಸಂತೆಯಲ್ಲಿ ಸೇರಿಕೊಂಡು

ತಮ್ಮ ಅಂತರಾಳದ ದ್ವೇಷ
ಬೇರೆಯವರಿಗೆ ಪ್ರಚಾರ ಮಾಡುವಲ್ಲಿ
ತಮಗೆ ಬರುವ ಸಂತೋಷ ತಮ್ಮಲ್ಲೇ ವಿಷವಿದೆ ಎಂದು
ಯಾವ ರೀತಿಯಲ್ಲಿಯೂ ಆ ವಿಷ



www.sriharikhoday.com

ತನಗಾಗಲೀ ಸಮಾಜಕ್ಕಾಗಲೀ ಉಪಯುಕ್ತವಾಗದೆ
ಅವರಿಗೂ ನನಗೂ ಆಗುತ್ತಿರಲಿಲ್ಲ ಎಂಬ
ಬಿರುದು ಪಡೆದುಕೊಳ್ಳುವುದು
ತಮ್ಮ ಮೂರ್ಖತನದಿಂದ ಬೇರೆಯವರನ್ನು
ಮೂರ್ಖರಂತೆ ಮಾಡುವ ಯತ್ನ

ತಮ್ಮಲ್ಲೇ ಇರುವ ಗೌರವ ಘನತೆಗಳ ಜೊತೆಗೆ
ತಮ್ಮ ಐಶ್ವರ್ಯಗಳನ್ನು ಬಿಡಿ ಬಿಡಿಯಾಗಿ
ಸುಡುವ ಮೂರ್ಖತನ!

**- ಶ್ರೀ ಹರಿ.**

18-10-2012



www.srihari khoday.com

# 347

ದಿನವೂ ಹೊಸದನ್ನು ಅನುಭವಿಸಿದರೆ
ದಿನವೂ ಹೊಸ ಜೀವನದ ಭಾವನೆಗಳನ್ನು ಬೆರೆಸಿದರೆ
ದಿನವೂ ಹಳೆಯದನ್ನು ಮರೆತರೆ
ಒಳ್ಳೆಯದನ್ನೇ ಮಾತ್ರ ನಾವು ಸ್ವಯಂ ಪ್ರಚೋದಿಸಿಕೊಂಡರೆ
ದಿನವೂ ಶುಭದಿನ ದಿನವೂ ಹಬ್ಬದ ಉಲ್ಲಾಸ!

ನಾಲ್ಕರ ಜೊತೆ ನಾಲ್ಕನ್ನು ಸರಿಪಡಿಸಿಕೊಂಡರೆ
ನಾಲ್ವರಿಂದ ನೀನು ತನ್ನನ್ನೇ ಬೆಳೆಸಿಕೊಂಡರೆ
ನಾಲ್ಕಾರು ಒಳ್ಳೆಯ ಮಾತುಗಳಿಂದ ದ್ವೇಷ ಕಳೆದುಕೊಂಡರೆ
ನಾಲ್ಕಾರು ಕೆಲಸಗಳಲ್ಲಿ ಈ ದಿನ ಒಂದು ಕೆಲಸ ಮುಗಿಸಿದರೆ
ನಾಲ್ಕಾರು ಸಂಚುಗಳ ಮಾತು ಕೇಳಿಸಿಕೊಳ್ಳದಿದ್ದರೆ
ದಿನವೂ ಶುಭದಿನ ಹಬ್ಬದ ಉಲ್ಲಾಸ!

ಶ್ರದ್ಧೆಯಿಂದ ಶ್ರೇಯಸ್ಸು ತರುವ ಕೆಲಸ
ಶೀಘ್ರದಲ್ಲೇ ಕೆಲಸ ಮುಗಿಸಬೇಕೆಂಬ ಹಂಬಲ
ಶ್ರಮಕ್ಕೆ ಬೇಸರಪಡದೆ
ಶ್ರೇಯಸ್ಸು ತರುವ ಕೆಲಸಗಳಲ್ಲಿ ಬೆರೆತು
ಶ್ರಮಿಸುವ ದಿನಗಳು
ಶುಭದಿನಗಳು ಹಬ್ಬ ಉಲ್ಲಾಸದ ದಿನಗಳು!

ಶತ್ರುಗಳಿಲ್ಲದ ಮನಸ್ಸಿನಿಂದ
ಶ್ರೀಮಂತ ಔದಾರ್ಯ ಭಾವನೆಗಳಿಂದ
ಶ್ರೀ ಶ್ರೀ ಶ್ರೀಗಳ ಆಶೀರ್ವಾದವ ನೆನೆಸುತ
ಶ್ರೀ ಶಾರದಾದೇವಿಯ ಆಶೀರ್ವಾದವ ನೆನೆಸುತ
ಶ್ರೇಯಸ್ಸು ಕೋರುವ ದಸರೆಯ ಪೂಜೆ
ಈ ದಿನ ಜೊತೆ ಜೊತೆ ಮಾಡೋಣ!

**- ಶ್ರೀ ಹರಿ.**

19-10-2012

## 348

ಜಯಗಳಿಸುವುದಕ್ಕೆ ಹೆದರಿಕೆ ಇರಕೂಡದು
ಹೊಸದನ್ನು ಸಾಧಿಸಲು ಹೆದರಿಕೆ ಮೊದಲೇ ಇರಕೂಡದು
ನಿರಾಳ ಭಾವನೆಗಳಲ್ಲಿ ಹೆದರಿಕೆ ಜೋಡಿಸಕೂಡದು
ಮೈತ್ರಿಯ ಬೆಳೆಸಿಕೊಳ್ಳುವುದಕ್ಕೆ ಹೆದರಿಕೆಯ
ನೆರಳೂ ಕೂಡ ಇರಕೂಡದು!

ಮನೋಕಲ್ಪನೆಗಳ ಹೆದರಿಕೆ ಸಾಧನೆಗಳಿಗೆ ಅಡ್ಡವಾದರೆ
ಇರುವ ಹೆದರಿಕೆಯನ್ನು ವಿಮರ್ಶೆ ಮಾಡಿದರೆ
ತಾನು ತನ್ನದು ಎಂಬ ಹೆದರಿಕೆಯ ಬುನಾದಿ ಇಲ್ಲದೆ
ಸತ್ಯದ ಬೆಳಕಲ್ಲಿ ಊಹಾಪೋಹಗಳು ಮಾಯವಾಗಿ
ಸರಿ ರಸ್ತೆಯಲ್ಲಿ ಜೀವನವನ್ನು ಮುನ್ನಡೆಸುವುದಕ್ಕೆ ಆಧಾರ!

ಹೆದರಿಕೆಯ ಬದಲು ಎಚ್ಚರವನ್ನು ಹೆಚ್ಚಿಸಿಕೊಂಡು
ಬುದ್ಧಿಯ ತೀಕ್ಷ್ಣತೆಯನ್ನು ಹೆಚ್ಚಿಸಿಕೊಂಡು
ಭೂತ, ಭವಿಷ್ಯ,ವರ್ತಮಾನಗಳ ನೆರಳ ಜೊತೆ ತಿದ್ದಿಕೊಂಡು
ಕಾಲನ ಹೆದರಿಕೆಯಿಲ್ಲದೆ ಮುನ್ನಡೆಯುವಂತೆ
ನಾವು ನಮ್ಮ ನೆರಳನ್ನು ನೋಡದೆ ಮುನ್ನಡೆದರೆ
ಜಯವೋ ಜಯ ಜಯವೋ ಜಯ!

ಹೊಸದನ್ನು ಮಾಡುವ ಈ ದಿನಗಳು
ಹೊಸ ಭಾವನೆಗಳಿಂದ ಮಿತ್ರರನ್ನು ಅಪ್ಪಿಕೊಂಡು
ಹಾರಲು ರೆಕ್ಕೆ ನಮಗೂ ಇದೆ ಎಂಬ ಭಾವನೆಯಿಂದ
ಹಗುರ ಉದ್ದೇಶಗಳ ಆಧಾರದ ಮೇಲೆ
ಪ್ರತಿಭೆಯನ್ನು ಹೆಚ್ಚಿಸಿಕೊಂಡು ಮುನ್ನಡೆಯುವುದೇ
ಹಬ್ಬಗಳ ಉದ್ದೇಶಗಳು . ಹಬ್ಬಗಳ ಆದೇಶಗಳು
ಹಬ್ಬಗಳಿಗೆ ನಿಜ ಅರ್ಥಗಳು! **- ಶ್ರೀ ಹರಿ.**

20-10-2012



## 349

ವರ್ಷದ ಕೆಲಸಗಳಿಗೆ ದೇವಿಯ ಎದುರಿಗೆ ಸಂಕಲ್ಪ
ದೇವಿಯ ಗುಣಗಾನಗಳಲ್ಲಿ ದೇವಿಯ ಶಕ್ತಿಯ ಪ್ರಕಟ
ಮಂಗಳಾರತಿ ಬೆಳಗುವಾಗ ಬಲಗಡೆಯಿಂದ ಒಂದು ಹೂವು
ಈ ವರುಷದ ಸಂಕಲ್ಪಗಳಿಗೆ ದೇವಿಯು ವರ ನೀಡಿದಳು!

ಯಾರಿಗೂ ಹೇಳದೇ ಇರುವ ನನ್ನ ಮನೋಸಂಕಲ್ಪ
ಮನೆಯವರೆಲ್ಲಾ ಉತ್ಸಾಹ ಸಡಗರ
ವರ್ಷದ ಬೆಳೆ ಒಂದೇ ದಿನದಲ್ಲಿ ಬೆಳೆದು ಮನೆಗೆ ಬಂದಂತೆ
ತುಂಬಿದ ನಗೆ ತುಟಿಯಲ್ಲಿ ಪ್ರೀತಿಯ ಸೂಚನೆಗಳು
ದೇವಿ ಅಂಬೆಯು ಬಿರುಕು ಭಾವನೆಗಳ ರಕ್ಕಸನನ್ನು ಧ್ವಂಸ
ಮಾಡಿದ್ದಾಳೆ!

ಗಂಡಸರು ಹೆಂಗಸರು ಮಕ್ಕಳು ನಾವುಗಳು
ಅಂಬೆಯ ತೀರ್ಥವನ್ನು ಸೇವಿಸುತ
ಮುಂಬರುವ ವರ್ಷದ ದುಡಿಮೆ ಹಗುರು ಎಂಬ ಭಾವನೆ
ಮತ್ತೆ ಮತ್ತೆ ತೀರ್ಥವನ್ನು ಸ್ವೀಕರಿಸುತ
ಅಮಲುಗೊಂಡ ಮಕ್ಕಳ ಮನೋಚೇಷ್ಟೆಗಳ ನೋಡಿ
ವಿಸ್ಮಯಗೊಳ್ಳುತ್ತ
ನಮ್ಮ ನಮ್ಮ ವಯಸ್ಸುಗಳನ್ನು ಮರೆತು
ದೇವಿಯ ಮಕ್ಕಳಾಗಿ ಹಾಡಿಕೊಂಡಿದ್ದೇವೆ!



www.sriharikhoday.com

ಮರೆತಿದ್ದ ಬೇರೆಯವರಿಗೆ ಉಪಕಾರಗಳು
ಮನೋಗಣನೆಗೆ ಬಂದ ಹಿರಿಯರ ಆಶೀರ್ವಾದ ಪಡೆದು
ಹಬ್ಬ ಮುಗಿದ ನಂತರ ದ್ವೇಷಿಗಳಿಲ್ಲದ ಮನೋ ಒಪ್ಪಿಗೆ
ಹಬ್ಬಕ್ಕೆ ಬಣ್ಣ ಬಣ್ಣದ ಮೆರಗನ್ನು ಬಳಿದುಕೊಂಡು
ಮನೋಭಾವನೆಗಳು ಹರಿದಾಡಿ ಕುಣಿಯುತ್ತಿರಲು
ದೇವಿ ಅಂಬೆಯು ಜೊತೆ ಜೊತೆಯಲ್ಲಿಯೇ
ನಮ್ಮ ಜೊತೆ ಸಾಗಿದಂತಿದೆ!

**- ಶ್ರೀ ಹರಿ.**

22-10-2012



# 350

ಹಬ್ಬದ ಹೊಸ ವಸ್ತ್ರವನ್ನು ಧರಿಸಿ
ಮೈ ಮೇಲೆ ಎಲ್ಲಾ ಆಭರಣಗಳನ್ನು ತೊಡಿಸಿಕೊಂಡು
ಪೂಜೆ ಮಾಡಲು ಆಯುಧಗಳನ್ನು ಸ್ವಚ್ಛಗೊಳಿಸುತ್ತ
ಸುಣ್ಣ- ಬಣ್ಣ ಮಾಡಿ ಹಸಿರು ತೋರಣ ಕಟ್ಟುತ್ತ
ಮಕ್ಕಳಿಗೆ ಪೂಜೆ ಮಾಡುತ್ತಿರುವುದ ಕಂಡರೆ
ಎಲ್ಲದರಲ್ಲಿಯೂ ದೇವರಿರುವ ಭಾವನೆ!

ಅಡಿಗೆಮನೆಯಿಂದ ರುಚಿಕರವಾದ ಘಂ ಎನ್ನುವ ವಾಸನೆ
ಅಡಿಗೆ ಮುಗಿಯುವ ಮುನ್ನ
ಮಕ್ಕಳು ಕದ್ದು ತಿನ್ನುವುದ ಕಂಡು
ಮನೆಗೆ ಗುಂಪು ಗುಂಪಾಗಿ ಬರುತ್ತಿರುವ ನೆಂಟರುಗಳು
ಚಿಕ್ಕವರು ಅವರ ಕಾಲಿಗೆ ಎರಗಿ ಆಶೀರ್ವಾದ ಪಡೆಯುತ

ಬಂದಿರುವ ಚಿಕ್ಕವರು ನಮ್ಮ ಮನೆಯ ಹಿರಿಕರ ಆಶೀರ್ವಾದ
ಪಡೆಯುತ
ಹಿತಮಾತುಗಳ ಸರಮಾಲೆ ಕೇಳುತ
ಅಪ್ಪಿಕೊಂಡ ಕ್ಷಣ ತಾನೇ ಮರೆತು ಹೋಗಿರುವ ಆಲಿಂಗನ
ಹಬ್ಬದ ಆ ರಸನಿಮಿಷಗಳು.... ತೇರಾಗಿ ನಾವೇ ಎಳೆಯದೆ
ಅದೇ ತಾನಾಗಿಯೇ ಮುನ್ನಡೆಯುವುದು!

ಸಂಪ್ರದಾಯ ಜೊತೆಗೆ ಜಗತ್ತಿನ ಮುನ್ನೋಟ
ಹೊಸ ಹೊಸ ಸಾಧನೆಗಳ ಉದ್ದೇಶಗಳು



www.sriharikhoday.com

ಚಿಕ್ಕದಾಗಿರುವ ಈ ಪ್ರಪಂಚ
ವಿಶ್ವದ ಮಾತುಗಳ ನುಡಿಗಳು

ಮನುಷ್ಯರ ಸಾಧನೆಗೆ ಕೊನೆಯಿಲ್ಲ ಎಂಬ ಅನಿಸಿಕೆ
ದೃಢಭಾವನೆ ಕೆಲಸಗಳಲ್ಲಿ ಆಸಕ್ತಿ
ಉದಯವಾಗುತ್ತಿರುವ ಶ್ರದ್ಧಾ ಭಕ್ತಿಗಳು
ಈ ದಸರೆಯ ಆಯುಧ ಪೂಜೆಯ ಭಾವನೆಗಳು!

**- ಶ್ರೀ ಹರಿ.**

23-10-2012



## 351

ತಲೆ ತಗ್ಗಿಸಿಸುವುದು ಎಂದರೆ
ಭಾವನೆಗಳನ್ನು ಬಗ್ಗಿಸುವುದು
ಜೀವನದ ನಡಿಗೆ ಎಂದರೆ
ಹಿರಿಯರು ನಡೆದು ಹೋಗಿರುವ ದಾರಿಯಲ್ಲಿ ನಡೆಯುವುದು!

ಕಣ್ತೆರೆದು ದಿನವೂ ನೋಡಿದರೆ
ಎದುರಿಗೆ ಕಾಣುವ ಪುಟ್ಟ ಪುಟ್ಟ ಕೆಲಸಗಳು
ಸಣ್ಣದೆಂದು ಹೇಳದೆ ಅದು ಕಾಯಕವೆಂದು
ಅರಿತು ಕೆಲಸ ಮಾಡಿದಲ್ಲಿ
ಮರುದಿನಗಳಲ್ಲಿ ಜೀವನದಲ್ಲಿ ಕೆಲಸಗಳು ಭಾರವಾಗದು!

ತನಗೆ ತಾನು ಭಾರವಾಗದೆ
ಬೇರೆಯವರಿಗೂ ತಾನು ಭಾರವಾಗದೆ
ನಮ್ಮೆದುರಿಗೆ ಕಾಣುವ ಕೆಲಸಗಳಲ್ಲಿ
ಎಲ್ಲರ ಜೊತೆ ಸೇರಿ ಮುಗಿಸಿದರೆ
ಜೀವನವೇ ಹಗುರು ತನ್ನ ಕಾಲ ಮೇಲೆ ನಿಲ್ಲಲು
ದೇವರ ಶಕ್ತಿ ಕೂಡ ಜೊತೆಯಾಗುವುದು!

ಪ್ರಗತಿಗೆ ಬೇರೆಯವರಲ್ಲಿ ಕಲಿತು
ಅವರಿಂದ ನಮಗಾಗುವಷ್ಟು ಮಾತ್ರ ಕಲಿತು
ಕಲಿತಿದ್ದನ್ನು ನಮ್ಮ ಸಾಮರ್ಥ್ಯಕ್ಕೆ ಸರಿಯಾಗಿ ಯೋಜಿಸಿ



www.sriharikhoday.com

ಯೋಜಿಸಿದ ಅರ್ಥಗಳನ್ನು
ನಮ್ಮ ದಿನಚರಿಯಲ್ಲಿ ವಾಡಿಕೆಯಾಗಿಸಿಕೊಂಡರೆ

ನಮಗೆ ಬೇಕಾದ ಪ್ರಗತಿಗಿಂತ
ಹೆಚ್ಚಿನ ಪ್ರಮಾಣದಲ್ಲಿ
ಪ್ರಗತಿ ತಾವೇ ಬಂದು ಜೊತೆಗೆ ಸೇರಿ
ಸಮಾಜದಲ್ಲಿ ನಮಗೆ ಹೆಚ್ಚಿನ ಬೆಲೆ ಮತ್ತು
ಹೆಸರು ಗಳಿಸಿಕೊಳ್ಳಬಹುದು

**- ಶ್ರೀ ಹರಿ.**

25-10-2012



www.sriharikhoday.com

## 352.

ಪ್ರಗತಿಗೆ ಅಡ್ಡವಾಗಿರುವ ಹೆದರಿಕೆ
ಹೆದರಿಕೆಯಿಲ್ಲದ ಜೀವ ಈ ಜಗತ್ತಿನಲ್ಲೇ ಇಲ್ಲ
ಆದರೆ ಹೆದರಿಕೆ ದೈವ ಸೃಷ್ಟಿಯಲ್ಲ!

ನಮ್ಮಲ್ಲಿ ನಾವೇ ಬೆಳೆಸಿರುವ ನೆನಪುಗಳು
ನಮ್ಮದೇ ಆದ ನೆನಪುಗಳು
ನಮ್ಮನ್ನು ಬಿಟ್ಟು ದೂರ ಹೋಗಿ ಗುಪ್ತಚಾರಿಗಳಾಗಿರುವರು!

ನಮ್ಮ ಜೀವನಕ್ಕೆ ಸಹಪಾಠಿಗಳಾದ ನಮ್ಮ ನೆನಪುಗಳು
ಗುಪ್ತಚಾರಿಗಳಾದ ನೆನಪುಗಳು
ಬೇಹುಗಾರ ವೃತ್ತಿ ಆರಂಭಿಸಿಕೊಂಡು
ಅದು ಹಾಗೆ, ಅದು ಹೀಗೇ, ಅವರು ಹೀಗೆ ಎಂಬ ವದಂತಿಗಳೂ
ನಮ್ಮ ಮನಸ್ಸಿನ ಸಮತೋಲನವನ್ನು ಮರೆಸಿ

ಹೆದರಿಕೆಯ ಸಂಚುಗಳ ಬಿತ್ತನೆಯ ಮಾಡಿ
ನಾನು ಹೇಳಿರುವುದು ಯಾರಿಗೂ ತಿಳಿಯದೆ
ನಾವು ಹೇಳಿರುವ ಗುಪ್ತ ಸಮಾಚಾರ
ಬೇರೆ ಯಾವ ನೆನಪುಗಳಿಗೂ ತಿಳಿಯದೆ
ನಮ್ಮಲ್ಲಿಯೇ ನಮಗೆ ಅರಿವಿಲ್ಲದೆ ವಾಸಿಸುತ್ತಿರುವುವು!

ಎಲ್ಲಾ ರೀತಿಯ ಸುಖ ಸಂತಸಗಳಿಗೆ ಅಡ್ಡಿಯಾಗಿ
ಸಂತಸದ ಸ್ವಪ್ನಗಳನ್ನೇ ಮರೆಸಿ
ಹೆದರಿಕೆಯ ನೆರಳನ್ನೇ ಹಾಸಿ.... ಆ ನೆರಳ ಜೊತೆ
ತಾವು ಯಾರ ಕಣ್ಣಿಗೂ ಕಾಣದೆ

ತಮ್ಮದೇ ಕತ್ತಲೆಯಲ್ಲಿ ತಾವು ಸಿಲುಕಿಕೊಳ್ಳುತ್ತ
ದಿನಚರಿಯು ಹೆದರಿಕೆಯಿಂದಲೇ ಉದಯಿಸುತ್ತಿದೆ!

ನಂಬಿಕೆ ಅಪನಂಬಿಕೆಗಳ ಗುಪ್ತಚಾರಿಗಳ ಸಂಚು
ಬರೀ ವಿಚಾರ ಹೇಳುವ ಬದಲು
ತಮ್ಮದೇ ಆದ ರೀತಿಯಲ್ಲಿ
ಬ್ರಹ್ಮನು ಸೃಷ್ಟಿಸಿರುವ ನಮ್ಮ ಮನದಲ್ಲಿ
ಹೆದರಿಕೆಯನ್ನು ಜೊತೆ ಸೃಷ್ಟಿಸುತ್ತಿದೆ!

ಕೆಲಸ ಮಾಡಲು ಹೆದರಿಕೆ, ಇಂದು ಮಾಡುವ ಕೆಲಸಕ್ಕೆ
ನಾಳೆ ಮಾಡು ಎಂಬ ಯಜಮಾನಿಕೆ
ಜೊತೆಗಿರುವ ಪ್ರೀತಿ-ನಂಬಿಕೆಗಳಲ್ಲಿ ಭೇದ ಬೆಳೆಸಿ
ದುಃಖದ ಬೆಳೆಯನ್ನು ಬೆಳೆಸುತ್ತಿರುವವರು ಈ ಗುಪ್ತಚಾರರು
ನಮ್ಮ ಜೀವನದಲ್ಲಿ ಸಂಶಯಗಳನ್ನು ತುಂಬುತ್ತ
ಭೀತಿ ತುಂಬುವ ಉಗ್ರಗಾಮಿಗಳಾಗಿರುವರು!

ಹೇ ಮನವೇ, ಎಚ್ಚರಿಸಿಕೋ
ನಮಗೆ ಭಯ ಎನ್ನವುದೇ ಇಲ್ಲ
ಮನದಲ್ಲಿ ಪ್ರೀತಿ ಮತ್ತು ನಂಬಿಕೆಯನ್ನು ತುಂಬೋಣ
ನಮ್ಮಲ್ಲಿರುವ ಉಗ್ರಗಾಮಿ ಗುಪ್ತ ನೆನಪುಗಳಿಗೆ
ಪ್ರೀತಿ ನಂಬಿಕೆಯನ್ನು ಕಲಿಸೋಣ!

ಈ ಅರಿವು ಆದ ಮೇಲೆ ಈ ಕ್ಷಣದಿಂದಲೇ
ಭಯದ ನೆರಳೂ ಇಲ್ಲ ಅಪನಂಬಿಕೆಯ ಭೀತಿಯೂ ಇಲ್ಲ
ಪ್ರೀತಿ ಪ್ರೇಮದ ಆಕಾಶದಲ್ಲಿ ಬೆಳೆಸಿ ಜೀವಿಸುತ
ನಮ್ಮ ಪ್ರಗತಿಯ ಉದ್ದೇಶಗಳಿಗೆ ಹೆಚ್ಚಿನ ಬಲ ನೀಡಿ
ಆಗುತ್ತಿರುವ ಈ ಜಗತ್ತಿನ ಹೊಸ ಸೃಷ್ಟಿಯಲಿ
ಭಯವಿಲ್ಲದೆ ಭಾಗಿಯಾಗೋಣ!

**- ಶ್ರೀ ಹರಿ**

26-10-2012



www.sriharikhoday.com

353

ನಿರಾಳ ಭಾವನೆಗಳಿಗೆ ಗಡಿಗಳಿಲ್ಲ
ನಿರಾಳ ಭಾವನೆಗಳ ಆಳ ಯಾರಿಗೂ ತಿಳಿದಿಲ್ಲ
ತಿಳಿದವರು ಎಲ್ಲರ ಜೊತೆ ನಿರ್ಲಿಪ್ತವಾಗಿ
ಎಲ್ಲರ ಜೊತೆಗೆ ಇದ್ದು ಇಲ್ಲದಾಗಿಹರು!

ವಿಶ್ವದ ಕಷ್ಟಗಳು ತಿಳಿದಿರುವ ನಿರಾಳ ಭಾವನೆ
ಜಗತ್ತಿನ ಕಷ್ಟಗಳಿಗೆ ಪರಿಹಾರ ನಿರಾಳ ಭಾವನೆಗಳಲ್ಲಿರುವ ಶಕ್ತಿ
ಶೂನ್ಯದಲ್ಲಿ ಬೆರೆತು, ಶೂನ್ಯದ ತೇಜಸ್ಸಿನ ಶಕ್ತಿ
ಆಳವಿಲ್ಲದ ನಿರಾಳಕ್ಕೆ ತಿಳಿದಿದೆ!

ಉಸಿರಾಡದ ಭಾವನೆ ರೂಪವಿಲ್ಲದ ಭಾವನೆ
ಗತಿ ಮತಿಯಿಲ್ಲದ ಭಾವನೆ
ತನ್ನ ಒಂದು ಮನೋತರಂಗದಿಂದ
ನಮ್ಮ ಮನೋ ಬಣ್ಣಗಳನ್ನು ಮಾರ್ಪಾಟು ಮಾಡಿ
ಸರಿಸಮಾನವಿಲ್ಲದ ತಪೋಶಕ್ತಿಯೇ ನಿರಾಳ ಭಾವನೆ!

ಇದನ್ನರಿತಿರುವ ಜ್ಞಾನಿಗಳಲ್ಲಿ ಹೇರಳವಾಗಿದ್ದು
ಇವರ ದರ್ಶನ ಜ್ಞಾನಿಗಳ ಕಣ್ಣಿಗೆ ನಾವು ಬಿದ್ದರೆ
ನಾವು ಕೊನೆಗಾಣದ ಸಾಹಸಕ್ಕೆ ಪಣತೊಟ್ಟು
ನಾನು ಸಾಧಿಸುವೆ ಎಂಬ ಮನೋಭಾವನೆಯು
ಹೊಸ ಶಕ್ತಿಯ ಚೈತನ್ಯ!

ಹಿರಿತನ - ಕಿರಿತನ ಅಹಂಕಾರ ದಬ್ಬಾಳಿಕೆಯಿಲ್ಲದೆ
ಅತಿ ಕಡಿಮೆ ಸಾಹಸದಿಂದ ತನ್ನ ಸಂಕಲ್ಪಗಳನ್ನು ಸಾಧಿಸಿ
ಸಾಧನೆಯ ಬೆಳೆಯ ಸುಖವನ್ನು ಎಲ್ಲರ ಜೊತೆಗೆ ಬೆರೆಸಿ
ತಾನು ಏನೂ ಮಾಡಿಲ್ಲ . ಅದು ತಾನಾಗಿಯೇ ಆಗಿರುವುದು
ಎಂದು ಹೇಳುವ ಮಹಾನ್ ಶಕ್ತಿಪುರುಷರು
ನಿರಾಳ ಭಾವನೆಯ ಒಡೆಯರು!

**- ಶ್ರೀ ಹರಿ.**

27-10-2012



## 354

ವಿಶಾಲವಾದ ಬದುಕಿನಲಿ ಮನೋ ಸಂಭ್ರಮದ ಅಭಾವ
ಬೇಡಿಕೆಗಳ ಸಂಚಲನ
ಮಾನವನಿಗೆ ಮನೋಸ್ಥಿರತೆ ಇಲ್ಲದೆ
ಹೋಲಿಕೆಗಳ ಪ್ರಾರಂಭ!

ಅತಿಯಾದ ಕೀರ್ತಿಯನ್ನು ಗಳಿಸುವ ಇಚ್ಛೆ
ಅರಳದೇ ಇರುವ ವ್ಯಕ್ತಿತ್ವದ ಬೆಳವಣಿಗೆ
ತಾವು ಕಟ್ಟುತ್ತಿರುವ ಸ್ವಪ್ನಗಳು
ತಮ್ಮ ಎದುರಿಗೇ ಭಸ್ಮವಾಗುತ್ತಿರುವುದು
ತಮ್ಮ ಭಾವನೆಗಳು ಲೌಕಿಕ ಕಳೆದುಕೊಂಡಿದೆ!

ಸಾಧ್ಯವಿಲ್ಲದ ಕಥಾನಾಯಕನಾಗಿ
ಸತ್ಯವನ್ನು ಅರಿಯದೆ ನಾಟಕೀಯ ಜೀವನ
ರಂಗಮಂದಿರದಲ್ಲಿ ವೀಕ್ಷಕರೆ ಇಲ್ಲದೆ
ತಾನೊಬ್ಬನೇ ನಡೆಸುತ್ತಿರುವ ನಾಟಕ
ಎದುರಿಗೆ ಇಲ್ಲದ ಆತ
ಹೊರಗಿನಿಂದ ಚಪ್ಪಾಳೆಯ ಬೇಡಿಕೆ
ಕೃತಕ ಜೀವನದ ಮೇಲೇ ತೇಲಾಡುತ್ತಿರುವರು!

ನರರು ಬೇಡುವ ಭಾಷಣ ಮಾಡುತ್ತ
ದೊಂಬರಾಟದ ಆಟ ಆಡಿಸಿದಂತೆ ಆಡುವ



www.sriharikhoday.com

ಅಸಮಾಧಾನದ ತಮಟೆಯ ಸದ್ದಿನ ಕುಣಿತ
ಎಲ್ಲರೂ ಕೇಕೆ ಹಾಕುತ್ತಿರುವುದ ಕಂಡು
ಕುಣಿತ ಮಾಡುತ್ತಾ ಮಾಡುತ್ತಾ
ತನ್ನ ನೆರಳನ್ನು ಕೂಡ ಕಳೆದುಕೊಳ್ಳುತ್ತಿರುವ ಮಾನವ
ಕಣ್ಣಿಗೇ ಕಾಣಿಸದೆ ಅಗೋಚರ ಕಷ್ಟಗಳಿಗೆ
ಮಾನವ ತಾನಾಗಿಯೇ ಕರೆಯುತ್ತಿದ್ದಾನೆ.

**- ಶ್ರೀ ಹರಿ.**

29-10-2012



## 355

ರಸಿಕತೆಯ ಆಕಾಶದಿಂದ
ರೋಮಾಂಚನ ಬಿಂಬಗಳ ಮಿನುಗು
ಕಾಮನೆಯ ಬಣ್ಣಗಳ ಸುರಿಮಳೆ
ದೀರ್ಘ ಚುಂಬನದ ಬಯಕೆ

ನಮ್ಮಲ್ಲಿ ನಮ್ಮನ್ನೇ ಮರೆಸುವ ರಸಿಕತೆ
ಕಾಲಗತಿಯನ್ನು ಮರೆಸಿ
ಬಿಸಿರಕ್ತದ ಪ್ರವಾಹದಲ್ಲಿ
ಮರೀಚಿಕೆಯ ಮಿನುಗುವ ಪ್ರೀತಿ - ಪ್ರೇಮಗಳು
ರತಿಗೆ ಮನ್ಮಥನು ಚುಂಬಿಸುವುದ ಕಲಿಸಿದಂತೆ
ಹೊಸತು ಹೊಸತು ಭಾವನೆಗಳ ಬಿಂಬಗಳು!

ಕರೆಯದೇ ಹತ್ತಿರ ಕರೆಸುವ ರಸಿಕತೆ
ಸೃಷ್ಟಿಯ ಹಾದಿಯಿಂದ ಕಾಣುತ್ತಿರುವ
ಕಷ್ಟಗಳಿಗೆ ಉತ್ತರ ಸಿಗದೆ
ರಸಿಕತೆ ಮಾನವನ ಹಂದರದ ನೆರಳಲಿ
ನಾನಾ ಬೇಕಿರುವ ರೂಪಗಳನ್ನು ಕಟ್ಟುತ್ತಲೆ ಇದೆ!

ರಸಿಕತೆ ಆಕಾಶದಿಂದ ಇಳಿದ ಆಕಾಶ
ಹುಚ್ಚು ಅಲೆಗಳನ್ನು ಏಳಿಸುತ
ಹೊಸ ಹೊಸ ಹದವನ್ನು ಹುಡುಕುತ್ತಿರುವ ಪ್ರಯತ್ನ



www.sriharikhoday.com

ಪ್ರೀತಿ ಪ್ರೇಮದ ಯಜ್ಞ
ನಕ್ಕು ನೀಡುವ ಕುಡಿನೋಟಗಳು

ಅವಳು ನನ್ನವಳಾಗಿ ನನ್ನ ಮನಸ್ಸಿನ
ಶೃಂಗಾರದ ಛಾಯೆಗಳಾಗಿ
ನನ್ನ ಅಪ್ಪಿಗೆ ಸಿಕ್ಕಿರುವ ಆಳದ ಮುತ್ತುಗಳು
ರಸಿಕತೆಯ ಶಕ್ತಿ ರಸಿಕತೆಯಲ್ಲಿ ಅಡಗಿರುವ ಯುಕ್ತಿ
ಪ್ರೀತಿ ಪ್ರೇಮಗಳ ಮುಕ್ತಿ

**- ಶ್ರೀ ಹರಿ.**

29-10-2012



## 356

ದೊಡ್ಡದು ಚಿಕ್ಕದು ಬರೀ ಮನೋಕಲ್ಪನೆ
ಮಾನವನು ಬರೀ ಮನೋಕಲ್ಪನೆಗಳಲ್ಲಿ ನಿರತನಾಗಿ
ಭಾವನೆಗಳನ್ನು ಅಂತರಾಳದಲ್ಲಿ ಕುಲುಕುತ್ತಲೇ ಇದ್ದಾನೆ!

ಕುಲುಕುತ್ತಿರುವುದು ಒಂದು ಒಳ್ಳೆಯ ಕೆಲಸ
ಕುಲುಕುತ್ತಲೇ ಇದ್ದರೆ ಅಡಿಗೆ ಆಗುವಂತೆ
ಉದ್ದೇಶಪೂರ್ವಕವಾಗಿ ಕುಲುಕಿದರೆ
ಒಳ್ಳೆ ರುಚಿಕರವಾದ ಮನೋ ಅಡಿಗೆ ಆಗುತ್ತದೆ!

ದಿನಚರಿಯಲ್ಲಿ ರಾತ್ರಿಯಾದ ಮೇಲೆ ಹಗಲು
ಊಟವಾದ ನಂತರ ಮತ್ತೆ ಹಸಿವು
ಒಂದರ ನಂತರ ಮತ್ತೊಂದರ ಬೇಡಿಕೆ
ಒಬ್ಬರ ಜೊತೆ ಜಗಳ ಮುಗಿಸಿದ ನಂತರ
ಮತ್ತೊಬ್ಬರ ಜೊತೆ ಜಗಳ ಮಾಡುತ್ತಿರುವುದು
ಬರೀ ಕಲ್ಪನೆಗಳಿಂದ ಬೇಡುವ ವರಗಳು!

ಕಣ್ಣಿಗೆ ಕಾಣುವುದನ್ನು ಸರಿಯಾಗಿ ವೀಕ್ಷಿಸಿ
ಅರ್ಥಭರಿತ ಸದ್ದುಗಳ ಕೇಳೋಣ
ರುಚಿಕರ ಮಾತುಗಳ ನಾಲಿಗೆಯಿಂದ ನುಡಿಯೋಣ
ಸಮತೋಲನದ ಭಾವನೆಗಳನ್ನು ಬೆಳಗೋಣ!

ಇಂದು ನನಗೆ ನಮಗೆ ಜಗತ್ತಿಗೆ
ಒಂದು ಹೊಸದನ್ನು ಮಾಡೋಣ
ಭಾವನೆ ಬೆಳೆಸಿದರೆ ದಿನವೂ ಹೊಸ ಹೊಸ
ಕೆಲಸಗಳು ತಾವಾಗಿಯೇ
ಬಂದು ನಿಂತಿರುವುವು ಸಾಲು ಸಾಲು!

**- ಶ್ರೀ ಹರಿ.**

31-10-2012



www.sriharikhoday.com

## 357

ಕೆಂಪು ತುಟಿಯ ಹರಿಸಿದ ತುಂಟ ಮಾತುಗಳು
ಪ್ರೀತಿಯಲ್ಲಿ ನಂಬಿಕೆಯನ್ನು ತುಂಬಿ
ವಯಸ್ಸೇ ತಿಳಿಯದ ಕುಡಿನೋಟಗಳು
ಜೀವನವನ್ನು ತುಂಬಿ ಅಲ್ಲಿ ತೇಲಿಸುತ್ತಿದೆ

ಹಗಲು ಮುಗಿಲು ಜಾರಿಹೋದರೂ
ತಾವುಗಳು ಬಂದು ಹೋಗಿ ನಮಗೆ
ಆಯಸ್ಸಿನ ಲೆಕ್ಕ ಮರೆಸಿ
ದೀಪದ ಬೆಳಕಿಗೆ ವಯಸ್ಸು ತಿಳಿಯದೇ ಉರಿಯುವಂತೆ
ಮಾನವನ ಪ್ರೀತಿ - ಪ್ರೇಮಗಳು ಬೆಳೆಯುತ್ತಲೇ ಇವೆ

ಪಶ್ಚಾತ್ತಾಪ ಇಲ್ಲದ ಜೀವನರಥ
ಹರಿಯುತ್ತಿರುವಾಗಲೆ ಪ್ರೀತಿ ಮತ್ತು ಒಲ್ಮೆಯ ಸದ್ದುಗಳನ್ನು ಮಾಡುತ
ಸ್ಪಂದಿಸಿದ ಎಲ್ಲರಿಗೂ ರಥದಲ್ಲಿ ಕುಳ್ಳಿರಿಸಿಕೊಂಡು
ಮುನ್ನಡೆಯುತ್ತಿರುವ ಪ್ರೇಮ - ಸ್ವಪ್ನಗಳು ಕಾಲವೇ ಮರೆತು
ಮುಂದು ಹೋಗಿದ್ದ ಮುಂದು
ಹಿಂದಕ್ಕೆ ಬಂದು ನಮ್ಮ ಜೊತೆ ಸೇರುವಂತಿದೆ

ಪ್ರೀತಿಯ ಮನದಿಂದ ಮಾತುಗಳನ್ನಾಡುತ್ತ
ಪ್ರೀತಿಯ ರೂಪದಲ್ಲಿ ದೇವರ ಇರುವಿಕೆಯನ್ನು ಕಂಡು
ಮನದಲ್ಲಿ ಪ್ರೀತಿ ಎಂದೆಂದಿಗೂ ಚಿಗುರುತ್ತಲೇ ಇದ್ದು
ಓರೆಗಣ್ಣಿನ ನೋಟದಲ್ಲಿ
ಹೊಸ ಹೊಸ ಕಥೆಗಳು ರೂಪಗೊಳ್ಳುತ್ತ

ನನ್ನ ಜೀವನದ ನೆರಳು
ನನ್ನ ಜೀವನದ ಕಾದಂಬರಿಯನ್ನು ಬರೆಯುತ್ತಿದೆ

**- ಶ್ರೀ ಹರಿ.**

02-11-2012



## 358

ನನ್ನ ಮನದ ಕತ್ತಲಲ್ಲಿ ಒಂದು ಭಾವನೆ
ಅದು ಯಾವುದೋ ಒಂದು ಶಕ್ತಿ
ಎಲ್ಲವೂ ತಿಳಿದು ಸಕಾಲಕ್ಕೆ ಒದಗಿಸುವ ಶಕ್ತಿ
ಪ್ರತಿಯಾಗಿ ಏನನ್ನೂ ಬಯಸದ ಶಕ್ತಿ
ಏಕೆಂದರೆ ಅದಕ್ಕೆ ನೀಡಿದರೆ ಸ್ವೀಕರಿಸಿ
ಅದನ್ನು ಇಟ್ಟುಕೊಳ್ಳಲು ಬೇಕಿರುವ ಸ್ಥಳ ಇಲ್ಲವಾಗಿ
ವಿಶ್ವವೇ ಆ ಮಹಾನ್ ಶಕ್ತಿ!

ನಾವುಗಳು ಎಚ್ಚರ ಅಭಾವದಲ್ಲಿ ಇದ್ದಾಗ
ನಾವು ಎಲ್ಲರಿಂದ ದೂರವಾಗಿ ಒಬ್ಬ ತಬ್ಬಲಿ ಆದ ಪರಿಸರದಲ್ಲಿ
ವಿವೇಕ ಭಾವನೆಗಳ ಕ್ರಿಯೆಗಳಿಗೆ ನಿಶ್ಶಬ್ದ
ನಮ್ಮ ಜೊತೆಗೆ ನಮ್ಮ ಭಾವನೆಗಳು ಕೂಡ ಇಲ್ಲದಾದಾಗ
ಜೊತೆಯಿರುವ ಆ ಕಾಣದ ಮಹಾನ್ ಶಕ್ತಿ
ತನಗೇ ತನ್ನ ಶಕ್ತಿಯನ್ನು ತಿಳಿಯದ ಮಹಾನ್ ಶಕ್ತಿ
ತನಗೆ ತಾನು ಕತ್ತಲೆಯಲ್ಲಿ ಕಾಣದಾಗಿರುವ ಮಹಾನ್ ಶಕ್ತಿ
ಕತ್ತಲೆಗೂ ತಿಳಿಯದೆ ತನ್ನ ತಬ್ಬಲಿ ಜೊತೆಗೆ ತೊಡೆಯ ಮೇಲೆ
ಮಲಗಿಸಿಕೊಂಡು ನೀಡಿದ ಆಶ್ರಯ ಶ್ರುಶೂಷೆ
ವಿಶ್ವದಲ್ಲೆ ಹೋಲುವ ಜೊತೆಗಾರ ಇಲ್ಲವೇ ಇಲ್ಲ!

ಸುಖ ಕೊಡುವುದರಲ್ಲೇ ಸುಖ ಪಡೆಯುವ
ಬುದ್ಧಿ ಕೊಡುವುದರಲ್ಲೇ ತಾನು ಹಿಗ್ಗುತ



www.sriharikhoday.com

ಗುಡಿಸಲಾಗಲೀ ಅರಮನೆಯಾಗಲೀ ಆತಿಥ್ಯವನ್ನು ಸ್ವೀಕರಿಸುತ್ತ
ಸಮಭಾವನೆಯ ವಿಶ್ವರೂಪಿ
ಪ್ರೀತಿಗೆ ಬೇಡದೆ ನೀಡುವ ಆ ಕೊಡುಗೆಗಳು
ನನ್ನ ಸ್ನೇಹಿತ ಎಂದು ಹೇಳಲು ನಾಲಿಗೆಯ ಮಾತುಗಳು ಸಾಲದೆ
ಅಮೂಲ್ಯವಾದ ಭಾವನೆಯನ್ನು ಮನದಲ್ಲಿ
ಹಳ್ಳಗಳ ತೋಡಿ ಬಚ್ಚಿಟ್ಟುಕೊಳ್ಳುತ್ತಿರುವುದೇನೋ!

**- ಶ್ರೀ ಹರಿ.**

03-11-2012



## 359

ಕಣ್ಣೀರಿಡಲು ತಿಳಿಯದ
ಬಡತನದ ಭಾಗಿಗಳು
ಯಾರ ಕಣ್ಣಿಗೂ ಬೀಳದೆ
ತಮ್ಮದೇ ಆದ ಅಜ್ಞಾನದ ಕತ್ತಲಿನಲ್ಲಿ
ಅಡಗಿಹೋಗಿ ಯಾರಿಗೂ ಕಾಣದಾಗಿಹರು!

ಬಡತನ ದೇವರು ಹುಟ್ಟಿಸಿರುವ ಗಿಡವೋ
ತಾನಾಗಿ ಬೆಳೆಯುತ್ತಿರುವ ಫಲಬರದ ಗಿಡವೋ
ನಮ್ಮ ಸಮಾಜದ ನಿರ್ಲಕ್ಷ್ಯವೋ
ಬಡತನಕ್ಕೆ ಬೇಕಾಗಿರುವ ಅವಶ್ಯ ವಸ್ತುಗಳು
ಬಟ್ಟೆ ಹೊಟ್ಟೆ ಆಸರೆ
ಸಮಾಜಕ್ಕೆ ಸುತ್ತಲೂ ಇದ್ದರೂ
ಅವರಿಗೆ ಕಷ್ಟ ಕಾಣುವುದಿಲ್ಲವೋ!

ಬಡತನಕ್ಕೆ ತಮ್ಮ ಕಷ್ಟಗಳ ಹೇಳಿಕೊಳ್ಳಲು ನಾಲಿಗೆ ಇಲ್ಲವೋ
ರಾಜಕೀಯ ವ್ಯವಸ್ಥೆಗೆ ಬಡತನ ಅಳಿಸಲು ಆಗುವುದಿಲ್ಲವೋ
ಬಡತನದ ಕಷ್ಟಗಳು ಬೀದಿ ಬೀದಿ ಅಲೆದು
ಕನಿಕರದ ಕೂಗಿನಿಂದ ಅತ್ತು ಅತ್ತು ಬರುವ ಪ್ರಸಾದವೋ
ಬಡತನ ನಮ್ಮ ಸಮಾಜದ ಭಾಗಿ ಅಲ್ಲವೋ
ಬಡತನದಲ್ಲಿ ಹುಟ್ಟುತ್ತಿರುವ ಮಕ್ಕಳು
ಬಡತನದ ಭಾಗ್ಯದ ಫಲವೋ?

www.sriharikhoday.com

ಇದನ್ನು ಕೊನೆಗಾಣದ ನಾವು ನಾಗರೀಕರೋ?
ನಮ್ಮ ಮೇಲೆ ನಮ್ಮ ಜವಾಬ್ದಾರಿಗಳಿಗೆ ಧಿಕ್ಕಾರ
ನನಗೆ ನನ್ನ ಮೇಲೆ ಧಿಕ್ಕಾರ
ಬಡತನ ಆರಿಸಿರುವ ರಾಜಕಾರಣಿಗಳಿಗೆ ಧಿಕ್ಕಾರ
ಎಲ್ಲವೂ ತಿಳಿದು ಸುಮ್ಮನಿರುವ ದೇವರಿಗೆ ಧಿಕ್ಕಾರ
ನಾಗರೀಕತೆಯ ಮೇಲೆ ಧಿಕ್ಕಾರವೋ ಧಿಕ್ಕಾರ ಧಿಕ್ಕಾರ

**- ಶ್ರೀ ಹರಿ.**

05-11-2012



## 360.

ಕೊನೆಯಿರದ ಬಡತನಕ್ಕೆ ಒಂದು ಕಾರಣ ಇರಬಹುದು
ಬಡತನ ತನ್ನದೇ ಆದ ಒಂದು ದೂರ ವಾಸಿಸುವ
ಸಮಾಜ ಕಟ್ಟಿಕೊಂಡಿದೆ!

ಯಾರೂ ಬರದಂತಿರುವ ರಸ್ತೆಗಳು
ತಮ್ಮದೇ ಬೇರೆಯಾದ ಸಮಾಜದ ಮನೋ ತೆರೆಗಳು
ಸಮಾಜ ಒಂಟಿ ಜೀವನ ನಡೆಸುತ್ತಿರುವುದು
ಒಂದು ಕಾರಣ ಇರಬಹುದು!

ರಸ್ತೆಯಲ್ಲಿ ಬೆಳಕು ಕಂಡಿರದ ರಾತ್ರಿಗಳು
ರಾತ್ರಿಯಲ್ಲಿ ಅಡಗಿರುವ ಹೆದರಿಕೆಯ ಛಾಯೆ
ಹೊಸಬರಿಗೆ ಕಚ್ಚುವ ನಾಯಿಯ ಗುಂಪು
ಯಾವ ಸಾಮಾಜಿಕ ಸಲಕರಣೆಯಿಲ್ಲದ ವಾತಾವರಣ
ಬೆಳೆಸಿ ಜೊತೆ ಬಾಳುವರ ಮನಸ್ಸಿನಿಂದ
ಮೂಕವಿರುವುದೇ ಒಂದು ಕಾರಣವಾಗಿರಬಹುದೇನೋ?

ತಮ್ಮದೇ ಆದ ರೌದ್ರ ವಾತಾವರಣದ ರಾಜಕೀಯ ವ್ಯವಸ್ಥೆ
ಅತಿಯಾದ ಉಗ್ರ ಸ್ವರೂಪಿಗಳ ಉಡುಪು - ಧಾರಣೆ
ಜಗಲಿ ಮೇಲೆ ಹಗಲು - ಇರುಳೆನ್ನದೆ ಕುಡಿದು
ಕೆಲಸ ಮಾಡಲು ತಿಳಿಯದ ದಾಂಡಿಗರ ಗುಂಪು
ನಮ್ಮ ಸಮಾಜವನ್ನು ದೂರ ಇರಿಸುತ್ತಿದೆ!

www.srisharikhoday.com

ಸ್ವಯಂಘೋಷಿತ ಮುಖಂಡರುಗಳು
ಸ್ವಯಂಘೋಷಿತ ಗಡಿಗಳ ಅಧಿಕಾರ
ಜಗಳಗಳ ಮಾಡಲು ಆತುರವಾಗಿರುವ ಕಣ್ಣೋಟಗಳು
ಅಲಕ್ಷ್ಯ ನಡುವಳಿಕೆಯ ಸಮಾಜ ದೃಶ್ಯಗಳು
ಕೆಸರ ಜೊತೆ ಜೀವನ

ನಿಶೆ ತುಂಬಿರುವ ಮಾತುಗಳು
ಕಲ್ಲಾಗಿರುವ ಮನಸ್ಸುಗಳ ಮೇಲೆ
ಹೂವ ಬೆಳೆಸುವೆನೆಂಬ ಭಾಷಣ ಮಾಡುವ ಗುಂಪು
ಗಡಿಗಳ ಜಗಳಗಳು
ದಿನಚರಿಯ ಸೌಲಭ್ಯವಿಲ್ಲದ ಪರಿಸರ
ಕೊನೆಯಿಲ್ಲದ ಬಡತನಕ್ಕೆ ಕಾರಣವಿರಬಹುದೇನೋ!

ಕಾರಣಗಳ ಪಟ್ಟಿ ಕೊನೆಯಿರದ ಪಟ್ಟಿಗಳಾಗಿ
ಸರಿ ಹೋಗಬಹುದೆಂಬ ಮನಸ್ಸಿಲ್ಲದ ಮನಸ್ಸಿನಲ್ಲಿ
ಹೊಸ ವಿಚಾರಗಳನ್ನು ಅಂಟಿಸಿಕೊಳ್ಳದೆ
ಕಾಲ ಉರುಳಿದಂತೆ ಹೆಚ್ಚುತ್ತಿರುವ ಬಡತನ
ಅವುಗಳೇ ಕಾರಣಗಳ ಪಟ್ಟಿ ಮಾಡುತ

ಪಟ್ಟಿಗಳಲ್ಲೇ ತಮ್ಮ ಕಷ್ಟಗಳನ್ನು
ಪ್ರಗತಿ ತರುವ ಪಟ್ಟಿಗಳಂತೆ ಹೇಳುತ್ತಲೇ
ನೋಡುವ ಕಣ್ಣುಗಳನ್ನು ನೋಡದೇ ಜಾರಿಸುತ
ಬಡತನದ ಇರುವಿಕೆ ಯಾರ ಕಣ್ಣಿಗೂ ಬೀಳದಂತೆ
ಯಾರಿಗೂ ಕಷ್ಟ ಕೊಡದೆ ಬೆಳೆಯುತ್ತಲೇ ಇದೆ!

ಈ ರೀತಿಯ ಅನೇಕ ಕಾರಣಗಳ ಛಂದಸ್ಸು
ಸುಂದರ ಜೀವನದ ವ್ಯಾಕರಣಕ್ಕೆ ಅಡ್ಡವಾಗಿದೆ!

**- ಶ್ರೀ ಹರಿ.**

06-11-2012



www.sriharikhoday.com

## 361

ಸುಖ ಅರಿಯದ ಸಿರಿತನ
ಸುಖವನ್ನು ಅನುಭವಿಸಬಲ್ಲ ಬಡತನ
ತುಂಬು ಅನುಭವ ಪಡೆಯಲಾಗದ ಸಿರಿತನ
ಒಂದು ತುತ್ತು ಹೆಚ್ಚು ಉಂಡು ಒಂದು ಚೊಂಬು
ನೀರು ಕುಡಿದು ಸುಖ ಪಡುವ ಬಡತನ!

ಕೊನೆಯಿಲ್ಲದ ಕೊನೆ ಕಾಣದ ಸಿರಿತನ
ನಮಗಿಷ್ಟೇ ದೊರಕಿದರೆ ಸಾಕು ಎನ್ನುವ ಬಡತನ
ಮೆರೆದು ಅಟ್ಟಹಾಸದಿಂದ ದ್ವೇಷ ತುಂಬಿಕೊಂಡು ಜೀವಿಸುವ ಸಿರಿತನ
ಭಾಷೆಯಿದ್ದಷ್ಟು ಚಾಚಿಕೋ ಎನ್ನುವ ಬಡತನ!

ಸುಖದ ದಡವ ಸೇರಲು ಈಜಿ ಮುಳ್ಳು ದಡಗಳ ಸೇರಿಕೊಳ್ಳುವ
ಸಿರಿತನ
ಬರೀ ಮರಳು ನೆಮ್ಮದಿಯ ತಂಗಾಳಿಯಲ್ಲಿ ಸುಖ ಪಡೆಯುವ
ಬಡತನ
ಕೋಪ ತಾಪಗಳಿಂದ ಮೆರೆಯುತ್ತ ದ್ವೇಷಗಳ ತುಂಬಿಕೊಂಡ ಸಿರಿತನ
ತಲೆ ಬಗ್ಗಿಸಿಕೊಂಡು ಇರುವವರ ಸಂಬಂಧಿಗಳ ಜೊತೆ
ಬೆರೆಯುವ ಸಮಯಗಳ ಅನುಭವ ಬಡತನ!

ಹೊಟ್ಟೆ ತುಂಬ ಊಟ ಮಾಡಿ ನಿದ್ರೆ ಬರದ ಸಿರಿತನ
ಅರೆ ಹೊಟ್ಟೆ ಊಟ ಮಾಡಿ ಒಂದು ಚೊಂಬು ನೀರು ಕುಡಿದು
ಗೊರಕೆ ನಿದ್ರೆ ತರಿಸುವ ಬಡತನ
ಜಗಳ ಮಾಡಿ ಕೈಕಾಲುಗಳ ಎಲುಬುಗಳನ್ನು ಮುರಿಸಿಕೊಳ್ಳುವ ಸಿರಿತನ

ಯಾರ ಸಹವಾಸವನೂ ಮಾಡದೆ ತಾನಾಯಿತು ತನ್ನ ದಾರಿಯಾಯಿತು
ನನ್ನ ಮನೆ.... ನನ್ನ ಸಂಸಾರವಾಯಿತೆನ್ನುವ ಬಡತನ!

ಮುಗಿಯದ ಬೇಡಿಕೆಗಳ ಪಟ್ಟಿ ಸಿರಿತನದ ಗುಣವಾದರೆ
ಕೆಲವೇ ಜೀವನದ ಬೇಡಿಕೆಯಲ್ಲಿ ಸ್ವರ್ಗ ಸುಖವ ಅನುಭವಿಸುವ
ಬಡತನ
ಜೀವನದಲ್ಲಿ ಸಂಪಾದಿಸಿ ಕಳೆದುಕೊಳ್ಳುವ ಸಿರಿತನ
ಜೀವನದಲ್ಲಿ ಕಳೆದುಕೊಳ್ಳಲು ಏನೂ ಇಲ್ಲದೆ
ಕಷ್ಟಪಡದೆ ಜೀವಿಸುವ ಬಡತನ!

ಅಟ್ಟಹಾಸ ದ್ವೇಷ ತಿಳಿಯದ ಬಡತನ
ಬಡತನವೇ ಮೇಲು ಎನ್ನುತ ದಿನವೂ
ಹೊಸ ಹೊಸತರ ಜೊತೆಗೆ ಶತ್ರುತ್ವ ಬೆಳೆಸುತ್ತಿರುವ
ಸುಖದ ಗಿಡಗಳನ್ನು ಕಾಣದ ಸಿರಿತನ
ಅಡ್ಡದಾರಿಗಳಲ್ಲಿ ನಡೆಯುತ ಹೆಜ್ಜೆ ಹೆಜ್ಜೆಗೂ ಹೊಸ ಮುಳ್ಳುಗಳ
ಚುಚ್ಚಿಸಿಕೊಂಡು ಹೆಜ್ಜೆಯಿಡುತ್ತಿರುವ ಸಿರಿತನ

ಈ ವಿಚಾರಗಳನ್ನೆಲ್ಲ ಯಾವ ದ್ವೇಷವಿಲ್ಲದೆ
ಸಿರಿತನದಲ್ಲಿ ಸುಖವಿಲ್ಲ ಬಡತನದಲ್ಲಿ ಅಗಾಧ ಸುಖದ ಗಣಿ
ಈ ಮಹಾನ್ ಉದ್ದೇಶದ ಬಲದಿಂದ
ಬಡತನ ಹೆಚ್ಚಾಗಿ ಬೆಳೆಯುತ್ತಲೇ ಇದೆ!

**- ಶ್ರೀ ಹರಿ.**

07-11-2012



www.sriharikhoday.com

## 362

ಎದುರಿಗೆ ಬೆಂಕಿಯಂತೆ ಉರಿಯುತ್ತಿರುವ ಬಡತನ
ಯಾರ ಕಣ್ಣಿಗೂ ಗೋಚರವಾಗದೆ
ಆ ಚಿಂತೆಯಲ್ಲಿ ಇದ್ದು ಅನುಭವಿಸುತ್ತಿರುವ ಜನಗಳ ಕಷ್ಟಗಳು
ಯಾರ ಸಹಾಯವಿಲ್ಲದೆ ನಿಲ್ಲದೆ ಕಷ್ಟಗಳು ಬೆಳೆಯುತ್ತಲೇ ಇದೆ!

ಯಾರೂ ಮಾಡದಿರುವ ಈ ಕೆಲಸ ನಮ್ಮ ಕೆಲಸ ಅನ್ನದೆ
ಕಣ್ಣೆದುರಲ್ಲೇ ಕಷ್ಟಗಳು ತಾಂಡವವಾಡುತ್ತಿರುವುದ ಕಂಡರೂ
ನಿರ್ಲಕ್ಷಿಸುವುದು ನಮ್ಮ ಧರ್ಮ ಎಂಬ ಮನೋ ನಿರ್ಧಾರಗಳು
ತಮ್ಮನ್ನು ತಿಳಿಯದೆ ಬಡತನವ ಬೆಳೆಸಿದಂತೆ!

ಯಾರ ಜವಾಬ್ದಾರಿಯಿಲ್ಲದ ಬಡತನ
ತನ್ನ ಕಷ್ಟಗಳಿಗೆ ತಾನೇ ಜವಾಬ್ದಾರಿಯಿಲ್ಲದ ಬಡತನ
ದೇಶದ ಮುಖಂಡರುಗಳಿಗೆ ತಿಳಿಯದೇ ಇರುವ ಬಡತನ
ಯಾರ ಜವಾಬ್ದಾರಿಯಿಲ್ಲದ ಬಡತನ
ಸರ್ಕಾರದ ಜವಾಬ್ದಾರಿಯಿಲ್ಲದ ಬಡತನ

ಮಾನವನ ಬಂಧುವಾಗಿ ಜವಾಬ್ದಾರಿಯಿಲ್ಲದ ಬಡತನ
ಬಡವ ತಾನು ಬಡವನೆಂದು ತಾನೇ ಅರಿಯದ ಬಡತನ
ನಿಂದನೆಗೆ ಬರುವ ವಿಚಾರ ಬಗೆಹರಿಸದೇ ಇರುವ ಬಡತನ
ದೇವರು ಸಹಾಯ ಮಾಡೋಣವೆಂದರೆ
ಯಾರ ಮನಸ್ಸಲ್ಲೂ ಇಲ್ಲದ ಬಡತನ!

ಬೇಡದೇ ಇರುವುದನ್ನು ದೇವರು ಕೊಡದೆ
ಕೊನೆಯಿರದೆ ಭೂತಾಕಾರವ ತಾಳುತ್ತಿದೆ
ಜನರ ಮನೋ ಎಚ್ಚರದ ಅಭಾವದಿಂದ
ಕಷ್ಟಗಳಿಗೆ ಒಳಗಾಗಿರುವವರ ಬರಿ ಹೊರಗಿರುವುದನ್ನೇ ನೋಡುತ
ಜವಾಬ್ದಾರಿ ಎಂಬ ಹೊಣೆ ನಮ್ಮದೆಂಬ ಚಿಂತನೆ ಮಾಡದೆ
ಕಂಡೂ ಕಾಣದೆ ಉರಿಯುತ್ತಿರುವ ಬಡತನ
ಉರಿಯುತ್ತಲೇ ಇದೆ ಬೆಳೆಯುತ್ತಲೇ ಇದೆ!

**- ಶ್ರೀ ಹರಿ.**

08-11-2012



www.sriharikhoday.com

# 363

ಪ್ರಯತ್ನವಿಲ್ಲದೆ ಸಾಧನೆಯಾಗದು
ಪ್ರೀತಿ ಇಚ್ಛೆಗಳೇ ಪ್ರಯತ್ನಗಳ ಬುನಾದಿ
ಅತಿ ದೊಡ್ಡ ರಾಷ್ಟ್ರೀಯಗಳ ಇರುವಿಕೆ
ಜನಗಳ ಬಡತನ ಸಿರಿತನದ ಕಷ್ಟ ಸುಖಗಳ ಸಂಚು!

ಈ ದಿನದ ರಾಜಕೀಯ ವ್ಯವಸ್ಥೆಯಲ್ಲಿ
ಅತಿ ಅವಶ್ಯಕ ವಸ್ತು ಬಡತನ
ಬಾಯಿಲ್ಲದ ಬಡತನ
ರಾಜಕೀಯ ವ್ಯವಸ್ಥೆಗಳನ್ನು ರೂಪಿಸುತ್ತಿದೆ!

ಪ್ರಜೆಗಳಲ್ಲಿ ಅನುಮಾನ ತುಂಬುವುದೇ ರಾಜಕೀಯ ವ್ಯವಸ್ಥೆ
ಪ್ರಜೆಗಳ ಅನುಮಾನಗಳಿಗೆ ಉತ್ತರ ಸಿಗದೆ
ರಾಶಿ ರಾಶಿ ಅನುಮಾಗಳನ್ನು ತುಂಬುತ್ತ
ಕಷ್ಟಗಳಿಗೆ ರಾಜಕೀಯ ವ್ಯವಸ್ಥೆಯ ಅರಿವು ಬರದೆ

ಇವರ ಮೇಲೆ ಅವರಿಗೆ ಅನುಮಾನ
ಅವರ ಮೇಲೆ ಇವರಿಗೆ ಅನುಮಾನ
ರಾಜಕಾರಣಿಗಳು ಬೆಳಕಲ್ಲೇ ನಮಗೆ ಕತ್ತಲು
ಎಂದು ನಮಗೆ ಸೂಚಿಸುತ್ತಿರುವರು!

ಬಡತನದ ಕಷ್ಟಗಳು ಕೆಲವರಿಗೆ ಮಾತ್ರ ಸುಖ ತರಿಸುತ್ತಿದೆ
ಬಾಯಿಲ್ಲದ ಬಡತನ ಕಷ್ಟಗಳನ್ನು ತಿಳಿಸಲು
ಬಾಯಿಲ್ಲದೆ ಸನ್ನೆಯ ಮೂಲಕ ತಿಳಿಸುತ

ಉಡಲು ಉಡುಪಿಲ್ಲದೆ ಹರಕಲು ಬಟ್ಟೆ
ಕೂಳಿಲ್ಲದೆ ಎಲ್ಲರಿಗೂ ಹಸಿದ ಹೊಟ್ಟೆಯ ಪ್ರದರ್ಶನ
ತಮಗೆ ಸುಖವಿಲ್ಲ ಎಂದು ತೋರಿಸುವ ಗಡ್ಡಗಳು
ಮಾನಕ್ಕಾಗಿ ಮಾತ್ರ ಉಡುತ್ತಿರುವ ಸೀರೆಗಳು

ದೇವರು ಕೊಟ್ಟಿರುವ ಕೈಗಳು ಬೇಡಿಕೆಯ ಕೈಯಾಗಿ
ಹೆಚ್ಚಾಗಿರುವ ಕಷ್ಟಗಳನ್ನು ಹೇಳಿಕೊಳ್ಳಲಾಗದೆ
ಧಾರೆ ಧಾರೆ ಕಣ್ಣೀರು ಹರಿಸಿ
ಕಷ್ಟಗಳ ಮೌನ ಪ್ರದರ್ಶನ ಮಾಡುತ್ತಿದ್ದಾರೆ!

ಸುಲಭದಲ್ಲಿರುವ ಈ ಬಡತನದ ಕೆಲಸವನ್ನು ಅಗಾಧ
ರೂಪವಾಗಿ ನಿಲ್ಲಿಸಿ
ಸಮಾಜದ ಮುಖಂಡರು ಬಡತನದ ಮೇಲೆ
ಈ ಭೂಲೋಕವನ್ನೇ ಬಾಯಿ ತೆರೆಸದೆ ಮೂಕವಾಗಿಸಿಬಿಟ್ಟಿದ್ದಾರೆ!

**- ಶ್ರೀ ಹರಿ.**

09-11-2012



www.sriharikhoday.com

## 364

ಬೆಳಕಿನ ಬಲೆಯಲ್ಲಿ
ಬೇಡಿಕೆಗಳ ಜನುಮ
ಅಲೆ ಅಲೆಗಳಂತೆ ಬಾ ಬಾ ಎಂದು
ಕೂಗುತ್ತಿರುವ ಪ್ರೀತಿಯ ಬಣ್ಣಗಳು

ಆಕಾಶ ನೋಡುತ್ತ ಮೋಡಗಳಿಗೆ ಕರೆ
ದಾಹಕ್ಕೆ ನೀರಿಗೆ ಕರೆ
ಹಸಿವಿಗೆ ಊಟದ ಕರೆ
ತನ್ನ ರೂಪ ನೋಡಿಕೊಳ್ಳುವುದಕ್ಕೆ ಕನ್ನಡಿಯ ಕರೆ!

ಸುಖಕ್ಕೆ ಸ್ನೇಹಿತನ ಕರೆ
ದುಡಿಮೆಗೆ ಕೆಲಸಕ್ಕೆ ಕರೆ
ಬಂಜರು ಭೂಮಿಗೆ ರೈತನ ಕರೆ
ರೂಪವು ಪ್ರೇಯಸಿಗೆ ಕರೆ

ಋತುಗಳು ಹಣ್ಣಿನ ಬೆಳೆಗೆ ಕರೆ
ಕಣ್ಣುಗಳು ಹೂವಿನ ಬಣ್ಣಗಳಿಗೆ ಕರೆ
ಬಡತನ ದಾನಿಗೆ ಕರೆ
ಗುರು ಶಿಷ್ಯನಿಗೆ ಕರೆ

ಮನೋ ಉಲ್ಲಾಸಕ್ಕೆ ಸಂಗೀತದ ಕರೆ
ವಿರಹ ತನ್ನವಳ ಬರುವಿಕೆಯ ಕರೆ

ನಿದ್ರೆ ಸುಸ್ವಪ್ನಗಳಿಗೆ ಕರೆ
ದಿಗಂತಗಳು ನಾಳಿನ ಸೂರ್ಯೋದಯಕ್ಕೆ ಕರೆ

ಕರೆ ಬೇಡಿಕೆ ಅಪೇಕ್ಷೆ ಬೇಕು ಬೇಡಗಳು
ತನ್ನ ಬಳಿ ತರಿಸಿಕೊಳ್ಳುವುದು ಸೃಷ್ಟಿಯ ಕರೆ
ಕಷ್ಟದಲ್ಲಿ ದೇವರ ಕರೆ
ಕರೆಯು ಒಂದು ಮನದ ಭಾವನೆ

ಅದು ಎಂದೂ ಖಾಲಿಯಾಗದೆ
ಅದರ ತುಂಬುತನ ಎಂದೂ ಮುಗಿಯದೆ
ತೃಪ್ತಿಯಿಂದ ತುಂಬಿಕೊಳ್ಳಲು ಸದ್ದೇ ಇಲ್ಲದ ಮನೋಕರೆ
ವಿಶ್ವದ ಬೆಳವಣಿಗೆಗೆ ಅತಿ ದೊಡ್ಡದಾದ ಬುನಾದಿ!

**- ಶ್ರೀ ಹರಿ.**

10-11-2012



# 365.

ಇಂದೊಂದು ಸರಿ ಎಂದು ಕೆಲಸ ಮಾಡುವುದೇ ಬೆಳಕು
ಹೆದರಿಕೆಯಿಂದ ಕೆಲಸ ಮಾಡುವುದೇ ಕತ್ತಲು
ನಾನು ಇಂದಿನ ಕೆಲಸ ಮಾಡಬಲ್ಲೆ
ಹೆಚ್ಚು ಕೆಲಸ ಮಾಡಬಲ್ಲೆ ಎನ್ನುವುದೇ ಬಯಲು
ಇಂದು ಕೆಲಸ ಮಾಡಿರುವೆ ಎನ್ನುವುದೇ ಆಕಾಶ

ನಾನು ಮಾಡಿದ ಕೆಲಸಗಳು ಅನೇಕರಿಗೆ ಅನುಕೂಲವಾಗಿ
ಅವರುಗಳು ಸುಖ ಸಂತಸಪಡುತ್ತಿದ್ದಾರೆ ಎನ್ನುವುದೇ ಸ್ವರ್ಗ
ನಾನು ಮಾಡಿದ ಕೆಲಸ ಸರಿಯಲ್ಲ
ಒತ್ತಡಕ್ಕೆ ಮಾಡಿರುವೆ ಎಂದು ಕಷ್ಟಗಳ ಅನುಭವಿಸುವುದೇ ನರಕ

ಯಾರ ಕಣ್ಣಿಗೂ ಕಾಣದೆ ಬೇರೆಯವರಿಗೂ ತಿಳಿಸದೆ
ಸುಖ ಕೊಡುವುದೇ ಪುಣ್ಯ
ಎಲ್ಲರ ಕಣ್ಣಿಗೆ ಕಾಣುವಂತೆ ಹೆದರಿಕೆಯಿಲ್ಲದೆ
ತಪ್ಪು ಮಾಡುವುದೇ ಪಾಪ

ಮಾತನಾಡದೆ ಎರಡು ಮನಗಳು ಮಾತನಾಡುತ್ತಿದ್ದರೆ
ಅದು ಬಣ್ಣ ಬಣ್ಣಗಳ ಮಿನುಗು
ಒಳ್ಳೆ ಕೆಲಸ ಮಾಡಿ ಮರೆಯುವುದೇ ದೂರ

ಕೆಲಸ ಮಾಡದೆ ಮಾಡುವೆ ಮಾಡುವೆನೆಂದು ಮಾಡದಿರುವುದು ಹತ್ತಿರ
ಎಷ್ಟು ಕೆಲಸ ಮಾಡಿದರೂ ನಾನು ಏನೂ ಮಾಡಲಿಲ್ಲ
ಎಂದು ಹೇಳುವುದೇ ಸೂರ್ಯ
ಸಾಧನೆಯನ್ನು ಸಾಧಿಸಿದ ಮೇಲೆ ಸಾಧನೆಗಳು ಆಯಿತು
ಎಂದು ಚಾಪೆಯ ಮೇಲಿನ ಸುಖನಿದ್ರೆ ಚಂದಿರ



www.sriharikhoday.com

ಇದು ಮಾಡಬೇಕು ಅದು ಮಾಡಬೇಕು
ಎಂಬುವ ಆಸೆಗಳು ಮಿನುಗುವ ನಕ್ಷತ್ರಗಳು
ಎಲ್ಲಾ ಕಾರ್ಯಗಳಿಗೆ ದಾರಿದೀಪದ ಬೆಳಕು
ಶ್ರೀ ಶ್ರೀ ಶ್ರೀ ಗುರುಗಳು

ಎಷ್ಟೇ ಕಷ್ಟ ಬಂದರೂ ಎಷ್ಟೇ ಸುಖ ಬಂದರೂ
ಮಾತನಾಡದೆ ಜೊತೆಯಿರುವವರು ದೇವರು
ಯಾವ ತಪ್ಪು ಮಾಡಿದರೂ ನಾನೇ ತಪ್ಪು ಮಾಡಿದೆನೆಂದು
ಮಾತನ್ನಾಡಿಸುವುದು ತಾಯಿಯ ಕರಳು
ನನ್ನವರಂತೆ ಆಗಬೇಕು ನನ್ನನ್ನು ಮೀರಬೇಕು
ಎಂಬ ಮನೋಭಾವನೆ ತಂದೆ

ಕಷ್ಟ ಸುಖಗಳು ಬಂದರೆ ನನ್ನದು ಎನ್ನದೆ ನಮಗೆ ಬಂದಿದೆ
ಎನ್ನುವರು ಅಣ್ಣ-ತಮ್ಮಂದಿರು
ನನ್ನವನು ಹೀಗೆ ನನ್ನವನು ಹಾಗೆ
ನನ್ನವಳು ಬೆಳೆಯುವ ತಾರೆ ಎನ್ನುವುದು ಗೆಳೆತನ
ಅವರ ಉಸಿರು ನಿಟ್ಟುಸಿರು ಅವರ ಜೀವ
ಅವರದೆಲ್ಲವೂ ನನ್ನದೆಂದು ಹೇಳುವುದು ಧರ್ಮಪತ್ನಿ
ನಾನು ಯಾರೆಂದು ತಿಳಿಯದೆ ನನ್ನನ್ನು ಪ್ರೀತಿಸುತ್ತಿರುವವರು
ತೋಳಿಗೆ ಬರದ ಪ್ರೇಯಸಿ
ಅವರು ಹೇಗೆ ಇವರು ನಮ್ಮವರು ನಮ್ಮ ಜೊತೆ ಎನ್ನುವರು
ಜೊತೆ ಕೆಲಸ ಮಾಡುವ ಸಹಪಾಠಿಗಳು
ಒಂದರ ಹಿಂದೆ ಮುಂದು ಮುಂದಿನ ಹಿಂದೆ ಮುಂದು
ಅದು ಹೀಗೆ ಅದು ಹಾಗೆ ಎಂದು ಹರಡುವಿಕೆ ಗಾಳಿಮಾತು

ನನ್ನನ್ನು ನಂಬವವರಿಗೆ ಇದು ಮಾಡಬೇಕು
ಹೇಳಿರುವ ಮಾತುಗಳನ್ನೆಲ್ಲಾ ನಾನು ಜೀವನದಲ್ಲಿ ಮುಗಿಸಬೇಕು
ಎಂಬ ಭಾವನೆ ಪಾವನ

**- ಶ್ರೀ ಹರಿ.**



www.sriharikhoday.com

## 366

ಕಾಡು ಪ್ರಾಣಿಗಳಿಗೆ ಹೆದರಿಕೆ ಅಂದು
ಜೊತೆಯಿರುವವರಿಂದಲೇ ಹೆದರಿಕೆ ಇಂದು!

ಆದಿಯಿಂದಲೂ ಬಡತನ ಸಿರಿತನ ಅಂದು ಇಂದು
ಬಡತನ ಕಷ್ಟಗಳು ಇದ್ದರು ಸಹನೆ ತುಂಬಿಕೊಂಡು ಜೀವಿಸಿದ್ದರು ಅಂದು
ಬಡತನ ಒಂದು ಸಮಾಜದ ಕೀಳು ದೃಷ್ಟಿಯಿಂದ
ಕಾಣುತ್ತಿರುವ ಸಮಾಜವಾಗಿದೆ ಇಂದು!

ಬಂಜರು ಎಂದು ಹೇಳುವ ರಾಜಕಾರಣಿಗಳು
ಬಂಜರು ಎಂದು ಹೇಳಲು ಜಮೀನುಗಳೇ ಇಲ್ಲದೇ
ಬಂಜರು ಮಾಡಿರುವ ಬಡತನವನ್ನು
ಫಲವತ್ತಾದ ಭೂಮಿಯನ್ನು ಕೃಷಿ ಮಾಡದೆ
ಬಂಜರು ಎಂದು ಹೇಳುತ್ತಿರುವರು ಇಂದು!

ಭೂತ - ಭವಿಷ್ಯ -ವರ್ತಮಾನಗಳ ತಿಳಿದು ಅರಿತಿದ್ದ ರಾಜಕೀಯ ವ್ಯವಸ್ಥೆ ಅಂದು
ಭೂತ ಭವಿಷ್ಯ ವರ್ತಮಾನಗಳ ಅರ್ಥ ತಿಳಿಯದ ರಾಜಕೀಯ ಅವ್ಯವಸ್ಥೆ ಇಂದು
ಇರುವೆಗೂ-ಆನೆಗೂ ಗಾತ್ರ ತಿಳಿದ ಸಮಾಜ ಅಂದು
ಇರುವೆ ಆನೆಯನ್ನು ನುಂಗಿತು ಎಂದು ಹೇಳಿ ನಂಬಿಸುವ ಸಮಾಜ ಇಂದು!

ಎಲ್ಲವನ್ನೂ ಹಂಚಿಕೊಂಡು ಜೀವಿಸಿ ಸುಖಪಟ್ಟ ಪ್ರಜೆಗಳ ಸಮಾಜ ಅಂದು
ದಿಗಂತಗಳನ್ನು ಹಂಚಿಕೊಂಡು ಜಗಳವಾಡುತ್ತಿರುವವರು ಇಂದು
ವಿವೇಕ ಜೀವನದ ಹಾದಿಯಾಗಿತ್ತು ಅಂದು
ವಿವೇಕದ ಅರ್ಥ ತಿಳಿಯದ ಜಂಭದಿಂದ ಮೆರೆಯುತ್ತಿರುವ
ಸಮಾಜ ಮುಖಂಡರು ಇಂದು!

ರಸ ತುಂಬಿಕೊಂಡ ತೃಪ್ತಿಯ ಜೀವನ ಅಂದು
ರಸದ ಅರ್ಥ ತಿಳಿಯದೆ ತೃಪ್ತಿಯನ್ನೇ ಕಳೆದುಕೊಂಡು
ಜೀವನದ ಅರ್ಥವೇ ತಿಳಿಯದೆ ಕತ್ತಲ ಕೋಣೆಯಲ್ಲಿ ಕಣ್ಣೀರು ಸುರಿಸುತ್ತ
ದಿಕ್ಕು-ದೆಸೆ ತಿಳಿಯದೆ ಮುಂದಿನ ಭವಿಷ್ಯವೇ ಕಾಣದೆ
ಭಯಪಡುತ್ತ ಜೀವಿಸಲು ಅಂಜುತ್ತ

ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರು ಸಮಾಜದಲ್ಲಿ ಜೀವಿಸಲು ಇಚ್ಛೆಪಡದೆ
ದುಃಖದಿಂದ ದೂರವಾಗಲು ಜಗವನ್ನೇ ಅಗಲಿ ಹೋಗುತ್ತಿರುವರು
ಈ ಪರಿಸ್ಥಿತಿಯಲ್ಲಿ ಹೊಸ ಪ್ರಜ್ಞೆಯಿಂದ
ಈಗಿರುವ ನಾಯಕರನ್ನೆಲ್ಲಾ ಮರೆತು
ಹೊಸ ನಾಯಕರನ್ನು ಆರಿಸಲು ಕಾಲ ಕಾಯುತ್ತಿದೆ ಇಂದು!

**- ಶ್ರೀ ಹರಿ.**

13-11-2012



www.sriharikhoday.com

# 367

ಕವಿತೆ ಒಂದು ಜೀವಿಸುವ ವಸ್ತು
ಸಾವಿಲ್ಲದ ಮೈಲುಗಲ್ಲು
ತುಂಬುತನದ ಗರ್ಭದಿ ತಾಯಿಯಂತೆ
ಕವಿಗೆ ಮಾತ್ರ ತಿಳಿದಿದೆ ಗರ್ಭದಿ ತಾಯಿಯಂತೆ
ಕವಿಗೆ ಮಾತ್ರ ತಿಳಿದಿದೆ ಗರ್ಭದ ಕಷ್ಟ

ಜನ್ಮ ಪಡೆಯುತ್ತಲೇ ಕವಿತೆಗಳು ಅಳುತ್ತಾ ಕೂಗುತ್ತಿವೆ
ನನ್ನನ್ನು ಈ ಜಗದಲ್ಲಿ ಯಾರು ನೋಡಿಕೊಳ್ಳುವರು
ನನ್ನನ್ನು ಯಾರು ಸಲಹುವರು
ನಾನೇಕೆ ಜನ್ಮ ಪಡೆದೆನೆಂದು ತಿಳಿಯದೆ
ಓದುಗರ ತಾಯ್ತನದ ಆಸರೆ
ಕವನಗಳಿಗೆ ಆಶ್ರಯ ಅನುಭವ

ಕವಿತೆ ಕವಿಯಾಗಿ ಕವಿಯು ಕವಿತೆಯಾಗಿ
ಒಬ್ಬೊಬ್ಬರ ಬೆಳಕು ಸಿಡಿಲಾಗಿ
ಜಗಕ್ಕೆ ಒಂದು ಹೊಸ ದಾರಿ ತೋರುತ
ಯುಗ ಯುಗಗಳ ಕವಿತೆಯ ನೆನಪುಗಳು
ಅರ್ಥಗರ್ಭಿತ ಹರುಷಗಳು

ಕೆಲಸಮಯ ಕಣ್ಣೀರು ಸುರಿಸುತ
ಅನೇಕಾನೇಕ ಅನಿಸಿಕೆಗಳು
ನನಸಾಗುವ ಭರವಸೆ ನೀಡುತ್ತ
ಕವನವನ್ನು ಹಡೆದ ಕವಿ

ತಾಯ್ತನವನ್ನು ಮತ್ತೆ ಮತ್ತೆ ಬಯಸುತ
ವಿಶ್ವಕ್ಕೆ ದಾರಿ ತೋರಿಸುತ್ತಿರುವವ

ಕೂಸುಗಳ ಬೆಳೆಸಬೇಕೆಂಬ ಕವಿಯ ಮನ
ವಿಶ್ವದ ಕಷ್ಟಗಳಿಗೆ ಭಾಗಿಯಾಗುವ ವಿಶ್ವವನ್ನೆ ಪ್ರೀತಿಸುವ
ಪ್ರಕಾಶಿಸಿ ತಾರೆಯಂತೆ ಮಿನುಗುವ
ಕೂಸಾಗಬೇಕೆಂಬ ಕವಿಯ ಮನ
ತಾಯ್ತನದ ಕಲ್ಪನೆ

ಹೊಸ ಹೊಸ ಗರ್ಭಧಾರಣೆಗಳು
ವಿಶ್ವಕ್ಕೆ ಚೇತನ ನೀಡುವ ಕಂಬಗಳಾಗಿ
ಬೆಳೆದು ನಿಲ್ಲಲಿ ಎಂಬ ಆಸೆ
ಹೊಸ ಹೊಸ ಕವನಗಳು ಬೆಳಕಿಗೆ ಬರಲು
ಕವಿಯ ಗರ್ಭಧಾರಣೆಗೆ ಕಾಯುತ್ತಿವೆ

ಬೆಳಕಿನಿಂದ ಸೂರ್ಯನೊ ಸೂರ್ಯನಿಂದ ಬೆಳಕೋ
ಮೈಲುಗಲ್ಲುಗಳನ್ನೇ ನೋಡದೆ
ದಿಟ್ಟತನದಿಂದ ಓಡುತ್ತಿರುವ ಕವಿಯ
ಮನದ ರಭಸ ವಿಶ್ವವನ್ನೇ ಆವರಿಸುತ
ಕಲ್ಲುಬಂಡೆಗಳ ಮೇಲೆ ಹೂತೋಟವನ್ನೇ ಬೆಳೆಸುವ ಅನಿಸಿಕೆ

ಕವಿತೆ ಒಂದು ಜೀವಂತ ವಸ್ತು
ಸಾವಿಲ್ಲದ ಅರ್ಥಸೂಚಿಸುವ ಮೈಲುಗಲ್ಲು

**ಶ್ರೀ ಹರಿ.**

15-11-2012



## 368

ಬಯಕೆಗಳ ಹೆಚ್ಚಳ
ಬದುಕಿನ ಮೇಲೆ ಕಷ್ಟಗಳ ಛಾಯೆ ಹಾಸುತ
ಮಾನ- ಅವಮಾನಗಳ ಹೂವಾಗಿರುವ ಮುಳ್ಳುಗಳ ಬೆಳೆಸಿ
ಅಗತ್ಯವಿಲ್ಲದ ಬಡತನ ಹೊಸ್ತಿಲಿಗೆ ತರಿಸಿ
ಎಲ್ಲವನ್ನೂ ಬೇಡಿ ಜೀವಿಸುವ ಪರಿಸರ
ಈ ಗತಿಗೆ ಇಳಿಸಿರುವುದು
ನಮ್ಮನ್ನಾಳುತ್ತಿರುವ ರಾಜಕೀಯ ವ್ಯವಸ್ಥೆ

ವಿಶ್ವದಲ್ಲಿ ಬೆಳೆದರೆ ತೃಪ್ತಿ ಬಂದಂತೆ
ಬೆಳೆದು ದೊಡ್ಡದಾದರೆ ಹರ್ಷ ತರುವ ಸುದ್ದಿ
ಆಕಾಶದಿಂದ ಬೇಕಿರುವ ಜಾಗದಲ್ಲಿ ಮಳೆ ಸುರಿದರೆ
ಎಲ್ಲರ ಕಣಜದಲ್ಲಿ ಆನಂದ ತುಂಬಿ
ಕಾಳು ಹೊರಹೊಮ್ಮುತ್ತಿವೆ

ತುಂಬುತನಕ್ಕೆ ಕಷ್ಟಗಳೇ ಇರುವುದಿಲ್ಲ ಎಂಬ
ಜಗತ್ತಿನ ನಿಯಮ
ಮಾನವ ತಾನಾಗಿ ಬೆಳೆಸಿಕೊಂಡಿರುವ ಜೀವನ ನೀತಿ
ಬೇಡದೇ ಇರುವಂತಹವರ ಎದುರಿಗೆ
ಕೈ ಜೋಡಿಸಿ ಬೇಡಿಸುತ್ತಿದೆ

ಬೆಳೆದ ಬೆಳೆ ಕಣಜಕ್ಕೆ ಸೇರದಿದ್ದರೆ
ಹಂತ ಹಂತಗಳಲ್ಲಿ ಬೆಳೆಯುತ್ತಿರುವ ತೊಂದರೆಗಳು



www.sriharikhoday.com

ಬೇಲಿಯೇ ಹೊಲ ಮೇಯುವಂತಹ ರಾಜಕಾರಣಿಗಳು
ಸಾಮ್ರಾಜ್ಯದ ಬೇಡಿಕೆಗಳು ಎಲ್ಲವನ್ನೂ ಬಡವರನ್ನಾಗಿ ಮಾಡಿ
ಜೀವನದ ಪ್ರತಿ ಹೆಜ್ಜೆ ಹೆಜ್ಜೆಗಳಲ್ಲಿ ಬೇಡಿಕೆಗಳ ಹೆಚ್ಚಳ

ಅಭಾವದ ವಾತಾವರಣದ ಜನ್ಮತಾಳಿ
ಕುಡಿಯುವ ನೀರಿಗೂ ಕಷ್ಟ
ಒಂದು ಶರೀರದ ಉದ್ದಳತೆಯ ನೆರಳಿಗೂ ಕಷ್ಟ
ಹಸಿದ ಹೊಟ್ಟೆಯ ನೋವಿಗೆ ಊಟಕ್ಕೆ ಕಷ್ಟ
ನಂಬಿದರೂ ಕಷ್ಟ ನಂಬದೆ ಇದ್ದರೂ ಕಷ್ಟ
ಉಳಲು ನೆಲದ ಮೇಲೆ ಸಾಲದ ಕಷ್ಟ
ಕಟ್ಟಿಗೆಗೂ ಕಷ್ಟ

ಬೇಲಿಯು ಹೊಲವನ್ನು ತಿನ್ನುವುದ ನಿಲ್ಲಿಸದಿದ್ದರೆ
ನಾವು ಹೊಸ ಬೇಲಿಯನ್ನು ಹಾಕಿಕೊಂಡರೆ
ನಮ್ಮಲ್ಲಿ ನೆಮ್ಮದಿ ಉದ್ಭವವಾಗಿ
ಕಣಜಗಳಿಗೆ ತೃಪ್ತಿಯಿಂದ ಕಾಳು ಕಾಳಾಗಿ
ತೃಪ್ತಿ ಹೊರಚೆಲ್ಲುತ್ತದೆ.

**- ಶ್ರೀ ಹರಿ.**

15-11-2012



# 369

ಪ್ರೀತಿಸುವ ಮನವೇ,
ಕೆನ್ನೆಯ ಕೆಂಪೇರಿಸುವುದೇತಕೆ?

ಪ್ರೀತಿಸುವ ಮನವೇ,
ಜಿಂಕೆಗಳ ಕಣ್ಣುಗಳಲ್ಲಿ ಪ್ರತಿಬಿಂಬಿಸಿ ನೋಡುವ ಆಸೆ ಏಕೆ?

ಪ್ರೀತಿಸುವ ಮನವೇ,
ಸಾಗರದ ತುಟಿಗಳ ಸ್ಪರ್ಶ ಆಸೆಗಳೇಕೆ?

ಪ್ರೀತಿಸುವ ಮನವೇ,
ನನ್ನ ಹತ್ತಿರ ಬಂದ ಮೇಲೆ ಇಚ್ಛೆಗಳ ಹೆದರಿಕೆ ಏಕೆ?

ನಮ್ಮಿಬ್ಬರ ಬೆರಕೆ ಕಳೆದುಹೋದ ಜನುಮಗಳ ಬೆರಕೆ
ಬೆರೆತಿರುವ ನಮ್ಮ ಪ್ರೀತಿಯ ಬೆರೆಕೆಗೆ ಲಜ್ಜೆಯ ಹತ್ತಿರ ಏಕೆ?

ಬಯಕೆಗಳ ಕುದುರೆಗಳು ಹುಚ್ಚೆದ್ದು ಓಡುತಿದೆ
ಪ್ರೀತಿಯ ಚದುರಂಗದಲ್ಲಿ ಕ್ಷಣದ ಸುಖದಲ್ಲಿ
ಇವುಗಳ ಸುಖ ನೀಡುವ ಶಕ್ತಿಯು ತುಂಬಿಕೊಂಡಿದೆ

ಪ್ರೀತಿಸುತ್ತಿರುವ ಯಜ್ಞದಲ್ಲಿ ದೂರ ದೂರಗಳು ಭಸ್ಮವಾಗಿವೆ
ನಿನ್ನ ಜೊತೆ ಹಗುರಾಗಿಸಿರುವ ನಿಶೆಯ ಬಟ್ಟಲು ಕನಸುಗಳ ಮರೆಸಿ
ನನಸುಗಳ ಜೊತೆ ಆಟ



www.sriharikhoday.com

ನನ್ನ ಜೊತೆ ಅವನೂ ಸೇರಿ
ಅವನು ರೂಪಿಸಿರುವ ಗುಲಾಬಿಯ ಅತ್ತರು
ದೀರ್ಘ ಚುಂಬನದಲ್ಲಿ ಕಾಲ ಗತಿಗಳನ್ನೇ ಕಳೆದುಕೊಂಡಿದೆ

ನಾವಿಬ್ಬರೂ ಯಾರಿಗೂ ಕಾಣದ ದಿಗಂತದಾಚೆಗೆ ಹೋಗಿ
ನಮ್ಮ ಜೊತೆ ನನ್ನ ಉಸಿರು-ನಿಟ್ಟುಸಿರು
ನಿನ್ನ ಜೊತೆಗೆ ಸ್ನೇಹಿತನಾಗಿರುವ ಅವನನ್ನು ಅವಳಾದ ಅವಳನ್ನು

ನಾನು ಅನುಭವಿಸುತ್ತಿರುವ ಮಹಾನ್ ಶಕ್ತಿಯ
ಜೊತೆಗೆ ಬಾಳಿ ಕೊನೆಯಿಲ್ಲದ ಬೆಳಕಿನ ಜೊತೆಗೆ
ಸೇರಿ ಬಾಳು ಉರಿಯುತ್ತಿದೆ

**- ಶ್ರೀ ಹರಿ.**

16-11-2012



www.sriharikhoday.com

## 370.

ಎಳೆ ಎಳೆಯಾಗಿ ಕಾಣದ ಉಡುಪಾಗಿ
ಈ ಭೂಮಿ ವಿಶ್ವಕ್ಕೆ ಮಾನ ಕಾಪಾಡುತ್ತಿರುವ ನಿರಾಳವೇ!

ನಿನ್ನನ್ನು ಶೂನ್ಯ ಜೊತೆಗೂಡಿಸಲು ಯಾರಿಗೂ ಗೋಚರಿಸದೆ
ಸೃಷ್ಟಿಯ ಕಟ್ಟಲು ಅರಿವು ನೀಡಿದ
ಎಲ್ಲ ಹೊಸತನಕ್ಕೆ ನಿನ್ನ ಭೂಮಿಕೆಯ ಮೇಲೆ ಬೆಳೆಸಿ
ಶೂನ್ಯಕ್ಕೆ ಸೃಷ್ಟಿಸುವ ಭಾವನೆ ನೀಡಿದ ನಿರಾಳವೇ

ವಿಶ್ವ ಬುದ್ಧಿ ಅರಿವಿನ ಮೊದಲ ಹೊಳಪೇ
ನಿನ್ನ ಸೃಷ್ಟಿಯ ಕೊನೆಗಳಿಲ್ಲದ ಗಡಿಗಳಿಂದ
ಮೊದಲು ಕೊನೆಗಳಿಗೆ ಮರೆಸುವ ಕ್ರಿಯೆಗಳ ಸಾಟಿಯಾಗಿ
ಕಲ್ಮಶವನ್ನು ಹೊರ ತೇಲಿಸಿ

ಕೆಟ್ಟ ಭಾವನೆಗಳನ್ನು ಗಾಳಿಯಾಗಿ ಆರಿಸಿ
ಎಲ್ಲಾ ತರಂಗಗಳಿಗೆ ಶಕ್ತಿ ನೀಡಿ
ಆಗದೇ ಇರುವುದಕ್ಕೆಲ್ಲಾ ಆಯಿತು ಎಂಬ ಸ್ಥೈರ್ಯ
ದೂರ ಹತ್ತಿರಗಳ ಒಂದು ಮಾಡಬಲ್ಲ ನಿರಾಳವೇ

ನಿನ್ನ ಆಳವನ್ನು ನೀನೇ ಅರಿಯದೆ
ಸೃಷ್ಟಿಕರ್ತನಿಗೆ ಅರಿವು ಮೂಡಿಸುತ
ಬುದ್ಧಿವಂತಿಕೆಯ ಕ್ರಿಯೆಗಳಿಗೆ ಹಾಸುವ ರಸ್ತೆಗಳ ಮೂಲವೇ
ಶೂನ್ಯ ಕರಗಿದರೂ ನೀ ಇಲ್ಲದೆ

ಮತ್ತೆ ಮತ್ತೆ ಶೂನ್ಯಕ್ಕೆ ಚೇತನವಿಲ್ಲದೆ
ನನ್ನ ಜೊತೆ ಇರುವ ನಿನಗೆ ಹೇಗೆ ನಮಿಸಲಿ?

ನಿನ್ನ ಜೊತೆ ಈ ಜೀವಕ್ಕೆ ಅಗಾಧ ಶಕ್ತಿ ನೀಡಿ
ನನ್ನ ಆಗು-ಹೋಗುಗಳಲ್ಲಿ ಇರುವ ತೃಪ್ತಿಯ
ತೃಪ್ತಿಯ ಜೊತೆ ನಾ ನಿನ್ನನ್ನು ಅನುಭವಿಸಿ
ಜಗತ್ತಿನ ಕಷ್ಟಗಳನ್ನೆಲ್ಲಾ ತೇಲಿಸಲು
ನಿನ್ನ ಹೊಳಪಿನ ಮಿನುಗು
ನನಗೆ ತೋರಿಸು ಹೇ ನಿರಾಳವೇ

**- ಶ್ರೀ ಹರಿ.**

17-11-2012



# 371

ಕಾಣದ ದಿಗಂತದ ಆಚೆಯಿಂದ
ನಿನ್ನ ಜೊತೆ ನನಗಾಗಿರುವ ನನ್ನ ಅನುಭವ
ಬರಡು ನೆಲದಲ್ಲಿ ಚೈತನ್ಯ ಹರಿಸಿ ಬೆಳೆಸಿದಂತೆ!

ಪ್ರಕೃತಿಯ ಮಹಾ ಸೃಷ್ಟಿಕರ್ತನೇ
ದೆಸೆಗಳ ನೆರಳು ತೋರಿಸಿದ ದಿವ್ಯ ಪ್ರಜ್ಞೆಯೇ
ಪರಿಪೂರ್ಣವಾದ ಸತ್ಯವ ಹರಿಸಿದವನಿಗೆ
ನಿನ್ನನ್ನು ಎಂದಿಗೂ ನೆನೆಸಿಕೊಂಡು ಜೊತೆಗಿರುವುದು
ಬೆರೆತು ಬೆಸೆತು ಒಂದಾದ ಅರಿವು ನಮ್ಮಿಬ್ಬರದು!

ನಾ ಮಾಡಿದ ಕ್ರಿಯೆ ನೀ ಮಾಡಿದಂತೆ
ನನ್ನಲ್ಲಿ ಹರಿಯುತ್ತಿರುವ ರಸಿಕತೆ ನೀ ಹರಿಸಿದಂತೆ
ಕಾಣುವ ಸತ್ಯವನ್ನು ರಹಸ್ಯವಾಗಿ ಮಾಡಿರುವುದು
ಕೀಳಾದ ದುರಾಚಾರದ ಮನವುಳ್ಳ ಪ್ರಜೆಗಳ ಆಟಗಳು
ನಿನ್ನ ಪ್ರೀತಿಯ ಅಮೃತಪಾನ ನನ್ನ ತನವನ್ನು ಮರೆಸಿ

ಪ್ರೀತಿಯಲ್ಲಿ ತುಂಬಿಕೊಂಡಿರುವ ಮಾಣಿಕ್ಯಗಳ ಮಿನುಗು
ರೋಮಾಂಚನದ ರಸಿಕತೆಯನ್ನು ನನ್ನಲ್ಲಿ ಹರಿಸಿ
ಮುಗುಳ್ನಗೆಯ ಗುಂಗು ಹೃದಯಾಕಾಶದಲ್ಲಿ ಆವರಿಸಿ
ಸತ್ಯದ ಪ್ರಜ್ಞೆ ಹೆಚ್ಚಿಸಿ ಯೌವ್ವನವನ್ನು ಹುಚ್ಚಾಗಿಸಿ
ನೆರಳುಗಳು ಒಂದಾಗುತ ದೇವರಲ್ಲಿ ಕಂಡ ಅನುಭವ



www.sriharikhoday.com

ರೋಮಾಂಚನದ ಪ್ರೇಮದ ಸುಖ
ನನ್ನ ಪ್ರೇಮ ತಾರೆಯ ಜೊತೆ
ನಾನು ನಿನ್ನಲ್ಲಿ ಬೆರೆಯುವ ರಸ್ತೆ
ನಿನ್ನ ಮೇಲಿನ ಪ್ರೀತಿ - ಪ್ರೇಮಗಳ
ಅವಳಲ್ಲಿ ಬೆರೆಸಿಕೊಳ್ಳಲು ಬಳಸುತ್ತಿದ್ದೇನೆ

**- ಶ್ರೀ ಹರಿ.**

19-11-2012



# 372.

ಕಾಣದ ಶಕ್ತಿ ಎಲ್ಲಾ ಯುಕ್ತಿ ತಿಳಿದು
ಕಷ್ಟಗಳಿಗೆ ಮುಕ್ತಿ ನೀಡಿಸುವುದು
ಬಾಯಿಲ್ಲದ ಶಕ್ತಿಗೆ ಮಾತನಾಡಲು ಬರದೆ
ಬಾಯಿಗೆ ಬಂದ ಹಾಗೆ ಮಾತನಾಡುವವರು ಕಷ್ಟಕ್ಕೆ ಸಿಲುಕುವರು!

ಕಾಣದ ಶಕ್ತಿ ಹಗಲು-ರಾತ್ರಿಗಳಲ್ಲಿ ಎಚ್ಚರ
ಆಗು-ಹೋಗುಗಳ ಸರಿ ವರ್ತಮಾನದ ಮೂಲ ಖಜಾನೆ
ಸರಿ-ತಪ್ಪುಗಳ ತೂಕ ಅಳೆಯದ ತೀರ್ಪು ನೀಡುತ
ನಮ್ಮ ಬುದ್ಧಿಯಂತೆ ನಾನು ಒಬ್ಬನಿರುವೆನೆಂದು
ಸ್ಪಷ್ಟವಾಗಿ ಸರಿಪಡಿಸಿ ತೀರ್ಪನ್ನು ನೀಡುತ್ತಿರುವುದು!

ಸರಿ-ತಪ್ಪು ನಮಗೆ ತಿಳಿದಿದ್ದರೂ
ಹತ್ತಿರದ ರಸ್ತೆಯನ್ನು ಉಪಯೋಗಿಸಿ
ಕಾಣದ ಹಳ್ಳಕ್ಕೆ ಬಿದ್ದು ಮೇಲೆ ಏಳಲು ಲಜ್ಜೆ
ಹಳ್ಳದಲ್ಲಿ ಬಿದ್ದಿರುವೆನೆಂದು ಹೇಳಿಕೊಳ್ಳಲು ಅಂಜುತ
ಗಳಿಸಿಕೊಳ್ಳುತ್ತಿರುವ ಮಾನ ಅಪಮಾನವಾಗಿ ರೂಪುಗೊಳ್ಳುತ್ತಿದೆ!

ಜಗತ್ತಿನಲ್ಲಿ ಯಾವುದೋ ಒಂದು ಶಕ್ತಿ ಸಜ್ಜಾಗಿ ನಿಂತಿದೆ
ಹಗಲು ರಾತ್ರಿಗಳ ಎಚ್ಚರ ನಮ್ಮ ಹೆಜ್ಜೆಗಳ ಅರ್ಥವು ತಿಳಿದು
ನಮ್ಮ ತಪ್ಪು ಹೆಜ್ಜೆಗಳಿಗೆ ಕಾಲ ಅಮುಕುತ ಎಚ್ಚರ ನೀಡಿ
ನಮ್ಮ ಸರಿ ರೀತಿಯಲ್ಲಿ ಅರ್ಥವ ಗ್ರಹಿಸಿಕೊಂಡರೆ
ಕಾಣದ ವಿಪತ್ತಿನಿಂದ ಮುಕ್ತರಾಗಿ



www.sriharikhoday.com

ಹೊಸ ಜೀವನ ಪ್ರಾರಂಭದಲ್ಲಿ ಆ ಮಹಾನ್ ಶಕ್ತಿಯೇ ಕೈ ಹಿಡಿದು
ತೋರಿಸುತ್ತಿರುವ ನಮ್ಮ ಹೊಸ ದಾರಿಗಳು
ಶಕ್ತಿಯ ಎದುರಿಗೆ ತಲೆ ತಗ್ಗಿಸಿದರೆ
ಪ್ರಗತಿಯ ರಥ ತಾನೇ ಕುಳ್ಳಿರಿಸಿಕೊಂಡು
ಆನಂದದಿಂದ ಪ್ರಗತಿ ಮೆರವಣಿಗೆ ಮಾಡಿಸುತ್ತಿರುವುದು
ನಾವು ಕಣ್ತೆರೆದು ನೋಡಿದರೆ ಕಷ್ಟವಿಲ್ಲದೆ ನೋಡಬಹುದು

**- ಶ್ರೀ ಹರಿ.**

20-11-2012



373

ಅತಿಯಾದ ದೊಡ್ಡ ಬಯಕೆ
ಮನಸ್ಸೇ ಚಲಿಸದ ಶಾಂತಿ
ಅತಿಯಾದ ಸಂತಸ ಕಾಣದ ಬಯಕೆಯಲ್ಲಿ
ಸೇರಿಕೊಂಡಿರುವ ನಾಳೆಯ ಆಕಾಶ!

ಎಲ್ಲಾ ಬಯಕೆಗಳ ಹಿಂದೆ ತೃಪ್ತಿ
ತೃಪ್ತಿಯ ಅನುಭವಿಸದೇ ಇದ್ದರೆ
ಹಗಲು-ರಾತ್ರಿ ಕಾಣಿಸುವ ಶಾಂತಿ
ಮಾನವ ತಿಳಿದೂ ತಿಳಿಯದಂತೆ
ತನಗೇ ತಿಳಿಯದೆ ನಟಿಸಿ ನಡೆಯುತ್ತಿದ್ದಾನೆ!

ಮನದಿ ಮದ ಬರುವ ನುಡಿಗಳು
ಲೆಕ್ಕಿಸದೇ ತಾನು ಎಂಬ ಮನದ ಬೀಜದ
ಬಿಂದುವಿನಿಂದ ಬೇರೆಯವರನ್ನು ಹೋಲಿಸುತ
ತನಗೆ ಸಲ್ಲದ ಬಯಕೆ ದೊರೆಯದೇ ಇದ್ದರೆ
ದ್ವೇಷದ ಬೀಜ ಬೆಳೆಸಿಕೊಂಡು
ಆದಿಯಿಲ್ಲದ ಬೆಳವಣಿಗೆಯಲ್ಲಿ ಕಳೆದುಹೋಗಿದ್ದಾನೆ!

ಮುಂದಿನ ಅರ್ಥ ತಿಳಿಯಲಾಗದೆ
ಹಿಂದಿನ ಜೀವನದ ಅರ್ಥವ ಮರೆತು
ತನ್ನ ಮನಸ್ಸು ಮಾಡಿದ ನಿಟ್ಟಿನಲ್ಲಿ

www.sriharikhoday.com

ತಾನು ಬೆಳೆಯುತ್ತಿದ್ದೇನೆ ಎಂಬ ಭಾವನೆ
ನೋಡಿದ ಜಗತ್ತಿಗೆ ತನ್ನ ಅಲ್ಪತನವನ್ನು ತೋರಿಸುತ್ತಿದೆ!

ಶಾಂತಿ ಬೇಕಿರುವ ಒಬ್ಬರಾಗಿ
ಶಾಂತಿಯು ಬರೀ ಸನ್ಯಾಸಿಗಳಿಗಾಗದೆ
ಶಾಂತಿ ಬರೀ ವಿರಾಗಿಗಳಿಗಾಗದೇ
ಜನಗಳ ಜೀವನದ ಜಂಬಾಟದಲ್ಲಿ
ಅತಿ ಮುಖ್ಯ ಶಾಂತಿ ಶಾಂತಿ ಶಾಂತಿ!

**- ಶ್ರೀ ಹರಿ**

21-11-2012



## 374

ಮಾನವ ಪ್ರಕೃತಿಯ ರಹಸ್ಯಗಳ ಹುಡುಕಾಟದಲ್ಲಿ
ರಹಸ್ಯವನ್ನು ಹುಡುಕುತ್ತಿರಲು
ದೈವ ಅವನೇ ಸೃಷ್ಟಿಸಿದ ಮಾನವನ
ಯೋಗ್ಯತೆಯ ರಹಸ್ಯವನ್ನು ಹುಡುಕುತ್ತ
ಯಾರೂ ಸೋಲದ ಭಾವನೆಗಳ ಬೆಳವಣಿಗೆಗೆ
ನಶಿಸಿಹೋಗದಿರುವ ಕಾಲ ಅವಶ್ಯಕವಾಗಿದೆ!

ಪ್ರಕೃತಿಯ ಬಣ್ಣಗಳಲ್ಲಿ ದೈವ ರಹಸ್ಯವನ್ನು ತೋರಿಸುತ್ತಿದ್ದರೆ
ಮತ್ತೊಂದು ಕಡೆ ದೈವ ಜನನ-ಮರಣಗಳ ಆಟ ತೋರಿಸುತ್ತಿದ್ದರೆ
ಇನ್ನೊಂದು ಕಡೆ ಸೌರಮಂಡಲದಲ್ಲಿ ಅರ್ಥವಾಗದ
ತಾರಾ ಮಂಡಲವನ್ನು ತೋರಿಸುತ್ತಿದ್ದರೆ
ಮತ್ತೊಂದೆಡೆ ಹೊಸ ಹೊಸ ಬ್ರಹ್ಮಾಂಡಗಳ ಸೃಷ್ಟಿ ಮಾನವನಿಗೆ
ತೋರಿಸುತ್ತಿದ್ದರೆ
ಪ್ರಕೃತಿಯ ಬಣ್ಣಗಳ ರಹಸ್ಯ ಮಾನವನ ಹುಡುಕಾಟ!

ಮತ್ತೊಂದು ಕಡೆ ಮಾನವನಿಗೆ ಮರಣವೇ ಇಲ್ಲದ ಸೃಷ್ಟಿಯ ಶಕ್ತಿಯ
ಸಂಪಾದನೆ
ರಹಸ್ಯವಾಗಿ ಹೊಸ ಸೃಷ್ಟಿಯ ನಿಯಂತ್ರಣಗಳನ್ನು ಮಾನವ
ಹುಡುಕುತ್ತ
ಸದ್ದಿಲ್ಲದೆ ಹೊಸ ಹೊಸ ಬ್ರಹ್ಮಾಂಡಗಳ ಸೃಷ್ಟಿಯ ರಹಸ್ಯಗಳ
ಹುಡುಕಾಟದ ಸಂಚು
ಆ ಶಾಂತಿಯನ್ನು ಕಳೆದುಕೊಂಡಿರುವ ಪ್ರಕೃತಿ ಮತ್ತು ಮಾನವನಿಗೆ
ಸಮಾಧಾನಪಡಿಸುವ ರೀತಿ ತಿಳಿಸಬೇಕಾಗಿದೆ!

www.sriharikhoday.com

ತಾನು ಸೃಷ್ಟಿ ನಾನು ಮಾನವ ಎಂಬ ಅರಿವಿನ ಪ್ರಜ್ಞೆಯಿಂದ
ನಿರಾಳದ ಭಾವನೆಗಳಿಂದ ಬೆರೆತುಕೊಳ್ಳದೆ
ಸಾಕು ಎಂಬ ಗಿಡಗಳನ್ನು ಸೃಷ್ಟಿಸಿ ನಾವು ಮಾಡಿಕೊಳ್ಳದಿದ್ದರೆ
ತಾವುಗಳೇ ತೃಪ್ತಿ ಪಡೆದಿದ್ದರೆ
ಮಾನವ ಪ್ರಕೃತಿಗೆ ವಿನಾಶಕಾಲ ಸೃಷ್ಟಿ ಆಗುವುದು ಖಂಡಿತ!

ಸೃಷ್ಟಿಯಾಗಿರುವ ಮಿನುಗಲ್ಲಿ ಮಾನವ ಸೃಷ್ಟಿಯನ್ನು ನಮಿಸುತ್ತ
ಪ್ರಕೃತಿ ಮಾನವ ಆನಂದದ ಭಾವನೆಯನ್ನು ಬಳಸಿಕೊಂಡು
ನಾನೇ ದೈವ ಎಂದು ಹೇಳಿಕೊಳ್ಳುವ ಮಾನವನಿಗೆ
ಸೃಷ್ಟಿಯಿಲ್ಲದೆ ನಾನಿಲ್ಲ ಎಂಬ ರಹಸ್ಯವನ್ನು ತಾನೇ ತಿಳಿದುಕೊಂಡು
ಸೃಷ್ಟಿ ಮಾನವ ಸಮಾಧಾನದ ಆಕಾಶವನ್ನು ಕಲ್ಪಿಸಬೇಕು!

**- ಶ್ರೀ ಹರಿ.**

22-11-2012



# 375

ನಮ್ಮ ಚೌಕಟ್ಟಿನಲ್ಲಿರುವ ಶಕ್ತಿ
ನಮಗೇ ತಿಳಿಯದೆ
ಬೇರೆಯವರ ಶಕ್ತಿಗಳಿಗೆ ನಿಂದಿಸಿ
ನಿಂದಿಸಿರುವುದು ನಮ್ಮ ಕೆನ್ನೆಗೆ ನಾವೇ ಬಡಿದುಕೊಂಡಂತೆ
ಬೇರೆಯವರಿಗೆ ನಮ್ಮ ನೀತಿಯ ಬೋಧನೆ!

ನಮ್ಮ ಜನವೇ ನಮ್ಮ ಚೌಕಟ್ಟನ್ನು ರೂಪಿಸಿರುವಾಗ
ನಮ್ಮಲ್ಲಿ ಏನಿದೆ ಎಂದು ನಮ್ಮ ಮನೋಜೇಬಿನಲ್ಲಿ ಹುಡುಕದೆ
ನಮ್ಮ ಜೇಬು ಖಾಲಿ ನಾವು ಖಾಲಿ ಎಂದು ಹೇಳುತ್ತಿರುವುದು
ರೂಪವತಿಯಾದ ಬಡ ಹುಡುಗಿ
ನಾನು ಬಡವಿ ನನಗೆ ರೂಪವಿಲ್ಲ ಎಂದು ಹೇಳುವಂತೆ!

ನಮ್ಮಲ್ಲಿರುವುದನ್ನು ಕುಲುಕದೆ
ಕುಲುಕುವಾಗ ಬರುವ ಸದ್ದನ್ನು ಕೇಳಿಸಿಕೊಂಡರೆ
ಯಾವುದು ನಮ್ಮಲ್ಲಿ ಏನಿದೆ ಎಂದು ಅರ್ಥೈಸಿಕೊಂಡು
ನಮ್ಮಲ್ಲಿರುವುದನ್ನು ಉಪಯೋಗಿಸಿಕೊಂಡು
ಇಲ್ಲದಿರುವುದನ್ನು ಬೇರೆಯವರಿಂದ ಶೇಖರಿಸಿಕೊಂಡರೆ
ನಮ್ಮ ಜೀವನದ ದಾರಿ ಸರಿ ಸರಿಯೋ.... ಸರಿ!

ನಮ್ಮಲ್ಲಿರುವ ಸಿರಿತನವನ್ನು ಹುಡುಕೋಣ
ನಮ್ಮಲ್ಲಿರುವ ಅತಿಯಾದ ಪ್ರೀತಿಯ ನೀರನ್ನು



www.sriharikhoday.com

ಒಣಗಿರುವ ಮನಗಳಿಗೆ ಹರಿಯಬಿಡೋಣ
ಅವರ ಜೀವನದಲ್ಲಿ ಬೆಳೆ ಬೆಳೆದು ಸಂತಸಗೊಂಡರೆ
ನಮ್ಮ ಸಿರಿತನವ ಹಂಚಿಕೊಳ್ಳುವುದೇ
ನಮ್ಮಲ್ಲಿರುವ ಚೌಕಟ್ಟಿನ ಶಕ್ತಿ ಎಂದು
ಆ ಚೌಕಟ್ಟನ್ನು ಅಳೆದು ಅನುಭವಿಸಿ
ಅನುಭವಿಸುತ್ತ ಅನುಭವದ ದಾನಿಗಳಾಗೋಣ!

**ಶ್ರೀ ಹರಿ.**

25-11-2012



# 376.

ಈ ದಿನ ನಾವು ಹೊಸ ಉಸಿರಾಟದ ಆಟ ಆಡೋಣ
ಮೂಗಿನಿಂದ ಕಷ್ಟ ಸುಖ ರಂಧ್ರಗಳಲ್ಲಿ ಮರೆಸಿ
ಕಾಣದ ಓಂಕಾರದ ಶಬ್ದವ ಉಸಿರಾಗಿ ಸೇವಿಸೋಣ
ಉಸಿರುಗಳ ಗಣಿಕೆ ಮಾಡದೆ ಒಂದು ಹೊಸ ತರದ
ಉಸಿರು ನಿಟ್ಟುಸಿರ ಮೂಗಿನ ತುದಿಯಲ್ಲಿ ಸ್ವೀಕರಿಸಿ
ಬಂದ ಕಷ್ಟಗಳು ತಮಗೆ ತಿಳಿಯದೆ ಹೋಗುತ್ತಿರುವ
ಸ್ನೇಹಭಾವ ಜೋಡಿಯಾಗಿರುವ ಕಷ್ಟಸುಖಗಳ
ಸತ್ಯ ಸದ್ದಿನಲ್ಲಿ ಬೆರೆಸಿ ಈ ಪವಿತ್ರ ಸುಖ
ಕಾಲ ಎಂದು ಕರೆಯುತ್ತಾ ಮತ್ತು ಈ ದಿನ
ಮನೋ ಆಸರೆ ನೀಡಿರುವ ನೆರಳಲ್ಲಿ ನೆನಪುಗಳು
ನಿದ್ರಿಸುತ್ತಿರುವ ನಮ್ಮ ಅರಿವಿನಲ್ಲಿ ಈ ಅನುಭವವನ್ನು
ಜೊತೆ ಇರುವ ಆಕಾಶದಲ್ಲಿ ಬೆರೆತು
ಎಚ್ಚರ ಸ್ಥಿತಿಗಳಿಂದ ಎಲ್ಲದರಲ್ಲಿ ಹೊಸದನ್ನು ನೋಡುತ್ತಾ
ಈ ಹೊಸ ದಿನ ನಿಶೆಯಲ್ಲಿ ಸುಖ ಬಯಸದೆ
ನಮ್ಮಲ್ಲಿ ತುಂಬಿ ಹರಿಯುತ್ತಿರುವ ಸುಖ ನೀಡುತ್ತಾ
ಎಲ್ಲದರ ಜೊತೆ ಚುಂಬಿಸಿ ಅಪ್ಪಿಕೊಳ್ಳುತ್ತಾ
ಸಿತಾರಿಗೆ ಮಧು ಕುಡಿಸಿ ಅದರ ಶಬ್ದದ ನಿಶೆ
ಅನುಭವಿಸೋಣ

**- ಶ್ರೀ ಹರಿ.**

06-12-2012



www.sriharikhoday.com

# 377.

ನನ್ನ  ಹೆಸರು ನಾನು
ನಿನ್ನ ಹೆಸರು ನಾನ್ಯಾರು
ನನ್ನ ಹೆಸರು ನೀನು
ನಾನು ನಿನ್ನವಳು

ನಿನ್ನ ಈ ನೋಟ ನಿನ್ನ ಕೋಮಲ ಶರೀರ
ನನ್ನ ಮನಕೆ ಬೆಳೆಯಾಗಿರುವುದು
ನಮ್ಮ ಬಣ್ಣ ಹೂವಾಗಿ ಬೆಳೆದು ನಿಂತಿರುವುದು
ಜೊತೆಗೆ ಬೆರೆಯುತ್ತಿರುವ ಅವನನ್ನು ಮರೆಯದೆ
ನಿನ್ನ ಕೋಮಲ ಪಾದ ಮಣ್ಣಿನಲ್ಲಿ ಅಚ್ಚಾಗಿ
ಕಣ್ಣಿಗೆ ಕಾಣದ ಅವನ ಕೋಮಲ ಪಾದ
ಭೂಮಿ ಮೇಲೆ ಅಚ್ಚು

ನನಗೆ ಕಾಣದಿರುವ ರಹಸ್ಯ ಏನಿರಬಹುದು
ಬೆಳೆಯುತ್ತಿರುವ ಗಾತ್ರ ಫಲಗಳು
ತೂಗಿ ತುಳುಕುತ್ತಿರುವ ತೋಳ್ ರಂಬೆಗಳು
ಬೆಳೆಸಿರುವ ಕೋಮಲ ಸುಗಂಧ ಗುಲಾಬಿಯನ್ನು
ನಾವಿಬ್ಬರೂ ಜೊತೆ ಸೇರಿ
ಅದರ ಜೊತೆ ಅನುಭವಿಸೋಣ

ಜೀವನವೆಲ್ಲಾ ಅವನ ಹುಡುಕಾಟದಲ್ಲೇ ಕಳೆದು
ಈ ನನ್ನ ತೋಟದಲ್ಲಿ ದೊರಕಿದರೆ



ನಾವಿಬ್ಬರೂ ಜೊತೆ ಅನುಭವಿಸಿ
ಅವನಿಗೆ ಯಾರಿಗೂ ತೋರಿಸದೆ
ನಮ್ಮ ಮನದ ಅನುಭವ
ಮನದ  ಆಳದಲ್ಲಿಯೇ ಬಚ್ಚಿಟ್ಟುಕೊಂಡು

ನಮ್ಮ  ಏಕಾಂತದಲ್ಲಿ  ರಸಮಯ ಮಧುಪಾನದ
ಜೊತೆಗೆ ಅವನನ್ನು ಹುಡುಕುತ್ತ
ಅವನಿಗೆ ನಾವು ಕತ್ತಲಿನ  ಎಲ್ಲಪ್ಪ  ಎಂದು
ಹೆಸರಿಟ್ಟು  ಕರೆಯೋಣ

**- ಶ್ರೀ ಹರಿ.**

06-12-2012



www.sriharikhoday.com

## 378.

ಎಲ್ಲಿಂದಲೋ ಬೀಸುತ್ತಿರುವ ಕಾಲ
ಎಲ್ಲದರಲ್ಲಿ ಅಡಗಿ ಉಸಿರಾಡದೆ ಆವರಿಸಿಕೊಂಡು
ಹಸಿರಲ್ಲಿ ಬಣ್ಣ ಹಸಿರಾಗಿ ಕತ್ತಲೆಯಲ್ಲಿ ಮರೆಯಾಗಿ
ಕಾಣದ ಪ್ರತಿಧ್ವನಿಸುತ್ತಿರುವ ಕಾಲವೇ

ಮೋಡಗಳ ಚಿತ್ರವಿಚಿತ್ರ ಚಿತ್ರೀಕರಣ
ನನ್ನ ಮೇಲಿರುವ ನಿನ್ನ ಕರುಣೆಗೆ
ಮೋಡದ ಕಣ್ಣಲ್ಲಿ ಕಣ್ಣೀರಾಗಿಸಿ
ಮಳೆಯಾಗಿ ಕೆಳಗೆ ಸುರಿಯುತ್ತಿರುವೆ ಹೇ ಕಾಲವೇ!

ಬೇಸರವಿಲ್ಲದ ನೀನು
ಕನಸು ನನಸು ನೆನಪುಗಳಿಲ್ಲದ ನೀನು
ಸದ್ದಿಲ್ಲದೆ ಅಬ್ಬರಿಸಿ
ಎಲ್ಲವನ್ನು ಹದಗೊಳಿಸುತ್ತಿರುವ ಕಾಲವೇ
ನಿನಗಡ್ಡವಾಗಿರುವುದು ಏನೆಂದು ನನಗೆ ತಿಳಿಸು!

ನಿನ್ನ ಚಿಂತಿಸದ ಮೇಲೆ ಜ್ಞಾಪಕವಿಲ್ಲದೆ ಮರೆತುಹೋಗುವೆ
ನಿನಗೆ ಎದುರಿಗೆ ಕಾಣಿಸದೆ
ಎದುರೂ ಮಿನುಗದೆ
ಕಾಣದ ಕತ್ತಲೆಯಲ್ಲಿರುವುದು
ನಿನಗೆ ಬೇಸರವಿಲ್ಲವೇ ಹೇ ಕಾಲವೇ!



ವಿಶ್ವದ ಚಿಂತನೆಯಲ್ಲಿ ಹಗಲು - ಇರುಳು ತಿಳಿಯದ ನಿನಗೆ
ಚಿಂತೆಯಲ್ಲೇ ಜೀವಿಸುವುದು ನಿನ್ನ ಜೀವನವೇ
ನಿನ್ನ ಉಸಿರಾಟವೇ
ನಿನಗೆ ಕಷ್ಟಗಳೇ ಇಲ್ಲವೆ
ಅಣುವಿನಿಂದ ವಿಶ್ವದ ಬೆಳೆಸುತ್ತಿರುವ ಕಾಲವೇ
ನನ್ನ ಇರುವಿಕೆಯಲ್ಲಿ ನಿನ್ನ ಅಗಾಧ ಕೃಪೆಯನ್ನು
ನನ್ನ ಮೇಲೆ ಕರಗಿಸಿ ಚೆಲ್ಲು

**- ಶ್ರೀ ಹರಿ.**

07-12-2012



www.sriharikhoday.com

## 379

ಇನ್ನೂ ಕೆಲಕಾಲ ಮಹಾತ್ಮರು ಬದುಕಬೇಕಾಗಿತ್ತು
ಅಗತ್ಯವಿರುವ ಈ ಭಾರತಕ್ಕೆ
ಮಹಾತ್ಮರ ಹಿತವಚನಗಳು ಬೇಕಾಗಿತ್ತು!

ಬಿರುಗಾಳಿಗೆ ಒಡೆದುಹೋದ ಹಡಗಿನಂತೆ ನಮ್ಮ ಪ್ರಜಾಪ್ರಭುತ್ವ
ನಿಮ್ಮಗಳ ಹೊರತು ಯಾನ ಮುಂದುವರೆಯುವುದೋ ತಿಳಿಯದೆ
ಮತ್ತೆ ನೀವು ಬದುಕಿಗೆ ಜೀವಂತವಾಗಿ ಬರಬೇಕಾಗಿದೆ!

ಅದೇ ಪರ್ವತಗಳು, ಅದೇ ಹಿಮಗಿರಿಗಳು, ಅದೇ ಕಡಲು
ಅದೇ ನಮ್ಮ ದೇಶದಲ್ಲಿ ಬೀಸುತ್ತಿರುವ ಗಾಳಿ
ಅದೇ ಮಣಿಯಂತೆ ಮಿನುಗುತ್ತಿರುವ ಸೂರ್ಯನ ಕಾಂತಿ
ಅದೇ ಪವಿತ್ರವಾದ ಭೂಮಿ!

ಭಿನ್ನ ಭಿನ್ನ ಮನೋಮಾಂತ್ರಿಕ ಗದ್ದಲಗಳಿಂದ
ಬೇಡದ ಕಾಯಿಗಳನ್ನು ಸೃಷ್ಟಿಸಿ
ಸ್ವಾರ್ಥದ ರಾಜಕೀಯ ಬೆಳೆಯುತ್ತಿರುವುದು
ಪ್ರಜಾಪ್ರಭುತ್ವದ ಹೋರಾಟಕ್ಕೆ
ಪ್ರಜಾಪ್ರಭುತ್ವದ ನೊಂದ ಕಣ್ಣೀರುಗಳಿಗೆ
ನಾವು ಕೊಡುತ್ತಿರುವ ಬಹುಮಾನ!

ಪ್ರಜಾಪ್ರಭುತ್ವ ಕೆಲವರ ರಾಜರ ದರ್ಬಾರಾಗಿ
ಭಾಗ್ಯವಂತರಾದ ಈ ದೇಶ ಭಕ್ತರು



www.sriharikhoday.com

ಸುಖದ ಭಾಗ್ಯವನ್ನು ಕಳೆದುಕೊಂಡು
ಮಹತ್ವದ ಮಹಿಮೆಯನ್ನು ಅರ್ಥವಿಲ್ಲದೆ
ಗಾಳಿಯಲ್ಲಿ ಬೀಸುತ್ತಿರುವರು ರಾಜಕಾರಣಿಗಳು

ದುಃಖದಿಂದ ಮಿನುಗತ್ತಿರುವ ತಾರೆಗಳು
ಕಾದು ನಿಂತಿರುವ ನಮ್ಮ ದೇಶದ ಭಾಗ್ಯಕ್ಕೆ
ಮತ್ತೆ ಮಹಾತ್ಮರು ನಮ್ಮ ಬದುಕಿಗೆ ಸೇರಲೆಂದು ಬೇಡುತ್ತ
ಹೇ ಮಹಾತ್ಮರೆ ನಿಮಗೆಷ್ಟು ಬೇಸರವಿದ್ದರೂ
ಮತ್ತೆ ಶೀಘ್ರದಲ್ಲಿ ದುರಂತದ ಮುನ್ನ ನಿಮ್ಮ ಅಮೂಲ್ಯ
ನೆರಳನ್ನು ಚೆಲ್ಲಲು ಮಾನವರಿಗಾಗಿ ಮತ್ತೆ ಬನ್ನಿ

**- ಶ್ರೀ ಹರಿ.**

07-12-2012

## 380.

ಹೇ ಜಗದಂಬೆಯೇ,
ಹೂ ತೊಟ್ಟಿಲಿನ ಜೋಕಾಲಿಯಲ್ಲಿ
ನಿನ್ನದೇ ಆದ ಮನಸ್ಸಿನ ಹಾಡುಗಳಿಂದ ಎಲ್ಲವನ್ನೂ ಚಿಗುರಿಸಿ ಬೆಳೆಸಿ
ಬೆಳೆದ ಬೆಳೆಯ ಮೇಲೆ ಹೂವನ್ನು ತೂಗಿಸುತ್ತಿರುವುದು!

ಸದ್ದೇ ಇಲ್ಲದ ನಿನ್ನಯ ಹಾಡು ಸೂರ್ಯ-ಚಂದ್ರ ತಾರೆಗಳೇ ನಿನ್ನ ತಾಳಗಳಾಗಿ
ಎಕ್ಕದ ಗಿಡ ಕೂಡ ನೆರಳ ಆಶ್ರಯ
ನೀಡುತ್ತ ಶ್ರಮಿಸುವ ಜೀವಿಗೆ ಆಶ್ರಯದಾತಳಾಗಿ
ನಿನಗೆ, ಪ್ರಕೃತಿಗೆ, ನಮಗೆ ಎಚ್ಚರಿಸಲು ಬೆಳಗಿನ ಜಾವದ ಸೋನೆ

ಬದುಕೇ ಮಿಂಚುತ್ತಿರುವ ಮಗುವಿನ ಮುಖದ ಕಾಂತಿ
ತೊಟ್ಟಿಲಲ್ಲಿ ಮಲಗಿಸಿ
ನಿನ್ನ ಪ್ರಕೃತಿಯ ಮಗುವಿಗೆ ನಗೆಯ ಕಲಿಸಿ
ನಿಂತು ಕೇಳಿ ವಿಸ್ಮಯದಿ ನಾ ಕಾಣುತ್ತಿರುವುದು!
ನೀನು ಶರೀರವಿಲ್ಲದ ತಪಸ್ವಿನಿಯಾಗಿ
ನೀನೇ ಜ್ಞಾನಸ್ವರೂಪಿಯಾಗಿ
ಸದ್ದಿಲ್ಲದೆ ನಮ್ಮಲ್ಲಿರುವ ಆತ್ಮನಿಗೆ ಜೊತೆಯಾಗಿ
ಕಣ್ಣೆದುರಿಗೆ ಬಲಶಾಲಿಯಾಗಿಸಿ

ಅಸಮಾನ್ಯ ಲೀಲಾಲಾಸ್ಯಗಳಲ್ಲಿ ಹಾಸ್ಯವನ್ನು ತುಂಬಿ
ಚುಂಬನ ಬಯಸಿದ ತುಟಿಗಳಿಗೆ ಕೆಂಪು ಬಣ್ಣವ ಲೇಪಿಸಿ



www.sriharikhoday.com

ಕಣ್ಣೀರನ್ನು ಕಣ್ಣೀರು ಮಾಡದೆ ಹರಿಸದ ಆನಂದಭಾಷ್ಪವ ತರಿಸಿ
ಅಂತರಾಳದ ನಿಶ್ಶಬ್ದದಲ್ಲಿ ಓಂಕಾರವು ಆರ್ಭಟಿಸುತ್ತಿರುವುದು

ಸರಪಣಿಗಳಿಲ್ಲದ ತನ್ನದೇ ಆದ ಹತೋಟಿಯುಳ್ಳ ಸ್ವಾದೀನ ಇರುವಿಕೆ
ಚಂದಿರನಲ್ಲಿ ನಿರ್ಮಲ ಚಿತ್ತವನ್ನು ತುಂಬಿ
ಸಂಶಯಗಳಿಲ್ಲದೆ ಬೆಳೆಯುತ್ತಿರುವ ಈ ಪ್ರಕೃತಿ
ಕಾಲವನ್ನು ಮರೆಸಿ ಹೆಜ್ಜೆ ಹೆಜ್ಜೆಗೂ ಮಾನಸ ತಾರುಣ್ಯದಲ್ಲಿ
ಆತ್ಮರೂಪನ ಬೆಳಕನ್ನರಿತು

ಎಲೆಯಾಗಲಿ ಗಿಡವಾಗಲಿ ಮರವಾಗಲಿ
ನಿನ್ನ ಪುಷ್ಪದ ತೊಟ್ಟಿಲಲ್ಲಿ ನಿನ್ನ ಜೋಕಾಲಿ ಹಾಡು
ಕೊನೆಯೆಂಬ ಅಕ್ಷರಗಳಿಗೆ ಅರ್ಥವಿಲ್ಲದಂತಾಗಿದೆ!

**- ಶ್ರೀ ಹರಿ.**

08-12-2012

## 381

ಒಡಹುಟ್ಟಿದ ಜನಗಳಲ್ಲಿ ತಮಗೇ ತಿಳಿಯದ
ಬೇಸರಮಿಶ್ರಿತ ಪ್ರೀತಿ
ಎಲ್ಲರ ಮನದಲ್ಲಿ ಜೊತೆ ಬರುತ್ತ
ವೈರತ್ವ-ತಮ್ಮಲ್ಲಿ ಹೆಚ್ಚಿಸಿಕೊಳ್ಳುತ್ತ
ಜೊತೆ ಹುಟ್ಟಿದ ಪ್ರೀತಿ ಸಂಸಾರಗಳಲ್ಲಿ ಸುಖ ಸಾವವನ್ನು
ಅಪ್ಪಿಕೊಳ್ಳುತ್ತಿದೆ

ಒಂದು ಕಾಡಿನಲ್ಲಿ ಅನೇಕ ಪ್ರಾಣಿಗಳು
ಅದೇ ಕಾಡಿನಲ್ಲಿ ಬೆಳೆದು ಅದೇ ಕಾಡಿನಲ್ಲಿ ಜೊತೆ ಜೀವಿಸುತ್ತಿದ್ದರೆ
ಹುಳ.... ಜಂತು.... ಪ್ರಾಣಿಗಳ ಸಮಾಜದಲ್ಲಿ
ನೀ ನನ್ನವನು ಅಲ್ಲ . . ಈ ಜಾಗ ನಿನ್ನದು ಅಲ್ಲ
ಈ ಕಾಡು ಬಿಟ್ಟು ಹೋಗು ಎಂದು ಹೇಳದೆ
ತಾವು ಜನ್ಮಪಡೆದಿರುವ ಭೂಮಿಯಲ್ಲಿ
ದೇವರು ಕೊಟ್ಟಂತೆ ಜೊತೆ ಜೊತೆಗಿದ್ದು ದ್ವೇಷವಿಲ್ಲದೆ
ಜೀವಿಸೋಣ
ಎಂಬ ಮಹಾನ್ ಭಾವನೆಯಿಂದ ಜೀವಿಸುತ್ತಿರುವುದು!

ನಮ್ಮಲ್ಲಿ ನಾವೇ ಬೇಡ ಎಂಬುದನ್ನು ಬೆಳೆಸುತ್ತಿರುವುದು
ಹೆತ್ತವಳಿಗೆ ತಾಯಿಯೆಂದು ಮನ ಕರೆಯದೆ
ಬಾಳಿನ ಗುಡಿಯನ್ನೇ ಸುಡುತ್ತಿರುವರು
ಸಮಾಜ ಅರ್ಥ ತಿಳಿಯದೆ ಬಾಳಲು ಬಂದಿರುವ ಪಾಪಿ
ಮಾನವರು



ಇವರನ್ನು ಪ್ರಚೋದಿಸುತ್ತಿರುವ ಸತ್ಯವನ್ನೇ ತಿಳಿಯದ ಸಮಾಜ
ಪಂಡಿತರಿಗೆ
ಕಾಲ ಬುದ್ಧಿ ಕಲಿಸಲೇ ಬೇಕಾಗಿದೆ!

ಎಲ್ಲಿಂದಲೋ ಹುಟ್ಟಿಕೊಂಡಿರುವ ಈ ಜ್ವರ
ಭೂತಾಯಿ ಕೂಡ ಮದ್ದನ್ನು ಕೊಟ್ಟರೂ ಇಳಿಯದ ಜ್ವರ
ಕಾಲವೇ ಧನ್ವಂತ್ರಿಯಾಗಿ ಹೊಸ ಪ್ರಜ್ಞೆಯ ಅರಿವು ನೀಡಿದರೆ
ಹೆತ್ತ ತಾಯಿ ಮತ್ತು ಸಂಸಾರದಲ್ಲಿರುವ ಹಿರಿಕರಿಗೆ ತಲೆಬಗ್ಗಿಸಿ
ಸಂತಸವ ಹರಡಿ ಸಮಾಜ ಉದ್ಯಾನವನದಲ್ಲಿ
ದ್ವೇಷ ಅಸೂಯೆಗಳಿಲ್ಲದೆ ಜೀವಿಸುವುದು ಅವಶ್ಯಕ!

**- ಶ್ರೀ ಹರಿ.**

10-12-2012

www.sriharikhoday.com

## 382

ದಿನ ಸೂರ್ಯೋದಯ
ಉರುಳಿಸುತ್ತಿದೆ ಹೊಸ ಹೊಸ ದಿನಗಳನ್ನು
ದಿನಗಳು.... ಮಾಸ.... ವರುಷಗಳಾಗಿ
ಸರಿಗಮ ಸಂಗೀತ ರಾಗದಲ್ಲಿ
ರಾಗದ ಪದ ಜೋಡಣೆಯಂತೆ
ರಾಗಬದ್ಧವಾಗಿ ತಾಳಬದ್ಧವಾಗಿ
ಬರುತ್ತಿದೆ ಶ್ರಾವಣ ಶ್ರಾವಣ....ಶ್ರಾವಣ

ಬಂತು ಶ್ರಾವಣಾ ಬಂತು ಶ್ರಾವಣಾ
ತನಗೇ ಕಾಣದಂತೆ ಸಾಧನೆ ಬಂದಂತೆ
ಕಷ್ಟಗಳ ರಹಸ್ಯಗಳನ್ನು ಬಿಸಿ
ಕಾಲ ಜಪಮಂತ್ರವಾಗಿ ಮನಕ್ಕೆ ಹೊಸದನ್ನು ದೊರಕಿಸಿದಂತೆ
ತುಂಬಿದ ಶ್ರಾವಣದ ಮಾಸ ನಮ್ಮಲ್ಲಿ
ಹೊಸ ಜನ್ಮವನ್ನು ನೀಡಿದಂತಿದೆ!

ಉಲ್ಲಾಸ ಮನಸ್ಸುಗಳ ಸಮೂಹವಾಗಿ
ಬಲಶಾಲಿಯಾಗಿ ಎದುರಿರುವ ಹಾದಿಯನ್ನು ಮೆಟ್ಟುತ
ಸ್ತ್ರೀ ಪುರುಷರಲ್ಲಿ ಸುಖವ ತುಂಬುತ
ಬದಲಾದ ಋತುಗಳು ಹೊಸದನ್ನು ಹುಡುಕಲು ಬಂದಂತೆ
ಹೊಸದನ್ನು ಹುಡುಕಿ ಹೊಸ ಕೆಲಸಗಳ ಜೊತೆಯಾಗಿ
ಸೂರ್ಯಕಾಂತಿಗೆ ಅಡ್ಡವಾಗಿರುವ ಪರ್ವತಗಳ ಮೇಲೆ
ಸೂರ್ಯನ ಹತ್ತಿ ಬೆಳಕನ್ನು ಚಿಗುರಿಸುವಂತೆ

ಈ ಶ್ರಾವಣ ನಮ್ಮ ಮನದಲ್ಲಿ
ಹೊಸ ಬೆಳೆಯನ್ನು ಚಿಗುರಿಸಿದಂತಿದೆ!

**- ಶ್ರೀ ಹರಿ.**

10-12-2012



## 383

ಕವಿತೆಯಲ್ಲಿರುವ ರಸದ ಸಾರವು
ನಶೆಯ ತರುವ ನಿಶೆಯ ಬಟ್ಟಲಿನಂತೆ
ಕಂಪಿಸುವ ಅರ್ಥಗಳಲ್ಲಿ ಜಗವನ್ನೇ ಮರೆಸಿ
ಹೊಸ ಅನುಭವದ ಪಾತಾಳಕ್ಕೆ ಒಯ್ದು
ಹೊಸತನದ ಅನುಭವಕ್ಕೆ ಗಿರಿಯೆತ್ತರದಲ್ಲಿ ಕೊಂಡೊಯ್ಯುತ್ತಿದೆ!

ಸುಮ್ಮನೆ ಇದ್ದ ಮನದ ಗಂಟೆಗೆ
ಕವಿತೆಯ ರಸ ಸತ್ಯದ ಬೆಳಕಿನಿಂದ ಎಚ್ಚರಿಸಿ
ಸತ್ಯ ಬಡಿದ ಒಂದು ಗಂಟೆ
ಅನೇಕ ಪ್ರತಿಧ್ವನಿಗಳಾಗಿ ಅನೇಕ ಗಂಟೆಗಳು
ಹಾರುತ್ತಿರುವ ಹುಚ್ಚೆದ್ದಿರುವ ಮನಕ್ಕೆ ಅರಿವಿನ ಎಚ್ಚರ ತರಿಸಿ
ಸುಮ್ಮನಿದ್ದ ಬತ್ತಿಗೆ ದೀಪವ ಹಚ್ಚಿದಂತೆ!

ಎಚ್ಚರದ ಸ್ಥಿತಿಯಲ್ಲಿ ದೊರಕಿರುವ ದೇವರ ಅನುಭವ
ಮಂಕಾಗಿದ್ದ ಮೌನ ಗಣಿಕೆಯಿಲ್ಲದ ಹೊಸ ಅನುಭವಗಳು
ತಬ್ಬಿಕೊಂಡಿರುವ ಅರ್ಥಗಳ ಬಣ್ಣದ ಓಕುಳಿ
ಒಂದು ಅರ್ಥದ ಮೇಲೆ ಇನ್ನೊಂದು ಅರ್ಥಗಳ ಗೋಷ್ಠಿ
ಬಣ್ಣ ಬಣ್ಣಗಳ ಓಕುಳಿಯಲ್ಲಿ ತೇಲುತ್ತಿರುವ ನಮ್ಮಿಬ್ಬರ ಜೋಡಿ
ತಾನಾಗಿಯೇ ಬರುತ್ತಿರಲು ಈ ಸತ್ಯದ ಅನುಭವ



www.sriharikhoday.com

ಹಂಚಿಕೊಳ್ಳಲು ನನ್ನ ಕಾಂತೆಯ ಜೊತೆ
ಅವಳು ಅರ್ಥೈಸಿಕೊಂಡು ಅನುಭವಿಸುತ್ತಿರುವ
ನಮ್ಮಿಬ್ಬರ ಜೋಡಿ ವಿಶ್ವಕ್ಕೆ ಒಂದು ವಿಸ್ಮಯ
ಕವಿತೆಯಲ್ಲಿರುವ ಸತ್ಯದ ರಸದ ರಹಸ್ಯ
ಅದರೊಳಗೆ ಅಡಗಿರುವ ಗೂಢಾರ್ಥಗಳು
ಒಂದರ ಹಿಂದೆ ಮಿನುಗುತ್ತಲೇ ಇರುತ್ತದೆ
ಕವಿತೆಯಲ್ಲಿರುವ ರಸ

**- ಶ್ರೀ ಹರಿ.**

11-12-2012



384.

ಹಳೆಯದಾದಂತೆಲ್ಲ ಸವಿಯು ಹೆಚ್ಚಾಗುವುದು
ಹಳೆದಾದಂತೆಲ್ಲ ಜೀವನದಲ್ಲಿ ಹೊಸ ಹೊಸ
ರಸನಿಮಿಷಗಳು ಪ್ರತಿಬಿಂಬಿಸುವುದು!
ಹಳೆತು ಹಳತಾದಾಗೆಲ್ಲ ಹೊಸ ಹೊಸ ಹೊಸ್ತಿಲು
ಹಳೆಯ ಅನುಭವ ಹೊಸ ಅನುಭವಕ್ಕೆ ಬುನಾದಿಯಾಗಿ
ತೆರೆದ ಬಾಗಿಲು ಹೊಸ ಹೊಸ ಅನುಭವಗಳ ಸಾಲು ಸಾಲು!
ಹಳೆಯ ಸಂತತಿಯ ಮೌಲ್ಯಗಳಿಗೆ ಹಳೆತನ ಮರೆಯದಿದ್ದರೂ
ಹೊಸತನ ಬೇಕೆಂಬುವ ಭಾವನೆಗಳು
ಹೊಸ ಹೊಸ ಬಣ್ಣಗಳಿಂದ ಮಿನುಗುತ್ತ
ವಯಸ್ಸಾಗಿರುವ ಹಳೆತನಕ್ಕೆ ಯೌವ್ವನವನ್ನು ತುಂಬಿಕೊಡುತ್ತಿದೆ!

ಹೊಸತರ ಬೇಡಿಕೆಗಳು ವರ್ತಮಾನಕ್ಕೆ ಬೇಕಾದರೆ
ಹೊಸ ಬೇಡಿಕೆಗೆ ಬೇಕಿರುವ ಹಳೆತನದ ಆಶೀರ್ವಾದ
ಆ ಆಶೀರ್ವಾದ ಜಗವನ್ನೇ ಕಟ್ಟಿಸುವುದು
ಹೊಸ ನಿಯಮಗಳು ಹೊಸ ಜೀವನದಲ್ಲಿ
ಹಳತೇ ಬುನಾದಿಯಾಗಿರುವಾಗ
ಅಂದು ನೋಡಿದ ಕುಡಿನೋಟದ ಆಸೆ ಇಂದು ಎದುರಾಗಿ ಬಂದು
ನೋಟದಲ್ಲಿ ಅಡಗಿರುವ ಭಾವನೆಗಳು ವಿಶ್ವದರ್ಶನವಾದಂತೆ!

ಸಂಗೀತ ಹಾಡುತ್ತಾ ಹಾಡುತ್ತಾ ಹಳೆಯದಾದರೂ
ಹಳೆಯ ಬುನಾದಿಯ ಹಿಂದಿನ ಸಂಗೀತ
ಸಾವಿರಾರು ಚಪ್ಪಾಳೆ ತರಿಸುತ್ತಿದೆ!

www.sriharikhoday.com

ಇಂದಿನ ಹೊಸತನ ನಾಳೆಗೆ ಹಳೆತಾಗಿ
ಹೊಸತನ ಹಳೆಯದಾದಂತೆಲ್ಲ ಹಳೆಯ ಕಣಿವೆಯ ಮೇಲೆ
ಹೊಸ ಹೊಸ ವಿಚಾರದ ಕಾಮನಬಿಲ್ಲು
ಹೊಸ ಕಾಮನಬಿಲ್ಲಿಗೆ ಹೊಸ ಹೊಸ ಬಣ್ಣಗಳ ಬಿಂಬಗಳು
ಹಳೆತನದಿಂದಲೇ ಹೊಸತನ ಉದಯ

**- ಶ್ರೀ ಹರಿ.**

13-12-2012



# 385

ಕವಿ ಹಳಬನಾದರೂ ಅವನ ಕೃತಿ ಎಂದೆಂದಿಗೂ ಹೊಸದು
ಕಾಲಕ್ಕೆ ಆಯಸ್ಸು ಇಲ್ಲವಂತೆ
ಹಳೆಯ ಗಾಳಿ ಸಿಗುವುದಿಲ್ಲವಂತೆ
ಹಳೆಯ ನದಿ ನೀರು ಮರುಕಳಿಸುವಿದಿಲ್ಲವಂತೆ
ಕವಿತೆಯ ಕೃತಿಯು ಸಾವಿಲ್ಲದ ಸ್ಥಿರವುಳ್ಳ ಅರ್ಥದ ಆಕಾಶ!

ಹಳೆ ಊಟ ಎಂಬ ಮಾತಿಲ್ಲ
ಕಳೆಯ ಚಂದಿರನೆಂಬ ಮಾತೇ ಇಲ್ಲ
ಹಳೆಯ ಸೂರ್ಯನ ಉದಯ ಎಂಬ ಮಾತೇ ಇಲ್ಲದಂತೆ
ಹಳೆ ದೇವರು ಎಂಬ ನುಡಿಗೆ ಅರ್ಥವಿಲ್ಲದ ಹಾಗೆ
ಹಳೆ ಕವಿಗಳು ಎಂಬ ಅರ್ಥವಿಲ್ಲದ ಮನೋಚೇಷ್ಟೆ
ಕವಿಯ ಕವಿತೆ ಎಂದೆಂದಿಗೂ ಅಮರ!

ಕಾಲ ಉರುಳುತ್ತಲೇ ಇದೆ
ಗುರುತೇ ಸಿಗದ ಕಾಲ
ಸೂರ್ಯಕಿರಣಗಳ ಬೆಳೆಯ ಬೆಳಕಿಗೆ ಗುರುತೇ ಇಲ್ಲದಂತೆ
ಬೀಸುತ್ತಿರುವ ಗಾಳಿಯು ಅನುಭವವಾಗಿಸಿದಂತೆ
ಕವಿಯ ಮನೋ ಆದೇಶದ ಸ್ಪಂದನೆ ಕಾಲಕ್ಕೆ
ಲೆಕ್ಕಿಸಲಿಕ್ಕಾಗಲಿಲ್ಲದಂತೆ
ಹಳೆಯದಾದ ಕವಿ ಹಳೆಯದಾದ ಅವನ
ಮನೋಸಮತೋಲನದ ಕೃತಿ



www.sriharikhoday.com

ಸಾಲವಿಲ್ಲದ ಎಂದೆಂದಿಗೂ ಸ್ಮೃತಿಪಟಲದಲ್ಲಿ ಹರಿದು
ಅನುಭವ ನೀಡುತ್ತ ಭವವಾದಾಗಲೆಲ್ಲಾ
ಹೊಸ ಹೊಸ ಗರಿಗರಿಯಾದ ಅನುಭವ ನೀಡಿ
ಸಮಾಜಕ್ಕೆ ಹೊಸ ಹೊಸ ಬುನಾದಿ ಕಟ್ಟುತ್ತ
ಕವಿಯ ಕೃತಿಕನ್ನಡಿ ಕಷ್ಟವಿಲ್ಲದೆ ಪ್ರತಿಬಿಂಬಿಸುವಂತೆ
ಎಂದೆಂದಿಗೂ ಕಷ್ಟವಿಲ್ಲದಂತೆ ಸತ್ಯವನ್ನು ಕೃತಿಯಲ್ಲಿ
ಪ್ರತಿಬಿಂಬಿಸುತ್ತದೆ!

**- ಶ್ರೀ ಹರಿ.**

14-12-2012



## 386.

ಮನದಲ್ಲಿ ಕವಿ ಮರೆಯಾದರೆ
ಮಸಣದಲ್ಲಿ ಮರೆಯಾದಂತೆ
ಕವಿಯ ಭಾವನೆ ಎಲ್ಲರ ಮನದಲ್ಲಿ ಮಿನುಗಿದರೆ
ಕವಿ ಹೊಸ ಜೀವನದಲ್ಲಿ ಜನ್ಮ ಪಡೆದಂತೆ!

ಸಾವಿಲ್ಲದ ಕವಿತೆ ಸಾವಿಲ್ಲದ ಶಿಲಾಶಾಸನಗಳು
ಸಾವಿಲ್ಲದ ಚರಿತ್ರೆ
ಡೊಳ್ಳಿಗೆ ಹೆಮ್ಮೆ ತರಿಸುತ್ತಿರುವ ತನ್ನ ಡೊಳ್ಳಿನ ಸದ್ದಿನಂತೆ
ಕವಿತೆಯ ರಚನೆ ಕವಿಗೆ ತನ್ನ ಕವಿತೆಯ ಹೆಮ್ಮೆ!

ಮುಳ್ಳಿನ ಹೊದಿಕೆಯಲ್ಲಿ ಸುಖ ಪಡುವ ಕವಿ
ಸಂತೋಷದ ಹೊದಿಕೆಯಲ್ಲಿ ನಿದ್ರಿಸುವ ಕವಿ
ಸಂತೋಷದ ಚಾಪೆಯ ಮೇಲೆ ತಾನು ಹೊರಳಾಡುವ ಕವಿ
ತನ್ನಲ್ಲಿ ಉದಯಿಸುತ್ತಿರುವ ಕವಿತೆಯನ್ನು ತಾನು ಓದಿ
ಹೊಸ ಸೂರ್ಯೋದಯದ ಹರುಷದಲ್ಲಿ
ಕವಿಯ ದಿನಗಳು ತೇಲಾಡುತ್ತದೆ!

ತಾನು ಹೂವಾಗಿ ಬೆಳೆಸಿದ ಸಂತೋಷದ ಹೂವು
ಹೂವನ್ನು ಗಿಡದಿಂದ ಬಿಡಿಸಿಕೊಳ್ಳದೆ
ಗಿಡದಲ್ಲೇ ಒಣಗಿಹೋದರೂ
ಕವಿಗೆ ಅದರ ಸುಗಂಧ ತನ್ನ ಉಸಿರು
ನಿಟ್ಟುಸಿರುಗಳಲ್ಲಿ ಆನಂದ ತರಿಸುತ್ತ
ತನ್ನ ಸಾಧನೆಗೆ ತಾನೊಬ್ಬನೇ ಚಪ್ಪಾಳೆ ಹಾಕುತ್ತಿರುವನು!

**- ಶ್ರೀ ಹರಿ.**

15-12-2012



www.sriharikhoday.com

## 387

ಹೊಸಬನೊಬ್ಬ ಹಳೆಯ ಕವಿಯಾಗಬಹುದೇ ?
ಇಂದು ನೇಗಿಲು ಕಟ್ಟಿದವನು ಹಳೆಯ ರೈತನಾಗಬಹುದೇ...
ಮೊದಲ ಬಾರಿ ಕೈಕುಲುಕಿಸಿ ಹಳೆಯ ಸ್ನೇಹಿತನಾಗಬಹುದೇ...
ಮೊದಲನೆ ಬಾರಿ ಹತ್ತಿದ ರಂಗಮಂಟಪದಲ್ಲಿ
ನಾನು ಹಳೆಯ ನಟನೆಂದು ಹೇಳಿಕೊಳ್ಳಬಹುದೇ....?

ಮೊದಲನೆ ಬಾರಿ ಪಂಚಾಂಗವ ಹಿಡಿದು ಜ್ಯೋತಿಷ್ಯ
ನೋಡುವವ ಹಳೆಯ ಶಾಸ್ತ್ರಿ ಆಗಬಹುದೇ....?
ಮೊದಲನೆ ಬಾರಿ ಹತ್ತಿದ ಸವಾರ ಹಳೆಯ ಕುದುರೆಯನ್ನು
ಸರಿ ಕುದುರಿಸಿಕೊಳ್ಳಬಹುದೇ....?
ಮೊದಲನೆ ಬಾರಿ ಹಿಡಿದ ಬಣ್ಣ ಬಣ್ಣಗಳ ಕುಂಚ ಹಿಡಿದು
ನಾನು ಹಳೆಯ ಚಿತ್ರಗಾರನೆಂದು ಹೇಳಿಕೊಳ್ಳಬಹುದೇ....?

ಮೊದಲನೆ ಬಾರಿ ಮಳಿಗೆಯ ಬಾಗಿಲು ತೆರೆದು
ನಾನು ಹಳೆ ವ್ಯಾಪಾರಿ ಎಂದು ಹೇಳಿಕೊಳ್ಳಬಹುದೇ....?
ಮೊದಲನೆ ಬಾರಿಗೆ ಸೌಟು ಕೈಯ್ಯಲ್ಲಿ ಹಿಡಿದು
ನಾನು ನಳಪಾಕ ಮಾಡಬಲ್ಲೆ ಎಂದು ಹೇಳಬಹುದೇ....?
ಹೊಸಬನೊಬ್ಬ ತೆಂಗಿನ ಗಿಡ ಹತ್ತಿ
ಎಳನೀರನ್ನು ಮರದಿಂದ ಇಳಿಸಬಲ್ಲನೇ....

ಜ್ಞಾನಕ್ಕೆ ಕುಳಿತವನೊಬ್ಬನು ಮನಸ್ಸನ್ನು ನಿಲ್ಲಿಸಲಾಗದೆ
ದೇವರ ಅನುಭವಿಸಿರುವೆ ಎಂದು ಹೇಳಿಕೊಳ್ಳಬಹುದೇ....?



www.sriharikhoday.com

ಕವಿ ಮಾತ್ರ ಹಳೆಯ ಪದದ ಅರ್ಥ ಹೊಸ ಅರ್ಥದಲ್ಲಿ
ವರ್ಣಿಸಬಲ್ಲನೇ....?

ಹಳೆ ಇತಿಹಾಸ ಇಲ್ಲದೆ ಹೊಸದನ್ನು ಊಹಿಸಲೂ ಆಗದೆ
ಹಳೆಯದರಲ್ಲಿರುವ ಶಕ್ತಿ ವ್ಯಕ್ತಪಡಿಸಲು
ಹಳೆ ಅನುಭವ ಇಲ್ಲದೆ ಹೊಸ ಅರ್ಥಗಳನ್ನು ವರ್ಣಿಸಲಾಗದಂತೆ
ನಿನ್ನೆ ಇಲ್ಲದ ಈ ದಿನದ ಅರ್ಥ.....ಪೂರ್ಣವಾಗದಂತೆ
ನಮ್ಮ ಹಳೆ ಸಂಬಂಧದಲ್ಲಿರುವ ಸುಖ ಕಲ್ಪನೆಗೆ ಹೊಸ ಹೊಸ
ಅರ್ಥಗಳನ್ನು ನೀಡಬಲ್ಲ ಅರ್ಥಗಳ ವ್ಯಾಕರಣ ಆಗಬಹುದೇ....

ಪ್ರಕೃತಿಯ ರೂಪ ದಿನವೂ ಹೊಸತನ್ನು ಪ್ರತಿಬಿಂಬಿಸುತ್ತಿರುವುದು
ಕಾಲದ ಚೇಷ್ಟೆಯೋ....ಆಕಾಶದ ಚೇಷ್ಟೆಯೋ...
ನಮ್ಮ ಮನೋವಿಕಾರದ ಚೇಷ್ಟೆಯೋ? ಹಳೆಯ ಚೇಷ್ಟೆಗಳ
ಅನುಭವವಿಲ್ಲದೆ
ಹೊಸ ಚೇಷ್ಟೆಗಳ ಸೂಚನೆಯು ಕೂಡ ಸಿಗದು
ಹಳೆಯದಿಲ್ಲದೆ ಹೊಸದಿಲ್ಲ ಇದು ಕವಿಯ ಅನುಭವ

**- ಶ್ರೀ ಹರಿ.**

18-12-2012

## 388

ಎಷ್ಟು ದಿನಗಳು ಕಳೆಯಬೇಕು ?
ಎಷ್ಟು ದಿನಗಳು ನಾನು ಹೀಗೆಯೇ ಇರಬೇಕು.
ಅದೃಷ್ಟವಂತರು ಎಂದಾಗುವುದು
ಎಷ್ಟು ದಿನಗಳು ಬೇಕು ಸುಖವನ್ನು ಅನುಭವಿಸಲು ?

ಕಾಲ ಒಂದು ಖಾಲಿ ಪಾತ್ರೆ ಇದ್ದಂತೆ
ಪಾತ್ರೆಯಲ್ಲಿ ನೀನು ಅಡುಗೆ ಮಾಡಲು ಎಷ್ಟು ಸಮಯ
ಬೇಕು ಎಂದು ಕೇಳಿದಂತೆ
ನಮ್ಮ ಕ್ರಿಯಾಶೀಲ ಮನೋ ಇಲ್ಲದೆ
ನಮ್ಮ ಪ್ರಯತ್ನಗಳು ಇಲ್ಲದೆ ಎಂದೂ
ಸುಖದ ನೆರಳು ಕೂಡ ಕಾಣದು !

ಪಡೆಯಬೇಕಾಗಿರುವ ಸುಖ
ಮನ ಇಚ್ಛೆ ಪಡೆಯುತ್ತಿರುವ ಸುಖ
ಬೇರೆಯವರ ಸುಖ ಬಯಸುವ ಭಾವನೆ
ನಮ್ಮ ಮನವು ಕಲಿತರೆ ದಿವಸಗಳು ಬೇಕಿಲ್ಲ
ಕ್ಷಣ ಕ್ಷಣದಲ್ಲಿಯೇ ಸುಖದ ಅರಿವು ಬೇರೆಯವರ ಸುಖ ಬೆರೆತರೆ
ನಮ್ಮ ಕಷ್ಟಗಳು ತಾನೇ ಕಳೆದುಹೋಗಿ ಸುಖದ ಚಿಗುರು !

ಯೋಚಿಸಿ ಕಾಣುವ ಮುಂಚೆ
ಕಣ್ಣೆದುರಿಗೆ ಕಾಣುತ್ತದೆ ಕಡಿಮೆ ಆದ ಕಷ್ಟಗಳು



ಸುಖದ ಕನಸು ಕಾಣುವಂತೆ
ಕನಸುಗಳು ನನಸಾಗುತ್ತ ಬೇರೆಯವರು ನಮ್ಮ ಕಷ್ಟದಲ್ಲಿ ಬೆರೆತು
ಮುಳ್ಳಾಗಿರುವ ಕಷ್ಟಗಳನ್ನು ಬೇರೆಯವರು ಗುಡಿಸಿ
ಸುಖದ ಹಾದಿಯ ಸಜ್ಜುಮಾಡುತ್ತ

ಎಷ್ಟು ದಿನಗಳು ಬೇಕು ಎಂಬ ಮಾತು ಬದಲು
ಹೆಚ್ಚು ದಿನಗಳು ನಮ್ಮ ಜೊತೆಗಿರಬೇಕೆಂಬ ಬಯಕೆ
ಮುಂದೆ ಮನದ ದಿಗಂತ ಕಾಣುವುದು

**- ಶ್ರೀ ಹರಿ.**

19-12-2012



www.sriharikhoday.com

## 389

ಮನಸೇ ನಿನ್ನ ಕಿಟಕಿಯನ್ನು ತೆರೆದಿಡು
ಮನಸೇ ನಿನ್ನ ಮನೆಯ ಬಾಗಿಲನ್ನು ಭದ್ರಪಡಿಸು
ಮನಸೇ ನಿನಗೆ ಬಂಧಿ ನಾ ಮಾಡುತ್ತಿಲ್ಲ
ನೀ ಎಲ್ಲಾದರೂ ಹೋಗು ಆದರೆ ನನ್ನ ಕೇಳಿ ಹೋಗು!

ನಿನ್ನ ಕೆಲಸ ಮಾಡಲು ಮಾಡು
ಕರ್ತವ್ಯಗಳನ್ನು ಮರೆಯದೆ ಮೊದಲು ಮಾಡಲು ಓಡೋಡಿ ಮಾಡು
ನೀ ಹೊರ ಹೋದರೆ ಜನಗಳು ಕಾದು ನಿಂತಿರುವಂತೆ
ನೀ ಮರೆಯದೆ ಎಲ್ಲರ ಜೊತೆ ಮಾತನಾಡಿ ಆದಷ್ಟು
ಸಹಾಯ ಮಾಡು ಓ ಮನವೇ!

ನೀ ಕಷ್ಟ ಪಡುವುದ ಕಂಡರೆ ಅಯ್ಯೋ ಎನಿಸುತ್ತಿದೆ ನನಗೆ
ನೀ ಹೆದರದೆ ಮನಸ್ಸೇ ದಿಟ್ಟತನದಿಂದ ಮನ್ನುಗ್ಗಿ ಕೆಲಸ ಮಾಡು
ದ್ವೇಷವಿಲ್ಲದ ನಿನಗೆ ಉತ್ತೇಜನ ನೀಡಿ ಉತ್ಸಾಹ ತುಂಬುವೆನು ನಾನು
ಕರ್ತವ್ಯದಲ್ಲಿ ಮುಳುಗಿಹೋಗಿರುವ ಮನಸ್ಸೇ
ನಿನಗೆ ಯಾರ ಸಹಾಯವೂ ಬೇಕಿಲ್ಲ
ದೇವರ ಸಹಾಯ ಜೊತೆ ಜೊತೆಗಿದೆ!

ನೀ ತೆರೆದಿರುವ ಕಿಟಕಿಗಳಿಂದ ಹೊಸ ಹೊಸ ಕೆಲಸಗಳು ಕಾದಿವೆ
ನೀ ಅವರನ್ನು ನಿರ್ಲಕ್ಷಿಸದೆ ಪ್ರೀತಿಯಿಂದ ಮಾತನಾಡು
ಅವರಿಗೆ ನೀ ಪ್ರೀತಿ ಹೆಚ್ಚಾಗಿ ಕೊಟ್ಟರೆ
ಅವರಿಂದ ನಿನಗೆ ಪ್ರತಿಫಲವಾಗಿ ಪ್ರೀತಿ ದೊರೆತು
ಹೊಸ ಕ್ರಿಯೆಗಳ ಆಲೋಚನೆ ನಿನ್ನಲ್ಲಿ ಉದಯವಾಗುತ್ತದೆ!



www.sriharikhoday.com

ಏನೇ ಆಗಲಿ ನಿನ್ನ ಬಾಗಿಲನ್ನು ಭದ್ರಗೊಳಿಸಿಕೊಂಡಿರು
ಬೇರೆಯವರನ್ನು ಒಳಗೆ ಬರಗೊಡದೆ
ನೋಡಿ ನಿನಗೆ ಸುಖತರುವ ಕೆಲಸಗಳ ಜೊತೆಗೆ ಜೊತೆಯಾಗು
ಕರ್ತವ್ಯ ಒಂದು ಕಡೆ, ಕಾದು ನಿಂತಿರುವವರು ಒಂದು ಕಡೆ

ಎಲ್ಲರ ಜೊತೆ ಮಾಡನಾಡಿಕೊಳ್ಳುತ್ತ
ನಿನ್ನ ಪ್ರೀತಿಯ ಆಕಾಶದಲ್ಲಿ ಎಲ್ಲರ ಜೊತೆ ಬೆರೆಸಿಕೊಂಡು
ಓ ಮನಸೇ ನಿನಗೆ ಬರುವುದು ಸುಖವೋ ಸುಖ ಸುಖವೋ ಸುಖ
ಮನವೇ ನೀನು ಚಿಂತೆಯಲ್ಲಿ ನಿದ್ರಿಸಬಲ್ಲೆ ಸುಖಪಡು ಮನವೇ!
ನಿನ್ನ ತೆರೆದಿರುವ ಕಿಟಕಿಗಳಿಂದ.

**- ಶ್ರೀ ಹರಿ.**

21-12-2012

## 390.

ವಿಶ್ವದ ಹಿತವೇ ಕವಿಯ ಬೇಡಿಕೆ
ವಿಶ್ವದ ಕಷ್ಟಗಳಿಗೆ ಕವಿಯ ಪ್ರಾರ್ಥನೆ
ವಿಶ್ವದ ಕನಸುಗಳಿಗೆ ಕವಿಯ ಕನಸುಗಳು
ವಿಶ್ವದ ನನಸುಗಳೇ ಕವಿಯ ಕನಸುಗಳು!

ಕವಿಯ ಮನದಲ್ಲಿರುವ ಕನ್ನಡಿ
ಕವಿದಿರುವ ಕಷ್ಟಗಳಿಗೆ ಉತ್ತರಗಳನ್ನು ಪ್ರತಿಬಿಂಬಿಸುತ
ಹಾಲಿನಂತಿರುವ ವಿಶ್ವದ ಮನಸ್ಸಿಗೆ
ಮುಂಬರುವ ಕಾಲಕ್ಕೆ ಸುಖದ ಹೆಪ್ಪಾಕುತ್ತಿರುವನು

ಸಮತೋಲನ ಮನಸ್ಸುಳ್ಳ ಕವಿಗೆ
ತಾನು ಸತ್ತಿರುವೆನೋ ಬದುಕಿರುವೆನೋ ತಿಳಿಯದಿರುವ ಕವಿಗೆ
ಭೂತ ಭವಿಷ್ಯ ವರ್ತಮಾನಗಳನ್ನು
ಏಕಕಾಲದಲ್ಲಿಯೇ ಜೀವಿಸುತ್ತಿರುವ ಕವಿಗೆ

ಬಣ್ಣಗಳಿಗೆ ಬಣ್ಣ ಮರೆತರೆ
ಕವಿಯು ಬಣ್ಣಗಳಿಗೆ ಬಣ್ಣವನು ನೀಡುತ್ತ
ಸೂರ್ಯನಿಗೆ ಉದಯಿಸುವುದು ಮರೆತರೆ
ಉದಯಕ್ಕೆ ಸೂಚಿಸುವ ಕವಿ ಸಾವಿಲ್ಲದ ಕವಿಯ ಧರ್ಮಕ್ಕೆ
ಬೇಸರವಿಲ್ಲದ ಕವಿಯ ಮನೋವೈಶಾಲ್ಯ



ಎಚ್ಚರದಲ್ಲಿ ಕವಿ ಕಾಣುವ ಸ್ವಪ್ನಗಳಿಗೆ
ಪ್ರಕೃತಿಯು ಒಪ್ಪಿ ಕವಿ ಹೇಳಿದಂತೆ
ಜರುಗಿಸುತ್ತಿರುವ ಕಾರ್ಯಗಳಿಗೆ
ರೋಚಕವಾಗದ ಶಕ್ತಿಯು ಕವಿಯ ಮನದಲ್ಲಿ ಬೆರೆತು
ಮಹಾನ್‌ಶಕ್ತಿಗೆ ದಾಸನಾಗಿ

ಕಷ್ಟ ಕಂಡರೆ ಅಳುತ್ತ, ಸುಖ ಬಂದರೆ ಹಿಗ್ಗುತ್ತ
ತನ್ನನ್ನು ತಾನು ಮರೆತಾಗ ಹಾಡಿ ಕುಣಿಯುವ
ಪ್ರಕೃತಿಯ ಜೊತೆ ಸಂತೋಷದಿ ಹಾಡಿ ಕುಣಿಯುತ್ತಿರುವನು!
ಪೆದ್ದ ಪೆದ್ದನಾಗಿ ನಟಿಸುವ ಕವಿ

**- ಶ್ರೀ ಹರಿ.**

22-12-2012

www.sriharikhoday.com

## 391

ಕವಿಯ ಅನಿಸಿಕೆಯ ರಸ
ಮನಸ್ಸಿಗೆ ಹೊಸತನವನ್ನು ನೀಡುವ ಆಗಸ
ಮನವ ತಿಳಿದು ಅನುಭವಿಸಿ
ತಾನು ಕವಿಯ ಅನಿಸಿಕೆಯ ಪಾಠ ಕಲಿತರೆ
ಹೊಸ ಮಾನವನಾಗಿ ಜಗದ ಧರ್ಮದ ಅರ್ಥ ತಿಳಿದುಕೊಳ್ಳಬಲ್ಲ!

ನಮ್ಮ ಕಣ್ಣಿಗೆ ಕಾಣುತ್ತಿರುವ ಜಗತ್ತನ್ನು
ನಾನು ಕಣ್ತೆರೆದು ನೋಡಿದರೆ
ನಮ್ಮಲ್ಲಿ ಇಲ್ಲದಿರುವುದು ಅದು ಅವರಿಗೆ ಬೇಕು
ನಮ್ಮಲ್ಲಿ ಇರುವುದು ಅವರಿಗೆ ಇದ್ದರೆ ಸುಖ ಬರುವುದು ಎಂದು
ನಮ್ಮ ಮನ ಹೇಳಿದರೆ ಕವಿಯ ಅನಿಸಿಕೆಯ ರಸ
ಜನರು ಅನುಭವಿಸಿ ಭಾಗ್ಯವಂತರಾಗುವಂತೆ!

ಬರೀ ಕಾಗದ ಲೇಖನಿ ಹಿಡಿದಿರುವವನಲ್ಲ ಕವಿ
ಬರೀ ಕತ್ತಲ ಕೋಣೆಯಲ್ಲಿ ಕುಳಿತಿರುವವನಲ್ಲ ಕವಿ
ತನ್ನನ್ನೇ ತಾನು ಮರೆಯಬಲ್ಲ ಶಕ್ತಿಯುಳ್ಳವನು ಕವಿ
ಈ ಗುಣ ಕವಿಗೆ ಅಕ್ಷರಗಳ ಕಲಿಸಿತೆ?
ತಮ್ಮಿಂದ ಉದ್ಭವವಾದ ಕವಿಯ ರಸದ
ಪರಿಣಾಮದಿಂದ ಕವಿಯಾದನೆ ?

ಸತ್ಯ ತನ್ನಲ್ಲಿ ಅರಿದಾದ ಮೇಲೆ ಹೇಗೆ ಬಂತು
ಎಂದು ತಿಳಿಯಲು ಬಯಸದ ಕವಿ



ಈ ಭಾವನೆ ಸತ್ಯದ ಆಯಾಮದಲ್ಲಿರುವುದು
ಈ ಸತ್ಯ ಎಲ್ಲರೂ ಅನುಭವಿಸಲಿ ಎಂಬ ಕವಿಯ ಭಾವನೆ
ಸಮಾಜದಲ್ಲಿ ಬೆರೆಯುವ ಅನುಭವ ಕಲಿಸಿ

ಎಲ್ಲರೂ ಸುಖ ಸಂತಸಗಳನ್ನು ಹಂಚಿಕೊಳ್ಳಬಲ್ಲ
ಭಾವನೆಗಳನ್ನು ದೂಡಿಸಬಲ್ಲ ಕವಿ
ನಾವೆಲ್ಲ ಕವಿಯ ಅನಿಸಿಕೆಯ ರಸವನ್ನು ಉಂಡು
ಜಗತ್ತಿನ ಬೆಳವಣಿಗೆಗಾಗಿ ಮನ ಹರಿಸೋಣ!

**- ಶ್ರೀ ಹರಿ.**

24-12-2012



www.sriharikhoday.com

## 392

ಮಾತಿಗೆ ಒಂದು ಇತಿಹಾಸ
ಮನಕ್ಕೆ ಒಂದು ಇತಿಹಾಸ
ಸಂಶಯಕ್ಕೊಂದು ಇತಿಹಾಸ
ದ್ವೇಷಕ್ಕೊಂದು ಇತಿಹಾಸ

ನಡುವಳಿಕೆಗೆ ಒಂದು ಇತಿಹಾಸ
ಮೈತ್ರಿಗೆ ಒಂದು ಇತಿಹಾಸ
ಜೊತೆ ಬದುಕುವುದಕ್ಕೊಂದು ಇತಿಹಾಸ
ತಬ್ಬಲಿ ಪ್ರೀತಿಗೆ ಇತಿಹಾಸವೇ ಇಲ್ಲ

ಸದಾ ಶುದ್ಧವಾಗಿರುವ ಪ್ರೀತಿ
ಅದೇ ಪವಿತ್ರವಾದ ಪ್ರೀತಿ
ಬೇಡಿಕೆ ಇಲ್ಲದೆ ಹರಿಯುವ ಪ್ರೀತಿ
ಬೆಳಕು ಎಲ್ಲೆಡೆ ಹರಿಯುವಂತೆ
ಪ್ರೀತಿ ಎಲ್ಲೆಡೆ ಹರಿಯುತ್ತದೆ!

ಪ್ರಶ್ನೆಗಳು ಇಲ್ಲದೆ ಮಳೆ ಸುರಿಯುವಂತೆ
ದ್ವೇಷಗಳು ತಿಳಿಯದ ಗಾಳಿಯಂತೆ
ಬೇಸರ ತಿಳಿಯದ ಬೆಳಕಿನಂತೆ
ಪ್ರೀತಿ ಪವಿತ್ರವಾಗಿ ಜೀವಿಸುವ ಬಾಳು!



ಪ್ರೀತಿ ಹರಿಯುವುದಕ್ಕೆ ಅಡ್ಡವಾಗಿರುವುದು ದ್ವೇಷಗಳು
ದ್ವೇಷಗಳನ್ನು ಬದಿಗೆ ಸರಿಸಿ ತೆರೆದರೆ
ಪ್ರೀತಿಯ ಹೊಳೆ ಹರಿದು ಆನಂದದ ಪ್ರತಿಬಿಂಬಗಳು
ಬಣ್ಣ ಬಣ್ಣಗಳು ಸಂಕೋಚಗಳಿಲ್ಲದ ಹರುಷ
ಆಳತೆ ಇಲ್ಲದ ಇರುವಿಕೆ

ಹೇರಳವಾಗಿ ನಮ್ಮಲ್ಲೇ ಇರುವ ದ್ವೇಷಗಳು
ಕಳ್ಳರಂತೆ ಬಚ್ಚಿಡುತ್ತಿದ್ದಾರೆ ಅದುಮಿ
ತಬ್ಬಲಿಯಾದ ಪ್ರೀತಿಗೆ

**- ಶ್ರೀ ಹರಿ.**

25-12-2012

www.sriharikhoday.com

## 393

ಒಂದು ಒಳ್ಳೆ ಕಥೆ ಬರೆಯುವ ಪ್ರಯತ್ನ
ದಡದ ಮೇಲಿರುವ ಕಪಿಗೂ..... ದಡದ ಹತ್ತಿರವಿರುವ
ಮೊಸಳೆಗಳಿಗೂ
ಕಪಿ ಮತ್ತು ಮೊಸಳೆಗಳಿಗೆ ಜೊತೆ ಜೀವಿಸಿ.... ಎಂದರೆ
ಅರ್ಥ ಕಾಣುವಿರಾ....?

ನದಿಯಲ್ಲಿ ಹಿಂಡು ಹಿಂಡಾಗಿ ಮೊಸಳೆಗಳ ಸಂಸಾರ
ದಡದ ಮೇಲೆ ಹಿಂಡು ಹಿಂಡಾಗಿ ಕಪಿಗಳ ಗುಂಪಿನ ಸಂಸಾರ
ಅವರವರ ಜೀವನ ನಿಯಮಗಳನ್ನು ಅನುಭವಿಸಿಕೊಂಡು
ಜೀವಿಸುತ್ತಿದ್ದಾರೆ
ಇದು ಕಪಿಗಳ ಸಂಸಾರ.... ಮತ್ತು ಮೊಸಳೆಗಳ ಸಂಸಾರ....!

ನಮ್ಮ ಮನೆಯಲ್ಲಿ ನಮ್ಮೆದುರು ಹೊರಗಿನವರೇ....?
ನಮ್ಮ ಮನೆಯಲ್ಲಿ ನಮ್ಮ ಹಿರಿಕರು ಬೇರೆಯವರೇ....?
ನಮ್ಮ ಅಜ್ಜ ಅಜ್ಜಿ ಬೇರೆಯವರ ಮನೆಯವರೇ....?
ನಾವೊಬ್ಬರನ್ನೊಬ್ಬರು ಮೊಸಳೆಯಂತೆ ತಿನ್ನುವವರೇ....?
ನಮ್ಮವರು ನಾವುಗಳು.... ನಾವುಗಳೇ ನಮ್ಮವರು.....!

ಕಪಿಗಳು ಜೊತೆ ಜೊತೆ ಏಕೆ ಇರಬೇಕು....?
ತಮ್ಮ ಸಂತತಿಯನ್ನು ಕಾಪಾಡಿಕೊಂಡು ಪ್ರಕೃತಿ ಕಲಿಸಿರುವ ಜೋಡಣೆ
ನಿಯಮಗಳು
ಮೊಸಳೆಗಳು ಏಕೆ ಜೊತೆ ಜೊತೆ ಇರಬೇಕು...?
ತಮ್ಮನ್ನು ತಮ್ಮ ಸಂತತಿಯನ್ನು ಕಾಪಾಡಿಕೊಳ್ಳಲು
ಪ್ರಕೃತಿ ಕಲಿಸಿರುವ ರಕ್ಷಣೆಯ ಜೋಡಣೆ....!



www.sriharikhoday.com

ಒಂದೇ ಸಂಸ್ಕೃತಿಯುಳ್ಳ ಮಾನವರು
ನಮ್ಮ ದೇಶದಲ್ಲಿ ಜೊತೆ ಜೊತೆ ಜೀವಿಸುತ್ತಿದ್ದರೂ
ಪರಕೀಯ ಸಂಸ್ಕೃತಿ ನಮ್ಮ ಮನೋನಿರ್ಣಯಗಳನ್ನು ಸಡಿಲಪಡಿಸಿ
ನಮ್ಮನ್ನೇ ಬೇರೆ ಬೇರೆಯವರನ್ನಾಗಿ ಮಾಡಿಸಿ
ಪರಕೀಯರು ನಮ್ಮ ದೇಶವನ್ನು ಕಬಳಿಸಲು ಪ್ರಯತ್ನ ಮಾಡಿದರು!

ಅನುಭವಗಳಿಂದ ಕಲಿತ ನಮ್ಮ ಅನುಭವ
ನಮ್ಮ ಮನೆತನಕ್ಕೆ ನಮ್ಮ ಮನೆತನ ಕಲಿತಿರುವ
ಸುಖ-ದು:ಖ-ಕಷ್ಟಗಳು ನಮ್ಮ ಮನೆತನದ ಅನುಭವ
ನಮ್ಮ ಮನೆಗೆ ಏನು ಸುಖ, ಏನು ಕಷ್ಟ, ಎಂದು
ಅನುಭವದಿಂದ ಕಲ್ಪಿಸಿ
ಯಾವ ಹೆಚ್ಚಿನ ಪ್ರಯತ್ನವಿಲ್ಲದೆ ಎಲ್ಲರೂ ಸುಖವನ್ನರಸಿ
ಸುಖಜೀವಿಗಳಾಗಿದ್ದಾರೆ
ಜೊತೆ ಜೀವನ ಸುಖವೋ ಸುಖ....

ಮನದ ಸಂಬಂಧಗಳು ಒಬ್ಬರನ್ನೊಬ್ಬರು ಅಂಟಿಕೊಳ್ಳಲಾಗದು
ಮನದ ಸಂಬಂಧಗಳೂ ಒಬ್ಬರನ್ನೊಬ್ಬರ ಜೊತೆ ಮಾಡಲಾಗದು
ಶರೀರದಲ್ಲಿರುವ ಮನ ಒಂದೇ ರೀತಿ ಎಲ್ಲರ ಮನದಲ್ಲಿ ನಡೆದರೆ
ಶರೀರದಿಂದ ಬೇರೆ ಬೇರೆಯಾದರೂ
ನಮ್ಮ ಮನೆತನದ ಮಾರ್ಗವನ್ನೇ ಅನುಸರಿಸಿದರೆ

ಜೊತೆ ಭಾವನೆಗಳ ಗುಂಪೇ ಇತಿಹಾಸದ ಗುಂಪಾಗಿ
ವರ್ಷಗಳ ಜೊತೆ ಅನುಭವ
ಇದು ಮನೋನಿರ್ಧಾರಗಳು ತಮ್ಮಲ್ಲೇ ಚಿಗುರಿಸಿಕೊಂಡು
ನಮ್ಮ ಮನೆತನವನ್ನು ಕಟ್ಟುತ್ತಾ
ಜೊತೆ ಜೊತೆಗೆ ಜೊತೆಗಿರುವವರನ್ನು ಬೆಳೆಸುತ್ತಾ ಬೆಳೆಸುತ್ತ
ಹತ್ತಿರದಲ್ಲೇ ಇರುವ ಊರನ್ನು ಪ್ರಯತ್ನಿಸುತ್ತ
ಒಂದು ರೀತಿ ನಿಯಮವುಳ್ಳ ದೇಶವನ್ನು ಕಟ್ಟುವ
ಶಕ್ತಿ ಸಾಮರ್ಥ್ಯ ಗುಂಪು ಗುಂಪಾಗಿ ಜೀವಿಸುವರಲ್ಲಿ ಬರುತ್ತದೆ!

ಮೊಸಳೆ ಪ್ರೀತಿ... ದ್ವೇಷಗಳು ಅವರವರ ರೀತಿ
ಮೊಸಳೆಗಳನ್ನು ಏಕೆ ನೀವು ಜೊತೆಗಿರುವರಿ ಎಂದು ಕೇಳಿದರೆ
ಅದು ಜಾಣ್ಮೆಯೋ.... ಮೂರ್ಖತನವೋ...?

ಕಪಿಗಳನ್ನು ನೀವು ಹೇಗೆ ಜೊತೆಗಿದ್ದೀರಿ ಎಂದು ಕೇಳಿದರೆ
ಅವುಗಳು ಜೊತೆ ಜೊತೆಗಿರುವುದು
ಜಾಣ್ಮೆಯೋ... ಮೂರ್ಖತನವೋ...?

ನಮ್ಮವರ ಜೊತೆಗೆ ನಾವುಗಳು ಜೀವಿಸುತ್ತಿದ್ದರೆ ಅದು
ಜಾಣ್ಮೆಯೋ... ಮೂರ್ಖತನವೋ...?
ಇದು ಜೊತೆ ಜೊತೆಯಾಗಿ ಜೀವಿಸದಿರುವ ಜನಗಳ ಬುದ್ಧಿವಂತಿಕೆಯ
ಪ್ರಶ್ನೆ....!

ಜನುಮ ಕೊಟ್ಟ ತಾಯಿ-ತಂದೆಯರನ್ನೇ ಲೆಕ್ಕಿಸದೆ ಇರುವ
ಮಾನವೀಯ ಕಪಟ ಜೀವಿಗಳ ಪ್ರಶ್ನೆ
ಒಂದು ಸಮಾಜದಲ್ಲಿ ಜೀವಿಸಲು ಗಾಳಿ.... ನೀರು.... ಬೆಳಕು ಬೇಕು
ಹಾಗೆ
ಜೀವಿಸಲು ಆಸರೆಯೂ ಬೇಕು....!

ದೇಹ ಬೆಳೆಸಿ ಕಾಪಾಡಿಕೊಳ್ಳುವುದಕ್ಕೆ ಊಟ... ನೀರು... ವಿಶ್ರಾಂತಿ ಬೇಕು
ಅತಿ ಕಡಿಮೆ ಪ್ರಯತ್ನದಲ್ಲಿ ಜೊತೆ ಜೀವಿಸುವ ಗುಂಪುಗಳಿಗೆ ಕಷ್ಟವೇನು
ಇರದು
ಎಲ್ಲಾ ಕೆಲಸಗಳನ್ನು ಹಂಚಿಕೊಂಡು ಒಬ್ಬನೇ ಮಾಡುವ ಪ್ರಯತ್ನದಲ್ಲಿ
ನೂರಾರು ಜನ ಸೇರಿದರೆ ಎಷ್ಟು ಸುಲಭವೋ...

ಕಷ್ಟ ವಿಲ್ಲದೆ ಸುಖ ಬರುವ ರೀತಿ ಜೊತೆ ಜೀವನ
ನಮ್ಮವರು ಹಿರಿಕರು ಎಂಬ ಭಾವನೆಗಳಿಗೆ ಗೌರವ ಸಲ್ಲಿಸಿದರೆ
ಪ್ರಕೃತಿಯನ್ನು ನಾವು ಗೌರವಿಸಿದಂತೆ

**ಶ್ರೀ ಹರಿ.**

26-12-2012



www.sriharikhoday.com

## 394

ನನಗೆ ಅನಿಸಿದ್ದು ನನ್ನ ಮನ ಕಂಡಿದ್ದು
ಒಂದು ಅನುಭವದ ನೆರಳು
ಸತ್ಯಕ್ಕೆ ಜಯ ಸಂಕಲ್ಪಕ್ಕೆ ಜಯ
ಸತ್ಯದ ಸಂಕಲ್ಪವನ್ನು ನಂಬಿದರೆ ಜಯವೋ ಜಯ

ದೊರೆತು ಬರುವುದು ನಮ್ಮ ಅದೃಷ್ಟ ಅಲ್ಲ
ಕೇಳದೇ ಬರುವುದು ನಮ್ಮ ಪುಣ್ಯಗಳಲ್ಲ
ಆ ಮಹಾನ್‌ಶಕ್ತಿ ಬೇಡದೇ ನೀಡಿ
ಕೊಟ್ಟಿರುವುದು ನಮ್ಮ ಮನಸ್ಸಿನ ಆಟಗಳ ಪರೀಕ್ಷೆ

ದೊರೆತ ಭಾಗ್ಯ ನಮ್ಮ ಸೌಭಾಗ್ಯವಲ್ಲ
ಅದು ಅದರ ಪ್ರಸಾದ ನೀಡಿ
ಅದನ್ನೆ ಪೂಜೆಯ ಪ್ರಸಾದವಾಗಿ ಸೇವಿಸುವ ಆ ಮಹಾನ್‌ಶಕ್ತಿ
ಜಗತ್ತಿನ ಪ್ರತಿಯೊಂದನ್ನು ನೋಡುವ ನೋಟ
ನಮಗೆ ದೊರೆತಿರುವ ಪ್ರಸಾದ

ದೊರೆತಿರುವುದು ಪ್ರಕೃತಿಗೆ ಉಪಯುಕ್ತ ಎಂದು ಉಪಯೋಗಿಸಿ
ಅದರಿಂದ ಬರುವ ಆನಂದ
ನಾವು ಅದನ್ನು ಸುಖ ಎಂದು ಕರೆಯುತ್ತ
ಅದು ಹೊಸ ಕೆಲಸ, ದೇವರ ಆದೇಶ ಎನ್ನುತ
ಭಯವಿಲ್ಲದೆ ಸ್ಥೈರ್ಯ ಹೆಚ್ಚಿಸಿಕೊಂಡು

ನೀಡಿದ ವರ ಯಶಸ್ಸು ನಮಗೆ ಎಂದು
ಮತ್ತೆ ಮತ್ತೆ ಅನೇಕ ಹೆಚ್ಚಿನ ವರಗಳು ವರದಾನವಾಗಿ ನೀಡಲು
ದೇವರು ಹಿರಿಕರು ಗುರುಗಳು ಕಾದು ನಿಂತಿರುವರೆಂದು
ಎಚ್ಚರದಿಂದ ರಾತ್ರಿ ಹಗಲಾಗಿಸಿ ದುಡಿಯುತ
ನಾವು ದೇವರಿಗೆ ತಲೆ ಬಗ್ಗಿ ನೀಡುವ ಭಕ್ತಿಯ ನಮನ

**- ಶ್ರೀ ಹರಿ.**

27-12-2012



## 395

ಬದುಕುವುದು ಬರೀ ಬದುಕಲ್ಲ
ಬದುಕುವುದು ಒಂದು ಕಲೆ
ಒಂದು ರಾಗದಲ್ಲಿ ಅಡಗಿರುವ ಒಂದು ತಾಳಕ್ಕೆ ಬೇಕಿರುವಂತೆ
ಲಯಬದ್ಧವಾಗಿ ಹಾಡಿದಂತೆ
ಬದುಕು ಒಂದು ಸಂತಸ ಹಂಚುವ ಅನುಭವದ ಶೃಂಗಾರ!

ಬದುಕುವುದಕ್ಕೆ ಬುನಾದಿಯೇ ಮನಸ್ಸು
ಸುಂದರವಾದ ಕಲ್ಪನೆಯುಳ್ಳ ಮನಸ್ಸಿಗೆ
ಸಂತೋಷ ಜೀವನದ ಅನುಭವ
ನನ್ನವಳ ಕಣ್ಣು ಮುತ್ತಿನಂತಿದೆ
ನನ್ನವಳ ರೂಪ ಚಂದ್ರನಂತಿದೆ
ನನ್ನವಳನ್ನು ಬಿಟ್ಟರೆ ನನ್ನ ಜೊತೆ ಬೇರೆ ಸರಿಸಮಾನರಿಲ್ಲ
ಎಂದರೆ ಜೀವವೇ ಒಂದು ವಿಶಾಲ ಅನುಭವ!

ನನ್ನವಳ ಅಡುಗೆ ಅತ್ಯುತ್ತಮ ನನ್ನವಳ ನಡಿಗೆ ಹಂಸ
ವೈಯ್ಯಾರದಂತೆ
ನನ್ನವಳ ನೋಟ ನನ್ನ ಮನೋ ಕೋನವನ್ನೇ ಕರಗಿಸುತ್ತಿದೆಯೆಂದು
ಮನವು ತನಗೆ ಬೇರೆಯವರಿಗೆ ಹೇಳಿ ಜೀವಿಸುವ
ನನ್ನ ಮಕ್ಕಳು ಬಹಳ ಚುರುಕು
ನನ್ನ ಕೊನೆಯ ಮಗ ಭಾರಿ ಬುದ್ಧಿವಂತನೆಂದು
ಮನವು ಸಂತೋಷಿಸಿದರೆ
ಬದುಕಿನ ದಿನಗಳಲ್ಲಿ ಸೂರ್ಯೋದಯದ ಅನುಭವ!

www.sriharikhoday.com

ಬದುಕು ನಮ್ಮ ಮೇಲೆ ಏನೋ ಬೆಳೆದಂತೆ
ತೃಪ್ತಿಯ ಅನುಭವ ಮನಕ್ಕೆ ಇಲ್ಲದಿದ್ದರೆ
ಒಂದು ನರಕ ಅನುಭವ
ತೃಪ್ತಿಯ ಅನುಭವ ನಾವು ಪಟ್ಟರೆ
ಬದುಕು ಒಂದು ಸುಂದರ ಅನುಭವದ ಶೃಂಗಾರ!

- **ಶ್ರೀ ಹರಿ.**

28-12-2012



## 396.

ನಮ್ಮ ನೆನಪುಗಳೇ ಸುಳ್ಳಾಡುತ್ತಿದೆ
ಸತ್ಯವನ್ನು ತಿಳಿದು ಸುಳ್ಳಾಡುತ್ತಿದೆ
ಹೆದರಿ ಸುಳ್ಳಾಡುತ್ತಿದೆಯೋ ಅಥವಾ
ಹೆದರಿಕೆ ಇಲ್ಲದೆಯೇ ಸುಳ್ಳಾಡುತ್ತಿದೆಯೋ ತಿಳಿಯದೆ
ತಾನೊಬ್ಬನು ಸುಳ್ಳಾಡಿದರೆ ಆಗಬಹುದು

ಮನೆಯವರೆಲ್ಲ ಸೇರಿ ಸುಳ್ಳು ಹೇಳಿದರೂ ಆಗಬಹುದು
ಊರೇ ಒಟ್ಟಾರೆ ಸಮಾಜದ ಜನಗಳೆಲ್ಲ ಸೇರಿ ದೇಶವೇ
ತಮ್ಮ ತಮ್ಮ ನೆನಪುಗಳ ಸುಳ್ಳು ಹೇಳುತ್ತಿದ್ದರೆ
ಜೀವನ ಹೆದರಿಕೆಯನ್ನು ಕಳೆದುಕೊಂಡು
ಹಿಂದೆ ಹೋಗುವ ಬದಲು ಮುಂದೆ ಮುಂದೆ ಹೋಗುವ ಬದಲು ಹಿಂದೆ
ಹಿಂದೆ ಮುಂದೆ ಎಂದು ಸುಳ್ಳು ಹೇಳುತ್ತ
ತಮ್ಮ ಜೀವನದ ಬದುಕಿಗೆ ಸ್ತಬ್ಧವಾಗಿ ನಾವು ಜೀವಿಸುತ್ತಿದ್ದೇವೆ

ನಾನು ಇಂಥವನು
ನನ್ನನೇನೆಂದು ತಿಳಿದುಕೊಂಡಿರುವೆ ನೀನು
ನಾನು ಎಲ್ಲರಿಗಿಂತ ಅತಿ ಶ್ರೇಷ್ಠ
ಜನಗಳು ನನಗೆ ದೇಶದ ನಾಯಕ ಎಂದು ಕೊಂಡಾಡುತ್ತಿರುವರೆಂದು
ಸುಳ್ಳು ಹೇಳಲು ಮಂದಿಯ ಜೊತೆಗೆ ಸೇರಿ
ಚಪ್ಪಾಳೆ ತಟ್ಟಿಸಿಕೊಂಡು ಸುಳ್ಳು ಹೇಳುವ ಮನೋವೃತ್ತಿ
ತಾನು ಮಾಡುತ್ತಿರುವ ಕೆಲಸದ ಅರ್ಥ ತಿಳಿಯದೆ



www.sriharikhoday.com

ದೇಶದ ಬೆಳವಣಿಗೆ ಬೆಳೆಸದೇ ಬೆಳೆಸುತ್ತಿರುವೆನೆಂದು ಸುಳ್ಳು ಹೇಳುತ್ತ
ಸುಳ್ಳಿನ ಕಂತೆಯಲ್ಲಿ ತಾವೇ ಮುಳುಗಿಹರು

ನಾನು ನೀರಿನ ಮೇಲೆ ನಡೆಯಬಲ್ಲೆ
ನಾನು ಬೆಂಕಿಯನ್ನು ನುಂಗಬಲ್ಲೆ ನಾನು ಸಾರವನ್ನೆ ನುಂಗಬಲ್ಲೆ
ನಾನು ದೇಶವನ್ನೇ ಆಳಬಲ್ಲೆನೆಂದು
ಸುಳ್ಳು ಹೇಳುವರಾಗಿ ನಮ್ಮ ಮನೋಸತ್ಯ ಸುಳ್ಳಿನ ಸುಳಿಗೆ ಸಿಲುಕಿಸಿ

ಸುಳ್ಳಿಗೆ ಜಯ ಅಪೇಕ್ಷೆಪಡುತ್ತಿದ್ದಾರೆ
ಸುಳ್ಳು ಹೇಳುವುದಕ್ಕೊಂದು ಮಿತಿಯುಂಟು
ನಾನು ಮನಸ್ಸು ಮಾಡಿದರೆ
ಈ ದೇಶವನ್ನೆ ನೀರಿನ ಮರುಭೂಮಿಯಲ್ಲಿ ಮುಳುಗಿಸಬಲ್ಲೆ

ನಾನು ಹಠ ಮಾಡಿದರೆ ಈ ದೇಶವನ್ನು
ನನ್ನ ಮನೋಶಕ್ತಿಯಿಂದ ಎತ್ತಬಲ್ಲೆ
ನಾನು ಯಾರೆಂದು ನಿನ್ನ ಜನಗಳು ತಿಳಿದಿಲ್ಲ ಎಂದು
ಸುಳ್ಳುಮಾತಿನ ಸರಮಾಲೆ
ಈ ಪ್ರಜೆಗಳು ಸರಮಾಲೆ ಕತ್ತಿಗೆ ಹಾಕಿಕೊಂಡು
ತಮಗೇ ತಿಳಿಯದೆ ನೇಣು ಹಾಕಿಕೊಂಡು
ಉಸಿರನ್ನು ಸುಳ್ಳಿಗೆ ಅರ್ಪಿಸುತ್ತಿದ್ದಾರೆ

**ಶ್ರೀ ಹರಿ.**

29-12-2012



# 397

ಋತುಗಳು ಬರುತ್ತಿವೆ ಹೋಗುತ್ತಿವೆ
ಕಷ್ಟದ ಬಾಗಿಲು ಮುಚ್ಚುತ್ತವೆ ಸುಖದ ಬಾಗಿಲು ತೆರೆಯುತ್ತವೆ
ಒಂದೇ ರೀತಿ ಇರುವುದು ಋತುಗಳಿಗೆ ತಿಳಿಯದ ಭಾಷೆ
ಚಳಿಗಾಲದಲ್ಲಿ ಮಂಜು ಇದ್ದಾಗ ಚಳಿಯನ್ನು ಅನುಭವಿಸಲೇಬೇಕು
ಬೇಸಿಗೆಯಲ್ಲಿ ಹೆಚ್ಚಿನ ಬಿಸಿಲು ಬಂದಾಗ ಅನುಭವಿಸಲೇಬೇಕು

ವಸಂತ ಬಂದಾಗ ಸಂತಸ ತಾನಾಗಿಯೇ ಜೊತೆ ಇರುವುದು
ಎಲ್ಲವೂ ಖಾಲಿ ಭರ್ತಿ ಭರ್ತಿ ಖಾಲಿ
ಈ ವಿಚಿತ್ರವೇ ಪ್ರಕೃತಿಯನ್ನು ಉಸಿರಾಡಿಸುತ್ತಿದೆ
ಯಾವ ವ್ಯತ್ಯಾಸವಿಲ್ಲದೆ ಜೀವಿಸುವ ಒಂದು ವಿದ್ಯೆ

ಯಾವಾಗಲೂ ಎಂದೆಂದಿಗೂ ಒಂದೇ ತರಹ
ಯಾವ ಸ್ಥಿತಿ ಗತಿಗಳೂ ಇಲ್ಲದ ಜೊತೆಗಿರುವುದು ಪ್ರೀತಿ
ಪ್ರೀತಿ ಕೊಟ್ಟರೂ ಪ್ರೀತಿ ಖಾಲಿಯಾಗುವುದಿಲ್ಲ
ಅದು ಎಂದಿಂದಿಗೂ ಖಾಲಿಯಾಗುವುದಿಲ್ಲ

ಖಾಲಿಯಾಗದ ಪ್ರೀತಿ ದಿನೇ ದಿನೇ ಹೆಚ್ಚುತ್ತ
ಜೊತೆ ಪ್ರೀತಿ ಜಗತ್ತಿಗೆ ಬೇಕಾದ ಸಹಾಯಗಳನ್ನು ಮನದಲ್ಲೇ
ಚಿಗುರಿಸುತ್ತಿದೆ
ಬಂಡವಾಳವಿಲ್ಲದ ಪ್ರೀತಿ ಕೊಟ್ಟು ಕೊಳ್ಳುವ ವ್ಯಾಪಾರ
ಕಾಸಿಲ್ಲದ ವ್ಯವಹಾರ ಭರ್ತಿ ಖಾಲಿಯಾಗದ ವ್ಯಾಪಾರ

ಪ್ರಗತಿಗೆ ಬುನಾದಿ ಹಾಕುವ
ನಾಳೆಯ ಕಾಲಕ್ಕೆ ಪ್ರೀತಿಯೇ ಇಂದಿಗೆ ಬುನಾದಿಯಾಗುತ್ತದೆ
ಪ್ರೀತಿಯ ಮನೋಪರಿಸರ ನಮ್ಮ ಮನಕ್ಕೆ ಕಲಿಸಬೇಕಾಗಿದೆ
ಪ್ರೀತಿಯ ಸುಂದರ ರೂಪಕ್ಕೆ ಮನಸ್ಸಿನಿಂದ ಮಸಿ ಬಳಿಯಬೇಡ
ಮನಸ್ಸಿಗೆ ಈ ವಿದ್ಯೆ ಕಲಿಸಿದರೆ
ಸುಖದ ಬಾಗಿಲು ಎಂದೂ ಎಂದೆಂದಿಗೂ ತೆರೆದು
ನಮ್ಮ ಮನದ ಮನೆಗೆ ಬಂದವರೂ ಕೂಡ ಮೆಚ್ಚಿ

ಸುಖದ ಬಾಗಿಲನ್ನು ತೆರೆದು
ಜೊತೆ ಜೀವಿಸುತ್ತ ವರ್ತಮಾನ ಭವಿಷ್ಯಗಳಲ್ಲಿ
ಪ್ರೀತಿಯ ದೀಪವನ್ನು ಉರಿಸಿ
ಎಂದೆಂದಿಗೂ ಆರದೆ ಆ ಪ್ರೀತಿಯ ಹಣತೆ
ಬೆಳಕನ್ನು ಮಿನುಗಿಸುತ್ತಲೇ ಇರುತ್ತದೆ

**- ಶ್ರೀ ಹರಿ.**

30-12-2012



www.sriharikhoday.com

## 398

ಹರುಷದ ಹೊಸ ವರುಷ
ಹಸುರಿನ ಹಿನ್ನೆಲೆಯಲ್ಲಿ
ಭವಿಷ್ಯವನ್ನು ಚಿತ್ರಿಸುವ ಆತುರ
ಕಾತುರದಿಂದ ಎದುರು ನೋಡುತ
ಕಾಣದ ಭಾಷೆ ತಿಳಿಯದ ನಮ್ಮಗಳಿಗೆ
ಕೈ ಹಿಡಿದು ಕಾಲದ ಭಾಷೆಯನ್ನು ನೀಡುತ್ತದೆ

ನಮ್ಮ ಜೊತೆ ಕಾಲ ಸುಖ ಬಯಸುತ್ತಿರುವುದ ಕಂಡು
ಸುಖಕ್ಕೆ ಅಡ್ಡವಾಗಿರುವ ಎಲ್ಲವನ್ನು
ಆಕಾಶ ನುಂಗುವುದನ್ನು ನೋಡುತ
ಕನಸು ನನಸಾಗುವ ಕಾಲದಲ್ಲಿ
ನಿಮ್ಮ ಜೊತೆ ನಾನಿರುವೆ ಎಂಬ ಕಾಲದ ಭಾಷೆ
ಕೇಳಲು ಬಾಯಿಲ್ಲದ ಮೂಕನಿಗೂ
ಕನಸು ನನಸಾಗುತ್ತಿರುವ ಕಾಲ ನಮ್ಮ ಜೊತೆ ಹರಿದಾಡುತ್ತಿದೆ

ನಮ್ಮ ಜೀವನದಲ್ಲಿ ಸುಖದ ಇತಿಹಾಸವನ್ನು ಬಯಸುವ ಕಾಲ
ನಮ್ಮ ಜೀವನದಲ್ಲಿ ಅಸೂಯೆಗಳನ್ನು ಮರೆಸುವ ಕಾಲ
ನಮ್ಮ ಜೀವನದಲ್ಲಿ ದ್ವೇಷಗಳನ್ನು ಮರೆಸುವ ಕಾಲ
ನಮ್ಮ ಜೀವನದಲ್ಲಿ ಕ್ಷಣ ಕ್ಷಣಕ್ಕೂ ಹೊಸತನ್ನು ಅನುಭವಿಸುವ ಕಾಲ
ನಮ್ಮ ಈ ಜಗದಲ್ಲಿ ಯಾರಿಗೂ ರೋಗಗಳು ಪೀಡಿಸದಿರುವ ಕಾಲ

ನಮ್ಮ ಜೀವನದಲ್ಲಿ ಆರೋಗ್ಯ ಯಶಸ್ಸನ್ನು ಅನುಭವಿಸುವ ಕಾಲ
ನಮ್ಮ ಮನ ನೋಡುವ ನೋಟಗಳು ಹೊಸ ದೃಷ್ಟಿಕೋನವ

ಬದಲಾಯಿಸುವ ಕಾಲ
ಭೂಮಿತಾಯಿಗೆ ಹೆಚ್ಚು ಬೆಳೆ ಬೆಳೆಯಬೇಕೆಂಬ ಆಸೆ ಬಂದಿರುವ ಕಾಲ
ಬೇಸತ್ತ ನದಿಗಳು ತುಂಬಿ ಹರಿಯಬೇಕೆಂದು ಆಸೆ ಬಂದಿರುವ ಕಾಲ

ಹಿರಿಯರು ಕಿರಿಯರಿಗೆ ಸುಖದ ಜೀವನವನ್ನು ಕಲಿಸುವ ಕಾಲ
ಪ್ರಾಣಿಗಳು ಜೀವಜಂತುಗಳು ಮರೆತಿರುವ ಸುಖವನ್ನು ಮತ್ತೆ
ಅನುಭವಿಸುವ ಕಾಲ
ಕಣ್ತೆರೆದು ಅರಳಿ ನಿಂತಿರುವ ಹೂಗಳಿಗೆ ಗಾಳಿಯಲ್ಲಿ ಸುಗಂಧವನ್ನು
ಬೆರೆಸುವ ಕಾಲ
ಗಿಣಿ ನವಿಲು ಕೋಗಿಲೆಗಳು ಮರೆತಿರುವ ಹಾಡು ಮತ್ತೆ ನೆನೆದು
ಉಲ್ಲಾಸದಿಂದ ಹಾಡಿ ಹಾರುವ ಕಾಲ

ಹರುಷವನ್ನು ಸೂಚಿಸುತ್ತಿರುವ ದಿಗಂತಗಳು ನಮ್ಮ ಜೀವನದ
ಹೊಸ್ತಿಲಿನ ತೋರಣಗಳಾಗಿ
ಪರಿಸರದಲ್ಲಿ ಕಂಡ ಮಾವು ತೆಂಗು ಸುಖದಲ್ಲಿ ಹೆಚ್ಚಿನ ಫಸಲನ್ನು
ನೀಡುವ ಕಾಲ
ಬೇಸತ್ತಿರುವ ಸೂರ್ಯ-ಚಂದ್ರರು ಬೇಸರಿಕೆಯ ಮರೆಸಿ ಪ್ರಜ್ವಲಿಸುವ
ಕಾಲ

ಅಲ್ಪದಲ್ಲಿಯೇ ವಿಶ್ವ ಸುಖವನ್ನು ತರಿಸುವ ಕಾಲ
ಭೇದಗಳನ್ನು ಮರೆಸಿ ಸರಿಸಮಾನತೆಯನ್ನು ಅನುಭವಿಸುವ ಕಾಲ
ಆಳ್ವಿಕೆಗಳು ದಬ್ಬಾಳಿಕೆಗಳು ತಮ್ಮ ಸ್ಥಾನವನ್ನು ಅರಿತು
ತಮ್ಮ ಜೀವನವನ್ನು ಸರಿಪಡಿಸಿ ಅರ್ಥೈಸಿಕೊಳ್ಳುವ ಕಾಲ

ಎಲ್ಲರ ಮಾನ ಎಲ್ಲರ ಆಸ್ತಿ ದೇಶದ ಗಡಿಗಳಲ್ಲಿ
ಹೆದರಿಕೆ ಓಡೋಡಿ ಹೋಗಿ
ಈ ಜಗತ್ತಿನಿಂದ ತೊಲಗಿ ಹೋಗುವ ಕಾಲ
ಕಾಲವೋ ಕಾಲ ವರ್ಷವೋ ವರ್ಷ ಹರುಷವೋ ಹರುಷ

**- ಶ್ರೀ ಹರಿ.**

31-12-2012



www.sriharikhoday.com

## 399

ಬಾಳ ಬೆಳಕಲ್ಲಿ ಹುಟ್ಟಿದ ಮೇಲೆ
ಜೀವಿಸಲು ರಸ್ತೆ ಕಾಣುತ್ತಿಲ್ಲ
ಎಲ್ಲಡೆ ಮಂಜು ತುಂಬಿದೆ ಎನ್ನುವರು
ಮಂಜು ಕರಗಿ ಹೋದರೂ ಮಂಜು ಆವರಿಸಿದೆ
ಎಂದು ಹೇಳಿ ಕಾಲವ ಕಬಳಿಸುತ್ತಿರುವರು

ಪಾಪ ಪುಣ್ಯ ಎಂದು ತಿಳಿಯದ ಹೂಗಳು ಅರಳಿ ನಿಂತು
ಕೆಲಸ ಮಾಡದೆ ಕಷ್ಟ-ಸುಖಗಳ ಶ್ಲಾಘಿಸುತ್ತ
ಚಳಿಗಾಲದಲ್ಲಿ ಬೆಂಕಿ ಎದುರಿಗೆ ಕೂತು
ಈತ ಹೀಗೆ, ಆತ ಹಾಗೆ ಎಂದು ನಿಂದಿಸುತ್ತ
ಏನು ಮಾಡುವುದು ಎಲ್ಲೆಡೆ ಮಂಜು ಮುಸುಕಿಸಿದೆ ಎಂದು
ಬೆಳಕು ಹರಡಿ ಬೆಳಕು ಆವರಿಸಿ ನಿಂತರೂ

ನಮ್ಮ ಮನದ ಮಂಜು ಕರಗಿಸಲು ಇಚ್ಛೆ ಇಲ್ಲದ
ಉರಿಸಲು ಬೆಂಕಿ ಇಲ್ಲದಾಗ
ನಮ್ಮ ಮನದ ದ್ವೇಷದ ಬೆಂಕಿಯನ್ನು ಹಚ್ಚಿಕೊಂಡು
ಬಾಳ ಬೆಳಕಲ್ಲಿ ಬಾಳಲು
ತಮ್ಮ ಜನ್ಮವನ್ನು ಶಪಿಸುತ್ತಿರುವರು

ಹಾಡುತ ರಾಗಕ್ಕೆ ತಾಳ ಬೆರೆತಂತೆ
ರಾಗಗಳಲ್ಲಿ ಆಲಾಪನೆ ಇದ್ದಂತೆ
ನಿಂದನೆಗಳೇ ಆಲಾಪಗಳಾಗಿ

ತಾಳಗಳು ಸೋಂಬೇರಿ ಕಟ್ಟೆಯ ಮೇಲೆ ಸೇರಿಕೊಳ್ಳುವ ವೇಳೆಯಾಗಿ
ತಲೆಯೆತ್ತಿ ಬಾಳ ಬೆಳಕನ್ನು ನೋಡದೆ ಇದ್ದರೆ
ಕಾಲಕ್ಕೆ ಬೇಸರವಾಗಿ ಕಣ್ಮರೆಯಾಗುವುದು

ಬಾಳುವವನೇ ಭಾಗ್ಯವಂತ
ಶಪಿಸಲು ತಿಳಿಯದವನೇ ಅದೃಷ್ಟವಂತ
ಪಾಪ ಪುಣ್ಯಗಳನ್ನು ಮರೆತು ಬಾಳುವವನೇ
ಹೂವಿನಂತೆ ಪ್ರಕೃತಿಯ ಆರಾಧಕ
ಬಾಳ ಬೆಳಕಲ್ಲಿ ಎಲ್ಲರ ಜೊತೆ ಬೆರೆತು
ಪ್ರಕೃತಿಯಂತೆ ಬಾಳ ಬೆಳಕಿನಲ್ಲಿ ಜೀವಿಸುವವನು
ಪ್ರಕೃತಿಯ ಪ್ರಯೋಜಕ

**- ಶ್ರೀ ಹರಿ.**

2-1-2013



# 400.

ಉಸಿರಾಡುವುದಕ್ಕೆ ಗಾಳಿ ಬೇಕು
ಹಸಿವಿಗೆ ಊಟ ಬೇಕು
ನಿದ್ರೆಗೆ ಆಸರೆ ಬೇಕು
ಮಾನಕ್ಕೆ ಉಡುಪು ಬೇಕು

ಗಾಳಿ ದೇವರು ಕೊಟ್ಟಿರುವನು
ಹಸಿವೆಗೆ ದೇವರು ಭೂಮಿ ಮತ್ತು ನೀರನ್ನು ನೀಡಿರುವನು
ನಿದ್ರೆ ನೆರಳಿಗೆ ಆಳುವವರ ನಿರ್ಬಂಧಗಳು
ಮಾನಕ್ಕೆ ಉಡುಪಿಗೆ ಹಣದ ಬೇಡಿಕೆ

ದೇವರು ನೀಡಿದ ಗಾಳಿಗೆ ಬೆಲೆ ಕಟ್ಟಲಿಲ್ಲ
ದೇವರು ಕೊಟ್ಟ ಭೂಮಿಗೆ ನೀರಿಗೆ ಮಾನವ ಬೆಲೆ ಕಟ್ಟಿದ
ನಿದ್ರೆ ನೆರಳಿಗೆ ಮಾನವ ಬೆಲೆ ಕಟ್ಟಿದ
ಮಾನವನ ಮಾನಕ್ಕೆ ಅವಶ್ಯವಾದ ಉಡುಪಿಗೆ
ಆಳುವವರು ಸುಂಕ ಹಾಕಿದರು

ಅಳತೆ ಮಾಡುವ ಸ್ವಭಾವ ಬೆಲೆ ಕಟ್ಟುತ್ತದೆ
ಅಳತೆಗಳು ಮಾನವನ ದುಃಖಗಳಿಗೆ ಕಾರಣ
ಪ್ರೀತಿ ಮಾಡಲು ಅಳತೆ ಸಂಬಂಧಗಳಿಗೆ ಅಳತೆ
ಸ್ನೇಹಕ್ಕೆ ಅಳತೆ ಮಾನಕ್ಕೆ ಅಳತೆ ಅಳತೆ ಮೀರಿ ಜೀವಿಸಲು ಬಂದರೆ
ಜೀವನದಲ್ಲಿ ನೆಮ್ಮದಿ ಸುಖ ಜೊತೆ ಜೀವಿಸುತ್ತದೆ



www.sriharikhoday.com

ನಾಣ್ಯಗಳಿಲ್ಲದ ಜೀವನ
ನಮ್ಮ ಮನೋ ಬೇಡಿಕೆಗಳಿಗೆ ಗಡಿಗಳು
ಆಡಂಬರವಿಲ್ಲದ ಜೀವನದ ವಿಧಾನ
ಮನೋ ಬೇಡಿಕೆಗಳಿಗೆ ನಿರ್ಬಂಧ
ಎಲ್ಲರಿಗೂ ಸುಖಜೀವನ ಬೇಕೆಂಬ ಸಂಕಲ್ಪ

ಹುಚ್ಚು ಮನೋತರಂಗಗಳಿಗೆ
ಒಬ್ಬೊಬ್ಬರ ಹೋಲಿಕೆಗಳಿಗೆ ಕಡಿವಾಣ
ವ್ಯರ್ಥ ಭಾವನೆಗಳಿಗೆ ಸೆರೆಮನೆ
ಅಸೂಯೆ ದ್ವೇಷಗಳಿಗೆ ಗಲ್ಲು
ಭಯವಿಲ್ಲದ ನೆಮ್ಮದಿಯ ಜೀವನ

ಯುವಶಕ್ತಿಯಿಂದ ಕೂಡಿ ಉದಯವಾಗುವ ಸಮಯ
ಈ ಮಾನವನ ಕಷ್ಟಗಳಿಗೆ ನಾವು ಜೊತೆ ಸಂಕಲ್ಪ ಮಾಡಿದರೆ
ನಮ್ಮ ಅನಿಸಿಕೆಗಳು ನಮ್ಮ ಹತ್ತಿರವೇ ಓಡಿಬರುತ್ತವೆ.

- ಶ್ರೀ ಹರಿ.

3-1-2013



www.sriharikhoday.com

## 401

ಬದುಕು ಎಂಬ ಬತ್ತಿಯಲ್ಲಿ
ಪ್ರೀತಿ ಎಂಬ ದೀಪ ಅಡಗಿದೆ
ಜೀವ ಎಂಬ ಎಣ್ಣೆ ಬತ್ತಿಯನ್ನು ಉರಿಸುತ್ತಿದೆ

ತಾನೇ ಉರಿದು ಪ್ರೀತಿಯೆಂಬ ದೀಪದ ಬೆಳಕನ್ನು
ನಂಬಿಕೆಯೆಂಬ ಆಕಾಶದಲ್ಲಿ ಹರಡಿ
ಜೀವನವೆಂಬ ದಾರಿಯಲ್ಲಿ ಹಾದಿ ತೋರಿಸುತ್ತ
ಗೆಳೆಯರು ನೆಂಟರು ಆಪ್ತರು ಸೇರಿ
ಮನೆತನ ಅಕ್ಕ-ಪಕ್ಕದವರು ಸಮಾಜ ಕಾಲ ಸೃಷ್ಟಿಯಾಗಿ
ಸಂಬಂಧಗಳು ಆಳುತ್ತಲೇ ಇವೆ

ನಂಬಿಕೆಯೆಂಬ ಆಕಾಶಕ್ಕೆ ಬೆಳಕು ಬೇಕು
ಆ ಬೆಳಕಿಗೆ ಪ್ರೀತಿಯೆಂಬ ದೀಪ ಬೇಕು
ಬಳ್ಳಿಗೆ ತನ್ನ ಮೇಲೆ ಹೂವು ಅರಳುತ್ತದೆ ಎಂದು ತಿಳಿಯದೆ
ಬಳ್ಳಿಯ ಮೇಲೆ ಹೂವು ಅರಳಿ ನಿಂತಾಗ
ಅರಳಿದ ಹೂ ಹೇಗೆ ಎಂದು ಬಳ್ಳಿ ಆಕಾಶಕ್ಕೆ ಕೇಳಿದಾಗ
ನಂಬಿಕೆ ಬೆಳೆಸುತ್ತಿದೆ ಎಂಬ ಉತ್ತರ

ಆ ಉತ್ತರದ ಎತ್ತರ ವಿಶ್ವದಲ್ಲಿ ಸರಿಸಮಾನತೆಯಲ್ಲಿದೆ
ವಿಶ್ವದಲ್ಲಿ ಆವರಿಸಿ ವಿಶ್ವವನ್ನೇ ತನ್ನ ಉದರದಲ್ಲಿ ತುಂಬಿಕೊಂಡಿದೆ
ಬದುಕಿನ ಜೊತೆ ಬತ್ತಿ, ಬತ್ತಿಯ ಜೊತೆಗೆ ದೀಪ
ದೀಪದ ಜೊತೆಗೆ ಜೀವ, ಜೀವದ ಜೊತೆಗೆ ಪ್ರೀತಿಯ ಬೆಳಕು
ಬೆಳಕಿನ ಜೊತೆ ಆಕಾಶ
ಆಕಾಶದ ಜೊತೆಗೆ ನಂಬಿಕೆ

ಒಬ್ಬೊಬ್ಬರ ಜೊತೆ ಅಂಟಿಕೊಂಡಿರುವ ಸಂಬಂಧಗಳು
ವಿಶ್ವದ ಜೊತೆ ಉಸಿರಾಗಿ ಬೆಳೆಯುತ್ತ
ಸೂರ್ಯನ ಉದಯ-ಅಸ್ತಮಾನಗಳ ಬೆಳಕು ಆಕಾಶ
ಕಾಲವನ್ನೇ ಬತ್ತಿಯಾಗಿ ಪ್ರೀತಿಯನ್ನು ಬೆಳೆಸುತ್ತಿರುವ
ಪ್ರಕೃತಿಯ ಮೂಲ ತಂತ್ರವಾಗಿ ನಂಬಿಕೆ

ಒಬ್ಬೊಬ್ಬರಲ್ಲಿ ಪ್ರೀತಿಯ ಉದಯ
ಪ್ರೀತಿಯಿಂದ ನಂಬಿಕೆ ಉದಯ
ನಂಬಿಕೆಯಿಂದ ಕೊನೆಯಿರದ ಆಕಾಶ
ಹುಲ್ಲಿಗೆ ಹಸಿರಾಗುವ ನಂಬಿಕೆ
ಶರೀರಕ್ಕೆ ಸಾಧಿಸುವೆನೆಂಬ ನಂಬಿಕೆ
ತಾಯಿಗೆ ತನ್ನ ಮಕ್ಕಳು ಸರಿ ಬಾಳುವರೆಂಬ ನಂಬಿಕೆ

ಎಲ್ಲವೂ ಆಕಾಶ ಎಲ್ಲವೂ ಪ್ರೀತಿ
ಎಲ್ಲವೂ ಸಂಬಂಧ
ಎಲ್ಲವೂ ಸೇರಿರುವ ಬೆಳಕು
ಎಲ್ಲವೂ ಜೊತೆ ಜೊತೆ ಸೇರಿದಾಗ
ಅಂಟಿಕೊಳ್ಳಲಾಗದ ತ್ಯಾಗದ ಉದ್ಭವ

ಅಂಟಿಕೊಳ್ಳಲಾಗದ ತ್ಯಾಗ ಎಲ್ಲರಲ್ಲಿ ಇದ್ದು
ಇಲ್ಲದೆ ಪ್ರಕೃತಿಯ ಜೊತೆ ಆಟದಲ್ಲಿ
ಜೊತೆ ಜೊತೆ ಇದ್ದು
ಜೀವನದ ಅನುಭವ ಅನುಭವಿಸುತ್ತ ಸುಖ ನೀಡಿ
ಕೊನೆಯಿಲ್ಲ ಮೊದಲಿಲ್ಲ
ಕೊನೆ ಮೊದಲಿಲ್ಲದ ಕಾಣುವ ಎದುರಲ್ಲಿ
ಒಬ್ಬೊಬ್ಬರ ಜೊತೆ ಬೆರೆತುಹೋಗಿರುವರು

**- ಶ್ರೀ ಹರಿ.**

04-01-2013



## 402.

ನಾನು ನಾನು ಎಂಬ ಭ್ರಮೆ
ನನ್ನದು ನನ್ನದು ಎಂಬ ಒಂದು ಭ್ರಮೆ
ನಾನು ಎಲ್ಲ ತಿಳಿದಿಹೆನೆಂಬ ಭ್ರಮೆ
ನಾನು ಮಾತ್ರ ಮಾಡಬಲ್ಲೆ ಎಂಬ ಅಹಂಕಾರದ ಭ್ರಮೆ
ನಾನು ಮಾತ್ರ ರಾಜ್ಯವನ್ನು ಆಳಬಲ್ಲೆ ಎಂಬ ಭ್ರಮೆ
ಹೆಚ್ಚಾಗುತ್ತಿರುವ ನಾನು ನಾನು ಎಂಬುದು
ತನ್ನ ಕಷ್ಟಗಳಿಗೆ ಕಾರಣ ಆಗಬಹುದು

ತಾನು ಏನೆಂದು ಅರಿಯದ ಸೂರ್ಯ
ತಾನು ಯಾರು ಏನು ಎಂದು ಅರಿಯದ ಚಂದಿರ
ನಾನು ಯಾರು ಎಲ್ಲಿ ಎಂದು ಅರಿಯದ ಕಾಲ
ನಾನು ಎಂದು ಮರೆತಿರುವ ಸಮುದ್ರ
ನಾನು ಎಂದು ಅರ್ಥವ ತಿಳಿಯದ ಬೆಟ್ಟ ಪರ್ವತಗಳು
ನಾನೆಂಬ ಅಹಂಕಾರವಿಲ್ಲದ ಭೂಮಿ
ಈ ಮಾನವ ನಾನು ನನ್ನದು ಎಂದು ಹೇಳಿ ಹೇಳಿ
ಕಷ್ಟಗಳಲ್ಲಿ ತನ್ನ ಮನದ ಆಳದ ಬಾವಿಯಲ್ಲಿ ಮುಳುಗಿಹನು

ಪ್ರಜೆಗಳನು ದ್ವೇಷಿಸಿ ಮತ್ತೆ ತನಗೆ ಮತ ನೀಡಿ ಎಂದು ಬೇಡುವನು
ಬೇಡಿಕೆ ಈಡೇರಿದ ಮೇಲೆ ಎಲ್ಲವ ಮರೆತು
ಪರಾಕುಗಳ ಬೇಡಿಕೆ ವಿಚಿತ್ರವೋ ವಿಚಿತ್ರ!
ಈ ಜಗದ ಮಾನವರು ತಾನು ಏನೆಂದು ಮರೆತು
ಸಮಾಜದಲ್ಲಿ ಬೆರೆತು ತಾನು ಒಬ್ಬರಿಗಾದರೂ
ದ್ವೇಷವಿಲ್ಲದೆ ಬೇರೆಯವರ ಕಷ್ಟದಲ್ಲಿ ಬೆರೆತರೆ
ಮಾನವರಾಗಿ ಬದುಕಲು ಸಾರ್ಥಕ

**- ಶ್ರೀ ಹರಿ.**

05-01-2013



www.sriharikhoday.com

## 403

ಮುಪ್ಪು ಏರುತ್ತದೆ
ಬಾಳು ಕಾಲದ ವಶವಾಗುತ್ತದೆ
ಸಂದೇಹ ಇಲ್ಲದ.... ಪಶುವಿನಂತೆ
ನನ್ನಲ್ಲಿ ನನಗೆ ಸಂದೇಹಗಳಿಲ್ಲ!

ದೇಹ ಸುಖಗಳಿಗೆ ತೃಪ್ತಿ ಆಗದ ಕಾರಣ
ಮಹಾನ್‌ಶಕ್ತಿಯಲ್ಲಿ ವಿಶ್ವಾಸ ನನಗಿರುತ್ತದೆ
ಆತ್ಮಶಾಂತಿಯನ್ನು ನೀಡುವ ಭಾವನೆ
ಶೀಘ್ರದಲ್ಲಿ ದೊರಕದೆ
ಇರುವ ಹೊತ್ತನ್ನು ಹಿಡಿದುಕೊಂಡು

ಗೋಳನ್ನು ಮರೆಸುವ ಸುಖ ಕಾಣುತ್ತ
ಮಹಾನ್‌ಶಕ್ತಿ ತನ್ನಲ್ಲಿ ತಾನಾಗಿ ಬಂದು ಸೇರುತ್ತಿರುವುದ ಕಂಡು
ದೇಹಕ್ಕೆ ಸುಖ ಒಳ್ಳೆಯದೋ
ಆತ್ಮಶಾಂತಿಯ ಹಾದಿ ಸರಿಯೋ ಎಂದು
ಯೋಚಿಸುತ್ತಾ ಒಂದೇ ಹಾದಿಯಲ್ಲಿ ನಿಂತು
ಎರಡು ದೆಸೆ ಮುಗಿಯದೆ ಹಾದಿಗಳಾಗಿರುವಾಗ

ಈ ಕಡೆ ಹೋದರೂ ಹುಚ್ಚ ಎನ್ನುವರು
ಆ ಕಡೆ ಹೋದರೂ ಹುಚ್ಚ ಎನ್ನುವರು
ಹುಚ್ಚು ಹೆಚ್ಚಾಗಿರುವ ಈ ಪರಿಸರಕ್ಕೆ
ಮಧುಪಾನದ ಅಮಲಿನಲ್ಲಿ ಭೇದಗಳನ್ನು ಕಳೆದುಕೊಂಡು
ಎರಡನ್ನೂ ಸುಮ್ಮನೆ ಅನುಭವಿಸುತ್ತಿರುವನು ಈ ಮನುಜ

**- ಶ್ರೀ ಹರಿ.**

07-01-2012



## 404

ಉಲ್ಲಾಸದ ಸಂಪಾದನೆ
ಸೌಂದರ್ಯದ ಅನುಭವ ಶಂಕೆಗಳಿಲ್ಲದ ಅನುಭವ
ಉಲ್ಲಾಸ ಜೊತೆಗೆ ಬೆರೆತು ಎಲ್ಲವನ್ನು ಮರೆತು
ಹೊಸ ಹೊಸ ಭಾವನೆಗಳ ಸಂಪಾದನೆ!

ವಿರಕ್ತಿಯ ಜೊತೆಗೆ ಸ್ಥಿತ ಪ್ರಜ್ಞೆ
ಸಾವಿರ ಜಾತಿ ಕಾವ್ಯಗಳಿಗೆ
ಒಂದೇ ಮನೋಸ್ಥಿತಿ ಇದ್ದರೆ
ದೇಹದ ಭಾವನೆ ದೇವರ ಭಾವನೆ

ನಿಂಬೆಹಣ್ಣಿನ ಪಾನಕದಲ್ಲಿ ಸಕ್ಕರೆ ಹುಳಿ ಜೊತೆ ಇದ್ದಂತೆ
ನಾಚಿಕೆ ಇಲ್ಲದೆ ದೇವರ ಜೊತೆ
ನಾಚಿಕೆಯಿಲ್ಲದೆ ಕಾಂತಿಯ ಜೊತೆ
ಬಯಕೆಗಳ ಬಚ್ಚಿಟ್ಟಿರುವ ಮಾನವನಿಗೆ ನಾಚಿಕೆ!

ದೇವರ ಜೊತೆ ಬೆರಕೆ ಸ್ವಭಾವ
ಇದ್ದೂ ಇಲ್ಲದಂತೆ ನಾಚಿಕೆಯಿಂದ ದೇವರನ್ನು
ಮನದಲ್ಲೇ ಮಾನವನು ಬಚ್ಚಿಟ್ಟುಕೊಂಡಿಹನು
ವಿಶ್ವದ ರಹಸ್ಯ ಎಷ್ಟು ಹುಡುಕಿದರೂ ದೊರಕದೆ



www.sriharikhoday.com

ಹುಡುಕುವುದನ್ನು ಬಿಟ್ಟು ಅದನ್ನು ಅನುಭವಿಸುವ
ಮಾರ್ಗ ದೊರೆತು ಯಾವ ನಿರೂಪಣೆಯೂ ಇಲ್ಲದೆ ಮನದ
ಅನುಭವ
ನಗುತ ಹಸಿರು ತನ್ನ ಮೇಲೆ ಬೆಳೆದಿರುವ ತೆನೆಯನ್ನು ಮರೆತಿರುವಂತೆ
ನಮ್ಮಲ್ಲಿ ಅಡಗಿರುವ ಉಲ್ಲಾಸವನ್ನು ಅಮಲಿನಿಂದ ಹೊರತರಿಸಿ

ನನ್ನ ಅಪೇಕ್ಷೆ ಅವಳ ಅಪೇಕ್ಷೆಯಾಗಿ
ಅವಳ ಅಪೇಕ್ಷೆ ನನ್ನ ಅಪೇಕ್ಷೆಯಾಗಿ
ಬಚ್ಚಿಟ್ಟುಕೊಂಡಿರುವ ವಿಶ್ವದ ರಹಸ್ಯವನ್ನು
ನಾವು ಜೊತೆ ಜಗದ ಬಯಲಿಗೆ ತೋರಿಸೋಣ!

**- ಶ್ರೀ ಹರಿ.**

08-01-2013



## 405

ನನಗೇ ತಿಳಿಯದ ನನ್ನ ಬೆರಳಿನ ಬರವಣಿಗೆ
ನಿಶ್ಶಬ್ದದಿಂದ ಏನೋ ಕೇಳಿ ಬೆರಳು ಬರೆಯುವಂತಿದೆ!

ಮಾತುಗಳನ್ನಾಡದ ಪರ್ವತಗಳು
ಮಾತನ್ನಾಡಲು ತಿಳಿಯದ ಮರಳುಗಾಡು
ಮಾತಾಡದೇ ಬಂದು ಹೋಗುತ್ತಿರುವ ಚಂದಿರ
ನನ್ನ ಬೆರಳಿನ ಜೊತೆಗೆ ಮಾತುಕತೆಗಳನ್ನು ಮುಗಿಸುತ್ತ
ಆತಂಕವಿಲ್ಲದ ಬರವಣಿಗೆ ಮುನ್ನಡೆಯುತ್ತಿದೆ!

ನಿಶ್ಶಬ್ದದಲ್ಲಿರುವ ಸತ್ಯ ಕತ್ತಲಿನಲ್ಲಡಗಿರುವ ಬೆಳಕು
ಆಕಾಶದಲ್ಲಿ ಅಡಗಿರುವ ಕಲ್ಪನೆ
ಹಿಂದು ತಿಳಿಯದ ಮುಂದು
ಎಲ್ಲವೂ ಜೊತೆ ಸೇರಿ ಮಾತನಾಡುತ್ತಿರುವ ಸದ್ದು

ಬೆರಳು ಲಾಲಿಸುತ ಸುಖದ ಪಯಣದಲ್ಲಿ
ತನ್ನನ್ನೇ ತಾನು ಮರೆತು ಲೌಕಿಕ ಹುಚ್ಚನಾಗಿ
ಕವಿಯು ಮಾತನಾಡದೆ ತನ್ನ ಮನೋಬಯಲಿನ ಆಟದಲ್ಲಿ
ತಾನಾಗಿ ತಾನೇ ರೂಪಿಸಿಕೊಳ್ಳುತ್ತಿರುವ ಭವಿಷ್ಯವನ್ನು ನೋಡಿ

ಮಹಾನ್‌ಶಕ್ತಿಯ ಸೇವಕನಾಗಿ
ಕುಣಿಯುತ್ತಿರುವ ಬೆರಳುಗಳು ಬೆರಳ ಬರವಣಿಗೆ



www.sriharikhoday.com

ಕವಿಯು ನೋಡಿ ಓದಿದಾಗ
ಎಂದೂ ಅನುಭವಿಸದ ತ್ಯಾಗದ ಶೃತಿಯ ಸದ್ದು

ವಶವನ್ನು ಅರಿಯದ ಶರೀರ
ಎಂದೂ ತಿಳಿಯದ ಹೊಸ ಭಾವನೆಯಲ್ಲಿ
ಕೊನೆ ಮೊದಲುಗಳು ತಿಳಿಯದ ಅರ್ಥದ ಇರುವಿಕೆ
ಬೆರಳಿಗೆ ಅಮಲು ಬಂದಂತೆ

ಹತೋಟಿ ತಪ್ಪಿಸಿಕೊಂಡಿರುವ ಕವಿಯ ಬೆರಳು
ಅಮಲಿನ ಸುಖ ಪಡೆಯುತ್ತಿರುವ ಕವಿಯ
ಬೆರಳುಗಳ ಕಂಡು ಅನುಭವಿಸಿ
ಕವಿಯ ಮನೋಶಕ್ತಿಯನ್ನು ಹೆಚ್ಚಿಸುತ್ತಿದೆ

**- ಶ್ರೀ ಹರಿ.**

11-01-2013



www.sriharikhoday.com

## 406

ನನ್ನಲ್ಲಿ ನನ್ನದು ಎಂಬ ಬಾಗಿಲ ಕಂಡೆ
ಎಂದೂ ತೆರೆದಿರುವ ಬಾಗಿಲಿಗೆ ಬೀಗಮುದ್ರೆಗಳೇ ಇಲ್ಲ
ತೆರೆದ ಬಾಗಿಲಿನಿಂದ ನೋಡಿದೆ ಆಶ್ಚರ್ಯವೋ ಆಶ್ಚರ್ಯ
ಬಾಗಿಲಾಚೆ ನಾನೇ ನಿಂತಿದ್ದೇನೆ!

ಬಾಗಿಲ ಆಚೆಯೂ ನಾನೇ
ಬಾಗಿಲ ಒಳಗಡೆಯೂ ನಾನೇ ಅರಿವು ಹೇಳಿತು:
ನನಗೆ ಒಳಗೆ ಹೊರಗೆ ಒಂದೇ ಎಂದು
ನಾನು ನಾನೆಂಬ ಹೊಸ್ತಿಲು ಎಲ್ಲವನ್ನೂ
ಬೇರೆ ಮಾಡುತ್ತಿರುವ ಹೊಸ್ತಿಲು

ಯಾವ ಕ್ರಿಯೆಗಳನ್ನು ಮಾಡಬೇಕಾದರೂ
ಮನೆಯ ಹೊರಗೆ ಹೋಗಬೇಕಾಗುವುದು
ಆಗ ಹೊಸ್ತಿಲು ದಾಟಬೇಕು
ಹೊಸ್ತಿಲೇ ನನಗೆ ಅಡ್ಡವಾಗಿರುವಾಗ
ಹೊಸ ಭಾವನೆಗಳ ಅನುಭವಕ್ಕೆ ದಾರಿಯೇ ಇಲ್ಲ!

ಒಂದು ಉಪಾಯ ಕಂಡುಹಿಡಿದ ಮೇಲೆ
ನಾನು ಬೇರೆ ಅಲ್ಲ
ಒಳಗೆ ಹೊರಗೆ ಹೊಸ್ತಿಲು ನಾನೇ...
ನಾನು ಒಳಗೆ ಹೊರಗೆಲ್ಲಾ ಹೊಸ್ತಿಲಾದ ಮೇಲೆ
ಒಳಗೆ ಹೊರಗೆ ಹೊಸ್ತಿಲು ಜೊತೆಯಾದ ಮೇಲೆ
ಬಂದ ಭಾವನೆ

ನಾನೇ ದಿಗಂತ ... ನಾನೇ ಸೌಂದರ್ಯ
ನಾನೇ ಸುಖ - ದುಃಖ
ನಾನು ಮರೆತಿರುವ ಈ ಪ್ರಪಂಚ
ನಾ ಕಾಣುತ್ತಿರುವ ವಾತಾವರಣ ಗಿಡ - ಮರಗಳು
ಕಾಂತೆಯೊಳಗಿರುವ ನಾನು ನನ್ನವನಾಗಿರಲು ತಪ್ಪೇನು ?

ಸುಖದಲ್ಲಿರುವ ಸುಖ ನನ್ನದೆಂಬ ದ್ವೇಷಗಳು ಇಲ್ಲದೆ
ಪ್ರೀತಿಯ ಧಾರಾಕಾರ ಮಳೆಗೆ ನನ್ನ ಮನ ನೆಂದುಹೋಗಿದೆ
ದೂರವಿದ್ದ ದೇವರು ನನಗೆ ನೀನೇಕೆ ನನ್ನ ಮರೆಯುವೆ
ಎಂದು ಹೇಳುತ್ತಿರುವುದು
ದೇವರು ತಾನಾಗಿಯೇ ತನ್ನ ಜೊತೆ ಬೆರೆಯುತ್ತಿರುವುದು

ನನ್ನ ಕಾಂತೆಯ ಸಿತಾರಿನ ಸಂಗೀತ
ಎತ್ತರದಿಂದ ಕಾಣುತ್ತಿರುವ ಹಸಿರು
ಆ ಬೆಳಕು ಸುಖವೋ ಸುಖ
ಕಾಂತೆಯೇ ಪ್ರೀತಿಯಿಂದ ನೀಡುತ್ತಿರುವ ಮಧುಪಾನ
ಉಲ್ಲಾಸವನ್ನು ಹೆಚ್ಚಿಸುವ ಉಲ್ಲಾಸದ ಉಯ್ಯಾಲೆಯಲ್ಲಿ
ನಾನು ವಿಶ್ವದ ಜೊತೆ ತೂಗಾಡುತ್ತಿರುವೆನು !

**- ಶ್ರೀ ಹರಿ.**

12-12-2013



# 407

ಜೀವ ತುಂಬಿಕೊಂಡಿರುವ ಉಸಿರು
ನನ್ನಲ್ಲಿ ಜೀವ ತುಂಬುತ್ತಿದೆ !
ಬೇಸರ ತಿಳಿಯದ ಗಾಳಿ
ನನ್ನ ಜೀವನದ ಜೊತೆ ಆಡುತ್ತಲೇ ಇದೆ !

ನನ್ನ ಸಲಹೆಗಾರ ದೇವರಾಗಿ
ಬಂದು ಹೋಗುತ್ತಿರುವ ಉಸಿರು
ಉಸಿರಲ್ಲಿ ಬೆರೆತಿರುವ ಜೀವ
ದೇವರಲ್ಲಿ ಬೆರತಂತೆ !

ಒಂದು ಉಸಿರಿಲ್ಲದೆ ಸಾಯುವ ಶರೀರಕ್ಕೆ
ದೇವರಲ್ಲಿ ಬೆರೆಯುವುದು ತಪ್ಪೇನು !
ನನ್ನ ಕಾಂತೆಯ ಜೊತೆ ಇರುವ ಉಸಿರಿನಲ್ಲಿರುವ
ದೇವರಲ್ಲಿ ಬೆರೆತರೆ ಏನು ತಪ್ಪು ?

ನಾವು ಸುಖಜೀವಿಗಳಾಗದೆ ಇದ್ದರೆ
ನಮ್ಮಲ್ಲಿರುವ ದೇವರಿಗೆ ತೊಂದರೆ ನೀಡಿದಂತೆ
ನಾವುಗಳು ಹೆದರಿ ಜೀವಿಸಿದರೆ
ನಾವುಗಳು ಜೀವಿಸುವ ಮೌಲ್ಯ ತಿಳಿಯದಿದ್ದಂತೆ!

ಅಸೂಯೆಗಳನ್ನು ತಡೆದು ನಿಲ್ಲಿಸುವ ಅಮಲು
ಕಾಂತೆ ಕರೆಯದೆ ಸುಖ ನೀಡಲು ಕರೆಯುತ್ತಿರುವ ಗುಲಾಬಿ



www.sriharikhoday.com

ಜಗವ ಕಾಣುವ ರೀತಿ ಸರಿಗೊಳಿಸಿದರೆ
ಏಕಾಂತದ ಸುಖದ ಅನುಭವ, ಸ್ವರ್ಗಸುಖದ ಅನುಭವ!

ಜಗತ್ತಿನಲ್ಲಿ ಯಾವ ಪ್ರಾಣಿಯೂ ತನ್ನ ಜೀವನದಲ್ಲಿ
ಕುಂದು-ಕೊರತೆಗಳ ಹೇಳದೆ ಜೀವಿಸಿ
ಹರಿದಾಡುತ್ತಿರುವ ಉಸಿರಲ್ಲಿ ಜೀವಂತ ದೇವರ ಜೊತೆ
ಉಸಿರಾಡಿದಂತೆ
ಆನಂದದಲ್ಲಿರುವ ಸತ್ಯದ ಜೊತೆಗೆ ಬೆರೆತು ಹೋಗಿದೆ!

ಬೇಡದೇ ಕಾಂತೆಯು ನೀಡುತ್ತಿರುವ ಶರೀರ ಸುಖ
ಬೇಡದೆ ಜೊತೆ ಕಾದು ನಿಂತಿರುವ ಪರಿಸರದ ಶಾಂತಿ
ಬೇಡದೇ ಬರುವ ಕತ್ತಲು, ಬೇಡದೇ ಬರುತ್ತಿರುವ ಬೆಳಕು
ಬೇಡದೇ ಜೊತೆಗಿರುವ ದೇವರು
ಇದರ ಮೇಲೆ ಹೆಚ್ಚು ಬಯಸುವುದು ಬಯಕೆಗಳಲ್ಲ
ನೀರಿನ ಮೇಲೆ ಗುಳ್ಳೆಯಂತಿರುವ ಆಸೆಗಳು!

ಹೂವಿಗೆ ಅರಳುವುದನ್ನು ಯಾರೂ ಕಲಿಸಿಲ್ಲ
ಪಕ್ಷಿಗಳಿಗೆ ಹಾರುವುದ ಕಲಿಸಲು ಯಾರ ಸಹಾಯವೂ ಬೇಕಿಲ್ಲ
ಈ ಜಗತ್ತಿನಲ್ಲಿ ನಮ್ಮ ಜೊತೆ ದೇವರು ಇರುವಾಗ
ಕೊರತೆ ಬೇಡದ ಬಯಕೆಗಳು ತೊಂದರೆಗಳು ಇರದೆ
ನೆಮ್ಮದಿಯಿಂದ ದೇಹ ಪ್ರಕ್ರಿಯೆಗಳ ಮಾಡುವುದೇ ನೆಮ್ಮದಿ!

ನೆಮ್ಮದಿಯೇ ಜ್ಞಾನ, ನೆಮ್ಮದಿಯೇ ಐಶ್ವರ್ಯ
ನೆಮ್ಮದಿಯೇ ಜಗತ್ತಿನ ಒಡೆತನ
ನೆಮ್ಮದಿಯೇ ಪ್ರಕೃತಿಯನ್ನಾಳುವ ಸಾಮರ್ಥ್ಯ
ನೆಮ್ಮದಿಯೇ ಧೈರ್ಯ....
ನೆಮ್ಮದಿಯೇ ನಮ್ಮ ಸಾಹಸದ ಚೈತನ್ಯ!

**- ಶ್ರೀ ಹರಿ.**

14-01-2013



www.sriharikhoday.com

## 408

ಪಂಜರದ ಸಲಾಕೆಗಳು ಸಡಿಸಲಾಗುವುದಿಲ್ಲ
ಮನೋಪಕ್ಷಿಯನ್ನು ಹಾರಲು ಬಿಡುವುದಿಲ್ಲ
ಸತ್ಯದ ದರ್ಶನದ ಅಭಾವದಿಂದ
ಸತ್ಯದ ಸ್ವರಾಜ್ಯವನ್ನು ಅನುಭವಿಸಲಾಗುತ್ತಿಲ್ಲ
ಮನೋಚಲನೆಗೆ ಗಡಿಗಳು
ಮಾನವ ಸೃಷ್ಟಿಸಿಕೊಂಡಿರುವ ನಂಬಿಕೆಗಳ ಪಂಜರ!

ಪಂಜರದ ಸಲಾಕೆಗಳನ್ನು ಹೇಗೆ ಸಡಿಲಪಡಿಸಬೇಕು
ನಾನು, ನನಗೆ, ಎಂದು ಮರೆತು
ನಮ್ಮ ಮನೋ ಆಕಾರವನ್ನು ಬದಲಿಸಿದರೆ
ಸಲಾಕೆಯಲ್ಲಿರುವ ಸಂಧಿಗಳಿಂದ..

ಕಷ್ಟ-ಸಾಮರ್ಥ್ಯಗಳಿಲ್ಲದೆ ಹೊರಬಂದು
ಸತ್ಯದ ಸ್ವರಾಜ್ಯದ ಬೆಳಕಿನಲ್ಲಿ ಹಾರುತ
ದೂರದಲ್ಲಿ ನೇತಾಡುತ್ತಿರುವ ಮನೋಪಂಜರವನ್ನು ನೋಡಿ
ತಡೆಯಲಾಗದ ನಗು ಹೊಸ ಚೈತನ್ಯ ಹರಿಯಲಾರಂಭಿಸಿದೆ!

ಬೇರೆಯವರಿಗೆ ಸುಖವೇ ದಾನ
ಸುಖವನ್ನು ದಾನ ಮಾಡುತ
ಬೇರೆಯವರಿಗೆ ಪಂಜರದಿಂದ ಹೊರಬರುವ
ಸಾಹಸದ ಅರಿವು ನೀಡುತ

ಮಹಾನ್ ಶಕ್ತಿಯ ಜೊತೆಗೆ ಸಂಬಂಧ
ಕಾಣುವ ಎದುರಲ್ಲಿ ಮಹಾನ್‌ಶಕ್ತಿಯ ದರ್ಶನ!
ಬೇಡಗಳ ದಾಟಿ ಎಲ್ಲದರ ಜೊತೆ ಬೆರಕೆ
ಸುಖದ ಸ್ಫೂರ್ತಿಯ ತೇಲಾಟ
ದೇವರಲ್ಲೇ ಮುಳುಗಿ ಹೊರ ತೇಲಿ
ರೋಮ ರೋಮಗಳಲ್ಲಿ ದೇವರ ಅನುಭವ
ನಮ್ಮ ಮನವ ಒಲಿಸುವ ತಾನೇ ಸೃಷ್ಟಿಸಿಕೊಂಡಿರುವ ಪರಿಸರ

ಸಂಗೀತ, ಸೌಂದರ್ಯ, ಸಂಬಂಧ, ಸ್ವರಾಜ್ಯ
ಪಾಪ ಪುಣ್ಯಗಳಿಲ್ಲದ ಪವಿತ್ರ ಭಾವನೆ
ದುಃಖ ಬೇಡಿಕೆಗಳಿಲ್ಲದ ವಾತಾವರಣ
ಕಲ್ಮಶವಿಲ್ಲದ ಬೆರಕೆ ಸುಖದ ತೂಗಿನಲ್ಲಿ
ದೇವರು ಕೊಟ್ಟಿರುವ ಜೀವನ ಉಸಿರನ್ನು ನಾವು ಸಾರ್ಥಕ
ಮಾಡಿಕೊಳ್ಳೋಣ!

**- ಶ್ರೀ ಹರಿ.**

15-01-2013



# 409

ಮನೋ ಇಂದ್ರಿಯಗಳಿಗೆ
ವಶವಾಗಿರುವ ನಮ್ಮ ಇಂದ್ರಿಯಗಳು
ಇಂದ್ರಿಯಗಳು ಸುಖಪಡದೆ
ಸುಖಪಡುತ್ತಿರುವುವು ಮನೋ ಇಂದ್ರಿಯಗಳು!

ಇಂಪಾದ ಸಂಗೀತವನ್ನು ಲಾಲಿಸುತ್ತಿರುವುದು ಕಿವಿಗಳಲ್ಲ
ರುಚಿಕರ ಊಟದ ಸವಿಯನ್ನು ಸವಿಯುತ್ತಿರುವುದು
ರುಚಿಯನ್ನು ಅನುಭವಿಸುತ್ತಿರುವುದು ನಾಲಿಗೆಯಲ್ಲ
ಅದು ಮನೋ ಇಂದ್ರಿಯದ ಭಾಗವಾದ ನಾಲಿಗೆ!

ಸೌಂದರ್ಯವನ್ನು ಅನುಭವಿಸುತ್ತಿರುವುದು ಕಣ್ಣಲ್ಲ
ಅದು ಮನೋ ಇಂದ್ರಿಯದ ಕಣ್ಣು, ಅದರ ಭಾವನೆ
ಪ್ರೀತಿಸುವುದು ದ್ವೇಷಿಸುವುದು ಶರೀರಕ್ಕೆ ತಿಳಿದಿಲ್ಲ
ಪ್ರೀತಿ-ದ್ವೇಷಗಳು ಮನೋ ಇಂದ್ರಿಯದ ಚೇಷ್ಟೆಗಳು!

ಯೋಚಿಸಲೂ ತಿಳಿಯದ ಬಾಯಿ ನಾಲಿಗೆ ಇಲ್ಲದ
ಮನೋ ಇಂದ್ರಿಯದ ನಾನಾ ಭಾಗಗಳು
ದ್ವೇಷ ಸಾಧಿಸಲು ಸರಿ ತಪ್ಪನ್ನು ತಿಳಿಯದ ನಾಲಿಗೆಯಿಂದ
ಬೇರೆಯವರಿಗೆ ಕೋಪ ತರಿಸುವ ಪ್ರಚೋದನೆಯ ಮಾತುಗಳು
ಮನೋ ಇಂದ್ರಿಯಗಳ ಮನಸ್ಸು ನಮ್ಮ ಮನಸ್ಸನ್ನೇ ಬದಿಗೆ ತಳ್ಳುತ್ತಿದೆ!



www.sriharikhoday.com

ಸತ್ಯದಿಂದ ದೂರ ಇರಲು ಇಚ್ಚೆ
ನಮ್ಮ ಶರೀರದ ಮೇಲೆ ಒಡೆತನ ಸಾಧಿಸಲು ನಿರಂತರ ದ್ವೇಶ
ಆಕಾರ ಇಲ್ಲದ ಶರೀರ ಇಲ್ಲದ ಮನೋ ಇಂದ್ರಿಯಗಳು
ರಾತ್ರಿಯ ಇರುಳಿನಲ್ಲಿ ಸ್ವಪ್ನದ ಎಚ್ಚರಗಳಲ್ಲಿ
ತಮ್ಮ ಪ್ರಾಧಾನ್ಯವನ್ನು ಬಿಡದೆ

ಸತ್ಯವನ್ನು ಅರಿಯಲು ಅನುಭವಿಸಲು ಶುದ್ಧ ಭಾವನೆಗಳಿಗೆ
ನೆನಪಿನ ಇಂದ್ರಿಯಗಳು ಹಾದಿಯನ್ನು ತಪ್ಪಿಸುತ್ತಿದೆ
ಸತ್ಯದ ಜೊತೆಗೆ ಇರಲು ಇಷ್ಟವಿಲ್ಲದೆ
ಶರೀರದ ಇಂದ್ರಿಯಗಳ ಮೇಲೆ ಮನೋ ಇಂದ್ರಿಯಗಳು
ಜಗತ್ತಿನ ನೆಮ್ಮದಿಯನ್ನು ಕೆಡಿಸುತ್ತಿದೆ
ಪವಿತ್ರವಾದ ನಮ್ಮ ಮನಸ್ಸಿನ ಮೇಲೆ
ನಮ್ಮ ದೃಷ್ಟಿಕೋನವನ್ನೇ ಬದಲಾಯಿಸುತ್ತಿರುವರು

ಗಾಳಿಯಂತಿರುವ ಮನೋ ಇಂದ್ರಿಯಗಳು ಜಗದ ಅಧಿಪತ್ಯವನ್ನೇ
ಸಾಧಿಸಿ
ಹೊರಕಾಣುವ ಈ ಶರೀರಕ್ಕೆ ನೆಮ್ಮದಿಯನ್ನು ಕೆಡಿಸಿ
ಸುಖವೇನೆಂದು ಅರಿಯದ ಮನೋ ಇಂದ್ರಿಯಗಳು
ಸುಖವನ್ನನುಭವಿಸಲಾಗದ ಮನೋ ಇಂದ್ರಿಯಗಳು
ಈ ಜಗತ್ತಿನ ಮೇಲೆ ಒಡೆತನದ ಸುಖ ಸಾಧಿಸುತ್ತಿದೆ!

**- ಶ್ರೀ ಹರಿ.**

16-01-2013



www.sriharikhoday.com

## 410

ನಮ್ಮಲ್ಲಿರುವ ಬೆಳಕನ್ನು ಹೊರಹೊಮ್ಮಿಸು
ನಮ್ಮಲ್ಲಿರುವ ಪ್ರೀತಿಯನ್ನು ಹೊರಚೆಲ್ಲು
ನಮ್ಮಲ್ಲಿರುವ ಪವಿತ್ರ ಪ್ರೀತಿಯನ್ನು ಕಾಣುವ ಎದುರಲ್ಲಿ ಬೆರೆಸು!

ನಮ್ಮಲ್ಲಿರುವ ಶಾಂತಿಯನ್ನು ಜಗತ್ತಿನಲ್ಲಿ ತುಂಬು
ನಮ್ಮಲ್ಲಿರುವ ವ್ಯಕ್ತಿತ್ವ ಕ್ಷಣ ಕ್ಷಣಕ್ಕೂ ಹೆಚ್ಚಿಸು
ನಮ್ಮಲ್ಲಿರುವ ದ್ವೇಷವನ್ನು ಕ್ಲೇಶವಿಲ್ಲದೆ ಪ್ರೀತಿಯಾಗಿ ಬದಲಿಸು!

ನಮ್ಮಲ್ಲಿರುವ ಸಂಬಂಧ ಗಳನ್ನು ಹೆಚ್ಚಿಸಿಕೊಂಡು ಜೀವಿಸು
ನಮ್ಮಲ್ಲಿರುವುದನ್ನು ದಾನವಾಗಿ ನೀಡುವ ಬುದ್ಧಿಯನ್ನು ಹೆಚ್ಚಿಸು
ನಮ್ಮಲ್ಲಿರುವ ಸ್ನೇಹ-ಭಾವನೆಗಳನ್ನು ಇಮ್ಮಡಿಗೊಳಿಸು!

ನಮ್ಮ ಮನದಲ್ಲಿರುವ ಕಷ್ಟಗಳನ್ನು ದೇವರಿಗೆ ಅರ್ಪಿಸು
ನಮ್ಮಲ್ಲಿರುವ ಆಸ್ತಿ ನಮ್ಮನ್ನೇ ಕೊಳ್ಳದೆ ಎಚ್ಚರದಿಂದ ಜೀವಿಸು
ನಮ್ಮಲ್ಲಿರುವ ಮನೋಶಕ್ತಿಯನ್ನು ಅಸಂಖ್ಯವಾಗಿ ಬೆಳೆಸಿಕೋ!

ನಮ್ಮ ಮನೋ ಮನದಲ್ಲಿರುವ ರೂಪಕ್ಕೆ ಸೌಂದರ್ಯದಿಂದ
ಅಲಂಕರಿಸು
ನಮ್ಮಲ್ಲಿರುವ ಆತ್ಮಬಲದ ಜೊತೆಗೆ ಹೆದರದೆ ಮುನ್ನಡೆಸು
ನಮ್ಮಲ್ಲಿರುವ ದೇವರ ಅರಿವನ್ನು ಹೆಚ್ಚಿಸಿಕೊಂಡು ಸುಖಪಡು!

ನಮ್ಮಲ್ಲಿರುವ ಭಕ್ತಿಯನ್ನು ದೇವರ ಪಾದಗಳಿಗೆ ಅರ್ಪಿಸು
ನಮ್ಮಲ್ಲಿರುವ ನಮ್ಮ ಮೇಲಿನ ನಂಬಿಕೆ ದಿನೇ ದಿನೇ ಹೆಚ್ಚಿಸಿಕೋ
ಭವಿಷ್ಯದ ಮನೋಕಲ್ಪನೆಗಳನ್ನು ಸೃಷ್ಟಿಸಿಕೋ

ಬಾಳು ಬಾಳುವಂತೆ ಜೀವ ಜೀವಿಸುವಂತೆ ಪ್ರೀತಿ ಹೆಚ್ಚಿಸಿಕೊಳ್ಳುತ್ತ
ಜಗತ್ತಿನ ಕಷ್ಟಗಳಿಗೆ ಭಾಗಿಯಾಗುತ್ತ
ನಂಬಿದವರಿಗೆ ನಂಬಿದ ಫಲ ದೊರಕಿಸುತ್ತ

ನಮ್ಮಲ್ಲೇ ಅಡಗಿರುವ ಪ್ರತಿಭೆಯನ್ನು
ಜಗತ್ತಿನ ಎದುರಿಗೆ ಬೆಳಕಾಗಿ ಪ್ರಕಾಶಿಸು!

**- ಶ್ರೀ ಹರಿ.**

17-01-2013



# 411

ದೇವರ ಅನುಭವ ಪಡೆಯಲು ಹುಟ್ಟಿರುವ ನಾವು
ಅಡ್ಡವಾಗಿರುವ ನಾನಾ ಭಾವನೆಗಳ ಕೋಟೆಗಳು
ಅಡ್ಡವಾಗಿರುವ ನಾನಾ ಹಳ್ಳ-ದಿಣ್ಣೆಗಳು
ರಾಶಿ ರಾಶಿ ಸಮುದ್ರದಂತಿರುವ ಲೇಖಕರ ಪಟ್ಟಿಗಳು
ಅನುಭವಗಳ ಬರೆದು ದೇವರ ದಾರಿ ತೋರಿಸದೆ
ಹೂಗಳಾಗಿ, ಹೂ ಅರಳದೆ ಒಣಗಿಹೋಗಿರುವರು!

ಉರಿಯುತ್ತಿರುವ ಸತ್ಯಕ್ಕೆ ಅಜ್ಞಾನದ ಕತ್ತಲಲ್ಲಿ
ಯಾವ ತೊಂದರೆಯೂ ಇಲ್ಲದೆ ಕಾಣುತ್ತಿರುವುದು
ಅಜ್ಞಾನದ ಮಧ್ಯದಲ್ಲಿ ಉರಿಯುತ್ತಿರುವ ಸತ್ಯ
ಹತ್ತಿರ ಹೋಗಿ ಜೊತೆ ಅನುಭವಿಸಲು
ದಾರಿ ಕಾಣಿಸದೆ ಕತ್ತಲಿನ ಸಮುದ್ರ ನಮ್ಮನ್ನು
ಸತ್ಯದ ಹತ್ತಿರಕ್ಕೆ ಬಿಡದೆ ಹೊರ ತಳ್ಳುತ್ತಿದೆ.

ಜನುಮ ನೀಡಿದ ತಾಯಿಗೆ ಮಕ್ಕಳ ಮೇಲೆ ಗಮನ
ನಾವು ತಾಯಿಯನ್ನು ಹುಡುಕುವ ಬದಲು
ತಾಯಿಯಾದ ದೇವರು ನಮ್ಮನ್ನೇ ಹುಡುಕುತ್ತಿದೆ
ಅಳುತ್ತಿರುವ ಮಕ್ಕಳಿಗೆ ತಾಯಿ ಹಾಲು ಉಣಿಸುವಂತೆ
ತಾಯಿಯ ತೊಡೆಯ ಸುಖ ಪಡೆದು
ತಾಯಿಯ ಪ್ರೀತಿ ಜೊತೆ ಸೇರಲು ಇಷ್ಟಪಡುವವರಿಗೆ

www.sriharikhoday.com

ಹಾಲು ನೀಡಿ ಪ್ರೀತಿಯಲ್ಲಿ ತೇಲಿಸುವ ಅವಳ ತೊಡೆ
ಪ್ರೀತಿಯನ್ನೇ ಉಣಿಸುತ್ತಿರುವ ಅವಳ ಮೊಲೆ
ಪವಿತ್ರ ಭಾವನೆಯ ತೊಡಯ ಸ್ಪರ್ಶ
ತಾಯಿಯ ತೃಪ್ತಿಯ ಹಾಲು ಕುಡಿದಾದ ಮೇಲೆ
ಅಜ್ಞಾನದ ಕತ್ತಲು ಓಡೋಡಿ ಹೋಗಿ ಕರಗಿ ಹೋಗಿರಲು
ದೇವರ ಹುಡುಕಾಟ ಮಾಡದೆ ತಾಯಿಯ ಹುಡುಕದಂತೆ

ತಾಯಿ ಕರೆದು ಜೊತೆ ಬೆರೆಯುವ
ಅವಳ ಆಸೆಯಂತೆ ದೇವರನ್ನು ಬೇಡುತ್ತಿರುವಾಗ
ಅನಂತ ತೃಪ್ತಿಯು ಉಣದೆ ತೇಗು ಬರುತ್ತಿರುವಂತಿದೆ
ಹೂವಾಗಿ ಬಣ್ಣ ಬಣ್ಣಗಳ ಅನುಭವ ಪಡೆದು
ಬಣ್ಣ ಬಣ್ಣಗಳ ಸುಖ ಪಡೆದು
ಸತ್ಯದ ಸುಖದಿಂದ ನೀಡಿದ
ನಮ್ಮನ್ನು ಬೆಳೆಸಿದ ಗಿಡ, ಗಿಡದ ಎಲೆಗಳು
ಹೂವಿನ ದಳಗಳು ಒಣಗಿ ಒಣಗಿ ಹೋಗಿ ಸಾವನ್ನಪ್ಪಿದರೂ

ನಮ್ಮ ದೇವರ ಸುಖದ ಸುಗಂಧ
ಗಾಳಿಯಲ್ಲಿ ತೇಲಾಡುತ್ತ ನಮ್ಮ ದೇವರು ಕಷ್ಟಗಳಲ್ಲಿ ಬೆರೆಸಿ
ಪ್ರೀತಿಯಿಂದ ಸುಖದಲ್ಲಿ ಬೆರೆಸಿರುವ ತಾಯ್ತನ
ಕೊರತೆಯಿಲ್ಲದ ಪ್ರೀತಿಯು ಪರ್ವತವಾಗಿ
ನನ್ನ ಶರೀರವಿಲ್ಲದಿದ್ದರೂ ನನ್ನ ಪ್ರೀತಿಯ ಪರ್ವತ
ಶಾಶ್ವತವಾಗಿ ಉಳಿದಿದೆ!

**- ಶ್ರೀ ಹರಿ.**

18-01-2013



www.sriharikhoday.com

## 412

ನನ್ನ ಆತ್ಮನ ತೋಟದಲ್ಲಿ
ಸುಂದರವಾದ ಬಣ್ಣ ಬಣ್ಣಗಳ ಬೆಳೆ
ಜೊತೆ ಅನುಭವಿಸು ಎಂಬ ಆಕರ್ಷಣೆ
ಅತಿ ರುಚಿಕರವಾದ ಬೆಳೆ
ಮುತ್ತನ್ನು ನೀಡಬೇಕೆಂದು ಬಯಸುತ್ತಿದೆ!

ನಾ ಬೆಳೆದಿರುವೆ ನೀ ನನ್ನನ್ನು ಸ್ವೀಕರಿಸು
ನಾ ನಿನಗೋಸ್ಕರ ಬೆಳೆದು ನಿಂತಿರುವೆ
ನನ್ನನ್ನು ಅನುಭವಿಸು
ನನ್ನಿಂದ ನೀ ಆನಂದ ಪಟ್ಟರೆ
ನಾನು ನಿನ್ನ ತೋಟದಲ್ಲಿ ಬೆಳೆದು
ಸಾರ್ಥಕ ಎಂಬ ತರಂಗಗಳ ವಾತಾವರಣ

ಎಷ್ಟು ಕಿತ್ತುಕೊಂಡರೂ ಕೊನೆಬರದ ಫಲದ ರಾಶಿ
ಪ್ರೀತಿಯ ಸಂತಸವು ಬೆಳೆಯುತ್ತಿರುವ ಈ ತೋಟದಲ್ಲಿ
ಮಾಗಿದ ಹಣ್ಣು ತಿಂದು ಅನುಭವಿಸಿದಾದ ಮೇಲೆ
ಮತ್ತೆ ಹಣ್ಣು ಬೆಳೆಯಲು ಬೀಜದ ಬಿತ್ತನೆ!

ಇಂದು ಬಿತ್ತಿದ ಬೀಜ ನಾಳೆ ಹಣ್ಣಾಗಿ
ಸುಖ ನೀಡಲು ಕಾದು ನಿಂತಿರುವ ಆತ್ಮನ ತೋಟದಲ್ಲಿ
ಅದೇ ಬೀಜ ಬೆಳೆದಿರುವ ನಾಳಿನ ಬೆಳೆ
ಹೊಸ ಸೌಂದರ್ಯದ ಮಿನುಗು

ರಮ್ಯವಾದ ವಾತಾವರಣ ಸೃಷ್ಟಿಸಿ
ಪ್ರೀತಿಯ ಬಳಕೆ ಮಾಡುವ ಔತಣ

ಜೀವನಾತ್ಮದ ತೋಟದಲ್ಲಿ
ತುಂಬುತನವ ಅನುಭವಿಸಿ
ತೋಟದ ಗಾಳಿಯ ಓಡಾಟ
ಸಂಗೀತ ಧ್ವನಿಯಾಗಿ ಜೋಲಾಡಿ ಬರುತ್ತಿರುವ
ಬೆಳೆಯ ಹೆಜ್ಜೆಗಳು ನನ್ನ ಜೀವನದ ತಾಳವಾಗಿದೆ!

**ಶ್ರೀ ಹರಿ.**

19-01-2013



# 413

ಜನ್ಮತಃ ಬಂದಿರುವ ನಾನು.... ನನ್ನದು
ಸಂಬಂಧಗಳು ತೋರಿಸುವುದ ನಾನು.... ನನ್ನದು
ಪ್ರಕೃತಿ ಕಲಿಸಿರುವ ನನಗೆ ಇದು ಬೇಕು.... ಅದು ಬೇಕು
ಎಂಬುದ ಸಂಗ್ರಹಿಸುವ ಅಭಿಲಾಷೆಗೆ ಕೊನೆಬರದ ಮನೋಕ್ರಿಯೆ!

ನೂರು ವರುಷ ಬಾಳಿದರೂ ನಮ್ಮ ಜೊತೆ ಹಳೆ ನೆನಪುಗಳು
ಅಂಟಿಸಿದರೂ ಹೋಗದೆ ಅಂಟಿಕೊಂಡಿರುವ ನೆನಪುಗಳ ಖಜಾನೆ
ಹಿರಿಯರು ಮಾಡುತ್ತಿರುವ ಪೂಜೆ
ಅವರ ಮಾತುಗಳ ಕೇಳಿ ಜೀವಿಸುತ್ತ
ಆಪ್ತತನದಿಂದ ಭಕ್ತಿಯ ಉದ್ಭವ

ಜೊತೆಯಾಗಿ ನೆರಳಿನಂತೆ ನಮ್ಮ ಜೊತೆ ಜೀವಿಸುತ್ತಿರಲು
ಸಮಾಜ ಬೆಳೆಸಿರುವ ರೀತಿ-ನೀತಿಗಳನ್ನು ಪಾಲಿಸುತ್ತ
ಅದರ ಹೊಸ್ತಿಲುಗಳನ್ನು ದಾಟಲು ಹೆದರಿ
ಜೀವನದಲ್ಲಿ ಜೀವಿಸುವ ರೀತಿ ನೀತಿಯಾಗಿ
ಆ ನಿರ್ಬಂಧದ ಗಡಿಗಳನ್ನು ದಾಟಲಾಗದೆ

ಹಳೆ ನೆನಪುಗಳ ಖಜಾನೆಯಲ್ಲಿರುವ ದ್ವೇಷಗಳ ಪಟ್ಟಿ
ಅವರು ಅಥವಾ ಅದು ಎದುರಿಗೆ ಬಂದರೆ
ಹುಟ್ಟುತ್ತಿರುವ ಅಸೂಯೆ.... ಸುಖ ಸಿಗದ ಜೀವದಲ್ಲಿ
ನಮ್ಮನ್ನೇ ಮರೆತು
ನಮ್ಮೆದುರುಗಿರುವ ಜೊತೆ ಎಲ್ಲರ ಜೊತೆಗೆ ಬೆರೆತು



www.sriharikhoday.com

ಸಾವಿಗೆ ಅಂಜಿ ನಾನು ನೂರು ಕಾಲ ಬಾಳಬೇಕು
ನೂರು ಕಾಲ ಬಾಳಿದ ಮೇಲೆ
ಮತ್ತೊಂದು ನೂರು ಕಾಲ ಬಾಳಬೇಕೆಂಬುವ ಮನೋಚೇಷ್ಟೆ
ನನ್ನ ಮನೋವೃತ್ತಿ ಕ್ಷಣ ಕ್ಷಣದಲ್ಲಿ

ಗಾಳಿ ಹರಿಯುವಂತೆ ಹರಿದು ಹೋಗುತ್ತಿರಲು
ಇವನ್ನೆಲ್ಲಾ ಮೀರಿಸುವ ಸತ್ಯದ ಗಡಿಗಳ ದಾಟಿರುವ ಸತ್ಯ
ಸತ್ಯವನ್ನು ಅನುಭವಿಸಿದರೂ ದೇವರನ್ನು ಅನುಭವಿಸಿದರೂ
ಕರ್ಮ ಎಂಬ ಕಾಲದ ನೆನಪುಗಳು ನಮ್ಮನ್ನು ಕಾಡುತ್ತ
ಇವುಗಳಿಂದ ಜಾರಿ

ನಮ್ಮ ಕರ್ಮಗಳ ಜೊತೆ ನಮ್ಮನ್ನು ಮರೆತು
ಆಕಾರವಿಲ್ಲದ ಸತ್ಯದ ಜೊತೆಗೆ ಬೆರೆತು
ಉಸಿರು- ಉಸಿರಲ್ಲಿ ಸುಖ ಬರುವ ಕರ್ಮಗಳನ್ನು ಮಾಡುವುದೇ
ಈ ಲೋಕದ ಸ್ವರ್ಗವಾಗಿ.... ಈ ಸತ್ಯವನ್ನು ಅನುಭವಿಸಿದ
ಬೇರೆ ಸ್ವರ್ಗದ ಹುಡುಕಾಟ
ಅದು ಬರೀ ಅಪನಂಬಿಕೆ.... ಮೋಸ

ಒಂಬತ್ತು ಗಡಿಗಳನ್ನು ದಾಟಿ ನನ್ನಲ್ಲಿ ಹರಿಯುತ್ತಿರುವ
ಹೊಸ ಆಕಾಶ ಚಿಗುರುತ್ತಿರುವ ಸುಖ
ಕೊನೆಯಿರದ ಶಾರೀರಿಕ ಸುಖ
ವಿಶ್ವವನ್ನೇ ಕಿರಿದಾಗಿಸುತ್ತಿದೆ!

**- ಶ್ರೀ ಹರಿ.**

21-01-2013



www.sriharikhoday.com

## 414

ದಿನವೂ ಪ್ರೀತಿಯ ಉದಯ
ದಿನವೂ ಎಲ್ಲರಿಗೂ ಸೂರ್ಯ ನೀಡುತ್ತಿರುವ ಪ್ರೀತಿ
ಬರೀ ಮಾತಿನ ಪ್ರೀತಿಯಿಂದ.... ಪ್ರಕೃತಿ ಬೆಳೆಸುವ ಪ್ರೀತಿ
ಸಂತಸವ ಬೆಳೆಸುವ ಪ್ರೀತಿ.... ಮನ ಸಲಿಸುವ ಪ್ರೀತಿ

ಕಿವುಡು ಕಿವಿಗಳಿಗೆ ಸೂರ್ಯನ ಭಾವನೆಯನ್ನು ತಿಳಿಯದೆ
ತುಟಿಗಳ ಮೇಲೆ ನಗೆಯನ್ನು ಕರಗಿಸುತ್ತಿರುವ ಪ್ರಜೆಗಳು
ಕಾಲ ಬಾಳು ಬಾಳಿಸುವ ಕೆಲಸ
ಕಾಲ ಜೊತೆ ಜೊತೆಗೆ ಜೀವನದ ರೀತಿಯನ್ನು ಕಲಿಸಿದೆ!

ಕಾಲ ನಮ್ಮ ಮನೋವೃತ್ತಿಯ ಅಳೆದು
ಕಾಲಕ್ಕೆ ನಮ್ಮ ಪ್ರೀತಿಯ ಕರೆ ಏನೂ ಕೇಳಿಸದೆ.... ಕಾಲವು ಕಿವುಡಾಗಿ
ಕಾಲಕ್ಕೆ ಯಾವ ರೀತಿಯ ಸುಖವನ್ನು
ಪ್ರಜೆಗಳಿಗೆ ನೀಡಲು ತಿಳಿಯದಾಗಿ

ಕಾಲಕ್ಕೆ ಸುಖ ನೀಡುವ ಅನುಭವ ಮರೆತುಹೋಗಿ
ಪ್ರಜೆಗಳು ಪ್ರೀತಿ ನೀಡದೆ ಇದ್ದರೆ.... ಸುಖ ಸಿಗದು ಎಂಬ ಅರಿವು
ದಿನಕರನು ನೀಡುತ್ತಿರುವ ಪ್ರೀತಿ
ಯಾರಿಗೂ ಸಿಗದೆ, ನಷ್ಟವಾಗಿ ಹೊರಚೆಲ್ಲಿ ಹೋಗುತ್ತಿದೆ!

ದ್ವೇಷವಿಲ್ಲದ ನಗೆ ಬೀರೋಣ
ಕಾಣುವ ಎದುರಲ್ಲಿ ಹರುಷ ಕಾಣುವ ಆಸೆಗಳನ್ನು

ಕಾಲಕ್ಕೂ ತಿಳಿಸೋಣ
ಮನದ ಸುಖ ಕನಸು- ನನಸುಗಳಲ್ಲಿ ಪ್ರೀತಿಯಿಂದ ತುಂಬೋಣ!

ಸುಖವು ಪ್ರಕೃತಿಯ ಮೂಲ ಬಿಂದುವಾಗಿರುವಾಗ
ನಮ್ಮ ಮನೋಬಯಲಲ್ಲಿ ನಮ್ಮ ಜೊತೆ ಇರುವ ಆಕಾಶ
ಮನಬಿಚ್ಚಿ ಹೇಳುತ್ತಿರುವ ಆಕಾಶ
ತೆಗೆದುಕೊಳ್ಳಿ.... ತೆಗೆದುಕೊಳ್ಳಿ ಎಂದು ಆಕಾಶ ಹೇಳುವುದನ್ನು
ನಾವು ಇದನ್ನು ಕಾಲಕ್ಕೆ ತಿಳಿಸಿದರೆ
ಸಕಾಲದಲ್ಲಿ ಕಾಲ ಸುಖದ ವೇದಿಕೆಯನ್ನು ಸುಖದಿಂದ ಸಜ್ಜುಗೊಳಿಸಿ
ನಮ್ಮ ಸುಖಕ್ಕೆ ಕಾಲವೇ ಕಾದು ನಿಂತಿರುತ್ತದೆ

**- ಶ್ರೀ ಹರಿ.**

23-01-2013



## 415

ನಮ್ಮ ವಿವೇಕಕ್ಕೆ ನಾವೇ ಬೀಜ ಬಿತ್ತಬೇಕು
ನಮ್ಮ ವಿವೇಕಕ್ಕೆ ನಾವೇ ಕೃಷಿ ಮಾಡಬೇಕು
ನಮ್ಮ ವಿವೇಕ ಬೆಳೆಸಲು ನಾವೇ ನೀರು ಎರೆಯಬೇಕು
ನಮ್ಮ ವಿವೇಕದ ಫಲ ಬರೀ ನಮಗೇ ಅಲ್ಲ
ಬೇರೆಯವರಿಗೂ ಇದೆ ಅದರ ಪಾಲು!

ಒಂದು ವಿವೇಕದ ಫಲದಿಂದ ಮತ್ತೊಂದು ವಿವೇಕದ ಬೇಡಿಕೆ
ಹೊಸ ವಿವೇಕಕ್ಕೆ ಹೊಸ ಬಿತ್ತನೆ
ಹೆಜ್ಜೆ ಹೆಜ್ಜೆಗೂ ಹೊಸ ಹೊಸ ಅನುಭವಗಳು
ಹಳೆ ಅನುಭವಕ್ಕೆ ಹೊಸ ಅನುಭವದ ಅವಶ್ಯಕತೆ
ಅವಶ್ಯಕತೆ ಮನಸ್ಸಿನ ಒಂದು ಬಿತ್ತನೆ
ಈ ರೀತಿ ಮಾಡುತ್ತಾ.... ಮಾಡುತ್ತಾ ದೇವರ ಪಡೆದೆ!

ಉತ್ತರ ನೀಡುವ ಪ್ರಶ್ನೆಗಳು
ದಾರಿ ತೋರಿಸುವ ಕಷ್ಟದ ದಾರಿಗಳಾಗಿದ್ದರೂ
ಹಿಂತಿರುಗದೇ ಮುನ್ನಡೆಯುವುದನ್ನು ಕಾಲದಿಂದ ಕಲಿತು
ಕಾಲವನ್ನೇ ಹಿಂಬಾಲಿಸಿ ವಿಶ್ವವೇ ನನ್ನ ಸಾಹಸಕ್ಕೆ ನಂಬಿ
ಅದು ಕೂಡ ನನ್ನ ಜೊತೆಗೆ ನಂಬಿ ಬರುತ್ತಿರುವುದು
ವಿಚಿತ್ರವೋ ವಿಚಿತ್ರ.... ವಿಚಿತ್ರವೋ ವಿಚಿತ್ರ!

ನನಗೆ ನೆಗೆದು ಓಡುವ ಶಕ್ತಿ ಬಂದಿದೆ
ನಮ್ಮ ಮನೋಗಮನಕ್ಕೆ ಬರುವುದಿಲ್ಲ ಒಂದು ಅವಕಾಶ



www.sriharikhoday.com

ಅದು ಬರೀ ಚಿಂತನೆ ಎನ್ನದೆ ಅವಕಾಶ ಎಂದರೆ
ಚಿಂತನೆಗಳೇ ಸುಖಕ್ಕೆ ಬುನಾದಿಯಾಗಿ
ಆಗದ ಕೆಲಸಗಳು ಕಷ್ಟಗಳಿಲ್ಲದೆ ತಾವೇ
ಕಾಣುವ ಎದುರಲ್ಲಿ ಬೆಳೆದು ನಿಂತಿರುತ್ತವೆ!

ನಾವು ಕಣ್ತೆರೆದು ನೋಡೋಣ...
ನಾವು ಮನತೆರೆದು ನೋಡೋಣ
ನಾವು ಇಷ್ಟಪಟ್ಟು ನೋಡೋಣ
ನಾವು ತೃಪ್ತಿಯ ಮನದಿಂದ ಕೆಲಸ ಸಾಧಿಸೋಣ
ನಾವು ನಮ್ಮವರ ಜೊತೆ ನಾನು ನಮ್ಮವರು ಒಂದೇ ಎಂಬ
ಆಧಾರದ ಮೇಲೆ ನಡೆಯೋಣ!

ನಾವು ನಮ್ಮನ್ನೇ ಮರೆತು ಕೆಲಸದಲ್ಲಿ ಕರಗಿಬಿಡೋಣ
ನಾವು ನಮ್ಮ ದುಡಿಮೆ ವಿಶ್ವದ ಕೆಲಸವೆಂದು ಹರುಷದಿಂದ
ಮಾಡೋಣ
ನಾವು ನಮ್ಮ ಕೆಲಸಗಳಲ್ಲಿ ಬೇರೆಯವರನ್ನೂ ಬೆರೆಸಿಕೊಂಡು
ನಮ್ಮ ಜೊತೆ ಸಾಧನೆಗೆ ಜೊತೆ ಸೇರಿ ಸುಖಪಡೋಣ!

**- ಶ್ರೀ ಹರಿ.**

23-01-2013



www.sriharikhoday.com

## 416

ಜ್ಞಾನಿಗಳು ಹೇಳುವ ಮಾತುಗಳು
ಮಣ್ಣಲ್ಲೇ ಕರಗಿಹೋಯಿತು
ರೂಪಗೊಳ್ಳದ ಭಾವನೆಗಳು ನೆನಪುಗಳಾಗದೆ
ಗಾಳಿಯಲ್ಲೇ ತೇಲಿಹೋದವು!

ಪ್ರೀತಿಗೆ ಅನೇಕ ನಿಯಮಗಳು
ಪ್ರೀತಿಗೆ ಅನೇಕ ಸಮಾಜದ ಗಡಿಗಳು
ಪ್ರೀತಿಸುವುದಕ್ಕೆ ಜಾತಿಗಳೇ ಅಡ್ಡ
ಪ್ರೀತಿಸುವುದಕ್ಕೆ ಪರ್ವತದಂತೆ ಅಡ್ಡವಾಗಿರುವ ಧರ್ಮಗಳು!

ಪ್ರೀತಿಯಿಂದ ರೂಪುಗೊಳ್ಳದೆ ನೆನಪುಗಳು ಪ್ರೀತಿಯಾಗದು
ಸತ್ಯದ ರೂಪವೇ ಪ್ರೀತಿ
ಸುಂದರವಾದ ಮನೋರೂಪ ಪ್ರೀತಿಯಲ್ಲಿದೆ
ಸುಂದರರೂಪದ ನೆನಪುಗಳಿಲ್ಲದ ಚಿತ್ರಕಾರನ ಚಿಂತನೆ
ಸುಂದರವಾದ ಚಿತ್ರವನ್ನು ಬರೆಯಲಾರ!

ಸೌಂದರ್ಯವನ್ನು ತಿಳಿಯದ ಶಿಲ್ಪಿ
ಸುಂದರವಾದ ಕಲಾಕೃತಿಯನ್ನು ಮಾಡಲಾರ
ಸೌಂದರ್ಯದಲ್ಲಿ ಬೆರೆತುಹೋಗುವುದು ದೇವರಲ್ಲಿ ಬೆರೆತಂತೆ
ಎಲ್ಲರಲ್ಲಿ ಅಡಗಿರುವ ದೇವರು.... ದೇವರ ರೂಪ
ಎಲ್ಲರಲ್ಲಿ ಆತ್ಮನಾಗಿರುವ.... ಶಕ್ತಿಯಾಗಿರುವ ದೇವರು
ನೆನಪುಗಳಿಗೆ ಅರಿವಾಗಿ....

ಒಬ್ಬೊಬ್ಬರ ಬೆರಕೆ ಆತ್ಮನ ಬೆರಕೆ
ಇಬ್ಬರ ಆತ್ಮ ಒಂದಾದಾಗ ಶರೀರಗಳು ಬೆರೆಯಲಾಗದೆ
ಜೊತೆಯಾಗುವುದು ಏನು ತಪ್ಪು?
ಎಲ್ಲದರಲ್ಲಿ ಸುಂದರವಾದ ಸೌಂದರ್ಯವನ್ನು ವ್ಯಕ್ತಪಡಿಸುತ್ತಿರಲು
ಆನಂದದ ಸೌಂದರ್ಯದಲ್ಲಿ ಬೆರೆತರೆ
ಸತ್ಯದ ಬೆಳಕಲ್ಲಿ ದೈವತ್ವವಾದ ಭಾವನೆಯಿಂದ
ನೆನಪುಗಳೇ ದೇವರನ್ನು ಅನುಭವಿಸುತ್ತದೆ!

ಹೆದರಿಕೆಯಿಲ್ಲದ ಸೌಂದರ್ಯದ ದರ್ಶನ
ಭೇದವಿಲ್ಲದ ಬೆರಕೆ... ಜೊತೆ ಬೆರಕೆ
ಅಡ್ಡಿ - ಆತಂಕಗಳ ತಿಳಿಯದ ಬೆರಕೆ
ನನಗೆ ಕುಡುಕನೆಂದು ಹೆಸರಿಟ್ಟು ಕೂಗಿದರೂ
ಆ ಮಾತಿನಲ್ಲಿ ಅತಿಯಾದ ಹೆಚ್ಚಿನ ಆನಂದವನ್ನು ಅನುಭವಿಸಿ
ಉಸಿರಾಡುವಂತೆ ಕುಡಿಯುತ್ತಿದ್ದೇನೆ

ನಾನು ನನ್ನವಳ ಸುಖ
ನಮ್ಮಿಬ್ಬರ ಜೊತೆ ಸುಖ
ದೇವರ ಅಲೆಯನ್ನು ಅನುಭವಿಸುವ ಸುಖ
ಮತ್ತೆ ಮತ್ತೆ ಬಯಸುವ ಅನುಭವ
ಪ್ರಕೃತಿ ಅದರ ಸೌಂದರ್ಯವನ್ನು ನೆನಪಾಗಿಸಿ
ನೆನಪುಗಳು ನೆನಪಿಸುತ್ತಿರುವುದು
ನೆನಪುಗಳು ಸೌಂದರ್ಯವನ್ನು ನೆನಪಿಸಿಕೊಳ್ಳುತ್ತಿರುವುದೇ
ಪ್ರಕೃತಿಯ ಜೀವನಾಡಿ!

**- ಶ್ರೀ ಹರಿ.**

24-01-2013



## 417

ಜೀವಿಸುವ ಜೀವ ಅವತಾರವಾಗಿದೆ
ಜೀವನದ ಜೊತೆ ಶರೀರ ಬೆಳೆಯುತ್ತಿದೆ
ಶರೀರದ ಜೊತೆಗೆ ಮನಸ್ಸು ಬೆಳೆಯುತ್ತಾ ಬೆಳೆಯುತ್ತಾ
ಮನಸ್ಸು ಶರೀರವನ್ನು ಬಿಟ್ಟು ಬೆಳೆದು
ಶರೀರದ ಒಡೆತನ ಪಡೆದಿದೆ!

ಪವಿತ್ರವಾದ ಶರೀರದಿಂದ ಪವಿತ್ರ ಭಾವನೆಗಳು ಬರದೆ
ಒಂದೇ ಪಾತ್ರೆಯಲ್ಲಿ ನಾನಾ ಭಕ್ಷ್ಯಗಳ ಮನೋ ಅಡಿಗೆ
ಅಡುಗೆ ಸರಿಯಿಲ್ಲ.... ಅದೃಷ್ಟ ಸರಿಯಿಲ್ಲ
ಶರೀರ ಅವತರಿಸಿರುವ ಸಮಯ ಸರಿಯಿಲ್ಲ ಎಂದು
ಶರೀರದಿಂದ ಹುಟ್ಟಿದ ಮನಸ್ಸು ಶರೀರವನ್ನು ನಿಂದಿಸುತ್ತಿದೆ

ಯಾವ ತಪ್ಪೂ ಮಾಡದ ಶರೀರದಿಂದ
ತಾನು ತಪ್ಪುಗಳ ಮಾಡಿಸುತ
ನಾನು ನಾನೆಂಬ ಮುಳ್ಳಿನ ಗಿಡವನ್ನು
ಪವಿತ್ರವಾದ ಶರೀರದ ಮೇಲೆ ಬೆಳೆಸಿ ನಿಂತಿದೆ!

ಯಾರು ಹೊಗಳುವುದಿಲ್ಲವೋ ಅವರ ಮೇಲೆ ದ್ವೇಷ
ಯಾರು ಎಲ್ಲದಕ್ಕೂ ಸರಿ ಸರಿ ಎನ್ನುವುದಿಲ್ಲವೋ
ಅವರ ಮೇಲೆ ಕೆಟ್ಟವನೆಂದು ಬಿರುದು
ತಾನೇ ತನ್ನಿಷ್ಟದಂತೆ ಶರೀರವನ್ನು ಪರಿಗಣಿಸುತ್ತ



www.sriharikhoday.com

ಪವಿತ್ರವಾದ ಶರೀರದಿಂದ ಪ್ರಕೃತಿಯ
ಬೇಡಿಕೆಯ ಕೆಲಸ ಮಾಡಲು ಬಿಡದೆ
ವಿಶ್ವದ ಸತ್ಯದಿಂದ ದೂರ ಬಾಳುತ್ತ
ನಾನೇ ಬಾಳುತ್ತಿರುವೆನೆಂಬ ಜಂಭದ
ಒಡೆದುಹೋಗುವ ಶರೀರ ಗುಳ್ಳೆಗಳು, ಮನಸ್ಸು!

ಹೇಳಲು ಹೋಗಿ ಕೆಟ್ಟವನೆಂದು ಎನಿಸಿಕೊಳ್ಳದೆ
ದೇವರ ಬೆರಕೆ ಮನಸ್ಸನ್ನು ಹದಗೊಳಿಸಿ
ತಂತಿಯ ನಾದದಲ್ಲಿ ದೇವರು
ಕೊಳಲಿನ ನಾದದಲ್ಲಿ ದೇವರು.... ತಾಳದಲ್ಲಿ ದೇವರು
ಸ್ಪರ್ಶದಲ್ಲಿ ದೇವರ ಅನುಭವಗಳು ದೇವರ ರೂಪವಾಗಿದೆ!

ಹೆಸರು ಬಿರುದು ಬೇಡದ ನನಗೆ
ಏಕಾಂತಸುಖವೇ ಮೇಲು ಎಂದು ಅರಿತ ನಾ
ನನ್ನ ಕಾಂತೆಯ ಜೊತೆ ಬೆಟ್ಟದ ಮೇಲೆ ನಿಂತು
ನಾನು ಕಂಡ ಹಸಿರಿನಲ್ಲಿ
ನಾನು ನನ್ನದು ಎಂದು ತಿಳಿಯದ ಹೆಸರಿನಲ್ಲಿ
ಮರ.... ಗಿಡ.... ಹೂಗಳು
ದೇವರನ್ನೇ ಮಿನುಗಿಸುತ್ತಿರುವುದನ್ನು ಕಂಡು
ನಾನು ನನ್ನ ಕಾಂತೆಯ ಜೊತೆ ಸುಖದ ತೇರಲ್ಲಿ ಕುಳಿತು
ಕಾಲ ತೇರನ್ನು ಎಳೆದು ಮುನ್ನಡೆಸುವಂತಿದೆ!

ಏಕಾಂತಸುಖದ ಬಯಕೆ ಒಪ್ಪಿಕೊಂಡಿರುವ ಗುಲಾಬಿ
ಸುಖ ನಾ ನೀಡುವೆ....ದೇವರಲ್ಲಿ ಬೆರೆಸುವೆ
ಎಂದು ಹೇಳಲು
ತೋರಿಸಲು ಕಾದು ನಿಂತ ಬಣ್ಣ ಬಣ್ಣಗಳ ಕಾತುರ
ವಾತಾವರಣವೇ ಸ್ವರ್ಗದ ಸುಖವಾಗಿ
ಅಗಾಧವಾಗಿ ಬೆಳೆದು ನಿಂತಿರಲು



www.sriharikhoday.com

ಆಗುತ್ತಿರುವ ಮನೋವ್ಯತ್ಯಾಸಗಳೇ
ಗಮನಿಸಿ ಮನ ಕವನ ಬರೆಸುತ್ತಿರಲು
ಕವನಗಳ ಸವಿಯ ಕೇಳುತ್ತ
ಕದನಗಳ ನೆನೆಯುತ್ತ ಕವನಗಳು ಹಾಡುತ್ತ
ನನ್ನ ಪ್ರಿಯಳ ಸಿತಾರಿನ ಸದ್ದು ಅವಳ ಜೊತೆಗೆ
ಹತ್ತಿರ ತರಿಸುತ್ತಿದೆ!

ಹೇ ದೇವ.... ಈ ಪರಿಸರ ಚೆನ್ನಾಗಿದೆ ಇಳಿದು ಬಾ
ನಾವುಗಳು ಕುಡಿಯುತ್ತಿರುವ ಮದ್ಯದ ಅಮಲಾಗು
ಶರೀರವನ್ನು ಮರೆಸಿ ನೀನು ಬೆರೆತು ಸುಖ ನೀಡು
ಈ ಕ್ಷಣಗಳ ಅನುಭವ ಮುಂಬರುವ ಮಾನವನ ಬೆಳೆಗೆ
ಮನಸ್ಸಿನ ಬೆಳವಣಿಗೆಗೆ ಎಚ್ಚರದಿಂದ ನೋಡಿಕೊಳ್ಳಿ

ಎಂದು ಹೇಳಲು ಬರುತ್ತಿರುವ ನನ್ನ ಮನಸ್ಸು
ಭವಿಷ್ಯ ಕೇಳಿಸಿಕೊಂಡಂತಿದೆ
ನಾನು ಕೇಳಿಸಿಕೊಂಡಂತಿದೆ
ನಾನು ಮನೋ ಏಕಾಂತದಲ್ಲಿ ನನ್ನನ್ನೇ ಮರೆತುಹೋಗಿರುವೆನು!

**- ಶ್ರೀ ಹರಿ.**

25-01-2013

## 418

ಶಕ್ತಿ ಇಲ್ಲದ ಮನಸ್ಸಿಗೆ
ಹೆಚ್ಚಿನ ಪ್ರಯತ್ನ ಬೇಕು!

ನಮ್ಮ ನಾಡಿನ ಜೀವ ನಮ್ಮ ನಾಡಿಗೆ ಸವೆಯಬೇಕು
ನಮ್ಮ ಆಹಾರದಲ್ಲಿ ದೇವರ ದುಡಿಮೆ ಕಾಣಬೇಕು
ಗುಡಿಸಲಿನ ಹೊಗೆ ಬಡತನ ಸೂಚಿಸುವ ದಟ್ಟ ಹೊಗೆ

ಜೀವನದ ರಥಕ್ಕೆ ಎದ್ದು - ಬಿದ್ದು ಓಡುವ ಕುದುರೆಗಳು ನಾವು
ದೇಗುಲಕ್ಕೆ ಹೋಗುವ ಮುನ್ನ ದುಡಿಮೆಯ ದೇಗುಲಕ್ಕೆ
ಮೊದಲ ಭೇಟಿ ನೀಡು

ನನಗೆ ತಿಳಿದಿಲ್ಲ ಎಂದರೆ
ನನ್ನ ಅಂತರಾಳಕ್ಕೆ ನಾನು ಇಳಿದಿಲ್ಲ ಎಂಬ ಅರ್ಥ
ಸತ್ಯ ಇರುವ ಎಡೆಯಲ್ಲಿ ಸತ್ಯ ಹುಡುಕಲಿಲ್ಲ
ಅಮವಾಸ್ಯೆಯ ದಿನ ಚಂದ್ರನಿಗೆ ಕೆರೆಯಲ್ಲಿ ಹುಡುಕುತ್ತಿರುವರು

ಪೋಲೀಸರ ಕೈಯಲ್ಲಿ....
ನ್ಯಾಯಾಧೀಶರ ಕೈಯಲ್ಲಿ ರಾಜಕಾರಣಿಗಳ ಕೈಯಲ್ಲಿ
ಜನರು ರನ್ನನ ಕಾವ್ಯ ಬರೆಸುವ ಪ್ರಯತ್ನ!

**- ಶ್ರೀ ಹರಿ.**

28-01-2013



www.sriharikhoday.com

## 419

ನಿಶ್ಶಬ್ದಕ್ಕೆ ಉತ್ತರವೇ ಇಲ್ಲ
ನಿಶ್ಶಬ್ದದ ಆದಿ ಮೂಲ ಯಾರೂ ತಿಳಿದಿಲ್ಲ
ಮಾತನಾಡದೆ ವಿಶ್ವದ ಪರಿಚಯ ಮಾಡಿ
ವಿಶ್ವದ ಒಡೆಯನಾಗಿಸಬಲ್ಲ!

ವಿಶ್ವವೇ ನಿಶಬ್ದದಲ್ಲಿ ತೇಲಾಡುತ್ತಿರಲು
ವಿಶ್ವವೇ ಎಲ್ಲಾ ಕ್ರಿಯೆಗಳಿಗೆ ಆದಿಯಾಗಿರಲು
ಎಲ್ಲಾ ಉದಯಕ್ಕೆ ದಿಗಂತವೇ ನಿಶ್ಶಬ್ದ
ದೇವರನ್ನು ಯಾರ ಕಣ್ಣಿಗೂ ಬೀಳಗೊಡದೆ
ನಿಶ್ಶಬ್ದ ಬಚ್ಚಿಟ್ಟುಕೊಂಡಿದೆ!

ಆಕಾಶದ ನಿಶ್ಶಬ್ದ ಸಿಡಿಲಾಗಿ.... ತನ್ನ ಮನವನ್ನು ಸದ್ದಾಗಿಸಿ
ನಿಶಬ್ದದಲ್ಲೇ ಮುಳುಗಿದ್ದ ಪರ್ವತಗಳು ಭೂಕಂಪದ ಶಬ್ದವಾಗಿ
ನಿಶ್ಶಬ್ದದಲ್ಲಿದ್ದ ರಾತ್ರಿಗೆ ಪಕ್ಷಿಗಳೇ ಮಧುರ ಸದ್ದಿನ ಆಟವಾದರೆ
ನಿಶ್ಶಬ್ದ ಬರಿ ಕೋಪದಲ್ಲಿಯೇ ಜೊತೆಯಿರದೆ
ಶಾಂತಿಯ ಜೊತೆಗೂ ಹೋರಾಡುತ್ತಿದೆ!

ನಿಶ್ಶಬ್ದದ ಖಜಾನೆಯಲ್ಲಿ ಏನೇನಿದೆ ಎಂಬುದ ಕಂಡುಹಿಡಿಯಲು
ಕಣ್ಣಿಗೆ ಕಾಣದಿರುವ ಅದನ್ನು ಆಳದಲ್ಲಿ ಇಳಿದು ನೋಡಲು
ಕಾಣುತ್ತಿದೆ ರಾಶಿ ರಾಶಿ ರಾಗಗಳು.... ಗುಂಪು ಗುಂಪು ಪದಗಳು
ಅನೇಕ ಆಕಾಶಗಳು.... ಕತ್ತಲನ್ನು ತುಂಬಿಕೊಳ್ಳುತ್ತಿರುವ ಗುಹೆಗಳು

ಹೊರಬರಲು ಕಾಯುತ್ತಿರುವ ಕೊಳಲಿನ ನಾದಗಳು ಸಿತಾರಿನ
ತರಂಗಗಳು
ಯಾರನ್ನೂ ಲೆಕ್ಕಿಸದಿರುವ ಅಮಲಿನ ಬೆಟ್ಟ ಇಳಿಜಾರುಗಳು

ನಾನು ಹೊರಗೆ ನೋಡಿದ್ದು ಪ್ರಪಂಚ
ಈಗ ನಾನು ಅನುಭವಿಸುತ್ತಿರುವುದು ವಿಶ್ವ
ಯಾರನ್ನೂ ಲೆಕ್ಕಿಸದಿರುವ ಗುಂಪು ಗುಂಪಿನ ಬಣ್ಣಗಳು
ಹಂತ ಹಂತದಲ್ಲಿ ಆಕಾಶಕ್ಕೆ ಬಂಧಿಯಾಗಿರುವ ಕಾಲ ಹೊರಬರಲು
ಭವಿಷ್ಯವನ್ನು ರೂಪುಗೊಳಿಸಲು ಹೆದರಿಕೆಯನ್ನು ಲೆಕ್ಕಿಸದೆ ಇರುವ
ಕಾಲದ ಓಟ
ಇದನ್ನೆಲ್ಲಾ ನೋಡಿ ನನ್ನ ಹುಡುಕಾಟ ಮುಂದುವರೆಸುತ್ತಿದ್ದರೆ

ನನ್ನ ಹೆಸರು ಕೇಳಿ
ಕೊನೆಗೂ ಬಂದೆಯಾ ಎಂಬ ಕೂಗು
ಉಸಿರುಕಟ್ಟಿ ಉಸಿರ ಬಿಡಲು ಯಾರ ಸಹಾಯವೂ ಇಲ್ಲ
ದೂರದಿಂದ ಬಂದಿರುವೆ ನಿಶ್ಯಬ್ದದಲ್ಲಿ ತಣಿಸಿಕೋ
ಎಂಬ ಮಾತಿನ ಪ್ರತಿಧ್ವನಿ ನನ್ನನ್ನು ಕಿವುಡನನ್ನಾಗಿಸಿದೆ

ಈ ಸದ್ದು ನನ್ನ ಒಡೆಯನ ಸದ್ದೋ
ಈ ಸದ್ದು ವಿಶ್ವದ ಜೀವಿಗಳ ಸದ್ದೋ
ಅಥವಾ ನನ್ನ ಸದ್ದೋ.... ನನ್ನ ಮನದ ಪ್ರತಿಧ್ವನಿಯೋ?
ಸತ್ಯವ ಹುಡುಕಲು ನನ್ನ ಮನದ ಆಳದಲ್ಲಿ ಇಳಿದಾಗ
ಅಲ್ಲಿಯೂ ಕತ್ತಲು!

ಅರಿವು ಮೂಡಿತು ಒಳಗೆ ಹೊರಗೆ ನಾನೇ
ಕತ್ತಲಲ್ಲಿರುವ ದೇವರು ನಾನೇ ಎಂದು ಕಲಿಸಿದ ಕತ್ತಲು
ಈ ದೇವರನ್ನು ಪಡೆದಿರುವ ಸಂತಸ



ಈ ದೇಹ ಶರೀರ ನಾನಲ್ಲ
ನಾನು ಬರೀ ಕತ್ತಲಿನ ತರಂಗ!

ನಿಶ್ಯಬ್ದದ ಗಣಿಯ ಒಡೆಯ
ಭೇದವ ಮರೆಸಿದ್ದ ಕತ್ತಲ ದೇವರು ನಾನೇ ಎಂಬ
ಸತ್ಯ ಮನದಲ್ಲಿ ಮಿನುಗಿದ ಮೇಲೆ
ದೇವರ ಒಳಗಿರುವ ನಾನು
ನನ್ನ ಒಳಗಿರುವ ದೇವರು ಒಂದೇ ಎಂಬ ಭಾವನೆ ಬಂದ ಮೇಲೆ

ರಸಿಕತೆ ತುಂಬಿದ ವೈರಾಗ್ಯ
ವಿಶ್ವದಲ್ಲಿರುವ ಎಲ್ಲದರ ಜೊತೆ ಜೀವನ
ಕಷ್ಟ-ಸುಖಗಳಲ್ಲಿರುವ ಪ್ರೀತಿಯ ಸೌಂದರ್ಯ
ಸದ್ದಿನ ಜೊತೆ ಕಾದು ನಿಂತಿರುವ ಸಂಗೀತ
ದ್ವೇಷ-ಗೆಳೆತನ - ಬೆಟ್ಟ ಇಳಿಜಾರಿನ ಅಮಲು
ಗುಲಾಬಿಯ ತೋಟಗಳು

ಕಾಲದ ತಾಳದಲ್ಲಿ ನಿಶ್ಯಬ್ದದ ಆಳ ಹುಡುಕಲು ನಿಲ್ಲಿಸಿ
ಅಮಲಿನ ಇಳಿಜಾರಿನಲ್ಲಿ ಸುಖ ನೀಡುತ್ತಿರುವ ಅತ್ತರಿನ
ಸುವಾಸನೆಯಲ್ಲಿ
ನನ್ನಿಂದ ಕಾಲ ಕಳೆದುಹೋಗಿದೆ!

**- ಶ್ರೀ ಹರಿ.**

29-01-2013



www.sriharikhoday.com

# 420

ನನಗೆ ಏನು ಬೇಕು ಎಂದು ನನ್ನ ಮನವನ್ನು ಕೇಳಿದರೆ
ನನಗೆ ಸುಲ್ತಾನನ ರಾಜ್ಯ ಬೇಕು....
ನನಗೆ ಸುಲ್ತಾನರ ರಾಣಿವಾಸ ಬೇಕು....
ನನಗೆ ಸುಲ್ತಾನನ ಖಜಾನೆ ಬೇಕು
ನಾ ಬಯಸಿದ್ದೆಲ್ಲಾ ಬರಬೇಕು
ಒಂದು ಕಡೆ ಮನಸ್ಸು ಹೇಳಿದರೆ....

ನನ್ನ ಬುದ್ಧಿಗೆ ಕೇಳಿದೆ.... ನಿನಗೇನು ಬೇಕು?
ಎಲ್ಲಾ ಸೌಕರ್ಯವಿರುವ ಸುಲ್ತಾನನಿಗೆ ಸುಖವಿಲ್ಲ
ಸುಲ್ತಾನನಿಗೆ ಜೀವದ ಭಯ
ಸುಲ್ತಾನನು ತಾನೊಬ್ಬನೇ ಸುಖ ಪಡೆಯುವುದಕ್ಕಾಗುವುದಿಲ್ಲ

ನನ್ನಲ್ಲಿರುವ ಜ್ಞಾನವನ್ನು ಪ್ರಶ್ನಿಸಿದೆ, ನಿನಗೇನು ಬೇಕು?
ನಿನ್ನ ಬಯಕೆ ಏನು?
ಜ್ಞಾನ ಹೇಳಿತು ಬಯಕೆಗಳೇ ಕಷ್ಟಗಳಿಗೆ ಮೂಲ
ಬಯಕೆ ಎಂದರೆ ರಾಜ್ಯ ಅಲ್ಲ...
ರಾಣಿವಾಸ ಅಲ್ಲ, ಅವನ ಜೀವನ ರೀತಿ ಅಲ್ಲ
ನಮ್ಮ ಬಯಕೆಗೆ ನೆಮ್ಮದಿ ನೀಡುತ ನೆಮ್ಮದಿಯಿಂದ ಸುಖ ಪಡುತ್ತ

ಸುಖದಿಂದ ಬಂದ ಫಲಕ್ಕೆ ಅಹಂಕಾರ ಬರದೆ
ಸಾಮಾನ್ಯವಾಗಿ ಜೀವಿಸುವಂತೆ ಬೆರೆತು ಜೀವಿಸುತ
ಕಲ್ಲಾಗಿ ಸುಖಪಡುವ.... ಗಾಳಿಯಾಗಿ ಸುಖಪಡುವ



ಬೆಳಕಾಗಿ ಸುಖಪಡುವ.... ಹಸಿರಾಗಿ ಸುಖಪಡುವ
ತ್ಯಾಗಿಯಾಗಿ ಸುಖಪಡುವ

ಶರೀರ ಬಯಸುವ ಸುಖದ ಜೊತೆ ತೃಪ್ತಿಯ ಪಡೆಯುವ
ಎಲ್ಲವೂ ತನ್ನ ಗಳಿಕೆ ಎನ್ನದೆ
ಎಲ್ಲವೂ ಅವನ ಇಚ್ಛೆ ಎಂದು ತೃಪ್ತಿ ಪಡೆಯುವ ಬಯಕೆ
ಎಂದು ಜ್ಞಾನ ಹೇಳಿತು!

ಎಲ್ಲವೂ ಕಾಲಚಕ್ರದ ಹಂದರದಲ್ಲಿ ಜೀವಿಸುತ್ತಿರುವಾಗ
ಬತ್ತಿ ಉರಿಯುವಾಗ ಸುಗಂಧ ಪಡೆಯುವಂತೆ
ಉರಿಯುತ್ತಿರುವ ಬತ್ತಿ ಶಾಶ್ವತವಲ್ಲ ಎಂದು ತಿಳಿದು
ಅದರಲ್ಲಿಯೇ ಸುಖ ಅನುಭವಿಸುವಂತೆ

ಸುಲ್ತಾನನ ರಾಜ್ಯವನ್ನೂ ನೀನು ದೇವರಲ್ಲಿ ಕೇಳಬಹುದು
ಸುಲ್ತಾನನ ರಾಣಿವಾಸವನ್ನೂ ದೇವರಲ್ಲಿ ಬೇಡಬಹುದು
ಸುಲ್ತಾನನ ಖಜಾನೆಯನ್ನೇ ಬೇಡಬಹುದು
ಸುಲ್ತಾನನ ಆಶ್ರಯದಲ್ಲಿ ಹೇರಳವಾಗಿ ದೊರಕುತ್ತಿರುವ
ಎಲ್ಲವನ್ನೂ ಅಪೇಕ್ಷಿಸಿದರೂ

ತಮ್ಮ ಬಯಕೆಗಳಿಗೆ ಬೇರೆಯವರಿಗೂ ಸುಖ - ಸಂತಸ
ಬರುವಂತಹ ಒಲವನ್ನು ಜೊತೆ ಬೇಡಿ
ಅರಮನೆಯಲ್ಲಿ ದೊರಕುವ ನಿಶೆಯ ಬಟ್ಟಲನ್ನು ದೊರಕಿಸಿ
ಗುಲಾಬಿ ಒಂದಲ್ಲ, ಎರಡಲ್ಲ, ಗುಲಾಬಿ ತೋಟವನ್ನೇ ಬಯಸಿ

ಇದು ನಾನು.... ನನಗೆ ಬೇಡುವುದೆಲ್ಲಾ...
ಬೇಡುವುದರಲ್ಲಿ ಬರುವ ಸುಖದಲ್ಲಿ
ದೇವರ ಅಪೇಕ್ಷೆಯಿಂದ ಬೇಡಬೇಕು
ಇದು ನನ್ನ ಜ್ಞಾನ ಹೇಳಿದ ಉತ್ತರ
ದೇವರೇ ನನ್ನಲ್ಲಿ ಬಂದು ಹೇಳಿದ ಉತ್ತರ!

**- ಶ್ರೀ ಹರಿ.**

30-01-2013



www.sriharikhoday.com

## 421

ಭವಿಷ್ಯ ಏನೆಂದು ತಿಳಿಯದ ಸಮುದ್ರದ ಅಲೆಗಳು
ಭವಿಷ್ಯ ಏನೆಂದು ತಿಳಿಯದ ಉಸಿರು-ನಿಟ್ಟುಸಿರು
ಭವಿಷ್ಯ ಏನೆಂದು ತಿಳಿಯದ ಸೂರ್ಯ-ಚಂದ್ರರು
ಭವಿಷ್ಯವೇ ಎಲ್ಲಾ ಕ್ರಿಯೆಗಳಿಗೆ ಆದಿಮೂಲ ಮತ್ತು ಕೊನೆ!

ಕೆಲಸಗಳಿಗೆ ಭವಿಷ್ಯದ ಕೊರತೆ
ಸಾಧನೆಗಳಿಗೆ ಭವಿಷ್ಯದ ಕೊರತೆ
ಸುಖದ ಕನಸುಗಳಿಗೆ ಭವಿಷ್ಯದ ಕೊರತೆ
ಜೀವವೇ ಭವಿಷ್ಯದ ಕೊರತೆಯಲ್ಲಿ ನರಳುತ್ತಿರುವುದು!

ನಮ್ಮ ಸುಖಗಳ ಮಾಪಕ ಭವಿಷ್ಯ
ನಮ್ಮ ಸ್ವಪ್ನಗಳ ಮಾಪಕ ಭವಿಷ್ಯ
ದೇವರನ್ನು ನೆನಸಿದರೆ ರೂಪುಗೊಳ್ಳುವುದು ಭವಿಷ್ಯ
ದೇವರ ಮೇಲೆ ಭಾರಹಾಕಿದರೆ ರೂಪುಗೊಳ್ಳುವುದು ಭವಿಷ್ಯ
ನಮ್ಮ ಮನೋ ಮನಸ್ಸಿನ ಕಲ್ಪನೆಗೆ ಮನಸ್ಸಿನ ಶಕ್ತಿಯೇ ಭವಿಷ್ಯ!

ಭೂತ-ವರ್ತಮಾನ ಭವಿಷ್ಯ ಮರೆಸುವ ನಿಶೆ
ವರ್ತಮಾನ ಭೂತ-ಭವಿಷ್ಯ ಮರೆಸುವ ನಮ್ಮ ಮನದ ಮೇಲಿನ
ಹತೋಟಿ
ಭವಿಷ್ಯಕಾಲದ ಜೊತೆ ಸೇರಿರುವುದರಿಂದ ಮುಂದು ಹೋಗಿರುವ
ಕಾಲವೇ ಭವಿಷ್ಯವಾಗಿದೆ
ಹೋಲಿಕೆಯ ನೆನಪುಗಗಳು.... ಭವಿಷ್ಯದಲ್ಲಿ ಸುಖದ ಬೇಡಿಕೆಗಳ
ಆತುರ



ಕಾಲವನ್ನು ಮರೆತಿರುವ ನೆನಪುಗಳ ಜೊತೆಮಾಡಿದ್ದಲ್ಲಿ
ಎಲ್ಲವನ್ನು ಮರೆತು ಭೂತ-ಭವಿಷ್ಯ-ವರ್ತಮಾನಗಳು ಹಿಂದಾಗಿ
ಆ ಒಂದಾಗಿರುವ ಸ್ಥಿತಿ ಸಿದ್ಧಿಯಾಗಿ ಮಾರ್ಪಾಟಾಗಿ
ಜಗದ ಭವಿಷ್ಯಕ್ಕೆ ತಮ್ಮ ಸಿದ್ಧಿಯಿಂದ ರೂಪಗೊಳಿಸುತ್ತಿದ್ದಾರೆ!

ಜಗದ ಕಷ್ಟವನ್ನು ಗುಡಿಸುವ ಕೆಲಸವನ್ನು ಸಿದ್ಧರು ಮಾಡುತ್ತಿರುವರು
ಅವರ ದೇಹವು ಇದೆಯೋ ಇಲ್ಲವೋ
ಅವರ ಸಿದ್ಧಿಯ ಸಂಕಲ್ಪ ಕೊನೆಬರದ ಸಂಕಲ್ಪದ ಶಕ್ತಿ
ಭವಿಷ್ಯಕ್ಕೆ ಬುನಾದಿಯಾಗಿ

ಸಿದ್ಧಿಯ ಮೂಲಾಪೇಕ್ಷೆ ಜಗತ್ತಿನಲ್ಲಿ ಎಲ್ಲವೂ
ಸುಖ-ಸಂತಸವನ್ನು ತುಂಬಿಕೊಂಡಿರಬೇಕು
ಇದನ್ನು ಬಿಟ್ಟು ನಮ್ಮ ಮನ ಪ್ರಾಧಾನ್ಯವನ್ನು ಪಡೆಯಬೇಕೆಂಬ ಆಸೆ
ಅಂತಹ ಆಸೆಗಳಿಗೆ ಭವಿಷ್ಯ ತಮ್ಮ ಹತ್ತಿರವೇ ಬರಗೊಡುವುದಿಲ್ಲ
ಇದೇ ಭವಿಷ್ಯದ ರಹಸ್ಯ!

**- ಶ್ರೀ ಹರಿ.**

31-01-2013



www.sriharikhoday.com

## 422

ನಂಬಿಕೆಗಳಿಗೆ ಉತ್ತರವಿಲ್ಲ
ಕುರುಡನು ದೀಪ ಹಿಡಿದು ನಡೆದರೂ
ಹಾದಿ ಕಾಣುವುದಿಲ್ಲ
ನಂಬಿಕೆ ಇರಬೇಕು..... ಸಂಪೂರ್ಣ ನಂಬಿಕೆ ಇರಕೂಡದು!

ಜಾರಿ ಹೋಗುತ್ತಿರುವ ಸ್ವರ್ಗಗಳು
ಕಣ್ಣಿಗೆ ಕಾಣದ ನರಕಗಳು
ಇದ್ದರೂ ಇರಬಹುದು ಆದರೆ....
ಸತ್ಯದ ಜೀವನವನ್ನು ತಪ್ಪಿಸುತ್ತಿದೆ!

ರಕ್ತದಲ್ಲಿ ಜೊತೆ ಬಂದಿರುವ ನಂಬಿಕೆ
ಕಣಗಳಲ್ಲಿ ಹರಿದಾಡುತ್ತಿರುವ ನಂಬಿಕೆ
ಸತ್ಯಕ್ಕೆ ಜೊತೆ ಸೇರಲು ನಂಬಿಕೆಗಳು ಸ್ಥಳ ನೀಡದೆ
ಸತ್ಯ ತೂರಲಾಗದೆ .... ಸತ್ಯ ಹತ್ತಿರವಿದ್ದರೂ ಜಾರಿ ಹೋಗುತ್ತಿದೆ!

ನನ್ನ ಕೈಯ್ಯಲ್ಲಿ ನಿಶೆಯ ಬಟ್ಟಲಿರುವುದು ಸತ್ಯ
ನನ್ನ ಮನ ನನ್ನ ಕಾಂತೆಯ ಜೊತೆಗಿರುವುದು ಸತ್ಯ
ನಮ್ಮ ಸುಖದ ಅನುಭವದಲ್ಲಿ ದೇವರನ್ನು ಕಾಣುತ್ತಿರುವುದು ಸತ್ಯ
ಕಣ್ಣಿಗೆ ಕಾಣದ ಸ್ವರ್ಗ ನರಕಗಳು ಕಾಣದಿರುವಾಗ
ದೇವರನ್ನು ಹೇಗೆ ಕಾಣುವುದು ....?
ಅದೇ ರೀತಿ ಕಣ್ಣಿಗೆ ಕಾಣಿಸದ ಸತ್ಯ ಅನುಭವ ಮಾತ್ರ!

ನಂಬಿಕೆಗಳನ್ನೇ ಮರೆಸುವ ನಿಶೆ
ಜಗವನ್ನು ಮರೆಸಿ ಕಾಣುತ್ತಿರುವ ಸತ್ಯ ಅನುಭವ
ಎಲ್ಲವನ್ನೂ ತುಂಬಿಕೊಳ್ಳುವ ಸ್ವಭಾವದ ಮನಸ್ಸಿನಲ್ಲಿ



ನನ್ನ ಮನದಲ್ಲಿ ಅನುಭವಗಳನ್ನು ತುಂಬಿಕೊಳ್ಳುತ್ತಿದ್ದೇನೆ
ಸುಖದಿಂದ ಬರುತ್ತಿರುವ ಸುಖವನ್ನು ತುಂಬಿಕೊಳ್ಳುತ್ತಿದ್ದೇನೆ !

ಗುಲಾಬಿಯು ಹತ್ತಿರದಿಂದ ನೋಡಿ ಅದರ ಜೊತೆ ಬೆರೆತು
ಗುಲಾಬಿಯ ಸಂತಸದ ಬೆರೆಕೆ ಭೂತ - ಭವಿಷ್ಯ - ವರ್ತಮಾನಗಳನ್ನು
ಮರೆಸಿ

ಮರೆತಿರುವ ಸ್ಥಿತಿಯಲ್ಲಿ ನಾನು ಕರೆಯದೇ....
ದೇವರು ನನ್ನ ಜೊತೆ ಬೆರೆಯುತ್ತಿದೆ
ಎಲ್ಲಾ ರೀತಿಯ ಸುಖಗಳನ್ನು ಪ್ರಜ್ಞೆ ಎಂಬ ಒರಳಿನಿಂದ
ಗುಡಿಸಿಕೊಂಡು

ಎಳ್ಳಷ್ಟೂ ಸುಖವನ್ನು ಬಿಡದೆ ತನ್ನ ಮನಸ್ಸಿನಲ್ಲಿ ತುಂಬಿಕೊಂಡು
ಎಷ್ಟು ಗುಡಿಸಿದರೂ ಖಾಲಿಯಾಗದ ಸುಖದ ವಾತಾವರಣ
ಎಷ್ಟೊಂದು ಮನ ತುಂಬಿಕೊಂಡರೂ ಪೂರ್ತಿ ತುಂಬದ ಮನಸ್ಸು
ನನ್ನ ಮನತುಂಬಿದ ಚುಂಬನದಿಂದ ನೂರಾರು ಚುಂಬನಗಳ ಸುರಿಮಳೆ
ಭೂತ- ಭವಿಷ್ಯ- ವರ್ತಮಾನಗಳು ಸುಖದ ಹಡಗನ್ನು
ತೇಲಿಸುವಂತಿದೆ

ನನ್ನ ಮನಸ್ಸಿನ ಅನುಭವ ನನ್ನ ಬೇಡಿಕೆ
ಸ್ವರ್ಗವೂ ಅಲ್ಲ ನರಕವೂ ಅಲ್ಲ
ಕೊನೆಯಿರದ ಪ್ರೀತಿಯ ಪ್ರವಾಹದಲ್ಲಿ ಬೆರೆತು
ಅದರ ಜೊತೆಗೆ ಸುಖದ ತರಂಗಗಳಲ್ಲಿ ಬೆರೆತು
ನಾ ಕಾಣುವ ಎಲ್ಲದರಲ್ಲಿ ಪ್ರೀತಿಯನ್ನು ತುಂಬಿ
ಪ್ರತಿಬಿಂಬವಾಗಿ ಸ್ವೀಕರಿಸಿ

ಕಾಲವನ್ನೇ ಮರೆತಿರುವ ನಾನು
ಕಾಣದರ ಜೊತೆಗೆ ಇರುವಂತೆ
ಇರುವ ನನ್ನ ಸ್ವಪ್ನಗಳಲ್ಲಿ ನನ್ನ ಅನುಭವಗಳಲ್ಲಿ
ಇದು ವಿಶ್ವದ ಜೊತೆಗಿರುವ ವಿಶ್ವದ ಸ್ವಪ್ನಗಳು ಎಂದು
ಆ ಸುಖದ ಜೊತೆಗೆ ನಾನು ಮರೆತು.
ಬೆರೆತು ಎಲ್ಲವನ್ನು ಮರೆತು ನಿಂತಿದ್ದೇನೆ!

**- ಶ್ರೀ ಹರಿ.**

02-02-2013

www.sriharikhoday.com

## 423.

ಮಾಡುವುದಕ್ಕೇನೂ ಕೆಲಸವಿಲ್ಲದ್ದಲ್ಲಿ ಆ ಸಮಯ....
ನಿನ್ನನ್ನು ನೀನು ಸರಿಪಡಿಸಿಕೋ
ಈ ರೀತಿ ಮಾಡಿದ್ದಲ್ಲಿ ಯಾರೂ ನಿನಗೆ
ಟೀಕಿಸುವ ಬದಲು ಶ್ಲಾಘಿಸುವರು !

ಮಾಡುವುದಕ್ಕೇನೂ ಕೆಲಸವಿಲ್ಲದ್ದಲ್ಲಿ
ಜೊತೆಗಿರುವರ ಕಷ್ಟಗಳಲ್ಲಿ ಬೆರೆತುಕೋ
ಈ ರೀತಿ ಮಾಡಿದ್ದಲ್ಲಿ ಸಮಾಜ ನಿನ್ನ ಮೇಲೆ
ಹೆಮ್ಮೆಪಟ್ಟು ನಾಯಕನನ್ನಾಗಿ ಮಾಡುವುದು !

ಮಾಡುವುದಕ್ಕೇನೂ ಕೆಲಸವಿಲ್ಲದ್ದಲ್ಲಿ
ನಿನ್ನ ಮನಸ್ಸನ್ನು ನೀನೇ ನೋಡಿಕೋ....
ಈ ರೀತಿ ಮಾಡಿದ್ದಲ್ಲಿ.....
ಕೆಟ್ಟದ್ದೆಲ್ಲಾ ಮನಸ್ಸಿನಿಂದ ತೇಲಿ ಹೊರಹೋಗಿ
ಮನಸ್ಸಿನಲ್ಲಿ ಪ್ರೀತಿ ಹೆಪ್ಪು ಕಟ್ಟಿಕೊಳ್ಳುತ್ತದೆ !

ಮಾಡುವುದಕ್ಕೇನೂ ಕೆಲಸವಿಲ್ಲದ್ದಲ್ಲಿ
ಹಿರಿಕರ ಮಾತು ಮೆಲುಕು ಹಾಕಿಕೋ....
ಆ ಮಾತುಗಳನ್ನು ನಿನ್ನ ಮನ ಜೋಡಿಸಿಕೊಂಡರೆ
ಅದೃಷ್ಟ ಮನೆಗೆ ಹಸಿರು ತೋರಣ ಕಟ್ಟಿಕೊಂಡು
ತಾಯಿ ಲಕ್ಷ್ಮಿಯನ್ನು ಹೊಸ್ತಿಲಿನ ಒಳಗೆ ತರಿಸಿಕೊಳ್ಳುತ್ತದೆ !



ಮಾಡುವುದಕ್ಕೇನೂ ಕೆಲಸವಿಲ್ಲದಿದ್ದರೆ
ನಿನ್ನನ್ನು ಬಿಟ್ಟು ಜಗತ್ತಿನ ಕಷ್ಟಗಳಿಗೆ
ಭಾಗಿಯಾಗುವ ಯೋಚನೆ ಮಾಡಿ.....
ಈ ರೀತಿ ಮಾಡಿದ್ದಲ್ಲಿ .....
ನಿನಗೆ ಪ್ರಪಂಚದ ಜ್ಞಾನ ಅರಿವಾಗುವುದು !

**- ಶ್ರೀ ಹರಿ.**

05-02-2013

www.shriharikhoday.com

## 424.

ಕೆಡುಕನ್ನು ಬಯಸುವುದೇ ಕೆಟ್ಟ ಮನಸ್ಸು
ಕೆಡುಕು ಮಾಡಲು ಓಡೋಡಿ ಕೆಟ್ಟ ಮನಸ್ಸು
ಕೆಡುಕು ಮಾಡದ್ದಲ್ಲಿ ಸುಖ ಕಾಣದಿರುವ ಕೆಟ್ಟ ಮನಸ್ಸು
ಕೆಟ್ಟದ್ದನ್ನು ಬಯಸುವವರ ಜೊತೆ
ಜೊತೆ ಮಾಡಿಸುವುದು ಕೆಟ್ಟ ಮನಸ್ಸು

ತನ್ನನ್ನು ಬೇರೆಯವರ ಜೊತೆಗೆ ಹೋಲಿಕೆ ಮಾಡುತ್ತ
ಅಸೂಯೆಯಿಂದ ಕೋಪವನ್ನು ತರಿಸುವುದು ಕೆಟ್ಟ ಮನಸ್ಸು
ತನಗೆ ಅದು ಇಲ್ಲ.... ಇದು ಇಲ್ಲ ಎಂದು
ಬೇರೆಯವರನ್ನು ಅಪಮಾನ ಮಾಡಿಸುವುದು ಕೆಟ್ಟ ಮನಸ್ಸು

ತಾನು ಎತ್ತರವಾಗಿ ಬೆಳೆದಿಲ್ಲ ಎಂದು ಎತ್ತರವಿರುವವರ ಮೇಲೆ
ಕೆಟ್ಟ ದೃಷ್ಟಿಯಿಂದ ನೋಡುವುದು ಕೆಟ್ಟ ಮನಸ್ಸು
ಯಾರಿಗೂ ಒಳ್ಳೆಯದನ್ನು ಮಾಡುವ ಗುಣ ತಿಳಿಯದ ಕೆಟ್ಟ ಮನಸ್ಸು
ಮಾತು ಮಾತಲ್ಲಿ ಸುಳ್ಳು ಬೆರೆಸುವುದು ಕೆಟ್ಟ ಮನಸ್ಸು

ತನ್ನಷ್ಟು ಬುದ್ದಿವಂತರು ಯಾರೂ ಇಲ್ಲ ಎಂದು
ಎಲ್ಲರ ಮುಂದೆ ನಾಚದೆ ಮಾತಾಡಿಸುತ್ತಿರುವುದು ಕೆಟ್ಟ ಮನಸ್ಸು
ತನ್ನ ಆಪ್ತರು ತಾನು ಮಾಡಿದ ಕೆಲಸಗಳನ್ನು ಲೆಕ್ಕಿಸಲಿಲ್ಲವೆಂದು
ದ್ವೇಷವನ್ನು ಹೆಚ್ಚಿಸಿ ಜಗಳವನ್ನು ಮಾಡಿಸುವುದು ಕೆಟ್ಟ ಮನಸ್ಸು



ತಾನು ಕೆಂಪಗಿಲ್ಲ ನಾನು ಸುಂದರಿಯಲ್ಲ ಎಂದು
ಕನ್ನಡಿಯೊಂದಿಗೆ ದ್ವೇಷವನ್ನು ತರಿಸುವುದು ಕೆಟ್ಟ ಮನಸ್ಸು
ಲೌಕಿಕ ಇಲ್ಲದ ಮಾತುಗಳು ಅರ್ಥವಿಲ್ಲದೆ ಬೇರೆಯವರಿಗೆ
ದುಃಖ ತರಿಸುವುದು ಕೆಟ್ಟ ಮನಸ್ಸು

ಕೆಟ್ಟ ಮನಸ್ಸು ಎಂದು ಹೊರ ಹೇಳದೆ
ದೇವರ ಸಾಕ್ಷಿಯಾಗಿ ಆಗ್ಗಾಗೆ ಮಾತಿನಲ್ಲಿ ಜೋಡಿಸುವುದು
ಕೆಲಸಕ್ಕೆ ಬಾರದ ನಷ್ಟ ತರಿಸುವ ಕೆಟ್ಟ ಮನಸ್ಸು

\- **ಶ್ರೀ ಹರಿ**

06-02-2013

www.sriharikhoday.com

## 425

ಎಲ್ಲವೂ ಹೊರಗಿನಿಂದ ಜೊತೆ ಸೇರಿ ನಮ್ಮೊಳಗೆ ಸೇರಿಕೊಂಡು
ಹೊಸ ವಿಮರ್ಶೆಗಳ ಪ್ರಾರಂಭ
ನಿರ್ಮಾಣ ಪ್ರಕೃತಿಯ ಧರ್ಮ ಪ್ರಕೃತಿಯ ಗುಣ
ಎಲ್ಲವೂ ಹೊರಗಿನಿಂದ ಬಂದು ಹೊಸ ರೂಪ ಪಡೆದು
ಒಳಗಿನಿಂದ ಹೊರಹೋಗಿ ಜಗತ್ತಿಗೆ ಪ್ರಕಾಶವನ್ನು ನೀಡುತ್ತಿದೆ!

ಗುರುಗಳಿಂದ ಕಲಿತು ಹೊರಗಿನಿಂದ ಬಂದ ವಾಕ್ಯಗಳು
ವಾಕ್ಯಗಳ ಅರ್ಥ ಮನದ ಮೇಲೆ ಆಗಿರುವ ಪರಿಣಾಮ
ಪ್ರಕೃತಿಗೆ ಇರುವ ಕಷ್ಟಗಳಿಗೆ ಉತ್ತರ ನೀಡುವ ವ್ಯವಸ್ಥೆ
ಹೊರ ಪ್ರಯತ್ನಗಳಿಲ್ಲದೆ ನಮಗೆ ತಿಳಿಯದೆ ಉತ್ತರಗಳ ಸರಮಾಲೆ
ಸಿದ್ಧತೆ!

ಸುಮ್ಮನೆ ಇದ್ದ ಬೀಜ ಜೊತೆಗಿರುವ ಹೊರಗಿನ ಭೂಮಿ
ಇದನ್ನು ನೋಡಿ ಬೆಳೆಯಲು ಆಕಾಶದ ನೀರು
ಶೀಘ್ರದಲ್ಲಿ ಬೆಳೆ ಬೆಳೆಯಲಿ ಎಂಬ ಉದ್ದೇಶದ ಸೂರ್ಯಪ್ರಕಾಶ
ಪ್ರಕೃತಿ ಬೆಳೆಯಲೀ ಎಂದು ಬೀಸುತ್ತಿರುವ ಗಾಳಿ
ಹೊರಗಿನಿಂದ ಒಳಗೆ ಬಂದು ಎಲ್ಲರ ಕಣ್ಣಿನ
ಎದುರು ಪ್ರಕೃತಿಗೆ ಬೇಕಿರುವ ಬೆಳೆ
ಮಾನವನ ವೃದ್ಧಿಗೆ ಹೊಟ್ಟೆಪಾಡಿನ ಮೂಲ ಬಿಂದು!

ಭೂತ-ಭವಿಷ್ಯ-ವರ್ತಮಾನಗಳ ಅರ್ಥೈಸಿಕೊಂಡಿರುವ
ಎಲ್ಲ ಜಡಪದಾರ್ಥಗಳಲ್ಲಿ ಜೀವದ ಪ್ರಕಾಶ ದರ್ಶನ



## 426

ಆಕಾರವಿಲ್ಲದ ಕಣ್ಣಿಗೆ ಕಾಣದ ತರಂಗಗಳು
ಹೊರಗಿನಿಂದ ಸೇವೆ ಸಲ್ಲಿಸುತ್ತ ಆಕಾರವೇ ಇಲ್ಲದ ಕತ್ತಲು
ಪ್ರಕೃತಿಯ ನಿರಂತರ ಸೇವೆಯಲ್ಲಿ ತೊಡಗಿರಲು
ನಮ್ಮ ಮನಕ್ಕೆ ಹೊರಗಿನಿಂದ ಬರುವ ಎಲ್ಲವನ್ನು

ನಮ್ಮ ವಿಚಾರಧಾರೆಯಲ್ಲಿ ಸೇರಿಸಿಕೊಂಡು
ಎಲ್ಲಾ ಸಿದ್ಧತೆಯಿಂದ ಹೊರಬರುವ ಹೊಸ ವಿಚಾರಧಾರೆ
ಯಾರ ಸಹಾಯವೂ ಇಲ್ಲದೆ ಕಾರ್ಯವನ್ನು ನಿಭಾಯಿಸಲು
ಎದುರಿಗೆ ಬಂದು ನಿಂತು

ಸನ್ನಿವೇಶಕ್ಕೆ ಸರಿಯಾದ ವಿಚಾರ ಎಂಬ ಧೈರ್ಯ ತುಂಬಿಕೊಂಡು
ಜೀವವಿಲ್ಲದ ಕಣ್ಣಿಗೇ ಕಾಣದ ಮಹಾನ್ ಶಕ್ತಿಯ ಓಡಾಟ
ನಮ್ಮ ಜೊತೆಗೆ.... ಜೊತೆ ಜೊತೆಗೆ ಓಡಾಡುತ್ತಿರುವುದು ಈ
ಮನುಜಕುಲಕ್ಕೆ ಮಹಾನ್ ವರದಾನ

**- ಶ್ರೀ ಹರಿ.**

07-02-2013



www.sriharikhoday.com

# 427

ಕವಿ ಒಬ್ಬ ಅಹಂಕಾರಿ
ಮನದಲ್ಲಿ ಏನನ್ನೂ ಮುಚ್ಚಿಡದೆ
ಮುಚ್ಚಿಡಲು ತಿಳಿಯದೆ
ಹೊರ ಬೊಗಳುವ ಬಾಯಿ !

ಹುರುಳಿರುವ ಮಾತುಗಳನ್ನು ತಾನೊಬ್ಬನೇ
ಅನುವಾದ ಮಾಡುತ್ತ ಮಾಡುತ್ತಾ.....
ಸುಳ್ಳು ಹೇಳಲು ತಿಳಿಯದೆ
ಮನೆಯಲ್ಲಿ ಬದುಕಲು ತಿಳಿಯದೆ
ಬ್ರಹ್ಮಾಂಡಜೀವಿಯಾಗಿ ಅಲೆಯುತ್ತಿರುವೆನು !

ಕಾವ್ಯಗಳು ಬೇಕಿಲ್ಲದ ಪ್ರಜೆಗಳಿಗೆ
ದ್ವೇಷಗಳ ಆಳೆತ್ತರಗಳು
ಪ್ರಜೆಗಳ ದಿನಚರಿಯು ಟಿಪ್ಪಣಿಯಾಗಿ
ಸ್ವೀಕರಿಸಿ ಜೀವಿಸುತ್ತಿರುವ ಪ್ರಜೆಗಳಿಗೆ

ತಾನು ನಾಯಕ......
ನನ್ನ ಊರಿನಲ್ಲಿ ನನ್ನ ಸರಿಸಮಾನರು ಯಾರಿಲ್ಲ
ಚುನಾವಣೆಯಲ್ಲಿ ನನ್ನದೇ ಗೆಲುವು
ನನ್ನ ಬಿಟ್ಟರೆ ನಾಯಕರಿಲ್ಲ ಎಂದು
ಕೋಟೆಗಳಿಲ್ಲದ ಅರಮನೆಗಳನ್ನು ಕಟ್ಟುತ್ತ



www.sriharikhoday.com

ತನ್ನನ್ನು ಕಾಪಾಡಿಕೊಳ್ಳಲು ಕೆಲಸ ತಿಳಿಯದೆ
ಉಸಿರಾಡಿ ಎದುರು ಕಾಣುವ ಸೇನೆಗಳು
ತಾನು ಸುರಕ್ಷಿತ ಎಂದು ಭಾವನೆಗಳಿಂದ
ದೇಶದ ಬೇಡಿಕೆಗಳನ್ನು ತಿಳಿಯದೆ ರಾಜರು !

ಶವಗಳಾಗಿರುವ ಪ್ರಜೆಗಳಿಲ್ಲದ ಹಣದ ವಸೂಲಿ
ಅಹಂಕಾರ ..... ಕೋಪವನ್ನು ಕವಿಗೆ ಹೆಚ್ಚಿಸುತ್ತಿದೆ
ತಾನು ಬರೆದಿರುವ ಕವಿತೆಗಳಿಂದ
ಕೋಪದ ಉದ್ರೇಕಗದಲ್ಲಿ ಕವಿಯ ಮನೋಕಷ್ಟ

ಚಾಪೆ ಇದ್ದರೆ ದಿಂಬಿಲ್ಲ.....
ದಿಂಬಿದ್ದರೆ ಚಾಪೆಯೇ ಮೊದಲಿಲ್ಲ
ಬರೆದಿಡುವ ಕಾವ್ಯಗಳನ್ನು ಹರಿದು ಬಿಸಾಡಬೇಕೆಂಬ ಆಸೆ
ಕವಿಯ ಕೋಪವನ್ನರಿತು
ಹಾಳೆಗಳು ಪುಸ್ತಕದಲ್ಲಿ ಬಚ್ಚಿಟ್ಟುಕೊಂಡಿವೆ !

ನನಗೆ ಕವಿತೆ ಬೇಡ .... ಕೋಪ ಬೇಡವೆಂದು
ಸುಮ್ಮನಿದ್ದರೆ
ಹುಚ್ಚನೆಂದು ಕಲ್ಲು ಬೀರುತ್ತಿರುವ ಪ್ರಜೆಗಳಿಗೆ
ನಗ್ನಸತ್ಯದ ಪ್ರಭಾವ ನೋಡಲಾಗದೆ ಕವಿಯು
ದೀಪ ಇಲ್ಲದ ಕತ್ತಲು ಕವಿದ ಕೋಣೆಯಲ್ಲಿ ಕುಳಿತು

ಕಣ್ಣಿಗೆ ಕಾಣುತ್ತಿರುವಂತೆ ರಾಜರು ಪ್ರಜೆಗಳ ಬೇಡಿಕೆಗಳಿಗೆ
ಹಣದ ಹರಾಜು ಹಾಕುತ್ತಿರುವುದ ಕಂಡು ಕೇಳಿ
ಕಿವುಡನ್ನು ಕಿವಿಗೆ ಕಟ್ಟಿಕೊಂಡು
ತನ್ನ ಕಾವ್ಯ ಲೋಕದ ಬಾಗಿಲನ್ನು ಭದ್ರಗೊಳಿಸಿ ಬೀಗ ಹಾಕಿ

ಬೀಗದ ಕೀಲಿಯನ್ನು ಮತ್ತೆ ಯಾರಿಗೂ ತಿಳಿಗೊಳಿಸದ
ಕಾಲದ ಸಮುದ್ರಕ್ಕೆ ಬಿಸಾಡಿಹನು ....
ಸುಳ್ಳು ಹೇಳಲು ತಿಳಿಯದ
ಬದುಕಲು ತಿಳಿಯದ ಬ್ರಹ್ಮಾಂಡಜೀವಿ !

**-ಶ್ರೀ ಹರಿ .**

08-02-2013

## 428

ಮನುಷ್ಯ ಎಂದರೆ ಕೋಟಿ ಸ್ವಭಾವವುಳ್ಳವನು
ಅವನ ಬುದ್ಧಿ ಎಂದರೆ ದಶಕೋಟಿ ಸ್ವಭಾವವುಳ್ಳದ್ದು
ತನ್ನಲ್ಲಿರುವುದನ್ನು ಅನುಭವಿಸಲು ಮಾನವನಿಗೆ ಸಮಯದ ಅಭಾವ
ಬುದ್ಧಿಗೆ ತಾನೇನೆಂದು ಅರಿಯಲು ಜೀವನವೇ ಸಾಲುವುದಿಲ್ಲ!

ಸ್ವಭಾವದಿಂದ ಆಸೆ.... ಬುದ್ಧಿಯಿಂದ ಆಸೆಯ ಪಾಲನೆ
ದೇಹ ಬುದ್ಧಿ ಬಿಟ್ಟು ಇರಲು ಮಾನವನಿಗೆ ತಿಳಿಯದೆ
ಸತ್ಯ ತಾನೇ ದೂರಾಗಿ ಜೊತೆ ಬೆರೆಯಲು ಆಸೆಪಡದೆ
ಕಣ್ಣೆದುರಿಗಿರುವ ಸತ್ಯ ಅದೃಶ್ಯವಾಗಿ ಬಚ್ಚಿಟ್ಟುಕೊಂಡು ಹೋಗಿದೆ!

ಸ್ವಭಾವ ಬುದ್ಧಿ ಜೊತೆ ಸೇರಿದರೆ ಚರ್ಚೆಗಳಿಲ್ಲದ ನಿರ್ಣಯಗಳು
ತಮ್ಮನ್ನೇ ತಾವು ಅಲ್ಪರಾಗಿಸಿ ಹೊಸ ಆಕಾಶದಲ್ಲಿ ನಡೆಯಲಾರಂಭಿಸಿದೆ
ಬಚ್ಚಿಟ್ಟುಕೊಂಡಿದ್ದ ಸತ್ಯ ಜೊತೆಯಾಗಿ ವಿಶ್ವವೇ ಅಣುವಾಗಿರುವ ದೃಶ್ಯ
ಮನಸ್ಸು.... ಬುದ್ಧಿ ಹೊಸ ಅನುಭವಗಳ ಹೊಸ್ತಿಲು ಎದುರು
ನಿಂತಿದೆ!

ಕೋಟಿ ಕೋಟಿ ಜನಗಳಿದ್ದರೂ ನಮಗೊಬ್ಬರೇ ದೇವರು
ಅನೇಕ ಕೋಟಿ ಪ್ರಜೆಗಳಿಗೆ ಅನೇಕ ಕೋಟಿ ದೇವರುಗಳಿಲ್ಲದೆ
ತಾನು ಒಂದೇ ಸತ್ಯದ ಜೊತೆಗೆ ಬೆರೆತಾದ ಮೇಲೆ
ಸುಖಪಡು ಎಂದು ಹೇಳುತ್ತಿರುವ ಸತ್ಯ.... ಸುಖಗಳಿಗೆ ಅನೇಕ
ದಾರಿಗಳು
ಒಂದೊಂದು ದಾರಿಯಲ್ಲಿ ಒಂದೊಂದು ಅನುಭವ ಆಲಿಸಿದರೆ
ತಾನೊಬ್ಬನೇ ಸುಖ ಪಡೆಯದೆ ಅವನೂ ಜೊತೆ ಸುಖವನ್ನು
ಹಂಚಿಕೊಂಡರೆ
ಸುಖವೋ ಸುಖ ಸುಖವೋ ಸುಖ!



www.sriharikhoday.com

ಸುಖದಲ್ಲಿ ಬೆರೆಯುವುದು ಜವಾಬ್ದಾರಿಯಾಗಿ
ದೇವರ ಜೊತೆ ಕಾಂತೆಯ ಜೊತೆ ಬೆರೆಸುವ
ನಿಶೆಯ ಜೊತೆ ಕಾವ್ಯಗಳ ಜೊತೆ
ದಿನವೂ ಬದಲುತ್ತಿರುವ ಕಾವ್ಯ ಪ್ರಪಂಚದಲ್ಲಿ
ಅದರಲ್ಲಿ ಬೆರೆತು ಹೊರಬರುವುದೇ ಸುಖ

ದೇವರಾದ ಸತ್ಯದಲ್ಲಿ ದಿನವೂ ಮನದ ಕನ್ನಡಿಯಲ್ಲಿ
ತನ್ನ ಹೊಸ ಹೊಸ ರೂಪ ತೋರಿಸುತ್ತಿರುವುದ
ಎಲ್ಲವನ್ನು ತ್ಯಾಗ ಮಾಡಿರುವ ನಾ
ಕಾಣಲಾಗದ ಸುಖದಲ್ಲಿ ನಾ ಬೆರೆತು

ಕಾಂತೆಯ ಜೊತೆ ಅನುಭವದ ಕಾವ್ಯಗಳು
ಎದುರಿಗೆ ನಾಟ್ಯ ಮಾಡುತ್ತಿದ್ದರೆ
ವಿಶ್ವವೇ ತನ್ನ ಜೊತೆಯಲ್ಲಿ ಬೆರೆತು
ತಾನೂ ಕೂಡ ಜೊತೆಗೆ ಸುಖಪಡುತ್ತಿರುವುದು!

ಕಾಣುವ ಒಂದು ಬಣ್ಣದಲ್ಲಿ ಅನೇಕ ಬಣ್ಣಗಳ ದರ್ಶನ
ತನ್ನ ಬುದ್ಧಿ ಆಕಾಶವಾಗಿರುವ ಸ್ವಭಾವಗಳು
ಪ್ರಕೃತಿಯ ಕ್ರಿಯೆಗಳೆಲ್ಲಾ ಬೆರೆತು
ಹಗಲು - ರಾತ್ರಿ ಎಚ್ಚರದ ಕನಸುಗಳು

ತಮ್ಮ ಹೆಸರು ಗುಣಗಳನ್ನು ಮರೆತು
ಒಂದೇ ಇರುವಿಕೆಯ ಜೊತೆಯಾಗಿರುವುದು
ತನ್ನ ಸುಖದ ಗಣಿಕೆಗೆ ವಿಶ್ವದ ಕಾಲ ಜೊತೆಯಾಗಿ
ಸತ್ಯ ತಾನೇ ಮುಂದೆ ಬಂದು ಅಪ್ಪಿಕೊಳ್ಳುವ ಅನುಭವ!

ಕಾಂತೆಯ ಜೊತೆ ಅಪ್ಪಿನಲ್ಲಿ ವಿಶ್ವದ ಅಪ್ಪಿನ ಭಾವನೆ
ಬೆಳಕು ಕತ್ತಲನ್ನು.... ಕತ್ತಲು ಬೆಳಕನ್ನು ಅಪ್ಪಿಕೊಳ್ಳುವಂತೆ
ಈ ಸುಖದ ಅಪ್ಪಿನಲ್ಲಿ
ಆಕಾಶವೂ ಕೂಡ ಜೊತೆಯಾಗಿ ಹೋಗಿದೆ!

**- ಶ್ರೀ ಹರಿ.**

09-02-2013

# 429

ನೋಡುತ್ತಿದೆ .. ನೋಡುತ್ತಿದೆ ಒಂದನ್ನೊಂದು ನೋಡುತ್ತಲೇ ಇದೆ
ಭವಿಷ್ಯ ತೆರೆ ಹಿಂದೆ ನಿಂತು ಭೂತ ಭವಿಷ್ಯ ವರ್ತಮಾನಗಳನ್ನು
ನೋಡುತ್ತಿದೆ
ನೋಡಿದ ಒಂದು ನೋಟ ಪ್ರೀತಿಯನ್ನು ಎದುರು ನೋಡುತ್ತಿದೆ
ಒಂದು ಮನೋನಿರ್ಧಾರ ಆಗು-ಹೋಗುಗಳ ನೋಡುತ್ತಿದೆ!

ಬೀಜದಿಂದ ಒಡೆದು ಹೊರಬಂದ ಮೊಳಕೆ
ತೆನೆಯನ್ನು ಎದುರು ನೋಡುತ್ತಿದೆ....
ಬಿಕ್ಷುಕನ ಹಸಿದ ಹೊಟ್ಟೆ ಅನ್ನದ ಕೂಳನ್ನು ಎದುರು ನೋಡುತ್ತಿದೆ
ಬಂಜರಾದ ಭೂಮಿ ಬೆಳೆಯನ್ನು ಎದುರು ನೋಡುತ್ತಿದೆ

ಬೆಳೆ ಮಳೆಯನ್ನು ಎದುರು ನೋಡುತ್ತಿದೆ
ಮಳೆ ಮೋಡಗಳ ಎದುರು ನೋಡುತ್ತ
ಮೋಡಗಳು ಆಕಾಶದಿಂದ ಕೆಳಗೆ ಇಳಿಯಲು
ಋತುಗಳ ಅಪ್ಪಣೆಗೆ ಎದುರು ನೋಡುತ್ತಿದೆ!

ಮನಸ್ಸು ಸುಖವನ್ನು ಎದುರು ನೋಡುತ್ತಿದೆ
ಸುಖದ ಜೊತೆ ಸುಖ ನೀಡುವವರ ನಿರೀಕ್ಷೆ ಮಾಡುತ್ತಿದೆ
ಎಲ್ಲವ ತ್ಯಾಗ ಮಾಡಿರುವವರು ತ್ಯಾಗ ಮಾಡಿದ್ದೇನೆ ಎಂದು
ತೃಪ್ತಿಯು ಎದುರು ನೋಡುತ್ತಿದೆ!



ಭವಿಷ್ಯದ ತೆರೆನೋಟ ಎಲ್ಲವನ್ನೂ ಎದುರು ನೋಡುವಂತೆ ಮಾಡಿ
ಎಲ್ಲಾ ಸಾಧನೆಗಳ ಹಿಂದೆ ಒಂದು ಬಯಕೆ ಕಾದು ನಿಂತಿರುವುದು
ವಿಶ್ವದಲ್ಲಿ ಒಂದಕ್ಕೊಂದು ಸಂಬಂಧವೇ ವಿಶ್ವ ಎಂದು ಹೆಸರು ಪಡೆದು
ಕಾಲ ಆ ಸುಖ ಇಲ್ಲೇ ಇದೆ ಎಂದು
ಒಂದು ಹೆಜ್ಜೆ ಮುಂದೆ ಬಾ ಅಲ್ಲೇ ಇದೆ ಎಂದು
ಸುಖ ತೋರಿಸಲು ಕೈ ಎಳೆದು ಮುನ್ನಡೆಸುತ್ತಿದೆ!

ಕುದುರೆಗೆ ತನ್ನ ಸವಾರನ ಮೇಲೆ ಪ್ರೀತಿ
ನಾಯಿಗೆ ತನ್ನ ಒಡೆಯನ ಮೇಲೆ ಪ್ರೀತಿ
ಮನೆ ಒಡೆಯನಿಗೆ ತನ್ನ ಮನೆತನದ ಮೇಲೆ ಪ್ರೀತಿ
ಸೂರ್ಯ - ಚಂದ್ರರ ಓಟ ಭವಿಷ್ಯದ ಮೇಲೆ ಅತಿ ಅತಿಯಾದ ಪ್ರೀತಿ

ಬಯಕೆಗಳಲ್ಲಿರುವ ಶಕ್ತಿ ದೇಶವನ್ನೇ ಬದಲಿಸಬಹುದು
ಬೇರೆಯವರ ಸುಖ ನನಗೆ ಬರಲಿ ಎಂದು ನಾವು ಹೇಳಿದರೆ
ಬೇರೆಯವರು ನಮಗೆ ಸುಖ ನೀಡುವರು
ತೆರೆ ಹಿಂದಿರುವ ಭವಿಷ್ಯಕ್ಕೆ ಎಲ್ಲರ ಸುಖ ನೋಡುವ ಅಪೇಕ್ಷೆ

ತಾನು ಸುಖದ ಜೊತೆ ಬೆರೆತು ಸಾಕ್ಷಿಯಾಗಿರುವ
ತೆರೆ-ಮರೆಯಲ್ಲಿರುವ ಭವಿಷ್ಯ
ದೇವರಲ್ಲಿ ಎಲ್ಲರಿಗೂ ಸುಖ ಬಯಸುವ ಗುಣವನ್ನು ನಾವು ಕಂಡರೆ
ನಮ್ಮ ಮೇಲೆ ದೇವರ ಪ್ರೀತಿ
ಪ್ರೀತಿಯ ಜೊತೆಗೆ ಸುಖ ಖರ್ಚಿಲ್ಲದೆ ದೊರಕುತ್ತದೆ!

**- ಶ್ರೀ ಹರಿ.**

14-02-2013



www.sriharikhoday.com

# 430.

ಏನೋ ಬರುತ್ತಿದೆಯಂತೆ
ಯಾವುದೋ ಒಂದು ಸುಖ ನಮಗೋಸ್ಕರ ಕಾಯುತ್ತಿದೆಯಂತೆ
ಆ ಸುಖ ಪಡೆಯಲು ನಾ ಹೋಗದಿದ್ದರೆ ಸುಖಕ್ಕೆ ನೋವಂತೆ!

ಸುಖ ತಾನೊಬ್ಬನೆ ಸುಖ ಪಡೆಯಲಾಗದೆ ನನ್ನನ್ನು ಕರೆಸಿದಂತೆ
ಸುಖ ಕೇಳಿತು ನನಗೆ.... ಸುಖವೆಂದರೆ ಏನು? ಎಂದು
ಬಯಕೆಗಳಿಲ್ಲದೆ ಸುಖಗಳು ಬರದು ಎಂದೆ
ಬೇರೆಯವರಿಂದ ದೊರಕುವುದೇ ಸುಖವೆಂದು!

ಸುಖ ತನ್ನ ಪಾಲಿಗೆ ಒಂದು ಖಾಲಿ ಪಾತ್ರೆ
ಅದರ ಪಾತ್ರೆಯನ್ನು ಉಪಯೋಗಿಸುವಂತೆ
ನಾನಾ ರುಚಿಕರ ಭಕ್ಷ್ಯಗಳಂತೆ
ಸುಖಕ್ಕೆ ಹೇಳದೆ ಬಯಕೆಗಳಿರಬೇಕು
ಸುಖ ನೀಡುವವರಿರಬೇಕು ಎಂದು ಹೇಳಿದ ಮೇಲೆ

ಸುಖ ಕೊಡುವ ವಿಚಾರಧಾರೆಯಲ್ಲಿ ಪ್ರಕೃತಿಯನ್ನು ನೋಡಿದಾಗ
ಪ್ರಕೃತಿಯಲ್ಲಿ ತೆಗೆದುಕೋ.... ತೆಗೆದುಕೋ....
ಎಂಬ ಸುಖ ನೀಡುವ ಭಾಷೆ ತಿಳಿದಾದ ಮೇಲೆ
ಸುಖ ನೀಡುವ ನಿಶೆಯ ಜೊತೆಗೆ



ಸುಖ ನೀಡುವ ದೇವರ ಜೊತೆಗೆ
ಸುಖ ನೀಡುವ ಕಾಂತೆಯ ಜೊತೆಗೆ ಸೇರಿಕೊಂಡಾದ ಮೇಲೆ
ಸುಖವೂ ಕೂಡ ನನ್ನ ಜೊತೆ ಸುಖಪಡುತ್ತಿದೆ!

ಸುಖದ ವೇಳೆ ದ್ವೇಷವಿಲ್ಲ, ಕ್ಲೇಶವಿಲ್ಲ
ಸುಖದ ವೇಳೆ ಹೆದರಿಕೆ - ಬೆದರಿಕೆ ಇಲ್ಲ
ಸುಖದ ವೇಳೆ ನಾನೇ ವಿಶ್ವದ ಸಾರ್ವಭೌಮ ಎಂಬ ಭಾವನೆ
ಉತ್ತುಂಗದ ಜೀವನದ ತೂಗಲ್ಲಿ

ನಮ್ಮಗಳ ಸುಖಕ್ಕೆ ಅಡ್ಡಿಯಾಗದ ಏನೂ ಇಲ್ಲದ
ನಿರಾಳ ಸುಖದ ಆಕಾಶದಲ್ಲಿ
ಕಾಲ ಇಲ್ಲದ ಪೂರ್ಣಸ್ಥಿತಿಯಲ್ಲಿ
ಸುಖ ನೀಡುತ್ತಿರುವ ಸಿತಾರಿನ ಜೊತೆ

ಸುಖ ನೀಡುತ್ತಿರುವ ಗುಲಾಬಿಯ ಅತ್ತರು
ಸುಖ ನೀಡುತ್ತಿರುವ ಕೊನೆಯಿರದ ಪರಿಸರ
ಹಗಲು-ರಾತ್ರಿಗಳನ್ನು ಮರೆಸಿದೆ!

**- ಶ್ರೀ ಹರಿ.**

20-02-2013

www.sriharikhoday.com

## 431.

ಸೋರುತ್ತಿದ್ದ ಗುಡಿಸಲುಗಳು.... ಬದುಕುವ ಮನೆಗಳಾಗಿವೆ
ಅಸ್ಪೃಶ್ಯತೆ ಹೋಗಿ ಎಲ್ಲರೂ ಜೊತೆ ಜೀವಿಸುತ್ತಿದ್ದಾರೆ
ರಸ್ತೆಯಲ್ಲಿ ಭಿಕ್ಷುಕರು ಇಲ್ಲದೆ ಹರುಕು ಬಟ್ಟೆಗಳು ಕಾಣಿಸದೆ
ರಸ್ತೆಯಲ್ಲಿ ಎಲ್ಲರ ಬಟ್ಟೆಗಳು ಬಣ್ಣ ಬಣ್ಣದ ಉಡುಪುಧಾರಣೆಗಳು!

ಶಿಸ್ತಿನ ಸಾರಿಗೆ ನಿಯಂತ್ರಣ, ಹೊಗೆ ಕಲ್ಮಶಗಳಿಲ್ಲದ ವಾತಾವರಣ
ಯಾರ ಭಿತ್ತಿಪತ್ರಗಳೂ ಇಲ್ಲದ ಗೋಡೆ ಮೇಲಿನ ಸುಂದರ
ಚಿತ್ರೀಕರಣ
ಎಲ್ಲರ ಮುಖದ ಮೇಲೆ ಯಾವ ಆತಂಕವಿಲ್ಲದೆ
ಎಲ್ಲರ ಜೀವನದಲ್ಲಿ ತುಂಬುಜೀವನದ ಅನುಭವದ ಮುಖದ
ಪ್ರತಿಬಿಂಬ!

ಧೂಳಿಲ್ಲದೆ ಸಗಣಿ ಸಾರಿಸಿದ ರಸ್ತೆಗಳು, ಸ್ವಲ್ಪವೂ ಕಸವಿಲ್ಲದ
ರಸ್ತೆಗಳು
ಒಬ್ಬರನೊಬ್ಬರು ಕೈ ಕುಲುಕಿಸಿಕೊಂಡು ಹಿರಿಯರಿಗೆ ತಲೆಬಗ್ಗಿಸಿ
ನಮಸ್ಕರಿಸುತ್ತ
ಜಾತಿ - ಭಾವನೆಯಿಲ್ಲದ ಜೊತೆಯೊಟ್ಟಿಗಿನ ಮನಸ್ಸಿನ ಮಾತುಗಳು
ಶಾಂತಿ ನೆಲೆಸಿಕೊಂಡಿರುವ ಸದ್ದಿಲ್ಲದ ರಸ್ತೆಯ ವಾತಾವರಣಗಳು

ಎಲ್ಲರೂ ಮನೆಯಲ್ಲೇ ಉಂಡು ರಸ್ತೆಯ ಊಟಗಳು ಕಾಣಿಸದೆ
ಯಾವ ರಾಜಕೀಯ ಕೂಗಾಟಗಳೂ ಎಲ್ಲೆಲ್ಲು ಕಾಣಿಸದೆ



ಧ್ವನಿವರ್ಧಕಗಳ ಅರಚಾಟಗಳಿಲ್ಲದೆ, ಸದ್ದಿಲ್ಲದ ನಿಶ್ಶಬ್ದದ
ವಾತಾವರಣ
ಎಲ್ಲಾ ಸದ್ದುಗಳು ನಿಶ್ಶಬ್ದದಲ್ಲಿ ಕರಗಿಹೋಗಿ

ಕೋರ್ಟು ಕಛೇರಿಗಳಲ್ಲಿ ಜನಗಳೇ ಇಲ್ಲದೆ
ಕೋರ್ಟು ಕಛೇರಿಯ ಹಾಜರುಗಳಲ್ಲಿ ಕರಿಕೋಟಿನ ವಕೀಲರುಗಳು
ಕಾಣಸಿಗದೆ
ಊರಿನ ಜನರಲ್ಲಿ ಯಾವ ಜಗಳಗಳೂ ಇಲ್ಲದೆ
ನಂಬಿಕೆಯ ಮಾತಿನ ಆಧಾರದಲ್ಲಿ

ಕೋರ್ಟು ಕಛೇರಿ ಮೇಲೆ ಧ್ವಜ ಹಾರಾಡುತ್ತಿರಲು
ನ್ಯಾಯಾಧೀಶರು ಹಾಜರಾಗಿದ್ದು
ನ್ಯಾಯಾಧೀಶರ ಹಜಾರದಲ್ಲಿ ಯಾವ ವಕಾಲತ್ತುಗಳಿಲ್ಲದೆ
ಸ್ಪರ್ಧಿ-ಪ್ರತಿಸ್ಪರ್ಧಿಗಳ ಅಭಾವದಲ್ಲಿ
ಕೆಲಸವಿಲ್ಲದೆ ನೆಮ್ಮದಿಯಾಗಿ ಕುಳಿತ ನ್ಯಾಯಾಧೀಶರ ಸಂತಸ

ಒಳ್ಳೆ ಔಷಧಿಗಳ ಸರಬರಾಜು
ರೋಗಗಳಿಲ್ಲದ ಊರು.... ರೋಗಿಗಳಿಲ್ಲದ ಮನೆ
ರೋಗಿಗೆ ಎದುರು ನೋಡುತ್ತಿರುವ ಆಸ್ಪತ್ರೆಗಳು
ಆಸ್ಪತ್ರೆಯ ವೈದ್ಯರಿಗೆ ಕೆಲಸವಿಲ್ಲದೆ
ದಿನಪತ್ರಿಕೆ ಓದುವ ಸಂತಸದಲ್ಲಿ ಮುಳುಗಿರಲು

ಯಾವ ಅಪಘಾತ.... ಯಾವ ಕೆಟ್ಟ ವಾರ್ತೆಗಳಿಲ್ಲದೆ
ದ್ವೇಷಗಳನ್ನು ವ್ಯಕ್ತಪಡಿಸುವ ಮೆರೆವಣಿಗೆಗಳಿಲ್ಲದೆ
ಎಲ್ಲರು ಮನದ ಅಂತರಂಗದ ಸುಖದಲ್ಲಿ ತೇಲುತ್ತ
ಸಂತೃಪ್ತಿಯು ಜನಗಳ ಮುಖದಲ್ಲಿ ಪ್ರದರ್ಶನವಾಗುತ್ತಿರಲು

ಎಲ್ಲರೂ ಜೊತೆ ಸೇರಿ ದೇವರನ್ನು ನಮಿಸುವ ಸ್ಥಳಗಳು....
ಇರುವ ಒಂದೇ ದೇವರಲ್ಲಿ ಎಲ್ಲಾ ಜಾತಿಗಳು



www.sriharikhoday.com

ಮೈ ಬಗ್ಗಿ ನಮಿಸುತ್ತಿರುವ ದೃಶ್ಯಗಳು
ಜೊತೆ ಸೇರಿ ದೇವರನ್ನು ಪ್ರಾರ್ಥಿಸುತ್ತ ಜಾತಿ ಭೇದಗಳಿಲ್ಲದೆ
ಒಂದೇ ಪ್ರಸಾದವನ್ನು ಎಲ್ಲರು ಜೊತೆ ಸೇರಿ ಸ್ವೀಕರಿಸುತ್ತಿರುವುದು.

ಎಲ್ಲರ ಮನದಲ್ಲಿ ತಾವು ಕೇಳಿದ ವರಗಳನ್ನು
ದೇವರು ವರದಾನವಾಗಿ ನೀಡಿದ್ದಾರೆ ಎಂಬ ಭಾವನೆಯಿಂದ
ಎಲ್ಲಾ ಜಾತಿಗಳ ಹಿಂಡುಗಳು....ದೇವರನ್ನು ಕೊಂಡಾಡುತ್ತ
ಎಲ್ಲರ ಮನದ ಹೊಸ್ತಿಲಲ್ಲಿ ಹಸಿರು ತೋರಣವನ್ನು ಕಟ್ಟಿಕೊಂಡು
ತುಂಬುತನವನ್ನು ಅನುಭವಿಸುತ್ತಿರುವ ಸಮಾಜದ ಹೊಂದಾಣಿಕೆ
ನಾವೆಲ್ಲಾ ಒಂದೇ ಎಂಬ ಪವಿತ್ರ ಭಾವನೆ ಮೇಲು ಕೀಳನ್ನು
ಮರೆಸಿದೆ!

'ದೇವರ ಕೆಲಸ ಸರ್ಕಾರದ ಕೆಲಸ, ಪ್ರಜೆಗಳ ಸೇವೆಯೇ ದೇವರ
ಸೇವೆ' ಎಂದು
ಸಮಾಧಾನಚಿತ್ತರಾಗಿ ದೇಶಾಡಳಿತವನ್ನು ನಡೆಸುತ್ತಿರುವ
ರಾಜಕಾರಣಿಗಳು, ಅಧಿಕಾರ ವರ್ಗದವರು, ಲಂಚ,
ರುಷುವತ್ತುಗಳಿಲ್ಲದೆ
ದೇಗುಲದಂತಿರುವ ರಾಜಕೀಯ ಕಛೇರಿಗಳು
ಸಿರಿತನ-ಬಡತನ ತಿಳಿಯದ ಕರ್ತವ್ಯ ನಿಷ್ಠಾವಂತರನ್ನು
ನೋಡಿದಾಗ

ನಮ್ಮ ಕರುಳು ಅವರ ಜೊತೆ ಅವರ ಕರುಳಿಗೆ
ಗಂಟುಹಾಕಿಕೊಂಡಂತೆ
ಅನ್ಯಾಯಕ್ಕೆ ಆಸ್ಪದವಿಲ್ಲದೆ ತಲೆಯೆತ್ತಿ ಮೈ ಬಗ್ಗಿ ದುಡಿಯುತ್ತಿರುವ
ಕರ್ತವ್ಯ ನಿಷ್ಠಾವಂತರ ನೆರಳು ಸ್ವರ್ಗದ ವಾತಾವರಣ
ಈ ಭೂಮಿ ಮೇಲೆ ಸೃಷ್ಟಿಯಾಗಿರುವ ಅನುಭವ!

ಕಳ್ಳರಿಲ್ಲದೆ..ದುಷ್ಟರೂ ಇಲ್ಲದೆ..ದುಷ್ಕರ್ಮಿಗಳೂ ಇಲ್ಲದೆ
ಮೋಸ ಇಲ್ಲದೆ....



www.sriharikhoday.com

ದರೋಡೆಗಳಿಲ್ಲದೆ ಯಾವ ರೀತಿಯ ದುಶ್ಚಟಗಳಿಲ್ಲದೆ
ಉಗ್ರಗಾಮಿಯ ನೆರಳೂ ಕೂಡ ಇಲ್ಲದೆ
ಜಾತಿಯನ್ನು ಬೇರ್ಪಡಿಸುವ ಸಮಾಜದಲ್ಲಿ ಒಳಜಗಳಗಳು ಇಲ್ಲದೆ
ಸಮಾಜದ ಹಿಂಡುಗಳು!

ಪರಸ್ಪರ ದ್ವೇಷವಿಲ್ಲದ ವಾತಾವರಣ
ಮೋಸವಿಲ್ಲದ ಸರ್ಕಾರದ ಮಾಳಿಗೆಗಳಲ್ಲಿ
ಭೀತಿಯಿಲ್ಲದ ನಿರ್ಭಯ ರಸ್ತೆಗಳಲ್ಲಿ ನಡೆಯುತ್ತಿದ್ದರೆ
ಮನೆಯ ಸುರಕ್ಷತೆ ರಸ್ತೆಯಲ್ಲಿ ಕಾಣುತ....
ಎಲ್ಲೆಲ್ಲಿಯೂ ಪ್ರೀತಿಯನ್ನು ಅನುಭವಿಸುತ್ತ
ಪ್ರಜೆಗಳಿಗೆ ಅಕ್ಕರೆ ಮಮತೆಯಿಂದಲೇ ಮಾತನಾಡಿಸುತ್ತಿರುವ
ರಾಜಕಾರಣಿಗಳು
ಯಾವ ರಾಜಕೀಯವೂ ತಿಳಿಯದ ಕಲಾವಿದರು
ಮಾನಕ್ಕೆ ಭಯವಿಲ್ಲದ ತಾಯಿ-ಮಕ್ಕಳು
ರಸ್ತೆಯ ಓಡಾಟ ನೆಮ್ಮದಿಯಿಂದ ನೆಮ್ಮದಿಗೆ
ಸಂತೋಷದಿಂದ ಹರ್ಷಕ್ಕೆ.... ಸುಖದಿಂದ ಹೆಚ್ಚಿನ ಸುಖಕ್ಕೆ
ಎಲ್ಲಾ ಸಾಮಗ್ರಿಗಳ ಬೆಲೆಗಳನ್ನು ಹಣಕೊಟ್ಟು ಜೀವಿಸುತ್ತಿರುವ
ಬಡತನ
ಸಾಲ ಕೇಳದ ಬಡತನ
ಹಣದ ಉಳಿತಾಯಕ್ಕೆ ತಾವು ಸಿರಿವಂತರು ಎಂಬ ಭಾವನೆ
ಈ ಊರು ಹಳ್ಳಿಗಳು ನಮ್ಮ ನಾಡಿನ ಜೀವನಾಡಿಗಳು
ನಾವೆಲ್ಲಾ ಮಾನವರು .. ನಾವೆಲ್ಲಾ ದೇವರ ಮಕ್ಕಳು ಎಂದು
ಎಲ್ಲರ ಜೊತೆ ಜೀವಿಸಿಕೊಂಡು
ಸುಖದ ಪರಾಕಾಷ್ಠೆಯಲ್ಲಿ ತುಂಬಿ ತೇಲುತ್ತಿರುವ ಜೀವನ
ಈ ಊರಿನ ಹೆಸರು ಏನು ಎಂದು ಕೇಳಿದರೆ
ಹುಶ್.... ಅದು ಗಾಂಧಿ ಊರು
ಅವರು ಇಂದಿಲ್ಲ ಅವರು ಕೇಳಲು ತೀರಿ ಹೋಗಿದ್ದಾರೆ!

**- ಶ್ರೀ ಹರಿ.**

21-02-2013

## 432.

ಬೀದಿಗೆ ಬರದ ಕಾವ್ಯಗಳು
ಕಾವ್ಯಗಳನ್ನು ಎಲ್ಲರೂ ಓದಿ ಇತರರ ಜೊತೆ ಸಂಭಾಷಣೆ
ಆಗದಿದ್ದಲ್ಲಿ
ಕಾವ್ಯವಾಗುವುದಿಲ್ಲ!

ಮನಸ್ಸು ಕಲಕಿಸುವ ಕಾವ್ಯ
ಭಾವೋದ್ರೇಕದಿಂದ ಹೊರಬರುವುದೇ ಕಾವ್ಯ
ತಪ್ಪು ಅರ್ಥಗಳ ಸರಿ ಪಡಿಸುವುದೇ ಕಾವ್ಯ
ಅಸಾಧ್ಯವಾದುದನ್ನು ಸಮಾಜದಲ್ಲಿ ಸಾಧ್ಯಮಾಡಿಸುವುದೇ ಕಾವ್ಯ !

ಕಾವ್ಯಗಳ ವೈಭವ ಸಮಾಜದ ವೈಭವ
ಕಾವ್ಯಗಳ ಸರಮಾಲೆಗಳೇ ಸಮಾಜದ ಐಶ್ವರ್ಯ
ಕರ್ತವ್ಯಗಳನ್ನು ಎಚ್ಚರಿಸುವುದು ಕಾವ್ಯಗಳು ಮಾತ್ರ
ಭೂತ- ಭವಿಷ್ಯ-ವರ್ತಮಾನಗಳನ್ನು ಒಂದೇ ಸಲ ಅನುಭವಿಸುವುದು
ಕಾವ್ಯ!

ಕಲ್ಲಾಗಿರುವ ಮನಸ್ಸುಗಳನ್ನು ಹೂವಿನಂತೆ ಮೃದುವನ್ನು ತರಿಸುವುದು
ಕಾವ್ಯ!
ಜೀವನ ರೀತಿಯನ್ನು ಯಶಸ್ಸಿಗೆ ಕೊಂಡೊಯ್ಯುವುದು ಕಾವ್ಯ
ಸಂಬಂಧಗಳು ಇಲ್ಲದೆ ಸಂಬಂಧಗಳನ್ನು ಜೋಡಿಸುವ
ಜೋಡಣೆಯೇ ಕಾವ್ಯ !



ಕಾವ್ಯದಲ್ಲಿ ಅಡಗಿರುವ ಹೊಸ ಹೊಸ ಬಣ್ಣದ ಕಿರಣಗಳು
ಕಾವ್ಯದಲ್ಲಿ ಅಡಗಿರುವ ನಿಶ್ಶಬ್ದತೆ ಶಕ್ತಿಯಾಗಿ

ಮನೋಬೇಡಿಕೆಗಳನ್ನು ಹೊರಸೂಚಿಸುತ್ತ
ಎಲ್ಲರ ಮನದಲ್ಲಿ ಸಮತೋಲನ ತೃಪ್ತಿ ತರಿಸಿ
ತೃಪ್ತಿಯಿಂದ ಪ್ರೀತಿ.... ಪ್ರೀತಿಯಿಂದ ಜೊತೆ ಜೋಡಣೆ
ಸಮಾಜದಲ್ಲಿ ಎಲ್ಲರೂ ಜೊತೆ ಜೀವಿಸುವುದು
ದೇವರ ಜೊತೆಯಿರುವ ಪದಗಳ ಜೋಡಣೆ ಕಾವ್ಯ!

ಯಾವ ಚಿನ್ನದ ಸರಮಾಲೆ ಹಾಕಿಕೊಳ್ಳದೆ
ಸುಂದರ ರೂಪ ಪಡೆಯುವ
ಸುಂದರ ರೂಪ ಪಡೆಯುವ
ಸುಂದರವಾಗಿ ಯಶಸ್ಸನ್ನು ಹೊರಬಿಂಬಿಸುವುದು
ದೇವರ ಜೊತೆಯಿರುವ ಪದಗಳ ಜೋಡಣೆ ಕಾವ್ಯ

ಯಾವ ಚಿನ್ನದ ಸರಮಾಲೆ ಹಾಕಿಕೊಳ್ಳದೆ
ಸುಂದರ ರೂಪ ಪಡೆಯುವ
ಸುಂದರವಾಗಿ ಯಶಸ್ಸನ್ನು ಹೊರಬಿಂಬಿಸುವುದು ಕಾವ್ಯಗಳು
ಕಾವ್ಯಗಳ ಸರಮಾಲೆ ಮಾತ್ರ

**- ಶ್ರೀ ಹರಿ.**

22-02-2013



www.sriharikhoday.com

## 433

ಸೂಜಿಯಲ್ಲಿ ದಾರ ಇಲ್ಲದಿದ್ದರೆ ಹೊಲಿಗೆಯಾಗದು
ಕತ್ತಲಿಗೆ ಬೆಳಕು ಬರದಿದ್ದರೆ ಹಗಲು ಆಗದು
ತಾಯಿ ಪ್ರೀತಿಯಿಂದ ಎದೆಹಾಲನ್ನು ಕಂದನಿಗೆ ಉಣಿಸದಿದ್ದರೆ
ತಾಯಿಗೆ ತಾಯ್ತನ ದಕ್ಕದು!

ಪ್ರೀತಿ ಎಂಬ ದಾರ ಮನಸ್ಸೆಂಬ ಸೂಜಿಯಲಿಲ್ಲದಿದ್ದಲ್ಲಿ
ಯಾವುದರ ಜೊತೆಗೂ ಸೇರದೆ ಹೊಲಿಗೆಯಾಗದು
ಜೊತೆ ಸೇರಿದ ಹೊಲಿಗೆ ಪ್ರೀತಿ ತರಿಸುವ ಸುಖ
ಸುಖದಿಂದ ಅತಿಯಾದ ತನ್ನ ಸುಖ
ಆ ಸುಖದಲ್ಲಿ ಹೊಸ ಭಾವನೆ ಬೆರೆಯುವ ಭಾವನೆ!

ಬೆರೆತು ಬೆಸೆದು ಹೋಗುವ ಭಾವನೆ
ಆ ಬೆರೆತ ಬೆಸುಗೆ ಕಣ್ಣಿಗೆ ಕಾಣದ ಶರೀರದ
ಕಣ್ಣಿಗೆ ಕಾಣಿಸದೆ ಅನುಭವಿಸದೇ ಇರುವ ಮನೋದೃಶ್ಯಗಳು
ತನ್ನ ಯೋಗ್ಯತೆಗೆ ತಕ್ಕಂತೆ ಸೃಷ್ಟಿಯಾಗಿ
ಜೊತೆ ಸೇರಿ ಶಕ್ತಿಯ ಅರಿವು!

ಬೀಜವಾಗಿದ್ದ ಬೀಜ ಚಿಗುರಿ ಬೆಳೆಯಾಗಿ ಬೆಳೆದು
ಫಲವನ್ನು ಸೃಷ್ಟಿಸುತ್ತಿರುವಂತೆ
ಬೇಡಿಕೆಗೆ ಅನುಗುಣವಾಗಿ ಸೃಷ್ಟಿಯ ಯೋಗ್ಯತೆಯ ಪಡೆದು
ಅಲ್ಲದರ ಜೊತೆಗೆ ತಾನೂ ಬೆರೆತು
ವಿಶ್ವದ ವೃತ್ತದ ಒಡೆತನ ಪಡೆದಂತೆ!



ಕೊನೆ ಎಂದು ತಿಳಿಯದ ಮನಸ್ಸಿನ ಭಾವನೆ
ಮಾರ್ಪಾಟಾಗಿರುವ ಮನಸ್ಸು
ಮನಸ್ಸಿನಲ್ಲೇ ಕೊನೆಗಾಣದ ಹೊಲಿಗೆಯ ದಾರದ ಉಂಡೆಯಿದ್ದಂತೆ
ಪ್ರೀತಿ - ಪ್ರೇಮಗಳು ಸೂಜಿ ಬೆಳೆದಿರುವ ಮನಸ್ಸಿನಿಂದ
ವಿಶ್ವದ ಹೊಲಿಗೆ ಇಚ್ಛೆಗಳು ಸಂಪೂರ್ಣದ ಗಡಿಗಳನ್ನು ದಾಟಿ
ಹೊಲಿಗೆ ನಾನು ಹೊಲಿಗೆ ಹಾಕಿದೆನೆಂದು ತಿಳಿಯದೆ

ಬೆಳೆಯುತ್ತಿರುವ ಕ್ರಿಯಾಶಕ್ತಿಗೆ
ಅಣುವಿನ ಬೇಡಿಕೆ ವಿಶ್ವದ ಬೇಡಿಕೆ ಒಂದಾಗಿ
ಅಗೋಚರವಾಗಿ ತಾನಾಗಿ ಬಂದಿರುವ ಹೊಸ ಚೈತನ್ಯದ ಶಕ್ತಿ
ಕಾರಣಗಳನ್ನು ಮೀರಿಸಿರುವ ರೂಪ ಇಲ್ಲದ ಶಕ್ತಿಯ ಅರಿವು
ಜೊತೆ ಜೀವನ ಆರಂಭಿಸಿರುವ ಅರಿವು

ಆ ಮಹಾನ್‌ಶಕ್ತಿಯ ನೆಂಟನಾಗಿ ಮಗುವಾಗಿ.... ತಾಯಿಯಾಗಿ
ತಂದೆಯಾಗಿ ಸುಖ ನೀಡಿ ಸುಖ ತರಿಸಿ
ಜೊತೆ ಬೆರೆತಿರುವ ಕಾಂತೆಯಾಗಿ
ಕೊನೆ ಮೊದಲಿಲ್ಲದ ಅಭಾವದ ಎಣಿಕೆಯಿಲ್ಲದ ದೇವನಾಗಿ
ಪ್ರೀತಿಯ ಹೊಳೆ ಜಲಪಾತವಾಗಿ ಧುಮಿಕಿಸುವ ಮನೋಸ್ಥಿತಿ
ಬೇಡಿದ್ದನ್ನೆಲ್ಲಾ ನೀಡುವ ಶಕ್ತಿಯ ಅನುಭವ

ನಾನೇ ದೇವರಾಗಿ ಕಲ್ಪನೆಗೆ ಮೀರಿಸಿರುವ ಯೋಗ್ಯತೆಯ ಎದುರಲ್ಲಿ
ಸಿದ್ಧಿಯಾಗಿ ಜೊತೆ ಬೆರೆತಿರುವುದು
ಚಿಕ್ಕದಾದ ಪ್ರೀತಿ ಮನಸ್ಸಿನ ಜೊತೆ ಬೆಳೆದಿರುವ
ಕಾಲವೇ ಸಾಕ್ಷಿಯಾಗಿ ಕಾಲಕ್ಕೆ ವಿಸ್ಮಯಗೊಳಿಸುವ ಪವಾಡಗಳು
ಹೋಲಿಕೆಗಳಿಲ್ಲದ ಬೆಳವಣಿಗೆ
ಪ್ರೀತಿಯ ಜೊತೆಗೆ ನಾವು ಬೇಡಿದ್ದ ರೂಪದಲ್ಲಿ ದರ್ಶನ
ಪಡೆಯುತ್ತ
ಇದು ವಿಶ್ವದ ಬೇಡಿಕೆಯ ಕ್ರಿಯೆಗಳು ಎನ್ನುತ್ತ



www.sriharikhoday.com

ತನ್ನಲ್ಲೇ ವಿಶ್ವದ ಅನುಭವ ಪಡೆಯುತ್ತ
ಹುಚ್ಚನಾಗಿ ಕಾಣಿಸಿಕೊಂಡು ಕುಡುಕನಾಗಿ ಕಾಣಿಸಿಕೊಂಡು
ತ್ಯಾಗಿಯಾಗಿ ಕಾಣಿಸಿಕೊಂಡು
ವಿಶ್ವದ ಎಲ್ಲಾ ಕ್ರಿಯೆಗಳಲ್ಲಿ ಸೇರಿಹೋಗಿ
ಯಾರಿಗೂ ನೋವು ಕೊಡದೆ ಯಾರಿಗೂ ಹಿಂಸೆ ಕೊಡದೆ

ಬೇಡಿದಾಗಲೆಲ್ಲ ದೇವರ ರೂಪ ತನ್ನ ಮನೋ ಕನ್ನಡಿಯಲ್ಲಿ ನೋಡಿ
ರೂಪ ಕನ್ನಡಿ ಅನುಭವಿಸುವಂತೆ, ತಾನು ಅನುಭವಿಸುತ್ತ
ಬಯಸಿದಾಗಲೆಲ್ಲ ದೇವರ ಬಯಸಿ
ಎಲ್ಲದರಲ್ಲಿಯೂ ದೇವರ ದರ್ಶನ ಪಡೆಯುತ್ತ
ದೇವರ ಕೆಲಸಗಳಲ್ಲಿ ತಾನೂ ಭಾಗಿಯಾಗಿರುವೆನು ಎಂಬ
ಭಾವನೆಯುಳ್ಳವನೇ ಮಾನವರೂಪ ಧರಿಸಿರುವ ವಿಶ್ವವಾಹಿನಿಯಾಗಿ

ಕೊರತೆಗಳಿಲ್ಲದ ತೃಪ್ತಿಯಲ್ಲಿ ಎಲ್ಲದರಲ್ಲಿಯೂ ಸುಖಪಡುತ
ಸುಖ ತುಂಬುವ ಮನಸ್ಸುಳ್ಳವನೇ ಈ ಜಗತ್ತಿನ ಅವಧೂತ!

**- ಶ್ರೀ ಹರಿ.**

22-02-2013



# 434

ಒಂದೆಡೆ ಪೀಠದ ಮೇಲೆ ಕೂರದೆ
ಪೀಠವು ಅಂಟಿಸುವ ಸೋಂಬೇರಿತನ ಅಂಟಿಸಿಕೊಳ್ಳದೆ
ರೆಕ್ಕೆ ಕಟ್ಟಿಕೊಂಡು ಕಾಲ ಹಾರುವಂತೆ
ಒಂದೆಡೆ ಒಂದನ್ನೇ ನೀವು ಸುಖವನ್ನು ಚಿಂತಿಸುವುದಾಗಲೀ
ದುಃಖವನ್ನು ಚಿಂತಿಸುವುದಾಗಲೀ ನೋಡದೇ. .
ವರಗಳ ಕೊಡಲು ಕಾದಿರುವ ಆಕಾಶದ ಜೊತೆಗೆ ಜೀವಿಸೋಣ!

ವರವನ್ನು ಬರೀ ನಮಗೇ ಬೇಡದೆ ನಮ್ಮನ್ನು ಬಿಟ್ಟು
ಬೇರೆಯವರ ಸುಖಕ್ಕೆ ವರ ಬೇಡಿದರೆ
ಆಕಾಶ.... ದೇವರು.... ಬೆರೆಯುವ ವರದ ಜೊತೆಗೆ
ನಮಗೆ ನಮ್ಮ ಮನೋವ್ಯಾಪಾರಕ್ಕೆ ವರವ ನೀಡಿ
ನಾನು ವರ ನಿನಗೆ ಕೊಟ್ಟಿರುವೆ ಎಂದು ಹೇಳದೆ
ಮತ್ತೆ ನಿನ್ನ ಬೇಡಿಕೆಗೆ ಸಿದ್ದನಾಗಿದ್ದೇನೆ ಎಂದು ಹೇಳುವ ಮಾತು
ನಮ್ಮ ಕೆಲಸದಲ್ಲಿ ಮಗ್ನರಾಗಿರುವಾಗ ನಮಗೇ ಅರಿವಾಗುವುದು!

ನಾನು ಈ ಕೆಲಸ ಮಾಡಿದೆ, ನಾ ಆ ಕೆಲಸ ಮಾಡಿರುವೆ
ಮತ್ತೆ ಮತ್ತೆ ಜಗಲಿ ಮೇಲೆ ಕುಳಿತು
ಜನಗಳ ಜೊತೆ ಕಾಲಹರಣ ಮಾಡದಿದ್ದರೆ
ಈ ರೀತಿ ಆಡುವ ಮಾತುಗಳಿಗೆ
ಸಮಾಜ ಜಗಲಿಮಾತೆಂಬ ಹೆಸರು ಕೊಟ್ಟು
ಜನಗಳು ನಿನ್ನನ್ನು ದೂರ ಮಾಡಿರುವರು



www.sriharikhoday.com

ಅದು ಅರಿವಾದರೂ ಸುಮ್ಮನೆ ಜಗುಲಿ ಮೇಲೆ ಕುಳಿತು ನಕಲಿ
ಮಾತುಗಳನ್ನಾಡುತ್ತ
ಜಗಲಿಯ ಬಿಟ್ಟು ಅಂಬಲಿ ಕೆಲಸಕ್ಕಾಗಿ ನಿನ್ನ ಮನ ಪೋಲಿಯಾಗಲು
ಬಿಡದೆ

ನಿನ್ನನೇ ನೀನು ಕಟ್ಟಿಕೊಂಡಿರುವ ಏಕಾಂತ ಬಿಟ್ಟು
ಏಕಾಂತದ ಬೇಲಿಯನ್ನು ದಾಟಿ ಹೊರಬಂದು
ಛಲದಿಂದ ಸೋಂಬೇರಿತನವನ್ನು ಬಲಿಕೊಟ್ಟು

ಕೈಯಲ್ಲಿ ಗುದ್ದಲಿ ಹಿಡಿದು ಹೊಲದಲ್ಲಿ ಚಪ್ಪಲಿ ಇಲ್ಲದೆ ಇಳಿದರೆ
ಆ ನೀಲಿ ಆಕಾಶ ನಿನ್ನನ್ನು ನೋಡಿ....
ನಿನ್ನನ್ನು ಅವನ ಗೆಳೆಯನನ್ನಾಗಿಸಿಕೊಳ್ಳುವನು
ನಿನಗೆ ವರ ಬೇಡುವುದು ತಿಳಿದಿಲ್ಲ ಎಂದು
ಸಕಾಲದಲ್ಲಿ ತಾನೇ ವರಗಳನ್ನು ನೀಡುತ್ತಾ
ರೆಕ್ಕೆಯುಳ್ಳ ಕಾಲ ಒಂದೆಡೆ ನಿಲ್ಲದೆ ನಿನ್ನನ್ನು ನೋಡುತ್ತಾ ನೋಡುತ್ತ

ನೀ ಈಗ ಮಾರ್ಪಾಟಾಗಿರುವ, ಜಗಲಿಯ ಆಸನವನ್ನು ಬಿಟ್ಟಿರುವ
ನೀನು ನನ್ನ ಅಭಿಮಾನಿ ಎಂಬ ಮಾತುಗಳ ಅರಿವಾಗುವುದು
ನಮ್ಮ ಮನವನ್ನು ಒಂದೆಡೆ ಒಂದೇ ಪೀಠದ ಮೇಲೆ ಕೂರಿಸದೆ
ನಮ್ಮನ್ನು ಜಗದ ಅಭಿಮಾನಿಯನ್ನಾಗಿಸುವುದು.

**- ಶ್ರೀ ಹರಿ.**

27-02-2013



www.sriharikhoday.com

# 435.

ಎತ್ತರ ಎತ್ತರಕ್ಕೆ ಹೋಗುತ್ತಾ ಹೋಗುತ್ತಾ ಭಯ
ಹಿಗ್ಗಿದಷ್ಟು ಮನದಲ್ಲಿ ಅಂಜಿಕೆ ....
ಹೆಚ್ಚಿನ ಸುಖದ ಅನುಭವದಲ್ಲಿ ತೀರಿಹೋಗುವ ಭಯ
ಸುಮ್ಮನೆ ಇರಲು ನಮ್ಮಲ್ಲಿ ಇಲ್ಲದ ಹೊಸತನ
ಮುಂದೆ ಬರದೆ ಏನೂ ಹೇಳದೆ....
ಅಂಜಿಕೆಯಿಂದ ಇರುವುದು ಅಪೇಕ್ಷೆ!

ಎತ್ತರಕ್ಕೆ ಹೋಗುತ್ತಿರುವುದು ನೀನಲ್ಲ
ಅಂಜಿಕೆ ನಿನ್ನದೂ ಅಲ್ಲ, ನಿನ್ನ ಸುಖದ ಬಯಕೆ ನಿನ್ನದಲ್ಲ
ಹೊಸತನ ಬಯಕೆ ನಿನ್ನದಲ್ಲ
ಮಾತನಾಡದೇ ಇರುವ ನಿಶ್ಶಬ್ದ.... ಅದು ಅಂಜಿಕೆಯಿಂದ ಎದುರು
ಬರದೆ
ಕಾಣದ ದೂರದಲ್ಲೇ ನಿಂತು ಎಲ್ಲವನ್ನೂ ಭಾವಿಸುತ್ತಿದೆ!

ನಮ್ಮ ಮನ ಶುದ್ಧ ಮನವಾದ ಮೇಲೆ
ಜನಗಳ ಮನಸ್ಸಿನ ಹಿಗ್ಗಿಗೆ ಅಂಜಿಕೊಳ್ಳದೆ
ಅಪೇಕ್ಷೆಪಡುವವರಿಗೆ ಅಪೇಕ್ಷೆಗಳನ್ನು ನೀಡುತ
ಹೆದರಿಕೆಯಿಲ್ಲದೆ ಸಮುದ್ರದಷ್ಟು ಸುಖದಲ್ಲಿ ಅನುಭವ ನೀಡುತ
ಹಂತ ಹಂತದಲ್ಲಿ ಹೊಸದರ ಜೊತೆಗೆ ಬೆರೆಸಿ

ಭವಿಷ್ಯದಲ್ಲಿ ಮಾನವನಿಗೆ ಬೇಕಾದ ಮನೋಶಕ್ತಿಯನ್ನು ಬೆಳೆಸಲು
ನಮಗೆ ತಿಳಿಯದ ಕ್ರಿಯೆಗಳನ್ನು ಸೃಷ್ಟಿಗೆ ಬೇಕಾದ ರೀತಿಯಲ್ಲಿ
ನಮ್ಮ ಗೆಳೆಯ, ನಮ್ಮ ಸಂಬಂಧಿ, ನಮ್ಮ ದೇವರು
ನಮ್ಮ ಮನ ಶುದ್ಧೀಕರಣವಾದ ಮೇಲೆ ಜೊತೆ
ಜೀವಿಸಲಾರಂಭಿಸಿಹರು!

**- ಶ್ರೀ ಹರಿ.**

01-03-2013

## 436

ನಿಮ್ಮ ಕಷ್ಟಗಳಿಗೆ ಸೇತುವೆ ಕಟ್ಟುವೆವು ಎಂದರು
ನಿಮ್ಮ ಕಷ್ಟಗಳಿಗೆ ಸೇತುವೆ ಇಲ್ಲದೆ ಸುಖದ ದಡಕ್ಕೆ ಸೇರಿಸುವೆ
ಎಂದರು
ನಿಮ್ಮ ಜೀವನದ ನಷ್ಟಗಳಿಗೆ ನಾವು ಹೊಣೆ ಎಂದರು
ನಿಮ್ಮ ಕಷ್ಟಗಳು ನಮ್ಮ ಕಷ್ಟವೆಂದು ದುಡಿಯುವೆವು ಎಂದರು

ಆದರೆ ಆಸನದ ಮೇಲೆ ಕುಳಿತಾದ ಮೇಲೆ ನಮ್ಮನ್ನು ಮರೆತು
ತಮ್ಮ ಕಷ್ಟಗಳನ್ನು ಸರಿಪಡಿಸಿಕೊಂಡು
ನಮ್ಮನ್ನು ಕಷ್ಟಗಳಲ್ಲಿ ಜೀವಿಸಿ ಎಂದು ಹೇಳಿ
ನಾವು ನಿಮಗೆ ಸಹಾಯ ಮಾಡುವುದಕ್ಕೆ ಕಾನೂನಿಲ್ಲ ಎಂದು
ಮಾತಿನ ಪವಾಡಗಳಲ್ಲಿ ಮಾತನಾಡದೆ ವಾಹನದಲ್ಲಿ ಕುಳಿತು
ತೆರಳಿದರು!

ಒಂದು ಕಡೆ ಹೊಟ್ಟೆಹಸಿವಿನ ಬಾಧೆ
ಮತ್ತೊಂದೆಡೆ ಬಾಡಿಗೆ ಪಾವತಿಯ ಕಷ್ಟ
ಒಂದು ಕಡೆ ಜಾತಿಯ ಓಡಾಟದಲ್ಲಿ ನೆರೆ-ಹೊರೆಯವರ ಕಷ್ಟಗಳು
ಮತ್ತೊಂದೆಡೆ ಬೆಳೆಯುತ್ತಿರುವ ಮಕ್ಕಳ ಬಟ್ಟೆಗಳಿಲ್ಲದ
ನಗ್ನತೆಯ ಕಷ್ಟದ ನೋಟ

ಒಂದೆಡೆ ಕೆಟ್ಟ ದೃಷ್ಟಿಗಳ ಸುರಿಮಳೆ
ಮತ್ತೊಂದೆಡೆ ನಮ್ಮ ತಾಯಿ-ತಂದೆ-ಹಿರಿಕರ ಆರೋಗ್ಯಕಷ್ಟಾ
ಮತ್ತೊಂದೆಡೆ ದುಡಿಯುವುದಕ್ಕೆ ಆರೋಗ್ಯದ ಅಭಾವ!



www.sriharikhoday.com

ಏರುತ್ತಿರುವ ಬೆಲೆ, ರಸ್ತೆಯಲ್ಲಿ ದುಷ್ಟರ ಬಲೆ
ಮಾತು ಮಾತಿನಲ್ಲಿ ಮಾತನಾಡುವ ಮೋಸದ ಕಲೆ
ಏನನ್ನೂ ಮಾಡಲು ತಿಳಿಯಲು ತೋಚದಾದ ನಮ್ಮ ತಲೆ
ಎಷ್ಟು ಕೃಷಿ ಮಾಡಿದರೂ ಬೆಳೆಯಲ್ಲಿ ಬೆಳೆಯುತ್ತಿರುವ ಕಳೆ
ಕುಡಿಯುವ ನೀರಿಗೆ ಅಭಾವದ ಮಳೆ

ಎಲ್ಲಾ ಕಷ್ಟಗಳು ಬರೆದು ಪಟ್ಟಿ ಹೆಚ್ಚಿಸಿಕೊಂಡು ಹೋದರೂ
ಬರೆದಿರುವ ಹಾಳೆಯು ಸಾಲದೆಂದು
ಬರೆದಿರುವ ಹಾಳೆಯನ್ನು ಹರಿದು ಬಿಸಾಡುವುದೇ
ಕಷ್ಟಗಳಿಗೆ ಬೆಳೆದಿರುವ ಸಂಸಾರದ ಜೀವನದ ಕೊಲೆ

**- ಶ್ರೀ ಹರಿ.**

01-03-2013

## 437.

ಕಾಲಕ್ಕೆ.... ಕೊನೆ ಬರಲಾಗದ ಭಾವನೆಗಳು ಸತ್ಯ
ಸ್ಫಟಿಕದ ಪಾರದರ್ಶಕತೆ ಇರುವ ಭಾವನೆಗಳೇ ಸತ್ಯ
ಮನದ ಬಾಗಿಲುಗಳನ್ನು ತೆರೆಸಿ ಮಿನುಗುತ್ತಿರುವ
ತುಂಬುತನದ ಜೀವನವನ್ನು ಅನುಭವಿಸುತ್ತಿರುವನು!

ಶಾಂತಿಯು.... ಅಧ್ಯಾತ್ಮಿಕ ನಿಯಮಗಳನ್ನು ಉತ್ತರಿಸುವ ಉತ್ತರ
ಕಾಲ ಸವೆದರೂ ಸವೆಯದೇ ಇರುವ ದೇವರ ಶಕ್ತಿ
ಸಾಮರ್ಥ್ಯಗಳು
ಅಡಗಿರುವ ನಿಗೂಢ ತತ್ವದ ಬಹಿರಂಗ ಅನುಭವ
ಅಧ್ಯಾತ್ಮಿಕತೆ ದೇವರ ಜೊತೆಗೂಡಿಸಿರುವ ಅನುಭವ
ಪೂರ್ವ ಪಶ್ಚಿಮದವರೆಗೂ ಹರಡಿರುವ ಸೂರ್ಯನ ಪ್ರಕಾಶದಂತೆ
ನಾವು ಜೀವಿಸುವವರೆಗೂ ಜೊತೆಗೆ ಹರಡಿ.... ಹರಡಿರುವ ಸತ್ಯದ
ಬೆಳಕು!

ತಮ್ಮ ಅನುಭವಗಳನ್ನು ಸದಾ ಅನುಭವಿಸುತ
ಯಾವ ಹೊಸ ಹೇಳಿಕೆಯಾಗಲೀ.... ಹೊಸ ಬರವಣಿಗೆಯಾಗಲೀ.
ಯಾವ ಹೊಸ ಧರ್ಮ ಕಟ್ಟುವ ರೀತಿ ನೀತಿಗಳಾಗಲೀ ಇಲ್ಲದೆ
ಅನುಭವಿಸುತ್ತಿರುವ ನಾನು ನನ್ನವರ ಜೊತೆ ಅನುಭವಿಸಿ
ಅನುಭವದ ಜೊತೆ ಅನುಭವಿಸುವಾಗ

ಅನುಭವಿಸಿರುವವರ ಜೊತೆ ಅನುಭವದ ಜೊತೆಯಲ್ಲಿ ದೇವರ
ಶಕ್ತಿಯು



ನಾವು ನಮ್ಮನ್ನು ಮರೆತು ಅನುಭವಿಸುವ ಪ್ರಕೃತಿಯ ಕ್ರಿಯೆಯಲ್ಲಿ
ತಲ್ಲೀನರಾಗಿ
ನಾಚಿಕೆ.... ಹೆದರಿಕೆ.... ಅಂಜಿಕೆಗಳಿಲ್ಲದೆ ಭಯವಿಲ್ಲದ ಪವಿತ್ರ
ಭಾವನೆಯಲ್ಲಿ
ದೇವರ ಭಾವನೆ ಎಂದು ಭಾಸವಾಗುತ್ತಿರುವುದು!

ಸತ್ಯದ ಅನುಭವಕ್ಕೆ ಹೆದರಿಕೆಯಿಲ್ಲ ಎಂಬ ಮನೋ ನಿಲುವು
ಉಸಿರು - ನಿಟ್ಟುಸಿರು ಇರುವವರೆಗೂ ನಮ್ಮ ಪ್ರಾಣ ಇರುವಂತೆ
ದೇವರ ಕ್ರಿಯೆಯಲ್ಲಿ ರೂಪ ಸೌಂದರ್ಯಗಳಲ್ಲಿ ನಾ ದೇವರನ್ನು
ಕಾಣುತ
ಪ್ರೀತಿಯ ಅಹ್ವಾನವಾಗಿರುವ ಗಂಡು - ಹೆಣ್ಣುಗಳಲ್ಲಿರುವ
ನಿಗೂಢ ಸುಂದರ ಅನುಭವಗಳಲ್ಲಿ

ಪ್ರಕೃತಿಯ ಸ್ವಪ್ನಗಳ ಜೊತೆಯಲ್ಲಿರುವ ದೇವರ ದರ್ಶನದ ಜೊತೆಗೆ
ಅನುಭವವನ್ನು ಅಳೆಯಲು ವಿಶ್ವವೇ ಸಾಲದಾಗಿದೆ!

**- ಶ್ರೀ ಹರಿ.**

04-03-2013

www.sriharikhoday.com

## 438.

ದೇವರು ಗಂಡು ಹೆಣ್ಣಿನ ಸಂಬಂಧ
ಪ್ರೀತಿ - ಪ್ರೇಮ ಸೌಂದರ್ಯದ ಮೆಚ್ಚುಗೆ
ಯಾವ ಧರ್ಮದ ಚರ್ಚೆಗಳಿಲ್ಲದೆ ಓದದೆ . .ಬರವಣಿಗೆ ತಿಳಿಯದೆ
ಜನುಮದಿಂದಲೇ ದೇವರು ಕಲಿಸಿದ ವಿದ್ಯೆ ಅನುಭವದಿಂದ
ತಿಳುವಳಿಕೆ !

ಮೊದಲಿನಿಂದ ಕೊನೆ ನೋಡುವ ಬದಲು
ಸತ್ಯದ ಕೊನೆಯಿಂದ ಮೊದಲ ಜೊತೆ ಬೆರೆಯುವಾಗ
ಬರುತ್ತಿರುವ ನಗು ಸುಲಭದಲ್ಲಿ ಸಿಕ್ಕಿರುವ
ದೇವರ ಸ್ನೇಹ ಸಂಬಂಧಗಳು ಕಷ್ಟಪಡದೆ ದೊರಕಿ
ಅನುಭವಿಸಿದ ಸತ್ಯದ ಬೆಳಕನ್ನು

ಮರೆಯಲಾಗದ ಜೊತೆ ಸಂಬಂಧಗಳು
ತನ್ನ ಅನುಭವ ಬೇರೆಯವರಿಗೆ ಒಪ್ಪಿಸಲು
ಜಗವ ಒಪ್ಪಿಸಲು ಸಾಧನೆ ಮಾಡದೆ
ನಿರಂತರ ಅನುಭವದಲ್ಲಿ ತೇಲುತ
ಜೊತೆ ಜೊತೆ ತೇಲುತ್ತಿರುವ ದಡಗಳು

ನಿನ್ನೆಯನ್ನು ನೆನೆಯದ ನಾಳೆಯ ನಾಳೆಗಳು
ಏನೂ ನೆನಯದೆ ಇಂದಿಗೆ
ಈ ಹರ್ಷದಲ್ಲಿರುವ ಸೌಂದರ್ಯದ ಅನುಭವ
ಅನುಭವದ ಮಾತನಾಡಲು ಕೊನೆಯಿಲ್ಲ!



www.sriharikhoday.com

ಜೊತೆಯಿರುವ ಮಹಾನ್ ಶಕ್ತಿ
ಆ ಮಹಾನ್‌ಶಕ್ತಿಗೆ ಅಂಟಿಕೊಂಡಿರುವ ಸತ್ಯ
ಜೊತೆ ಬಿಡಿಸಲಾಗದ ಬೆಸುಗೆ
ನಮ್ಮಿಬ್ಬರಲ್ಲಿ ಇರುವ ರಸಿಕತೆಯ ಪ್ರತಿಕ್ರಿಯೆಗಳಲ್ಲಿ

ಕೊನೆಗಾಣಿಸದ ಜೀವ, ಕೊನೆಗಾಣಿಸದ ಸತ್ಯದ ಉಸಿರು
ಅಡಗಿರುವುದು
ನಿಶೆಯ ಅನುಭವದಲ್ಲಿ ಅನುಭವದ ನಿಶೆಯಲ್ಲಿ
ಕಾಂತೆಯ ಜೊತೆ ನಾನಾ ಭಂಗಿಗಳ ಅನುಭವ
ದೇವರನ್ನು ನಾನಾ ದೃಷ್ಟಿಕೋನದಿಂದ ನೋಡಿ ಅನುಭವಿಸುವಂತೆ !

**- ಶ್ರೀ ಹರಿ.**

04-03-2013

## 439

ಲಜ್ಜೆ ನಾಚಿಕೆಯಿಲ್ಲದೆ, ಸತ್ಯ ನೋಡಲು ಆಶಿಸುತ್ತಿದೆ
ಲಜ್ಜೆ ತುಂಬಿಕೊಂಡಿರುವ ಇತಿಹಾಸ
ಸಮಾಜ ಲಜ್ಜೆಯನ್ನು ಎದುರಿಸಿ
ಮಾತಿನ ಕೋಟೆಗಳಲ್ಲಿ ಕಟ್ಟಿಹಾಕಿ
ಸತ್ಯವನ್ನು ದಾಟಲು ಕಷ್ಟವಾಗಿಸಿದೆ!

ತಮಗೆ ಅನಿಸಿದ್ದು ತಾವು ಹೇಳಿ
ತಾವು ಹೇಳಿದ್ದು ತನ್ನವರಿಂದ ಹೇಳಿಸಿ
ತಾವು ತೊದಲು ಮಾತನಾಡಿದ ಮಾತುಗಳನ್ನು
ತನ್ನವರು ನಾನಾ ರೀತಿಯಲ್ಲಿ ವರ್ಣಿಸುತ್ತ.... ಹೇಳುತ್ತ
ಪೂರ್ವ ಪಶ್ಚಿಮವಾಗಿಸುತ್ತ.... ನಂಬಿಕೆಯ ಕ್ಲೀಷೆಯಲ್ಲಿ....
ಪಶ್ಚಿಮದಲ್ಲಿ ಸೂರ್ಯನನ್ನು ಹುಟ್ಟಿಸುತ್ತಿದ್ದಾರೆ ಧರ್ಮದ ನಾಯಕರು!

ನಾನು ನೀನು ಕುಡಿದರೆ ಬೇರೆಯವರಿಗೆ ಏನು ಕಷ್ಟ?
ನಾನು ನಿಶೆಯನ್ನು ಸೇವಿಸಿ ಸುಖ ನಾ ಪಡೆಯುತ್ತಿರೆ ಬೇರೆಯವರಿಗೆ ಏನು ಕಷ್ಟ?
ನನ್ನ ಸತ್ಯದ ಅನುಭವಗಳನ್ನು ಬೇರೆಯವರಿಗೆ ಹೇಳಿದರೆ
ಕೇಳುವುದಕ್ಕೇನು ಕಷ್ಟ?
ನಾನು ಎಲ್ಲರ ಜೊತೆ ಬಿಟ್ಟು ಒಂಟಿಯಾಗಿರುವುದು ಬೇರೆಯವರಿಗೆ ಏನು ಕಷ್ಟ?



www.sriharikhoday.com

ನನ್ನ ಕಾಂತೆಯ ಜೊತೆಗೆ ಪಡೆದಿರುವ ಸುಖ ಹೇಳುವುದು ತಪ್ಪೇ?
ಸುಳ್ಳು-ತಪ್ಪನ್ನು ಹುಟ್ಟಿಸಿ ಸತ್ಯದ ಅರ್ಥಗಳನ್ನು ಅಜ್ಞಾನದಿಂದ
ಪ್ರಚೋದಿಸಿ
ಅಮಲಿನ ಶಕ್ತಿಯನ್ನು ವರ್ಣಿಸದೆ ಅನುಭವದ ಶಕ್ತಿಯನ್ನು ಗಣಿಕೆ ಮಾಡದೆ
ನನ್ನನ್ನು ನಾನು ಮರೆತು ಅನುಭವಿಸಿದೆ!

ಜಗವು ಮಾಡಬೇಡ ಎಂಬುದನ್ನು ನಾನು ಮಾಡಿ
ಮಾಡಬೇಡ ಎಂಬುದರ ಒಳ ಅರ್ಥಗಳನ್ನು ಬಿಡಿಸಿದರೆ
ಧರ್ಮದ ಮುಖಂಡರುಗಳು ತಮ್ಮ ಎತ್ತರವನ್ನು
ಹೆಚ್ಚಿಸಿಕೊಳ್ಳಲು ಅರ್ಥಬರದನ್ನು ಹುಟ್ಟಿಸಿ

ತಮಗೆ ತಿಳುವಳಿಕೆಯಿಲ್ಲದ ಬಿರುಗಾಳಿ ಹುಟ್ಟಿಸಿ ನಂಬಿಕೆಯನ್ನು ಹುಟ್ಟಿಸಿ
ಆಡುತ್ತಿರುವ ನಾನಾ ಧರ್ಮದ ಸಮಾಜ ಮುಖಂಡರುಗಳು
ಸರಿ ಹಾದಿ ಹಿಡಿಯದೆ ತಮ್ಮ ಮನೆಯಲ್ಲೇ ನಂಬಿಕೆಯ ಹೊಸ್ತಿಲನ್ನು
ದಾಟಲು ಹೆದರಿ
ಮಾನವ ಜೀವಿಸುತ್ತಿರುವುದು ಅಸತ್ಯದ ಹೆದರಿಕೆಯ ಕೋಟೆಗಳು!

ಒಂದೊಂದು ಧರ್ಮಕ್ಕೆ ಒಂದೊಂದು ಕೋಟೆ
ಕೋಟೆಯ ಒಳಗೆ ಯಾರಿಗೂ ಪ್ರವೇಶವಿಲ್ಲ
ಅವರಿಗೆ ಮಾತ್ರ ದೇವರು ಮಾತನಾಡುತ್ತಿದ್ದಾರೆ
ಅವರಿಗೆ ಮಾತ್ರ ಸತ್ಯದಲ್ಲಿ ಬೆಳಕು ಕಾಣುತ್ತಿದೆ
ನಾವು ನಮಗೆ ನಮ್ಮನ್ನೇ ಮೋಸಗೊಳಿಸುತ್ತ
ನಂಬುತ್ತ, ನಂಬುತ್ತ, ಮೋಸ ಹೋಗುತ್ತಿರುವೆವು!

ಕೋಟೆಗಳಿಲ್ಲದ ನಿರಾಳ ಬೆಳಕಲ್ಲಿ ಸೂರ್ಯ ಚಂದ್ರರ ಸಾಕ್ಷಿಯಾಗಿ
ಹೆದರಿಕೆಯಿಲ್ಲದ ನಾಚಿಕೆ ಸತ್ಯದ ಜೊತೆಗೆ ಬೆರೆತು

ಪ್ರೀತಿ - ಪ್ರೇಮಗಳ ಜೊತೆ ಕೋಟೆ ಕಟ್ಟಡಗಳಿಲ್ಲದೆ
ಜೀವಿಸುತ್ತಿರುವ ಶಕ್ತಿಯ ಅರಿವು ಅನುಭವಿಸಿ
ದೇವರೆಂಬ ಹೆಸರನ್ನು ಕರೆಯಲು ಬಯಸದೆ
ನಿನ್ನ ಜೊತೆಗೆ ಬೆರೆಯುತ್ತಿರುವುದು

ಕಾಂತೆ ನೀಡುತ್ತಿರುವ ದೇವರ ಸುಖದಂತೆ ಇರುವ ಸುಖ
ಪ್ರಕೃತಿಯು ಸೃಷ್ಟಿಸಿರುವ ಇಂದ್ರಿಯಗಳು ಏಕಕಾಲದಲ್ಲೇ ಎಚ್ಚೆತ್ತು
ಸುಖದ ತೂಗನ್ನು ಅನುಭವಿಸುತ್ತ
ದೇವರ ಅನುಭವ ನನ್ನ ಅನುಭವವಾದಾಗ

ಈ ಅನುಭವ ನನ್ನ ಅನುಭವವಾಗಿ
ಧರ್ಮದ ಕೋಟೆಗಳಲ್ಲಿ ಗಂಟೆಗಳ ಸದ್ದಿಲ್ಲದೆ
ನನ್ನ ಸುಖದ ಜೊತೆ ಆಕಾಶದ ಜೊತೆಗೆ ಬೆರೆತು
ಈ ಸತ್ಯ ಯಾರ ಹೆದರಿಕೆಯಿಲ್ಲದ ತಾರೆಗಳಂತೆ ಮಿನುಗುತ್ತಿರಲು

ಆ ತಾರೆಗಳನ್ನೋಡಿಸಲು ಯಾವ ಧರ್ಮವೂ
ಅಡ್ಡಿಪಡಿಸಲಿಕ್ಕಾಗದಂತೆ
ಬೆರೆತು ಬೆರೆತು ಹೋಗುವುದೇ ನನ್ನ ಗುಣವಾಗಿ
ಹೆದರಿಕೆ ನಾಚಿಕೆ ಲಜ್ಜೆ ನನ್ನ ಮನೋಸತ್ಯದಿಂದ ದೂರವಾಗಿ
ಹೆದರಿಕೆಯಿಲ್ಲದ ಸತ್ಯವನ್ನು ನನ್ನ ಜೀವನದ ಶೈಲಿಯಲ್ಲಿ
ಪ್ರಕಟಿಸುತ್ತಿದ್ದೇನೆ!

**- ಶ್ರೀ ಹರಿ.**

04-03-2013



# 440

ನನಗೆ ಭಾಸವಾಗುವುದು ನಾ ಹೇಳಲು
ಯಾರಿಗೆ ಕೇಳಿ ಹೇಳಬೇಕು
ಸಂಪ್ರದಾಯಕ್ಕೆ.... ಧರ್ಮದ ಗುರುಗಳಿಗೋ
ಪ್ರೀತಿಯನ್ನರಿಯದ ದುಷ್ಟರಿಗೋ?

ನಮ್ಮ ಸುತ್ತು ನಾವು ಕಟ್ಟಿಕೊಂಡಿರುವ
ಬೇಡದ ಗೋಡೆ ಕಳಚಿಬಿದ್ದರೆ
ಅರಿವಾಗಿ ಮನಸ್ಸಿಗೆ ಕಾಣುವುದು
ಪ್ರೀತಿ - ಪ್ರೇಮದ ಆಕರ್ಷಕ ಬೆಳಕು!

ಸುಖಗಳನ್ನು ತಿಳಿಯದ ದುಃಖ - ಕಷ್ಟಗಳು
ಸುಖಗಳ ದೂರ ತಳ್ಳುವ ವಿಶ್ವದ್ರವ
ಪ್ರೀತಿ - ಪ್ರೇಮಗಳು ದೇವರು ತೋರಿಸುವ ಹೆದ್ದಾರಿಗಳು

ಆ ಹೆದ್ದಾರಿಯಲ್ಲಿ ಯಾರೂ ಪ್ರಯಾಣಿಸದೆ
ಖಾಲಿ ಖಾಲಿಯಾಗಿರುವ ರಸ್ತೆಗಳಲ್ಲಿ
ಹೊಸ ಅನುಭವ ನೀಡಲು ಸುಖವನ್ನು ನೀಡಲು
ರಸ್ತೆಗಳು ಕಾಯುತ್ತಿವೆ!

ನೀರು ಕುಡಿದರೆ ದಾಹ ನೀಗುವುದು
ಊಟ ಮಾಡಿದರೆ ಹೊಟ್ಟೆ ಸಾಕು ಸಾಕು ಎನ್ನುವುದು



www.sriharikhoday.com

ಸುಖ ದೇವರು ತೋರಿಸುವ ಯತ್ನ
ನಿಶೆಯಿಂದ ಕಷ್ಟಗಳನ್ನು ದೂರಪಡಿಸಿ
ಕಷ್ಟಗಳನ್ನು ಮರೆಸುವ ನಿಶೆಯ ದ್ರವ

ಹೊಸ ಇರುವಿಕೆಯ ಭಾವನೆಗಳು ಸುತ್ತು ಸುತ್ತು
ವಿಶ್ವ ಕಲಿಸಿರುವ ನನ್ನ ಕಾಂತೆಯೊಡನೆ ಜೋಡಣೆ
ಕೊನೆ ಬರದ ಸುಖದ ಸುರಿಮಳೆ
ಮಳೆಯಲ್ಲಿ ನೆಂದಾದ ಮೇಲೆ
ಸುಖದ ಅನುಭವ ಪಡೆಯುವುದೇ ದೇವರ ಅನುಭವ

**- ಶ್ರೀ ಹರಿ.**

08-03-2013



www.sriharikhoday.com

# 441.

ಬಯಕೆಗಳನ್ನು ಮುಚ್ಚಿಡುವುದು
ಘೋರ ಅಪರಾಧ
ಉಲ್ಲಾಸದಿಂದ ಇರಲು
ಮನ ಬಿಚ್ಚಿದ ಮನಸ್ಸಿನ ಗೋಳಾಟ!

ಬಯಕೆಗಳು ನಮ್ಮದಲ್ಲ
ಬಯಕೆಗಳು ಬೇರೆಯವರಿಂದ ಕಲಿತದ್ದಲ್ಲ
ಬಯಕೆಗಳು ಪ್ರಕೃತಿಯ ವರದಾನ
ಹುಟ್ಟಿನಿಂದಲೇ ಹುಟ್ಟುವ ಜೊತೆ ಕರುಳಬಳ್ಳಿಯ ಕೊಡುಗೆ

ಬಯಕೆಗಳೇ ದೇವರು ನೀಡುವ ಅನೇಕ ದ್ವಾರಗಳು
ಬಯಕೆಗಳು ಮೊದಲಿನ ಮೆಟ್ಟಿಲಾದರೆ
ಬಯಕೆಗಳ ಅನಭವ ಎರಡನೇ ಹೆಜ್ಜೆಯಾದರೆ
ಬಯಕೆಗಳ ಪ್ರತಿಬಿಂಬಗಳು ಮೂರನೇ ಹಜ್ಜೆಯಾದರೆ
ಬಯಕೆಗಳ ಪೂರ್ಣ ಅನುಭವ ನಾಲ್ಕನೇ ಹೆಜ್ಜೆಯಾದರೆ
ಪಂಚೇಂದ್ರಿಯಗಳ ಜೊತೆ ದೇವರ ಹೊಸ್ತಿಲು ಐದನೇ
ಮೆಟ್ಟಿಲುಗಳಾಗಿ

ಮೆಟ್ಟಿಲು ಹತ್ತಿದ ಅನುಭವಗಳಲ್ಲಿ
ದಾಹದಿಂದ ನೀರನ್ನು ಬಾಯಲ್ಲಿ ಕುಡಿಯುವಾಗ
ನೀರು ನುಂಗುವುದನ್ನು ಎಣಿಸುವುದಿಲ್ಲವೋ ಹಾಗೆ

ತಣಿಸುವ ಸುಖದಲ್ಲಿ ಕಣ್ಣೀರು ಬರುವಂತೆ
ದೇವರ ಅನುಭವದಲ್ಲಿ ಎಲ್ಲವನ್ನೂ ಮರೆತು ಸುಖ
ಹರಿಯುತ್ತಿರುವಾಗ

ಆ ನಿರಂತರ ಸುಖದ ಬಯಕೆ ಜೊತೆಯಿರಲು
ನಿಶೆ ಸೇವಿಸಿ ದೀರ್ಘಕಾಲದ ಅನುಭವ ನೀಡುತ್ತಿರುವ
ಪ್ರಕೃತಿಯ ದ್ರವ ಸೇವಿಸಿದರೆ
ಹಿಂದಿರುವ ಸುಖದ ಸಿರಿತನವನ್ನು

ನೆನೆಸಿದಾಗಲೆಲ್ಲ ಮತ್ತ ಮತ್ತೆ ನೆನಪಿಗೆ ಬಂದು
ಮೆಟ್ಟಿಲುಗಳ ಎಣಿಸದೆ ದೇವರ ಹೊಸ್ತಿಲನ್ನು ನೋಡುವ ಸಾಧನೆ
ಪ್ರತಿಬಿಂಬವಾದ ನನ್ನ ಕಾಂತೆ ಜೊತೆಗೆ

ನಾವು ದೇವರಲ್ಲಿ ಏನೂ ವರ ಕೇಳದೆ
ವರ ಕೊಡುವ ದೇವರನ್ನೇ ನಾವು ವರವಾಗಿ ಪಡೆದು
ನನ್ನವಳ ಜೊತೆ ಅನುಭವಿಸುತ್ತಿರುವ
ನಮ್ಮ ಪೂರ್ಣ ಇರುವಿಕೆ ವಿಶ್ವದಲ್ಲೇ ಜೊತೆ ಬೆರೆತು
ಸಿರಿತನದ ಸುಖದ ಅನುಭವಗಳು
ಏಕಕಾಲದಲ್ಲಿಯೇ ಅನುಭವಿಸುತ್ತಿರುವೆವು !

- ಶ್ರೀ ಹರಿ.

09-03-2013



www.sriharikhoday.com